ಪೂರ್ಣ ಸ್ವದೇಶಿ

ಗೊರೂರು ರಾಮಸ್ವಾಮಯ್ಯಂಗಾರ್

ಶ್ರೀಮಾನ್ ಜೆ. ಸಿ. ಕುಮಾರಪ್ಪನವರ
ಮುನ್ನುಡಿ

ರು ಗ್ರಾಮಸೇವಾ ಸಂಘ
ಗೊರೂರು

ನನಗೆ ಕನ್ನಡಭಾಷೆ ತಿಳಿಯದಿದ್ದರೂ ಶ್ರೀಮಾನ್ ರಾಮಸ್ವಾಮಯ್ಯಂಗಾರ್ಯರ ಪ್ರಸಿದ್ಧವಾದ ವಿದ್ವತ್ತಿನ ಮೇಲೆಯೇ ಇದನ್ನು ಕನ್ನಡಿಗರಿಗೆ ಶಿಫಾರಸು ಮಾಡುವ ಸಾಹಸವನ್ನು ನಾನು ಮಾಡುತ್ತಿದ್ದೇನೆ.

ಶ್ರೀ. ಜೆ. ಸಿ. ಕುಮಾರಪ್ಪ

ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರ ಪೂರ್ಣ ಸ್ವದೇಶೀ ಗ್ರಂಥವನ್ನು ಮೈಸೂರು ಗ್ರಾಮ ಸೇವಾ ಸಂಘದವರು ಪ್ರಕಟಿಸಿ ಕನ್ನಡಿಗರಿಗೆ ಅರ್ಪಿಸಿರುವುದು ಬಹಳ ಉತ್ತಮವಾದ ಸೇವೆಯಾಗಿದೆ.

ಬಾಬು ರಾಜೇಂದ್ರಪ್ರಸಾದ್

ಮಹಾತ್ಮಾ ಗಾಂಧಿಯವರ

ಪೂರ್ಣಸ್ವದೇಶಿ

ಅನುವಾದಕ

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಶ್ರೀಮಾನ್ ಜೆ. ಸಿ. ಕುಮಾರಪ್ಪ ಅವರ ಮುನ್ನುಡಿಯೊಡನೆ

ಮೈಸೂರು ಗ್ರಾಮಸೇವಾಸಂಘ,
ಗೊರೂರು

ಬೆಲೆ ೦—೮—೦

ಬೆಲೆ: ಎಂಟು ಆಣೆ

ಮೈಸೂರು:

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

1941

ಅರಿಕೆ

ಮಹಾತ್ಮಾ ಗಾಂಧಿಯವರ ಈ ಪೂರ್ಣಸ್ವದೇಶೀ ಗ್ರಂಥದ ಅನುವಾದವನ್ನು ಕನ್ನಡಿಗರ ಮುಂದೆ ಇಡುವ ಸುಯೋಗ ದೊರೆತುದು ನನ್ನ ಪುಣ್ಯವೆಂದೇ ಭಾವಿಸುತ್ತೇನೆ. ಯಾಕೆಂದರೆ ಯಾವ ರೀತಿಯಿಂದಲಾದರೂ ಗಾಂಧಿಯವರ ಸೇವೆ ಮಾಡುವುದರಲ್ಲಿ ಭಾಗಿಯಾಗುವುದಕ್ಕಿಂತ ಹೆಚ್ಚಾದ ಸೌಭಾಗ್ಯವನ್ನು ಯಾವ ಭಾರತೀಯನೂ ಬಯಸುವುದಿಲ್ಲ.

ಈ ಪುಸ್ತಕದಲ್ಲಿ ಗಾಂಧಿಯವರ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಮಾತ್ರ ಪ್ರಯತ್ನಪಟ್ಟಿದ್ದೇನೆ. ಅವರ ಪ್ರಸಿದ್ಧವಾಗಿರತಕ್ಕ ತತ್ವಗಳಿಗೂ, ಈ ನನ್ನ ಅನುವಾದಕ್ಕೂ ಎಲ್ಲಿಯಾದರೂ ವ್ಯತ್ಯಾಸಕಂಡರೆ ಈ ನನ್ನ ಅನುವಾದದಲ್ಲಿ ನಾನು ವ್ಯಕ್ತಪಡಿಸಿರುವ ಅಭಿಪ್ರಾಯ ತಪ್ಪೆಂದು ವಾಚಕರು ಭಾವಿಸಬೇಕು. ಯಾಕೆಂದರೆ ಮಹಾತ್ಮರ ತತ್ವಗಳನ್ನು ಕನ್ನಡಿಗರ ಮುಂದೆ ಇಡುವವನು ಆ ತತ್ವದ ಅನುಷ್ಠಾನದಲ್ಲಿಯೂ ಪಳಗಿದವನಾಗಿರಬೇಕು. ಬರಿಯ ಭಾಷೆಯಲ್ಲಿ ಮಾತ್ರ ಪಳಗಿದ್ದರೆ ಸಾಲದು. ಈ ಪುಸ್ತಕದಲ್ಲಿ ಕೆಲವು ಅಧ್ಯಾಯಗಳನ್ನು ನಾನು ಅನುವಾದಮಾಡಿದ್ದೇನೆ. ಉಳಿದವನ್ನು ನನ್ನ ತಮ್ಮಂದಿರಾದ ಶ್ರೀ ಜಿ. ಕೆ. ಬಿಳಿಗಿರಿರಂಗಾಚಾರ್ಯರು ಅನುವಾದ ಮಾಡಿದ್ದಾರೆ. ಹಸ್ತಪ್ರತಿಯನ್ನು ನಾನು ಪೂರ್ಣವಾಗಿ ಪರಿಶೋಧಿಸಿ ತಿದ್ದಿದ್ದೇನೆ.

ಈ ಸಂಗ್ರಹದಲ್ಲಿ ಗಾಂಧಿಯವರ ಲೇಖನಗಳಲ್ಲದೆ ಇತರ ಮುಖಂಡರ ಕೆಲವು ಲೇಖನಗಳೂ ಇವೆ. ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಗಳಾದ ಶ್ರೀಮಾನ್ ಜೆ. ಸಿ. ಕುಮಾರಪ್ಪ ಅವರು ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದು ಇದಕ್ಕೆ ಒಂದು ಯೋಗ್ಯತೆಯನ್ನೂ ಕೊಟ್ಟಿದ್ದಾರೆ. ಅವರಿಗೆ ಕೃತಜ್ಞನಾಗಿದ್ದೇನೆ. ಮೈಸೂರು ಗ್ರಾಮಸೇವಾಸಂಘದವರು ಈ ಗ್ರಂಥವನ್ನು ಪ್ರಕಟಿಸಿ

ಸುಲಭವಾದ ಬೆಲೆಯಲ್ಲಿ ಇದನ್ನು ವಾಚಕರಿಗೆ ಒದಗಿಸಿರುವುದಕ್ಕಾಗಿ ಅವರನ್ನು ವಂದಿಸುತ್ತೇನೆ. ಗೊರೂರು ಗ್ರಾಮಸೇವಾಸಂಘದ ಎಲ್ಲಾ ಕಾರ್ಯಗಳಲ್ಲೂ ನನ್ನೊಂದಿಗೆ ನೆರವಾಗಿ ನಿಂತು ನನಗೆ ಸಹಾಯ ಮಾಡುತ್ತಿರುವ ನನ್ನ ತಮ್ಮಂದಿರಾದ ಜಿ. ಸಂಪತ್ತಯ್ಯಂಗಾರ್ ಇವರ ಉಪಕಾರವನ್ನು ಸ್ಮರಿಸುತ್ತೇನೆ.

೧೦ ನೇ ಅಧ್ಯಾಯವು ಎರಡು ಸಲವೂ ೧೪ ನೇ ಅಧ್ಯಾಯವು ಎರಡು ಸಲವೂ ೨೯ ನೇ ಅಧ್ಯಾಯದ ನಂತರ ೩೧ ನೇ ಅಧ್ಯಾಯವೂ ಸಂಖ್ಯೆಯಲ್ಲಿ ತಪ್ಪು ಬಿದ್ದಿದೆ. ಆದರೆ ವಿಚಾರ ಹೆಚ್ಚು ಕಡಿಮೆ ಆಗಿಲ್ಲ. ಅಚ್ಚಿನ ದೋಷಗಳನ್ನು ವಾಚಕರು ಮನ್ನಿಸಬೇಕೆಂದು ಪ್ರಾರ್ಥನೆ.

ಗೊರೂರು ರಾಮಸ್ವಾಮಿ ಐಯಂಗಾರ್,
ಕಾರ್ಯದರ್ಶಿ,
ಮೈಸೂರು ಗ್ರಾಮಸೇವಾ ಸಂಘ, ಗೊರೂರು.

ಮುನ್ನುಡಿ

ಕನ್ನಡಭಾಷೆಯು ನನಗೆ ತಿಳಿಯದುದರಿಂದ ಪೂರ್ಣಸ್ವದೇಶಿಯ ಈ ಕನ್ನಡ ಅನುವಾದವನ್ನು ನಾನು ಓದಿ ನೋಡದಿದ್ದರೂ ಶ್ರೀಮಾನ್ ಗೊರೂರು ರಾಮಸ್ವಾಮಿ ಐಯಂಗಾರ್ಯರ ಪ್ರಸಿದ್ಧವಾದ ವಿದ್ವತ್ತಿನ ಮೇಲೆಯೇ ಇದನ್ನು ಕನ್ನಡಿಗರಿಗೆ ಶಿಫಾರಸು ಮಾಡುವ ಸಾಹಸವನ್ನು ನಾನು ಮಾಡುತ್ತಿದ್ದೇನೆ.

ಈ ಪುಸ್ತಕದಲ್ಲಿರುವ ಗಾಂಧಿಜಿಯವರ ಅನೇಕ ಲೇಖನಗಳು ಅಖಿಲಭಾರತ ಗ್ರಾಮೋದ್ಯೋಗ ಸಂಘವು ಜನನದ ಸಂಕಟದಲ್ಲಿರುವಾಗ ಬರೆದುವು. ಆದುದರಿಂದ ಇವು ಆ ವಿಷಯದ ಮೇಲೆ ಗಾಂಧಿಜಿಯವರ ಆಗಿನ ತೀವ್ರವಾದ ಆಲೋಚನೆಯ ಪ್ರತಿಬಿಂಬಗಳೇ ಆಗಿವೆ.

ನಮ್ಮ ದೇಶದ ಜನರ ಆರ್ಥಿಕಜೀವನದಲ್ಲಿ ರಚನಾತ್ಮಕವಾದ ಕಾರ್ಯಗಳನ್ನು ಕೈಕೊಂಡು ಅಹಿಂಸೆಯ ಮೂಲಕ ಸ್ವರಾಜ್ಯವನ್ನು ಸಂಪಾದಿಸುವುದರಲ್ಲಿ ನಂಬಿಕೆಯುಳ್ಳ ನಮಗೆಲ್ಲಾ ಯೋಚಿಸಲು ಅರ್ಹವಾದ ಸಂಗತಿಗಳು ಈ ಪುಸ್ತಕದಲ್ಲಿ ಪೂರ್ಣವಾಗಿವೆ. ಗಾಂಧಿಜಿಯವರು ರಚನಾತ್ಮಕಕಾರ್ಯಕ್ರಮವನ್ನು ಒತ್ತಿ ಒತ್ತಿ ಹೇಳುತ್ತಿರುವ ಈ ಸಂದರ್ಭದಲ್ಲಿ ಈ ಪುಸ್ತಕದ ಪ್ರಕಟನೆಯು ಬಹಳ ಸೂಕ್ತವೂ ಸಕಾಲವಾದುದೂ ಆಗಿದೆ.

ಈ ಪುಸ್ತಕದಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಬರೆದ ಈಚೆಗೆ ಆ ದಾರಿಯಲ್ಲಿ ಅನೇಕ ಕೆಲಸ ನಡೆದಿದೆ. ಅವುಗಳನ್ನು ತಿಳಿಯಲು ಇಚ್ಛೆಯುಳ್ಳವರು ಅಖಿಲಭಾರತ ಚರಕಸಂಘ, ಗ್ರಾಮ ಉದ್ಯೋಗ ಸಂಘ ಇವುಗಳು ಆಗಿಂದಾಗ್ಗೆ ಪ್ರಕಟಿಸುವ ವರದಿಗಳನ್ನು ಓದಬೇಕು. ಇಂಗ್ಲಿಷಿನಲ್ಲೂ ಹಿಂದಿಯಲ್ಲೂ ಸಿಕ್ಕುವ "ಗ್ರಾಮೋದ್ಯೋಗ ಚಳುವಳಿ ಏಕೆ" ಎಂಬ ಪುಸ್ತಕವನ್ನು ಓದಿ ಈ ಚಳುವಳಿಯ ತತ್ವಗಳನ್ನು ಅವರು ಗ್ರಹಿಸುವುದು ಒಳ್ಳೆಯದು.

J. C. Kumarappa

ಡಿಸೆಂಬರ್ ೧೦-೧೯೪೦,
ವಾರ್ಧಾ, ಸಿ. ಪಿ.

ವ್ಯವಸ್ಥಾಪಕ ಮತ್ತು ಕಾರ್ಯದರ್ಶಿ,
ಅಖಿಲಭಾರತ ಗ್ರಾಮೋದ್ಯೋಗಸಂಘ.

ವಿಷಯಾನುಕ್ರಮಣಿಕೆ.

ಗ್ರಾಮ ಕೈಗಾರಿಕೆಗಳು

ಈ ಪೂರ್ಣಸ್ವದೇಶೀ ಗ್ರಂಥವನ್ನು ತಮ್ಮ ಅಮೃತ ಹಸ್ತದಿಂದ ತಾ॥ 6-4-1941 ರಲ್ಲಿ ಬಾಬು ರಾಜೇಂದ್ರಪ್ರಸಾದರು ವಿನೋಬನಗರದ ಮೈಸೂರು ಕಾಂಗ್ರೆಸ್‌ನಲ್ಲಿ ಖಾದಿಪ್ರದರ್ಶನದಲ್ಲಿ ಪ್ರಕಟಿಸಿದಾಗ ಮಾಡಿದ ಭಾಷಣ

ಭಾರತಕ್ಕೆ ಈಗ ಬೇಕಾದುದು ಗ್ರಾಮಕೈಗಾರಿಕೆಗಳು. ಗ್ರಾಮಾಂತರದಜನರಿಗೆ ಉದ್ಯೋಗವೀಯುವ ಕೈಗಾರಿಕೆಗಳು ಈಗ ಭಾರತದಲ್ಲಿ ಹಾಸುಹೊಕ್ಕಿನಂತೆ ನೇಯಿಡುಕೊಂಡಿವೆ. ನಮಗೆ ಬೇಕಾದ ಸಾಮಾನುಗಳನ್ನೆಲ್ಲಾ ನಾವು ನಮ್ಮ ಕೈಗಳಿಂದಲೇ ಮಾಡಿಕೊಳ್ಳಬಹುದು. ಯಂತ್ರಗಳು ಮನುಷ್ಯನ ಬುದ್ಧಿಯ ಚಾತುರ್ಯದ ಫಲಗಳೇ. ಈ ಬುದ್ಧಿ ಚಾತುರ್ಯದ ಫಲವಾಗಿ ಗೃಹಕೈಗಾರಿಕೆಗಳೂ ಸಹ ನಮ್ಮ ಹೆಮ್ಮೆಗೆ ಕಾರಣವಾಗುವಂತೆ ಹಿಂದೆ ಬೆಳೆದವು. ಮೈಸೂರು ಸೀಮೆಯಲ್ಲಿ ನಾನು ನಿನ್ನೆ ಮತ್ತು ಮೊನ್ನೆ ಸಂಚರಿಸಿದುದರ ಫಲವಾಗಿ ಮನುಷ್ಯನ ಬುದ್ಧಿಚಾತುರ್ಯವು ಎಂತೆಂತಹ ರಮ್ಯವಾದ ಕಲೆಯನ್ನು ಸೃಷ್ಟಿಸಿದೆ ಎಂಬುದನ್ನು ಅರಿತೆ. ಇಂತಹ ಹಳೆಬೀಡು ಬೇಲೂರು ಮುಂತಾದ ಕಲಾಕೃತಿಗಳನ್ನು ನಮಗೆ ಕೊಟ್ಟಿರುವ ಬುದ್ಧಿಶಕ್ತಿಯು ನಮಗೆ ಬೇಕಾಗಿರುವ ಮನೆಕೈಗಾರಿಕೆಗಳನ್ನು ಮಾಡಿಕೊಳ್ಳಲು ಸಾಧ್ಯವಾಗದೆಂದು ನಾನು ಹೇಳಲಾರೆ. ಮನುಷ್ಯನಿಗೆ ಬೇಕಾದುದೇನು? ತಿನ್ನಲು ಆಹಾರ; ಉಡಲು ಬಟ್ಟೆ; ಇರುಲು ಮನೆ. ಇವುಗಳಿಗಾಗಿ ನಾವು ಪರದೇಶೀಯರನ್ನು ಯಾಕೆ ಅವಲಂಬಿಸಬೇಕು? ಸುಮಾರು 150 ವರುಷಗಳಕೆಳಗೆ ನಮ್ಮ ದೇಶದವರಿಗೆ ಪರದೇಶೀಯರ ಒಂದು ಅಂಗುಲ ಬಟ್ಟೆಯೂ ಬೇಕಾಗಿರಲಿಲ್ಲ ಮಾತ್ರವಲ್ಲ, ನಮ್ಮ ದೇಶವೇ

ಇತರ ದೇಶಗಳಿಗೆ ವಸ್ತ್ರಗಳನ್ನು ರಫ್ತು ಮಾಡುತ್ತಿದ್ದಿತು. ಆ ನಮ್ಮ ಬಟ್ಟೆಗಳು ಸಾರ್ವತ್ರಿಕ ಪ್ರಶಂಸೆಗೆ ಪಾತ್ರವಾಗಿದ್ದವು. ಆ ದೇಶಗಳವರು ಸುಂಕವನ್ನು ಹಾಕಿ ತಡೆದರೂ ನಮ್ಮ ಬಟ್ಟೆಗೆ ಅಲ್ಲಿ ಮಾನ್ಯತೆ ಕಡಮೆಯಾಗಲಿಲ್ಲ. ಕಡೆಗೆ ಆ ದೇಶಗಳು ಸ್ವದೇಶಿಕೈಗಾರಿಕೆಯ ಹೆಸರಿನಲ್ಲಿ ನಮ್ಮ ಬಟ್ಟೆಗಳನ್ನು ಕೊಳ್ಳುವುದನ್ನೇ ಅಪರಾಧವಾಗಿ ಮಾಡಿದವು.

ಆದರೆ ಕಳೆದ 50 ವರುಷಗಳಲ್ಲಿ ಈ ಸ್ಥಿತಿ ತೀರಾ ಬದಲಾಯಿಸಿದೆ. ನಮ್ಮ ದೇಶವು ಪರದೇಶಗಳಿಂದ ಬಟ್ಟೆ ತರಿಸುವುದಕ್ಕೆ ತೊಡಗಿ, ಅವರ ಬಟ್ಟೆಯಿಲ್ಲದಿದ್ದರೆ ಬೆತ್ತಲೆಯೇ ಇರಬೇಕಾಗುವ ಸ್ಥಿತಿಗೂ ಒಂದು ಸಲ ಬಂದಿತ್ತು. ಕಳೆದ 1914-18 ರ ಯುದ್ಧದ ಕಾಲದಲ್ಲಿ ಬಡವರಿಗೆ ಬಟ್ಟೆ ದೊರೆಯುವುದೇ ಕಷ್ಟವಾಯಿತು. ಆದರೆ ಈಗ ಪರಿಸ್ಥಿತಿಯು ಅಷ್ಟು ಕೆಟ್ಟಿಲ್ಲ. ನಮ್ಮ ದೇಶಕ್ಕೆ ಬೇಕಾಗುವ ಬಹುಭಾಗದ ಬಟ್ಟೆಯು ಇಲ್ಲೇ ಈಗ ತಯಾರಾಗುತ್ತಿದೆ. ನಮ್ಮ ದೇಶದ ಮಿಲ್‌ಗಳು ಈ ಕೈಗಾರಿಕೆಯಲ್ಲಿ ತೊಡಗಿವೆ. ಆದರೆ ಬರಿಯ ಗಿರಣಿ ಬಟ್ಟೆ ತಯಾರಿಸಿದರೆ ಸಾಲದು. ಎಲ್ಲಾ ಗ್ರಾಮಗಳಲ್ಲೂ ಎಲ್ಲರೂ ನೂಲಬೇಕು. ಈ ಮೈಸೂರಿನ ಈ ಪ್ರದೇಶದಲ್ಲಿ (ಚಿತ್ರದುರ್ಗ ಜಿಲ್ಲೆ) ಹತ್ತಿ ವ್ಯವಸಾಯ ಉತ್ತಮವಾಗಿ ನಡೆಯುವುದೆಂದು ಕೇಳಿದ್ದೇನೆ. ಇಲ್ಲಿರುವ ಹತ್ತಿ ಗಿರಣಿಗಳು ಈ ಹತ್ತಿಗಳನ್ನೆಲ್ಲಾ ಉಪಯೋಗಿಸಿಕೊಳ್ಳಲು ಅಸಮರ್ಥವಾಗಿರುವುದರಿಂದ ಈ ಹತ್ತಿಯೆಲ್ಲಾ ಬೊಂಬಾಯಿ ಕಡೆಗೆ ಹೋಗುವುದೆಂದೂ ಕೇಳಿದ್ದೇನೆ. ಇದು ಯಾಕೆ ಹೀಗೆ ಆಗಬೇಕು? ಇಲ್ಲಿಯ ಹತ್ತಿಯು ಇಲ್ಲಿಯೇ ಪೂರ್ಣವಾಗಿ ಬಟ್ಟೆಯಾಗಬೇಕೆಂಬುದು ನನ್ನ ಅಭಿಪ್ರಾಯ. ಅದು ನಡೆಯಬೇಕಾದರೆ ಪ್ರಾಚೀನವಾದ ಪದ್ಧತಿ ಪುನರುಜ್ಜೀವನಗೊಳ್ಳಬೇಕು. ಆ ಪ್ರಾಚೀನ ಪದ್ಧತಿ ಯಾವುದು? ಗಂಡಸು ಹೊರಗಡೆ ಬೆಳೆದು ಮನೆಗೆ ತಂದುಹಾಕುತ್ತಿದ್ದನು. ಹೆಂಗಸು ಮನೆಯಲ್ಲಿ ಅದನ್ನು ಪಾಕಮಾಡಿ ಆಹಾರವನ್ನು ಒದಗಿಸುತ್ತಿದ್ದಳು. ಗಂಡಸು ಹತ್ತಿ ಬೆಳೆಯುತ್ತಿದ್ದನು.

ಹೆಂಗಸು ಆದನ್ನು ನೂತು ಬಟ್ಟೆಮಾಡಲು ನೆರವಾಗುತ್ತಿದ್ದಳು. ಅದೇ ಪದ್ಧತಿಯು ಈಗ ಮತ್ತೆ ಸ್ಥಾಪನೆಯಾಗಬೇಕಾಗಿದೆ. ಈಗ ಈ ಕೆಲಸವು ಗಿರಣಿಗಳ ಕೆಲಸವಾಗಿರುವುದರಿಂದ ಅಷ್ಟು ಜನರಿಗೂ ನಿರುದ್ಯೋಗ ವಾಗಿದೆ. ಗಿರಣಿಯಲ್ಲಿರುವ ಒಬ್ಬ ಕೆಲಸಗಾರನು 500 ಜನರ ಕೆಲಸವನ್ನು ಮಾಡಬಲ್ಲನು. ಗಿರಣಿಗಳ ಕದರುಗಳು 24 ಗಂಟೆಗಳೂ ಕೆಲಸ ಮಾಡು ತ್ತವೆ. ಒಬ್ಬ ಕೆಲಸಗಾರನು 300 ಕದರುಗಳ ಕೆಲಸವನ್ನು ನೋಡಿಕೊಳ್ಳ ಬಹುದು. ಅಂದರೆ ಗಿರಣಿಗಳ ಒಬ್ಬೊಬ್ಬ ಕೆಲಸಗಾರನೂ 500-600 ಜನ ಕೂಲಿಗಳ ಕೆಲಸಮಾಡಿದಂತಾಗುವುದು. ಅಂದರೆ ಗಿರಣಿಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬನಿಂದಲೂ 500–600 ಜನರು ನಿರುದ್ಯೋಗಿ ಗಳಾಗುವರು.

ಇಂಗ್ಲೆಂಡಿನಂತಹ ಸಣ್ಣ ದೇಶದಲ್ಲಿ ಗಿರಣಿಗಳು ಉಚಿತವೆನಿಸ ಬಹುದು. ಇಂಗ್ಲೆಂಡು ಪ್ರಪಂಚದ $\frac{1}{3}$ ಭಾಗವನ್ನು ತನ್ನ ವ್ಯಾಪಾರದ ರಂಗವಾಗಿ ಮಾಡಿಕೊಂಡಿದೆ. ಅದರ ವ್ಯಾಪಾರ ಕ್ಷೇತ್ರವು ಅಷ್ಟು ವಿಶಾಲ ವಾಗಿರುವುದರಿಂದ, ಗಿರಣಿಗಳಿಗೆ ಆಸ್ಪದವಿದೆ. ನಾವೂ ಇಂಗ್ಲೆಂಡಿನ ಮಾದರಿಯಲ್ಲಿ ಗಿರಣಿಗಳನ್ನು ಏರ್ಪಡಿಸಿಕೊಂಡರೆ ನಮಗೆ ವ್ಯಾಪಾರ ಕ್ಷೇತ್ರ ಎಲ್ಲಿ ? ಈಗ ಭಾರತದಲ್ಲಿ ಬೊಂಬಾಯಿ, ಅಹಮದಾಬಾದು, ನಾಗಪುರ ಮುಂತಾದ ಕೆಲವು ಕಡೆಗಳಲ್ಲಿ ಮಾತ್ರ ಬಟ್ಟೆ ಗಿರಣಿಗಳಿವೆ. ಇದೇ ರೀತಿ ಎಲ್ಲಾ ಕಡೆಗಳಲ್ಲೂ ಬಟ್ಟೆ ತಯಾರಾದರೆ ಅವುಗಳ ವ್ಯಾಪಾರ ಎಲ್ಲಿ ಆಗಬೇಕು. ಈಗ ನಮ್ಮ ದೇಶದಲ್ಲಿ ಗಿರಣಿಗಳಲ್ಲಿ 3 ಲಕ್ಷ ಕೂಲಿಗ ಳಿರುವರು. ಭಾರತದ 40 ಕೋಟಿಯಲ್ಲಿ 3 ಲಕ್ಷಕ್ಕೆ ಹೀಗೆ ಉದ್ಯೋಗ ದೊರೆತರೆ ಉಳಿದವರ ಪಾಡೇನು ?

ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ನನ್ನ ಪ್ರಾಂತವಾದ ಬೀಹಾರ್‌ನಲ್ಲಿ ಕಬ್ಬಿನ ವ್ಯವಸಾಯ ಹೆಚ್ಚಾಗಿ ನಡೆಯುತ್ತದೆ. ಸಕ್ಕರೆಯು ಅಲ್ಲಿಂದ ಭಾರತದ ಇತರ ಎಡೆಗಳಿಗೆ ರವಾನೆಯಾಗುತ್ತಿದೆ.

ಈಗ ಭಾರತದಲ್ಲಿ ಅನೇಕ ಕಡೆಗಳಲ್ಲಿ ಮೈಸೂರಿನಲ್ಲಿಯೂ ಸಕ್ಕರೆ ಕಾರ್ಖಾನೆಗಳಿವೆ. ಇವೆಲ್ಲವೂ ಸಕ್ಕರೆ ತಯಾರಿಯಲ್ಲಿ ತೊಡಗಿರುವುದರಿಂದ ಈಗಾಗಲೇ ಗಿರಾಕಿಗಳು ಎಷ್ಟು ಬೇಕೋ ಅಷ್ಟು ದೊರೆಯುತ್ತಿಲ್ಲ. ಈ ವರ್ಷ ಅನೇಕ ಲಕ್ಷ ಟನ್ ಕಬ್ಬು ವ್ಯರ್ಥವಾಗಿದೆ.

ಈ ಸಂಗತಿಗಳಿಂದ ಒಂದು ತತ್ವ ನಿರ್ಧರವಾಗುತ್ತದೆ. ಮಾರಾಟ ಕ್ಷೇತ್ರವಿದ್ದು ಅದಕ್ಕೆ ತಕ್ಕಂತೆ ತಯಾರಿ ನಡೆಯಬೇಕು. ಈಗ ಈ ಪ್ರಪಂಚದ ಮಾರಾಟದ ಕ್ಷೇತ್ರವೆಲ್ಲವೂ ಹಂಚಿಹೋಗಿದೆ. ನಾವು ಬಹಳ ನಿಧಾನರಾಗಿಬಿಟ್ಟಿದ್ದೇವೆ. ನಮ್ಮ ಸ್ಥಾನವನ್ನು ಪಡೆಯಲು ನಮಗೆ ಸ್ವಾತಂತ್ರ್ಯದ ಅಧಿಕಾರವಾಗಲೀ ರಾಜಕೀಯ ಶಕ್ತಿಯಾಗಲೀ ಈಗ ಇಲ್ಲ. ನಿಜವಾಗಿ ನೋಡಿದರೆ ಈಗಿನ ಯುದ್ಧವು ಕೇವಲ ಮಾರಾಟ ಕ್ಷೇತ್ರಕ್ಕಾಗಿಯೇ ನಡೆಯುತ್ತಿದೆ. ನಾವು ಮಿಲ್ ಕೈಗಾರಿಕೆಗಳಲ್ಲಿ ತೊಡಗುವುದಾದರೆ ಇಂತಹ ಯುದ್ಧದಲ್ಲಿ ಭಾಗವಹಿಸಬೇಕಾಗುವುದು. ನಮಗೆ ಮಾರಾಟ ಕ್ಷೇತ್ರವು ಬೇಕಾದರೆ ನಾವು ಹೋರಾಡಬೇಕು. ಇಂಗ್ಲೆಂಡು ಅಮೆರಿಕಾ ಮುಂತಾದ ದೇಶಗಳಂತೆ ನಮ್ಮ ದೇಶವು ಕೈಗಾರಿಕೆ ದೇಶವಾದರೆ ನಮ್ಮ ಮಾರಾಟ ಕ್ಷೇತ್ರಕ್ಕಾಗಿ ನಾವು ಬೇರೆ ಗ್ರಹಗಳಿಗೆ ಹೋಗಬೇಕಾಗುವುದು.

ಆದುದರಿಂದ ನಾವು ಸಣ್ಣಕೈಗಾರಿಕೆಗಳಕಡೆ ದೃಷ್ಟಿತಿರುಗಿಸಬೇಕಾಗಿದೆ. ಇವೇ ನಮ್ಮ ಜನರಿಗೆ ಜೀವನೋಪಾಯವನ್ನು ಕಲ್ಪಿಸತಕ್ಕವು. ಈ ಗ್ರಾಮಕೈಗಾರಿಕೆ ಕೆಲವರನ್ನು ಕೋಟ್ಯಧೀಶರನ್ನಾಗಿ ಮಾಡುವುದಿಲ್ಲ. ಅನೇಕರನ್ನು ಅತಿ ಬಡವರನ್ನಾಗಿಯೂ ಮಾಡುವುದಿಲ್ಲ. ಯಾರನ್ನೂ ಹೊಟ್ಟೆಗಿಲ್ಲದಂತೆ ಮಾಡದ ಗ್ರಾಮಕೈಗಾರಿಕೆಗಳು ಬೇಕೋ ಅಥವಾ ಕೆಲವರನ್ನು ಕೋಟ್ಯಧೀಶರನ್ನಾಗಿಯೂ ಅನೇಕರನ್ನು ತಿರಕರನ್ನಾಗಿಯೂ ಮಾಡುವ ಮಿಲ್ ಕೈಗಾರಿಕೆಗಳು ಬೇಕೋ. ಆದುದರಿಂದಲೇ ಮಹಾತ್ಮಾ ಗಾಂಧಿಯವರು ಸಣ್ಣಕೈಗಾರಿಕೆಗಳಿಗೆ ಅಷ್ಟು ಪ್ರೋತ್ಸಾಹಕೊಟ್ಟಿರುವುದು.

ಈಗ ನಮಗೆ ಬೇಕಾಗುವ ಎಲ್ಲಾ ವಸ್ತುಗಳನ್ನೂ ನಾವೇ ಮಾಡಿಕೊಳ್ಳುತ್ತೇವೆಂದು ನಾನು ಹೇಳುವುದಿಲ್ಲ. ಹಿಂದೆ ಆ ಕಾಲವಿತ್ತು. ತಾತಾ ಕಬ್ಬಿಣದ ಕಾರ್ಖಾನೆಯಾಗಲಿ, ಭದ್ರಾವತಿ ಕಾರ್ಖಾನೆಯಾಗಲಿ ಗ್ರಾಮಾಂತರದವರಿಂದ ಸಾಧ್ಯವಿಲ್ಲ. ಆದರೆ ಹಳ್ಳಿಯವನು ತನ್ನ ಅವಶ್ಯಕತೆಗಳಿಗೆ ಈ ಕಾರ್ಖಾನೆಗಳನ್ನು ಏಕೆ ನಿರೀಕ್ಷಿಸಬೇಕು. ವಿಮಾನ ಮತ್ತು ಮೋಟಾರು ಕೈಗಾರಿಕೆಗಳು ಬೇಡವೆಂದು ನಾನು ಹೇಳುವುದಿಲ್ಲ. ಅಂತಹ ಕೈಗಾರಿಕೆಗಳು ಕೆಲವುಮಾತ್ರ. ಅವು ನಮ್ಮ ದೇಶದ ನಿರುದ್ಯೋಗವನ್ನು ಹೋಗಲಾಡಿಸಲಾರವು. ಆದರೆ ಜನಸಾಮಾನ್ಯರಿಗೆ ಬೇಕಾದ ರಾಗಿ ಬೀಸುವುದು, ಭತ್ತ ಕುಟ್ಟುವುದು ಮುಂತಾದುವುಗಳಿಗೆ ಮಿಲ್ಲುಗಳು ಏಕೆ ಬೇಕು? ಅಂತಹ ಮಿಲ್ಲುಗಳಿಂದಲೇ ನಮ್ಮ ದೇಶದ ನಿರುದ್ಯೋಗವು ಭಯಂಕರವಾಗಿರುವುದು.

ಹಿಂದೆ ವ್ಯವಸಾಯಗಾರನೇ ಬೆಲ್ಲವನ್ನು ಮಾಡಿಕೊಳ್ಳುತ್ತಿದ್ದನು. ಬೆಲ್ಲವು ಸಕ್ಕರೆಗಿಂತ ಉತ್ತಮವೆಂದು ಬಲ್ಲವರು ಹೇಳುತ್ತಾರೆ. ಬೆಲ್ಲದಿಂದ ರೈತನು ಹಣವನ್ನೂ ಪಡೆಯುತ್ತಿದ್ದನು. ಕೊಬ್ಬನ್ನೂ ಹೊಂದುತ್ತಿದ್ದನು. ಈಗ ಸಕ್ಕರೆಮಿಲ್ಲಿಗೆ ಅವನು ಕಬ್ಬನ್ನು ಮಾರುವುದರಿಂದ ಹಣವನ್ನು ಪಡೆಯುವನೇ ಹೊರತು ಕೊಬ್ಬನ್ನು ಅಲ್ಲ. ಇಂತಹ ಸ್ಥಿತಿಯಲ್ಲಿ ನಾವು ನಮ್ಮ ಹಿಂದಲ ಪದ್ಧತಿಯನ್ನೇ ಅನುಸರಿಸಬೇಕು. ಈಗ ನಮಗೆ ಒದಗಿರುವ ಮುಖ್ಯ ಕಷ್ಟ, ನಮಗೆ ಸ್ವಾವಲಂಬನವಿಲ್ಲದಿರುವುದೇ ಆಗಿದೆ. ಇತರರು ಒದಗಿಸಿದುದನ್ನು, ಅವುಗಳ ಗುಣಾವಗುಣಗಳನ್ನು ಯೋಚಿಸದೆ ನಾವು ಉಪಯೋಗಿಸುತ್ತಿರುವುದೇ ನಮ್ಮ ಹಾನಿಗೆ ಕಾರಣ. ಎಲ್ಲಕ್ಕೂ ಮೂಲ ನಮ್ಮ ಸೋಮಾರಿತನ. ನಾವು ಅದನ್ನು ಜಯಿಸಬೇಕು.

ಗ್ರಾಮ ಕೈಗಾರಿಕೆಗಳ ಪುನರುಜ್ಜೀವನಕ್ಕಾಗಿ ನೀವು ದುಡಿಯಬೇಕು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಮೈಸೂರು ಕಾಂಗ್ರೆಸ್‌ಗಳು ಗ್ರಾಮಕೈಗಾರಿಕೆಗಳ ಅಭಿವೃದ್ಧಿಗಾಗಿ ದುಡಿಯಲು ಸದಾ

ಸಿದ್ಧವಾಗಿವೆ. ಮಿಲ್ ಕೈಗಾರಿಕೆಗಳು ತಮ್ಮ ಹಿತವನ್ನು ತಾವೇ ಕಾಪಾಡಿಕೊಳ್ಳಬಲ್ಲವು. ಧನವಂತರು ಅವುಗಳನ್ನು ನಡೆಸಿಕೊಂಡುಹೋಗುವರು. ಆದರೆ ಗ್ರಾಮಗಳವರು ತಮ್ಮ ಹಿತವನ್ನು ತಾವು ಸಾಧಿಸಲು ಶಕ್ತರಾಗಿಲ್ಲ. ಅವರಿಗೆ ನೀವು ಉತ್ತೇಜನಕೊಡಬೇಕು. ನೀವು ನೂಲಬೇಕು. ನೂಲುವವರಿಗೆ ಉತ್ತೇಜನ ಕೊಡಬೇಕು. ನಿಮಗೆ ಸಹಾಯಮಾಡಲು ನಿಮ್ಮ ಸರ್ಕಾರಕ್ಕೆ ಬಹಳ ಆಸ್ಪದವಿದೆ. ಆದರೆ ನೀವು ಸರ್ಕಾರದ ಸಹಾಯದ ಮೇಲೆಯೇ ಅವಲಂಬಿಸಬಾರದು. ಸ್ವಾವಲಂಬನವು ಅತ್ಯಗತ್ಯ. ಸರ್ಕಾರದವರು ಸಹಾಯವನ್ನು ನಿರಾಕರಿಸಿದರೆ ನೀವು ಕಾರ್ಯದಿಂದ ವಿಮುಖರಾಗಬಾರದು.

ಮೈಸೂರು ಗ್ರಾಮಸೇವಾಸಂಘವು ಅರ್ಪಿಸಿದ ಭಿನ್ನವತ್ತಳೆಗಾಗಿ ಅವರನ್ನು ವಂದಿಸುತ್ತೇನೆ. ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರ ಪೂರ್ಣ ಸ್ವದೇಶೀ ಗ್ರಂಥವನ್ನು ಕನ್ನಡಿಗರಿಗೆ ಅವರು ಪ್ರಕಟಿಸಿಕೊಟ್ಟಿರುವುದು ಬಹಳ ಉತ್ತಮವಾದ ಸೇವೆಯಾಗಿದೆ.

ಬಾಬು ರಾಜೇಂದ್ರಪ್ರಸಾದ್.

“ ಗೊರೂರಿನಲ್ಲಿರುವ ಮೈಸೂರು ಗ್ರಾಮಸೇವಾಸಂಘದ ಆಶ್ರಯದಲ್ಲಿ ಶ್ರೀಮಾನ್ ಗೊರೂರು ರಾಮಸ್ವಾಮಿಐಯ್ಯಂಗಾರ್ಯರು ಮಹಾತ್ಮಾ ಗಾಂಧಿಯವರ “ ಪೂರ್ಣ ಸ್ವದೇಶೀ ” ಎಂಬುದನ್ನು ಅನುವಾದಮಾಡಿ ಕನ್ನಡಿಗರಿಗೆ ಅರ್ಪಿಸಿದ್ದಾರೆ. ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ವ್ಯವಸ್ಥಾಪಕರೂ ಕಾರ್ಯದರ್ಶಿಗಳೂ ಆದ ಶ್ರೀ ಜೆ. ಸಿ. ಕುಮಾರಪ್ಪನವರು ಈ ಕನ್ನಡಗ್ರಂಥಕ್ಕೆ ಒಂದು ಮುನ್ನುಡಿ ಬರೆದು “ ಕನ್ನಡಭಾಷೆಯು ನನಗೆ

ತಿಳಿಯದುದರಿಂದ ಈ ಪೂರ್ಣಸ್ವದೇಶಿಯ ಕನ್ನಡ ಅನುವಾದವನ್ನು ನಾನು ಓದಿನೋಡದಿದ್ದರೂ ಶ್ರೀಮಾನ್ ಗೋರೂರು ರಾಮಸ್ವಾಮಿಐಯಂಗಾರ್ಯರ ಪ್ರಸಿದ್ಧವಾದ ವಿದ್ವತ್ತಿನಮೇಲೆಯೇ ಇದನ್ನು ಕನ್ನಗಡಿಗೆ ಶಿಫಾರಸು ಮಾಡುವ ಸಾಹಸವನ್ನು ನಾನು ಮಾಡುತ್ತಿದ್ದೇನೆ" ಎಂಬುದಾಗಿ ಹೇಳಿ "ಗಾಂಧಿಜಿಯವರು ರಚನಾತ್ಮಕ ಕಾರ್ಯಕ್ರಮವನ್ನು ಒತ್ತಿಒತ್ತಿ ಹೇಳುತ್ತಿರುವ ಈ ಸಂದರ್ಭದಲ್ಲಿ ಈ ಪುಸ್ತಕದ ಪ್ರಕಟನೆಯು ಬಹಳ ಸೂಕ್ತವೂ ಸಕಾಲವಾದುದೂ ಆಗಿದೆ" ಎಂದಿದ್ದಾರೆ. ಶ್ರೀ ಗೊರೂರರ ಈ ಅನುವಾದವಲ್ಲಿ ಮಹಾತ್ಮರ ಅನೇಕ ಲೇಖನಗಳು ಅಡಕವಾಗಿವೆ. ಮೈಸೂರು ಗ್ರಾಮಸೇವಾ ಸಂಘದವರು ತಮ್ಮ ಶ್ಲಾಘನೀಯವಾದ ಜನಸೇವೆಯೊಂದಿಗೆ ಇಂತಹ ಗ್ರಂಥಗಳನ್ನು ಪ್ರಕಟಿಸುತ್ತಿರುವುದು ಅಭಿನಂದನೀಯವಾಗಿದೆ. ಅಲ್ಲದೆ ಕಡಮೆಬೆಲೆಗೆ ಇಂತಹ ಪುಸ್ತಕಗಳು ದೊರೆಯುವಂತೆ ಮಾಡಿರುವುದು ಮತ್ತೂ ವಿಶೇಷ. ಪುಸ್ತಕವು ಮೈಸೂರು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತವಾಗಿ ಎಂಟಾಣೆ ಬೆಲೆಗೆ ಸಿಕ್ಕುತ್ತದೆ. ೨೦೧ ಪುಟಗಳು.

ಸ್ವದೇಶೀ ಎಂಬುದಕ್ಕಿರುವ ಅರ್ಥವ್ಯಾಪ್ತಿಯೂ ಯಾವುದು ಸ್ವದೇಶೀ ಯಾವುದಲ್ಲ ಎಂಬ ವಿಷಯವೂ ಗ್ರಾಮಸೇವಾ ಸಮಸ್ಯೆಗಳೂ, ದೇಶೀಯ ಕೈಗಾರಿಕೆಗಳ ಸಾಧಕಬಾಧಕಗಳೂ ಇಂಡಿಯಾ ಲಿಮಿಟೆಡ್ ಕಂಪನಿಗಳಿಂದ ಆಗಿರುವ ಅಪಾಯಗಳೂ ಇತರ ವಿವರಗಳೂ ಈ ಪುಸ್ತಕದಲ್ಲಿ ಚೆನ್ನಾಗಿ ಪ್ರಕಟವಾಗಿವೆ. ದೇಶಪ್ರೇಮವುಳ್ಳವರೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಆಸಕ್ತಿಯುಳ್ಳವರೂ ಈ ಪುಸ್ತಕವನ್ನು ತಪ್ಪದೆಓದಬೇಕೆಂಬುದಾಗಿ ನಮ್ಮ ಪ್ರಾರ್ಥನೆ."

ತಾಯಿನಾಡು ಅಗ್ರಲೇಖನ

ಪೂರ್ಣ ಸ್ವದೇಶೀ

೧. ಹೊಸ ಅರ್ಥ

[ಕಳೆದ ಕೆಲವು ತಿಂಗಳುಗಳಿಂದ, ಗಾಂಧಿಜಿಯವರನ್ನು ಅನೇಕ ಸ್ವದೇಶೀ ಕೆಲಸಗಾರರು, ಸ್ವದೇಶೀ ಎಂಬುದಕ್ಕೆ ಎಲ್ಲವನ್ನೂ ಒಳಗೊಂಡ ಸರಿಯಾದ ಒಂದು ಸೂತ್ರವನ್ನು ತಮಗೆ ಮಾರ್ಗದರ್ಶಕವಾಗುವಂತೆ ಹೇಳಬೇಕೆಂದು ಕೇಳತೊಡಗಿದ್ದಾರೆ. ಇದಕ್ಕೆ ಪೂರ್ಣವಾದ ಒಂದು ಸೂತ್ರವನ್ನು ಕಂಡುಹಿಡಿಯಬೇಕೆನ್ನುವುದರಲ್ಲೂ, ದಕ್ಷಿಣ ದೇಶದ ಕೆಲಸಗಾರರೊಂದಿಗೆ ಚರ್ಚೆ ನಡೆಸುವುದರಲ್ಲೂ, ಇಂತಹ ಸೂತ್ರವನ್ನು ಹೇಳುವುದು ಅಸಾಧ್ಯವೆಂದೂ, ಸ್ವದೇಶೀ ಎನ್ನುವುದಕ್ಕೆ ಸ್ವದೇಶೀ ಎಂಬುದೇ ಸೂತ್ರವೆಂದೂ ಗಾಂಧಿಜಿಯವರಿಗೆ ಗೊತ್ತಾಯಿತು. ಸ್ವದೇಶೀ ಎಂಬುದು ನಿತ್ಯವೂ ಬೆಳೆಯುತ್ತಾ ಬದಲಾವಣೆಯನ್ನು ಹೊಂದುತ್ತಿರುವ ಭಾವ. ಸೂತ್ರವನ್ನು ಹೇಳುವುದು ಸಾಧ್ಯವಿಲ್ಲ. ಆದರಿಂದ ಸ್ವದೇಶೀ ಭಾವದ ಬೆಳವಣಿಗೆಗೂ ಕುಂದಕವುಂಟಾಗಬಹುದು. ಆದುದರಿಂದ ಗಾಂಧಿಜಿಯವರು ಅಖಿಲ ಭಾರತ ಸ್ವದೇಶೀ ಸಭೆ ಮತ್ತು ಅದೇ ಬಗೆಯ ಇತರ ಸಂಘಗಳಿಗೆ ಮಾರ್ಗದರ್ಶಕವಾಗಿ ಈ ಮುಂದಲ ಕಾರ್ಯಕಾರಿಯಾದ ಸೂತ್ರವನ್ನು ಸೂಚಿಸಿದರು.

"ಅಖಿಲ ಭಾರತ ಸ್ವದೇಶೀ ಸಭೆಯ ಉದ್ದೇಶಗಳಿಗೆ, ಸ್ವದೇಶೀ ಎಂದರೆ ಇಂಡಿಯಾದಲ್ಲಿ ತಯಾರಾಗುವ ಸಣ್ಣ ಸಣ್ಣ ಕೈಗಾರಿಕೆಯ ಪದಾರ್ಥಗಳೆಂದು ಅರ್ಥ. ಆ ಸಣ್ಣ ಕೈಗಾರಿಕೆಗಳಿಗೆ ಸಾರ್ವಜನಿಕರ ಪ್ರೋತ್ಸಾಹದ ಆವಶ್ಯಕತೆ ಇರಬೇಕು, ಮತ್ತು ಅವು ತಮ್ಮ ಸ್ವಾಧೀನದಲ್ಲಿರುವ ಕೂಲಿಗಳ ಹಿತಚಿಂತನೆಯಲ್ಲೂ, ಕೂಲಿಗಳನ್ನು ನಿರ್ಣಯಿಸುವುದರಲ್ಲೂ, ಬೆಲೆಗಳನ್ನು ಗೊತ್ತುಮಾಡುವುದರಲ್ಲೂ ಅಖಿಲ ಭಾರತ ಸ್ವದೇಶೀ ಸಭೆಯ

ಬುದ್ಧಿವಾದದಂತೆ ನಡೆಯಬೇಕು. ಸರ್ಕಾರದ ಸಹಾಯವನ್ನು ಪಡೆದಿರುವ ಅಥವ ಪಡೆಯ ಬಲ್ಲ, ಚೆನ್ನಾಗಿ ವ್ಯವಸ್ಥಿತವಾಗಿರುವ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಅಖಿಲ ಭಾರತ ಸ್ವದೇಶಿ ಸಭೆಯ ಪ್ರೋತ್ಸಾಹವು ಅನವಶ್ಯಕ. ಆದುದರಿಂದ ಅಂತಹ ಕೈಗಾರಿಕೆಗಳು 'ಸ್ವದೇಶೀ' ಯಿಂದ ಬೇರೆಯಾಗಿರುತ್ತವೆ." ಈ ಸೂತ್ರದಿಂದ ಕೆಲಸಗಾರರಲ್ಲಿ ಗಾಬರಿಯುಂಟಾಯಿತು. ಅದರ ಫಲವಾಗಿ ಗಾಂಧಿಜಿಯವರು ಬೊಂಬಾಯಿನಲ್ಲಿ ಹರಿಜನ ಪ್ರವಾಸ ವಿಟ್ಟುಕೊಂಡಿದ್ದಾಗ 1934 ನೇ ಜೂನ್ ತಿಂಗಳಲ್ಲಿ ಸ್ವದೇಶೀ ಸಭೆಯ ಕೆಲವು ಕೆಲಸಗಾರರಿಗೂ ಗಾಂಧಿಜಿಯವರಿಗೂ ಸಂಭಾಷಣೆಗಳು ನಡೆದವು. ಗಾಂಧಿಜಿಯವರು ಹೇಳಿದುದರ ಸಾರಾಂಶವು ಕೆಳಗೆ ಕೊಟ್ಟಂತೆ ಇದ್ದಿತು]

"ನನ್ನ ಸೂತ್ರವು ಸ್ಪಷ್ಟವಾಗಿ ಹೇಳಿರುವಂತೆ ಸ್ವದೇಶೀ ಸಭೆಗೆ ಮಾರ್ಗದರ್ಶಕವಾಗಲು ಕೊಡಲ್ಪಟ್ಟುದು. ಅದು ಸ್ವದೇಶೀ ವಿಚಾರವನ್ನೆಲ್ಲಾ ಪೂರ್ಣವಾಗಿ ಹೇಳಲು ಹೊರಟುದಲ್ಲ. ಸ್ವದೇಶೀ ಸಭೆಯು ತನ್ನ ಲಕ್ಷ್ಯವನ್ನೂ ಪ್ರೋತ್ಸಾಹವನ್ನು ಗೃಹಕೈಗಾರಿಕೆಗಳಿಗೆ ಕೊಡಬೇಕು. ದೊಡ್ಡ ಕೈಗಾರಿಕೆಗಳ ವಿಷಯಕ್ಕೆ ಹೋಗಕೂಡದು. ಈ ಸೂಚನೆಯ ಉದ್ದೇಶವು ದೊಡ್ಡ ಕೈಗಾರಿಕೆಗಳನ್ನು ತಿರಸ್ಕರಿಸುವುದಾಗಲಿ, ಅಥವಾ ಅವು ಹಿಂದೆ ನಮ್ಮ ದೇಶಕ್ಕೆ ಮಾಡಿರುವ, ಮುಂದೆ ಮಾಡಬಹುದಾದ, ಸಹಾಯಗಳನ್ನು ಅಲ್ಲಗಳೆಯುವುದಾಗಲಿ ಅಲ್ಲ. ಆದರೆ ಸ್ವದೇಶೀ ಸಭೆಯಂಥ ಸಂಘವು ಈ ವರೆಗೂ ಮಾಡುತ್ತಿರುವಂತೆ ಅಂತಹ ದೊಡ್ಡ ಕೈಗಾರಿಕೆಗಳಿಗೆ ತಾವೇ ಮುಂದಾಳುಗಳಾಗಿ ಪ್ರಚಾರಕರಾಗಬೇಕಾದುದಿಲ್ಲ. ಸ್ವದೇಶೀ ಭಾವನೆಯು ಸಾಕಾದಷ್ಟು ದೇಶದಲ್ಲಿ ಪ್ರಚಾರವಾಗಿದೆ. ಆದುದರಿಂದ ಇನ್ನೂ ಹೆಚ್ಚು ಪ್ರಚಾರವಾಗದಿದ್ದರೂ, ದೊಡ್ಡ ಕೈಗಾರಿಕೆಗಳಿಗೆ ಈಗ ಆಗಿರುವ ಪ್ರಚಾರದಿಂದಲೇ ಸಹಾಯವಾಗುತ್ತದೆ. ಸ್ವದೇಶೀ ಸಂಘಗಳು ಉಪಕಾರಿಗಳಾಗಬೇಕಾದರೆ, ಸಾಯುತ್ತಿರುವ ಕೈಗಾರಿಕೆಗಳಿಗೆ ತಮ್ಮ ಲಕ್ಷ್ಯವನ್ನು ಕೊಡಬೇಕು. ಚೆನ್ನಾಗಿ ಸ್ಥಾಪಿತವಾಗಿರುವ ಕೈಗಾ

ರಿಕೆಗಳನ್ನು ಇನ್ನೂ ಹೆಚ್ಚು ಪ್ರಚಾರ ಮಾಡುವ ಪ್ರಯತ್ನದಿಂದ ಅವುಗಳ ಬೆಲೆಯು ಮಾತ್ರ ಏರುತ್ತದೆ. ಕೊಳ್ಳುವವರಿಗೆ ಇದರಿಂದ ಅನ್ಯಾಯವಾಗುತ್ತದೆ. ತನ್ನಷ್ಟಕ್ಕೆ ತಾನು ಜಯಶಾಲಿಯಾಗಿ ಹೋಗುತ್ತಿರುವ ಕೈಗಾರಿಕೆಗೆ ಸಹಾಯಮಾಡಬೇಕೆಂದು, ಒಂದು ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸುವುದು ವ್ಯಥಾಶ್ರಮ. ನಮ್ಮ ಶ್ರಮದಿಂದ ಆ ದೊಡ್ಡ ಕೈಗಾರಿಕೆಗಳು ಹುಟ್ಟಿ ಬೆಳೆಯುತ್ತಿರುವವೆಂಬ ಸುಳ್ಳು ಸಮಾಧಾನವನ್ನು ನಾವು ಹೊಂದುವುದು ಪ್ರಯೋಜನವಿಲ್ಲ. ಅದು ವಾಸ್ತವವಾದ ಅಂಶಗಳಿಂದ ಬಲಗೊಳ್ಳದ ಅಗ್ಗವಾದ ಸಮಾಧಾನ. ನಾನು 1920ನೇ ಇಸವಿಯಲ್ಲಿ ಸ್ವದೇಶೀ ಚಳುವಳಿಯನ್ನು ಹೂಡುವ ಕಾಲಕ್ಕೆ ಫಸಲ್ ಬಾಯಿಯವರೊಂದಿಗೆ ನಡೆಸಿದ ಒಂದು ಸಂಭಾಷಣೆಯನ್ನು ಜ್ಞಾಪಿಸಿಕೊಳ್ಳುತ್ತೇನೆ. ಅವರು "ಕಾಂಗ್ರೆಸ್‌ನವರಾದ ನೀವು ನಮ್ಮ ಸಾಮಾನುಗಳ ಪ್ರಚಾರಕರಾದರೆ ನಿಮ್ಮಿಂದ ನಮ್ಮ ಸಾಮಾನುಗಳ ಬೆಲೆ ಏರುವುದೇ ಹೊರತು ದೇಶಕ್ಕೆ ಮತ್ತೇನೂ ಪ್ರಯೋಜನವಿಲ್ಲ" ಎಂದರು. ಅವರ ವಾದವು ಬಹಳ ಸರಿಯಾಗಿತ್ತು. ಆದರೆ ನಾನು ಅವರಿಗೆ 'ನನ್ನ ಉದ್ದೇಶವು ಕೈಯಿಂದ ನೂತು ಕೈಯಲ್ಲಿ ನೇಯಿದ ಖಾದಿಬಟ್ಟೆಯ ಪುನರುಜ್ಜೀವನ. ಇದು ಈಗ ಪೂರ್ಣವಾಗಿ ಸತ್ತಿದೆ. ನಮ್ಮ ದೇಶದ ಕೋಟಿ ಸಂಖ್ಯೆಯ ಜನರ ನಿರುದ್ಯೋಗವು ಪರಿಹಾರವಾಗಬೇಕಾದರೆ ಈ ಕೈಗಾರಿಕೆಯನ್ನು ಮತ್ತೆ ಸ್ಥಾಪಿಸಬೇಕು" ಎಂದು ಹೇಳಿದಾಗ ಅವರು ಅವಾಕ್ಕಾದರು.

ಆದರೆ ಆರೀತಿ ಸಾಯುತ್ತಿರುವ ಕೈಗಾರಿಕೆ ಖಾದಿ ಮಾತ್ರವೇ ಅಲ್ಲ. ಆದುದರಿಂದ ಸಾರ್ವಜನಿಕರ ಬೆಂಬಲದ ಆವಶ್ಯಕತೆಯಿರುವ ಎಲ್ಲಾ ಸಣ್ಣ ಅವ್ಯವಸ್ಥಿತವಾದ ಕೈಗಾರಿಕೆಗಳ ಕಡೆಗೆ ನಿಮ್ಮ ಲಕ್ಷ್ಯವನ್ನು ಕೊಡಬೇಕೆಂದು ನಾನು ಸೂಚಿಸುತ್ತೇನೆ. ಅವುಗಳ ಪರವಾಗಿ ಕೆಲಸಮಾಡದೆ ಇದ್ದರೆ ಅವು ನಾಶವಾಗಿಬಿಡಬಹುದು. ಅವುಗಳಲ್ಲಿ ಕೆಲ

ವನ್ನು, ದೊಡ್ಡ ಕೈಗಾರಿಕೆಗಳು ತಮ್ಮ ಸಾಹಸಗಳಿಂದ ಹಿಂದಕ್ಕೆ ತಳ್ಳು ತ್ತಿವೆ. ಈ ಸಣ್ಣ ಕೈಗಾರಿಕೆಗಳು ನಿಮ್ಮ ಸಹಾಯವನ್ನು ಬೇಡುತ್ತಿವೆ.

ಉದಾಹರಣೆಗೆ ಸಕ್ಕರೆ ಕೈಗಾರಿಕೆಯನ್ನು ತೆಗೆದುಕೊಳ್ಳಿ. ಬಟ್ಟೆಯನ್ನು ಬಿಟ್ಟರೆ, ಮುಂದಲ ದೊಡ್ಡ ಕೈಗಾರಿಕೆ ಸಕ್ಕರೆಯದು. ಅದು ನಮ್ಮ ಸಹಾಯವನ್ನು ಅಪೇಕ್ಷಿಸುವುದಿಲ್ಲ. ಸಕ್ಕರೆ ಕಾರ್ಖಾನೆಗಳು ದಿನ ದಿನವೂ ಹೆಚ್ಚುತ್ತಿವೆ. ಈ ಕೈಗಾರಿಕೆಯ ಬೆಳವಣಿಗೆಗೆ ಸಾರ್ವಜನಿಕ ಸಂಸ್ಥೆಗಳು ಏನೂ ಸಹಾಯಮಾಡಿಲ್ಲ. ಅದು ತನ್ನ ಬೆಳವಣಿಗೆಗೆ, ಅನುಕೂಲವಾದ ಕಾನೂನಿಗೆ ಋಣಿಯಾಗಿದೆ. ಈಗ ಸಕ್ಕರೆಯ ಕೈಗಾರಿಕೆಯು ಅತ್ಯಂತ ಪ್ರಬಲವಾಗಿ ಬೆಳೆಯುತ್ತಿದೆ; ಬೆಲ್ಲವು ಕಣ್ಮರೆಯಾಗುತ್ತಿದೆ. ದೇಹಕ್ಕೆ ಬೇಕಾದ ಪುಷ್ಟಿಯನ್ನು ಕೊಡುವುದರಲ್ಲಿ ಸಕ್ಕರೆಗಿಂತ ಬೆಲ್ಲವು ಹೆಚ್ಚು ಉತ್ತಮವಾದುದೆಂದು ಎಲ್ಲರೂ ಒಪ್ಪುತ್ತಾರೆ. ಈ ಬೆಲೆಯಾದ ಗೃಹಕೈಗಾರಿಕೆಯು ನಿಮ್ಮ ಸಹಾಯವನ್ನು ಬೇಡುತ್ತಿದೆ. ಈ ಒಂದರಲ್ಲೇ ಹೊಸ ಶೋಧನೆಗಳನ್ನು ಕಂಡುಹಿಡಿದು ಒಳ್ಳೆಯ ಸಹಾಯವನ್ನು ನೀಡಲು ಅವಕಾಶವಿದೆ. ಬೆಲ್ಲದ ಕೈಗಾರಿಕೆಯನ್ನು ಬದುಕಿಸುವ ದಾರಿಯನ್ನೂ ಸಾಧನೆಯನ್ನೂ ನಾವು ಕಂಡುಹಿಡಿಯಬೇಕಾಗಿದೆ. ನನ್ನ ಅಭಿಪ್ರಾಯವೇನೆಂಬುದನ್ನು ತೋರಿಸಲು ಇದು ಒಂದು ಉದಾಹರಣೆ ಮಾತ್ರ.

ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದರಿಂದ ನಮ್ಮ ದೇಶದ ಸಂಪತ್ತನ್ನು ನಾವು ಹೆಚ್ಚಿಸುವೆವೆಂಬ ವಿಷಯದಲ್ಲಿ ನನಗೆ ಸ್ವಲ್ಪವೂ ಅನುಮಾನವಿಲ್ಲ. ನೈಜವಾದ ಸ್ವದೇಶಿಯು, ಈ ಗೃಹಕೈಗಾರಿಕೆಗಳನ್ನು ಮತ್ತೆ ಸ್ಥಾಪಿಸಿ ಪ್ರೋತ್ಸಾಹಿಸುವುದರಲ್ಲೇ ಅಡಕವಾಗಿದೆ ಎಂಬುದರಲ್ಲೂ ನನಗೆ ಅನುಮಾನವಿಲ್ಲ. ಅದೇ, ಮೂಕರಾದ ಲಕ್ಷಾಂತರ ಜನರಿಗೆ ಸಹಾಯವಾಗಬಲ್ಲುದು. ನಮ್ಮ ಜನರ ಊಹನಾಶಕ್ತಿಗೂ ಕಲಾಸೃಷ್ಟಿಯಶಕ್ತಿಗೂ ಅದು ದಾರಿಯಾಗುತ್ತದೆ. ಉದ್ಯೋಗದ ಆವಶ್ಯಕತೆ ಇರುವ ನೂರಾರು ನಿರುದ್ಯೋಗಿ ತರುಣರಿಗೆ ಅದರಿಂದ ಕೆಲಸ ಸಿಗುವುದು.

ಈಗ ವ್ಯರ್ಥವಾಗುವ ಎಲ್ಲಾ ಶಕ್ತಿಗಳನ್ನೂ ಅದರ ಮೂಲಕ ಉಪಯೋಗಿಸಿಕೊಳ್ಳಬಹುದು. ಹೆಚ್ಚು ಸಂಪಾದನೆಯಾಗುತ್ತಿರುವ ಕೆಲಸಗಳಲ್ಲಿ ಇರುವವರು ಆ ಕೆಲಸಗಳನ್ನು ಬಿಟ್ಟು ಈ ಸಣ್ಣ ಕೈಗಾರಿಕೆಗಳಿಗೆ ಬರಬೇಕೆಂದು ನಾನು ಹೇಳುವುದಿಲ್ಲ. ನಾನು ಚರಕದ ವಿಷಯದಲ್ಲಿ ಮಾಡಿದಂತೆಯೇ, ನಿರುದ್ಯೋಗದಿಂದಲೂ ಹಸಿವಿನಿಂದಲೂ ನರಳುತ್ತಿರುವವರು, ಈ ಕೆಲವು ಕೈಗಾರಿಕೆಗಳನ್ನು ತೆಗೆದುಕೊಂಡು ತಮ್ಮ ಅಲ್ಪ ಸಂಪಾದನೆಯನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ನಿಮ್ಮ ಕಾರ್ಯಕ್ರಮದಲ್ಲಿ ನಾನು ಸೂಚಿಸಿರುವ ಈ ಬದಲಾವಣೆಯಿಂದ, ದೊಡ್ಡ ಕೈಗಾರಿಕೆಗಳಿಗೆ ಯಾವ ರೀತಿಯಲ್ಲೂ ಅಪಾಯವಿಲ್ಲವೆಂಬುದು ಗೊತ್ತಾಗುವುದು. ದೇಶದ ಸೇವಕರೆ ನಿಮಗೆ ನಾನು ಹೇಳಬಯಸುವುದು ಇದು; ನಿಮ್ಮ ಕಾರ್ಯಕ್ರಮಗಳನ್ನು ಸಣ್ಣ ಕೈಗಾರಿಕೆಗಳಿಗೆ ಮಾತ್ರ ಸಂಬಂಧಿಸಿಕೊಳ್ಳಿ. ದೊಡ್ಡ ಕೈಗಾರಿಕೆಗಳು ಈಗ ಮಾಡುತ್ತಿರುವಂತೆ ತಮ್ಮ ಸಂರಕ್ಷಣೆಯನ್ನು ತಾವು ಮಾಡಿಕೊಳ್ಳಲಿ. ನನ್ನ ಅಭಿಪ್ರಾಯದಲ್ಲಿ ಸಣ್ಣ ಕೈಗಾರಿಕೆಗಳು ದೊಡ್ಡ ಕೈಗಾರಿಕೆಗಳನ್ನು ನಾಶಮಾಡುವುದಿಲ್ಲ. ಅವುಗಳಿಗೆ ಸಹಾಯಕವಾಗುವುವು. ಪರೋಪಕಾರಕವಾದ ಈ ಕೆಲಸದಲ್ಲಿ ಉತ್ಸಾಹತೋರಿಸುವಂತೆ ದೊಡ್ಡ ದೊಡ್ಡ ಕೈಗಾರಿಕೆಗಳ ಒಡೆಯರನ್ನೂ ಪ್ರೋತ್ಸಾಹಿಸುವುದು ನನ್ನ ಹಿರಿಯ ಆಸೆ. ನಾನು ಬಟ್ಟೆಗಿರಣಿಗಳವರಿಗೂ ಸ್ನೇಹಿತನೆ. ನನಗೆ ಸಾಧ್ಯವಾದಾಗಲೆಲ್ಲಾ ಅವರಿಗೆ ಸಹಾಯ ಮಾಡಲು ನಾನು ಹಿಂದೆಗೆದಿಲ್ಲವೆಂಬುದಕ್ಕೆ ಗಿರಣಿಗಳ ಮಾಲಿಕರೇ ಸಾಕ್ಷಿ.

---

೨. ಸ್ವದೇಶೀ

ಕಳೆದ ವರುಷ ನಾನು ಖಾಯಿಲೆಯಿಂದ ಗುಣಮುಖವಾಗುತ್ತಿರುವಾಗಲೋ, ಅಥವ ಈ ವರುಷದ ಪ್ರಾರಂಭದಲ್ಲಿಯೋ, ಸ್ವದೇಶಿ ಕೆಲಸ

ಗಾರರಿಗೆ ಸಹಕಾರಿಯಾಗುವಂತೆ ಸ್ವದೇಶಿಯಮೇಲೆ ಒಂದು ಸೂತ್ರವನ್ನು ಹೇಳಬೇಕೆಂದು ನನಗೆ ಒತ್ತಾಯ ಬಂದಿತು. ಬಟ್ಟೆಗಳಲ್ಲಿ ಬಗೆ ಬಗೆಯ ಸ್ವದೇಶಿಗಳಿವೆಯೆಂಬುದನ್ನು ನಾನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾಯಿತು. ಸೂಚಿತವಾದ ಅನೇಕ ಸೂತ್ರಗಳನ್ನೆಲ್ಲ ಒಟ್ಟಿಗೆ ಸೇರಿಸಿದೆ. ಶ್ರೀ ಶಿವರಾವ್, ಶ್ರೀ ಜಲಾಭಾಯಿ ನವರೋಜಿ ಮತ್ತು ಇತರರೊಂದಿಗೆ ನಾನು ಪತ್ರವ್ಯವಹಾರವನ್ನು ನಡೆಸಿದೆ. ಎಲ್ಲಾ ಸಂದರ್ಭಗಳಿಗೂ ಒಪ್ಪಿಗೆಯಾಗುವಂತಹ ಸೂತ್ರವನ್ನು ಕಂಡುಹಿಡಿಯುವುದು ನನ್ನಿಂದ ಸಾಧ್ಯವಾಗಲಿಲ್ಲ. ಸ್ವದೇಶಿಗೆ ಸಂಬಂಧಪಟ್ಟುದನ್ನೆಲ್ಲಾ ಪೂರ್ಣವಾಗಿ ಒಳಗೊಂಡ ಸೂತ್ರವನ್ನು ಕಂಡುಹಿಡಿಯಲು ನನ್ನಿಂದ ಸಾಧ್ಯವಾಗಲಿಲ್ಲ. ನಾನು ದೇಶದಮೇಲೆಲ್ಲಾ ಸಂಚಾರಮಾಡುತ್ತಿದ್ದುದರಿಂದ ಸ್ವದೇಶೀ ಸಂಸ್ಥೆಗಳು ಹೇಗೆ ಕೆಲಸಮಾಡುತ್ತಿದ್ದುವೆಂಬುದನ್ನು ನೋಡಲು ನನಗೆ ಅವಕಾಶ ದೊರಕಿತು. ಅದರ ಫಲವಾಗಿ ಈಗಿನ ಅಭ್ಯಾಸವು ಸಾರ್ವಜನಿಕರಿಗೆ ಮಾಡುವ ಉದ್ದೇಶರಹಿತವಾದ ಮೋಸವೆಂದೂ ಶಕ್ತರಾದ ಅನೇಕ ಕೆಲಸಗಾರರು ವ್ಯರ್ಥವಾದ ಕೆಲಸಗಳಲ್ಲಿ ತಮ್ಮ ಶಕ್ತಿಗಳನ್ನು ವ್ಯರ್ಥಮಾಡುತ್ತಿದ್ದರೆಂದೂ ನನಗೆ ತಿಳಿಯಿತು. ಅವರು ತಮಗೇ ತಾವು ಮೋಸಮಾಡಿಕೊಳ್ಳುವುದನ್ನು ಅಭ್ಯಾಸಮಾಡುತ್ತಿದ್ದರು. ಈ ಸ್ಪಷ್ಟವಾದ ಮಾತುಗಳು ನನ್ನ ಮನಸ್ಸಿನ ಆಗಿನ ಭಾವಗಳನ್ನು ಸರಿಯಾಗಿ ವಿವರಿಸುವುದಾದರೂ, ಸ್ವದೇಶೀ ಸಂಸ್ಥೆಗಳಲ್ಲಿ ಕೆಲಸಮಾಡುವವರ ಮೇಲೆ ಯಾವ ಆಕ್ಷೇಪಣೆಗಳನ್ನೂ ಹೊರಿಸಲು ಉದ್ದೇಶಪಟ್ಟುವುಗಳಲ್ಲ. ತಾವು ತಮಗೇ ಮೋಸಮಾಡಿಕೊಳ್ಳುತ್ತಿರುವೆವೆಂಬುದನ್ನೂ ತಿಳಿಯದೆ ಆ ಕೆಲಸಗಾರರು ತಮ್ಮಿಂದ ಸಾಧ್ಯವಾದುವುಗಳನ್ನೆಲ್ಲಾ ಮಾಡುತ್ತಿದ್ದರು.

ನನ್ನ ಅಭಿಪ್ರಾಯವೇನೆಂಬುದನ್ನು ವಿವರಿಸುತ್ತೇನೆ. ನಮ್ಮ ಪ್ರೋತ್ಸಾಹವೂ, ವ್ಯಾಪಾರಕ್ಕೆ ಜಾಹೀರಾತೂ ಅವಶ್ಯಕವಿಲ್ಲದ ವಸ್ತುಗಳ ಪ್ರದರ್ಶನಗಳನ್ನು ನಾವು ಏರ್ಪಡಿಸುತ್ತಿದ್ದೆವು. ನಮ್ಮ ಪ್ರವೇಶದಿಂದ ಆ

ವಸ್ತುಗಳ ಬೆಲೆಯು ಏರುತ್ತಿದ್ದಿತು. ಇಲ್ಲವೇ ಜಯಕಾರಿಯಾಗಿ ಕೆಲಸ ಮಾಡುತ್ತಿದ್ದ ಅನೇಕ ಕಂಪನಿಗಳಿಗೆ ಪೋಟಾಪೋಟಿಯುಂಟಾಗುತ್ತಿದ್ದಿತು.

ನಾವು ದೊಡ್ಡ ದನಿಯಿಂದ ಬಟ್ಟೆಯಂತ್ರಗಳನ್ನೂ, ಸಕ್ಕರೆ ಮತ್ತು ಅಕ್ಕಿಯ ಕಾರ್ಖಾನೆಗಳನೂ ಪ್ರೋತ್ಸಾಹಿಸುತ್ತೇವೆಂದು ಹೇಳಿಕೊಂಡು ಚರಕವನ್ನೂ ಕೈಮಗ್ಗವನ್ನೂ ಅದರಲ್ಲಿ ತಯಾರಾಗುವ ಖಾದಿ ಬಟ್ಟೆಯನ್ನೂ ಕೊಲ್ಲಬಹುದು; ಹಳ್ಳಿಯ ಕಬ್ಬಿನ ಗಾಣಿಗನನ್ನೂ, ಜೀವವಸ್ತುವಿನೊಡಗೂಡಿದ ಅವನು ತಯಾರಿಸುವ ಬೆಲ್ಲ ಮತ್ತು ಗೂಳವನ್ನೂ ಕೊಲ್ಲಬಹುದು; ಕೈಯಿಂದ ಭತ್ತ ಕುಟ್ಟುವವನನ್ನೂ ಜೀವಧಾತುಗಳನ್ನು ಅಕ್ಕಿಯಲ್ಲೇ ಉಳಿಸಿರುವ ಕೈಯಿಂದ ಮಾಡಿದ ಅಕ್ಕಿಯನ್ನೂ ಕೊಲ್ಲಬಹುದು. ಆದುದರಿಂದ ಹಳ್ಳಿಯ ಚರಕ ಹಳ್ಳಿಯ ಕಬ್ಬಿನ ಗಾಣ ಮತ್ತು ಹಳ್ಳಿಯಲ್ಲಿ ಕೈಯ್ಯಿಂದ ಭತ್ತವನ್ನು ಕುಟ್ಟುವವರು ಇವರಿಗೆ ಸಹಾಯಮಾಡುವುದು ನಮ್ಮ ಸ್ಪಷ್ಟವಾದ ಕರ್ತವ್ಯ. ಹಳ್ಳಿಯ ಈ ಕೆಲಸಗಾರರ ಸಾಮಾನುಗಳನ್ನು ಪ್ರಚಾರಮಾಡಿ ಅವುಗಳ ಗುಣಗಳನ್ನು ಕಂಡುಹಿಡಿದು, ಆ ಕೆಲಸಗಾರರ ಸ್ಥಿತಿಗಳನ್ನು ತಿಳಿಯಬೇಕು; ಯಂತ್ರಗಳಿಂದ ಎಷ್ಟು ಜನ ಹಳ್ಳಿಯ ಕೆಲಸಗಾರರಿಗೆ ನಿರುದ್ಯೋಗ ಸಂಭವಿಸಿದೆ ಎಂಬುದನ್ನು ತಿಳಿಯಬೇಕು. ಅವರ ಕೈಗಾರಿಕೆಗಳನ್ನು—ಹಳ್ಳಿಯ ಕೈಗಾರಿಕೆಗಳನ್ನು—ಹಳ್ಳಿಯ ಕೈಗಾರಿಕೆಗಳಾಗಿಯೇ ಉಳಿಸಿ, ಯಂತ್ರಗಳ ಪೈಪೋಟಿಯನ್ನು ತಡೆಯಲು ಅವುಗಳಲ್ಲಿ ಯಾವ ಹೆಚ್ಚುಕಡಿಮೆ ಮಾಡಬೇಕೆಂಬುದನ್ನು ತಿಳಿಯಬೇಕು. ನಾವು ಈ ಕೈಗಾರಿಕೆಗಳನ್ನು ಪೂರ್ಣವಾಗಿ ತ್ಯಜಿಸಿದ್ದೇವೆ. ಅದು ನಮ್ಮ ದೊಡ್ಡ ತಪ್ಪು. ಇಲ್ಲಿ ಬಟ್ಟೆಯಂತ್ರದಲ್ಲೂ, ಸಕ್ಕರೆಯಲ್ಲೂ ಅಕ್ಕಿಯಂತ್ರಗಳಲ್ಲೂ ದ್ವೇಷವಿಲ್ಲ. ಪರದೇಶಿ ಮಾಲುಗಳನ್ನು ತೆಗೆದುಕೊಳ್ಳುವುದರ ಬದಲು ಈ ಸ್ವದೇಶೀ ಯಂತ್ರಗಳ ಸಾಮಾನನ್ನೇ ತೆಗೆದುಕೊಳ್ಳಬೇಕು. ನಮ್ಮ ಯಂತ್ರಗಳೂ ಪರದೇಶದವರ ಪೈಪೋಟಿಯಿಂದ ನಾಶವಾಗುವ ಅಪಾಯಸ್ಥಿತಿಯಲ್ಲಿದ್ದರೆ ಅವುಗಳಿಗೂ ಕೂಡ ಆವಶ್ಯಕವಾದ ಸಹಾಯ

ವನ್ನು ಕೊಡಲೇಬೇಕು. ಆದರೆ ಅವುಗಳಿಗೆ ಅಂತಹ ಆವಶ್ಯಕತೆಯಿಲ್ಲ. ಪರದೇಶದವರ ಪೈಪೋಟಿಯಿದ್ದರೂ ಅವು ಅಭಿವೃದ್ಧಿಯಾಗುತ್ತಲೇ ಇವೆ. ಈಗ ಮುಖ್ಯವಾಗಿ ಬೇಕಾಗಿರುವುದು,—ಸ್ವದೇಶದ ಯಂತ್ರಗಳಾಗಲಿ ಪರದೇಶದ ಯಂತ್ರಗಳಾಗಲಿ—ಅವುಗಳಿಂದ ನಾಶಹೊಂದುತ್ತಿರುವ ಹಳ್ಳಿಯ ಕೈಗಾರಿಕೆಗಳು ಮತ್ತು ಆ ಕೈಗಾರಿಕೆಗಳನ್ನು ಅವಲಂಬಿಸಿರುವ ಹಳ್ಳಿಯ ಜನ, ಇವರಿಗೆ ರಕ್ಷಣೆ. ಖಾದಿ, ಬೆಲ್ಲ, ಕೈಯಿಂದ ಕುಟ್ಟಿದ ಅಕ್ಕಿ ಇವುಗಳಲ್ಲಿ ಸ್ವಾಭಾವಿಕವಾಗಿ ಒಳ್ಳೆಯ ಗುಣಗಳಿಲ್ಲದೆ ಅವು ನಾಶ ವಾಗುವುದಕ್ಕೇ ಅರ್ಹವಾಗಿರಬಹುದು. ಆದರೆ ಖಾದಿಯ ಹೊರತು, ಉಳಿದ ಕಬ್ಬಿನ ಗಾಣದಿಂದಲೂ ಭತ್ತಕುಟ್ಟುವುದರಿಂದಲೂ ಜೀವನ ಮಾಡುತ್ತಿದ್ದ ಲಕ್ಷ ಲಕ್ಷ ಜನರ ಸ್ಥಿತಿಯು ಏನಾಗಿದೆ ಎಂಬುದನ್ನು ತಿಳಿ ಯಲು, ನನಗೆ ತಿಳಿದಮಟ್ಟಿಗೆ ಸ್ವಲ್ಪವೂ ಪ್ರಯತ್ನ ನಡೆದಿಲ್ಲ. ಇಲ್ಲಿ ದೇಶಸೇವಕರ ಒಂದು ಸೈನ್ಯವೇ ತೊಡಗುವಷ್ಟು ಕೆಲಸ ನಿಶ್ಚಯ ವಾಗಿಯೂ ಇದೆ. ವಾಚಕನು ಇದು ಬಹು ಕಷ್ಟವಾದ ಕೆಲಸ ಎಂದು ಹೇಳುತ್ತಾನೆ. ನಿಜ ನಾನು ಒಪ್ಪುತ್ತೇನೆ. ಆದರೆ ಇದು ಅತ್ಯಂತ ಮುಖ್ಯವಾದುದು ಮತ್ತು ಮನಸ್ಸನ್ನು ಆಕರ್ಷಿಸತಕ್ಕದು. ಇದೇ ನಿಜ ವಾದ ಪೂರ್ಣವಾದ ಸ್ವದೇಶೀ ಎಂದು ನನ್ನ ಅಭಿಪ್ರಾಯ.

ಆದರೆ ನಾನು ಈಗ ಇನ್ನೂ ಈ ಪ್ರಶ್ನೆಯ ಒಂದು ತುದಿಯನ್ನು ಮಾತ್ರ ಮುಟ್ಟಿದ್ದೇನೆ. ಚೆನ್ನಾಗಿ ವ್ಯವಸ್ಥೆಯಾಗಿರುವ ಮೂರು ದೊಡ್ಡ ಕೈಗಾರಿಕೆಗಳನ್ನು ತೆಗೆದುಕೊಂಡು, ಸ್ವದೇಶೀ ಸಂಘಗಳು, ಸರಿಯಾದ ಪ್ರೋತ್ಸಾಹ ಮತ್ತು ವ್ಯವಸ್ಥೆಯಿಲ್ಲದೆ ಸಾಯುತ್ತಿರುವ, ದೊಡ್ಡ ಕೈಗಾ ರಿಕೆಗಳಿಗೆ ಸಮಾನಗಳಾದ ಹಳ್ಳಿಯ ಕೈಗಾರಿಕೆಗಳನ್ನು ಹೇಗೆ ವೃದ್ಧಿ ಪಡಿಸಬಹುದೆಂಬುದನ್ನು ಸೂಚಿಸಿದ್ದೇನೆ.

ಹೀಗೆಯೇ ಸಾರ್ವಜನಿಕರ ಸಹಾಯಕ್ಕಾಗಿ ಕಾದಿರುವ ನೂರಾರು ಹಳ್ಳಿಯ ಮತ್ತು ಪಟ್ಟಣದ ಕೈಗಾರಿಕೆಗಳಿವೆ. ಸಾವಿರಾರು ಕೆಲಸಗಾರರು

ತಮ್ಮ ಅನ್ನಕ್ಕೆ ಆ ಕೈಗಾರಿಕೆಗಳ ಮೇಲೆ ಅವಲಂಬಿಸಿದ್ದಾರೆ. ಈ ಮಾರ್ಗದಲ್ಲಿ ಮಾಡುವ ಪ್ರತಿ ಒಂದು ಚೂರು ಕೆಲಸದಿಂದಲೂ ಬಹಳ ಪ್ರಯೋಜನವುಂಟು. ಈ ಕೆಲಸಕ್ಕೆ ವಿನಿಯೋಗಿಸುವ ಪ್ರತಿಯೊಂದು ಗಂಟೆಯಿಂದಲೂ ಯಾರಾದರೂ ಯೋಗ್ಯರಾದ ಕೆಲಸಗಾರರ ಜೀವನ ನಡೆಯುತ್ತದೆ.

ಈ ದಾರಿಯಲ್ಲಿ ಸರಿಯಾದ ಕ್ರಮದಲ್ಲಿ ಕೆಲಸಮಾಡಿದರೆ ಆ ಕೆಲಸ ಮಾಡುತ್ತಿರುವ ಸಂಸ್ಥೆಯು ತನ್ನ ಖರ್ಚನ್ನು ತಾನು ಹುಟ್ಟಿಸಿಕೊಳ್ಳುತ್ತದೆ. ಜನಗಳಲ್ಲಿ ಅಡಗಿರುವ ಶಕ್ತಿಯು ಹೊರಕ್ಕೆ ಬರುತ್ತದೆ. ಮತ್ತಾರಿಗೂ ನಿರುದ್ಯೋಗವಿಲ್ಲದೆ, ಸಾವಿರಾರು ವಿದ್ಯಾವಂತರಾದ ಮತ್ತು ಅವಿದ್ಯಾವಂತರಾದ ಜನರಿಗೆ ಕೆಲಸ ದೊರಕುತ್ತದೆ. ಬರಬರುತ್ತಾ ದರಿದ್ರವಾಗುತ್ತಿರುವ ಈ ದೇಶದ ಆರ್ಥಿಕ ಸ್ಥಿತಿಗೆ, ವರುಷವರುಷವೂ ಕೋಟ್ಯಾಂತರ ರೂಪಾಯಿ ಉಳಿತಾಯವು ಸೇರಿಕೊಳ್ಳುತ್ತದೆ. ಇದೇ ನನ್ನ ದೃಢವಾದ ನಂಬಿಕೆ.

ಇಲ್ಲಿ ಎಲ್ಲಾ ಸ್ವದೇಶಿ ಸಭೆಗಳೂ ಕೆಲಸಮಾಡಿದರೂ ಮುಗಿಯದಷ್ಟು ಮನರಂಜಕವಾದ ಮತ್ತು ಲಾಭದಾಯಕವಾದ ಕೆಲಸವಿದೆ. ಸ್ವದೇಶಿಯನ್ನು ಕುರಿತು ವರ್ಕಿಂಗ್ ಕಮಿಟಿಯು[1] ಮಾಡಿದ ನಿರ್ಣಯದಲ್ಲಿ

---

[1] ಜುಲೈ 1934 ರಲ್ಲಿ ವರ್ಕಿಂಗ್ ಕಮಿಟಿಯು ಈ ಕೆಳಗಿನ ನಿರ್ಣಯವನ್ನು ಮಾಡಿತು—

"ಸ್ವದೇಶಿಯ ವಿಚಾರದಲ್ಲಿ ಕಾಂಗ್ರೆಸ್ ಧೋರಣೆಯನ್ನು ಕುರಿತು ಸಂದೇಹಗಳು ಉಂಟಾಗಿರುವುದರಿಂದ, ಸಂದೇಹಕ್ಕೆ ಆಸ್ಪದವಿಲ್ಲದಂತೆ ಮತ್ತೆ ಸ್ಪಷ್ಟಪಡಿಸುವುದು ಕಾಂಗ್ರೆಸ್ಸಿಗೆ ಆವಶ್ಯಕವಾಗಿದೆ. ಕಾನೂನುಭಂಗದ ಚಳವಳಿ ಕಾಲದಲ್ಲಿ ಮಾಡಿದ್ದಿರಲಿ. ಕಾಂಗ್ರೆಸ್ ಪ್ರದರ್ಶನಗಳಲ್ಲೂ ಸಭೆಗಳಲ್ಲೂ ಕೈಯಿಂದ ಮಾಡಿದ ಖಾದಿಗೂ ಮಿಲ್ ಬಟ್ಟೆಗಳಿಗೂ ಪೈಪೋಟಿಗೆ ಅವಕಾಶ ಕೊಡಲು ಸಾಧ್ಯವಿಲ್ಲ. ಕಾಂಗ್ರೆಸ್ಸಿನವರು, ಉಳಿದ ಎಲ್ಲಾ ಬಟ್ಟೆಗಳನ್ನೂ ಬಿಟ್ಟು ಕೈಯಿಂದ ಮಾಡಿದ ಖಾದಿಯನ್ನೇ ಉಪಯೋಗಿಸುವರೆಂದು ಈ ಸಭೆಯು ನಿರೀಕ್ಷಿಸುತ್ತದೆ.

ಇವೆಲ್ಲಾ ಅಡಕವಾಗಿದೆ; ಇನ್ನೂ ಹೆಚ್ಚಾಗಿ ಅಡಕವಾಗಿದೆ. ದೇಶದ ಕೆಲಸಗಾರರ ಉತ್ಸಾಹಕ್ಕೂ ಕಾರ್ಯ ಶಕ್ತಿಗೂ ಅದು ಮಿತಿಯಿಲ್ಲದ ಕಾರ್ಯ ರಂಗವನ್ನು ಕಲ್ಪಿಸುತ್ತದೆ. 10-8-1934

---

೩. ಸ್ವದೇಶೀ

(ಮುಂದುವರಿದುದು)

ಆಗಸ್ಟ್ ಹತ್ತನೆ ತಾರೀಖಿನಲ್ಲಿ ಸ್ವದೇಶಿಯನ್ನು ಕುರಿತು ಹರಿಜನ್ ದಲ್ಲಿ ಬರೆದ ವಾದಸರಣಿಯನ್ನೇ ಮುಂದುವರಿಸಬೇಕೆಂದು ನಾನು ಬಯಸುತ್ತೇನೆ. ಹರಿಜನರಿಗೇ ವಿಶಾಸಲಾದ ಕಸಬುಗಳನ್ನು ತೆಗೆದುಕೊಳ್ಳಿ. ಹರಿಜನಗಳಲ್ಲಿ ಇರುವ ಎರಡು ಸಾವಿರಕ್ಕಿಂತ ಹೆಚ್ಚು ಜಾತಿಗಳಿಗೆ ಅರ್ಥ

ಬಟ್ಟೆಯ ಹೊರತು ಉಳಿದ ವಸ್ತುಗಳ ವಿಚಾರದಲ್ಲಿ ವರ್ಕಿಂಗ್ ಕಮಿಟಿಯು ಈ ಕಾಂಗ್ರೆಸ್ ಸಂಸ್ಥೆಗಳ ತಿಳಿವಳಿಕೆಗಾಗಿ ಈ ಕೆಳಗಿನ ಸೂತ್ರವನ್ನು ಅನುಸರಿಸುತ್ತದೆ.

" ಕಾಂಗ್ರೆಸ್ಸಿನ ಸ್ವದೇಶಿ ಚಟುವಟಿಕೆಯು, ಸಾರ್ವಜನಿಕರ ಪ್ರೋತ್ಸಾಹದ ಅವಶ್ಯಕತೆಯಿರುವ ನಿತ್ಯೋಪಯೋಗದ ಗೃಹಕೈಗಾರಿಕೆಗಳಿಗೆ ಮಾತ್ರ ಸಂಬಂಧಪಟ್ಟದ್ದಾಗಿರಬೇಕು.

ಆ ಕೈಗಾರಿಕೆಗಳು ತಮ್ಮ ಸಾಮಾನುಗಳ ಬೆಲೆಯನ್ನು ನಿಷ್ಕರ್ಷಿಸುವುದರಲ್ಲೂ, ಕೂಲಿ ಮತ್ತು ಕೂಲಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದರಲ್ಲೂ ಕಾಂಗ್ರೆಸ್ ಸಂಸ್ಥೆಗಳ ಹಿತವಾದಗಳಿಗೆ ಒಳಗಾಗಿ ನಡೆಯಬೇಕು."

ಈ ಸೂತ್ರದಿಂದ, ಕಾಂಗ್ರೆಸ್ಸು ಉದ್ದಕ್ಕೂ ಅನುಸರಿಸುತ್ತಿರುವ ಸ್ವದೇಶಿ ತತ್ವದ ವಿಚಾರದಲ್ಲೂ ಪ್ರತಿಯೊಬ್ಬರೂ ಸ್ವದೇಶಿಯನ್ನೇ ಉಪಯೋಗಿಸಬೇಕೆಂಬ ನಿಯಮದಲ್ಲೂ ಬದಲಾವಣೆಯಾಯಿತೆಂದು ತಿಳಿಯಕೂಡದು. ದೊಡ್ಡದಾಗಿ ವ್ಯವಸ್ಥೆಯಾಗಿರುವ ಮತ್ತು ಸರ್ಕಾರದ ಸಹಾಯವನ್ನು ಪಡೆಯಬಲ್ಲ ಕೈಗಾರಿಕೆಗಳು, ತಮ್ಮ ಬೆಳವಣಿಗೆಗೆ ಕಾಂಗ್ರೆಸ್ಸು ಸಂಸ್ಥೆಗಳ ಮತ್ತು ಕಾಂಗ್ರೆಸ್ ಕೆಲಸದ ಸಹಾಯವನ್ನು ಅಪೇಕ್ಷಿಸುವ ಸ್ಥಿತಿಯಲ್ಲಿಲ್ಲವೆಂಬುದನ್ನು ಅಂಗೀಕರಿಸುವುದೇ ಈ ಸೂತ್ರದ ಉದ್ದೇಶ."

ವುಂಟು. ಅನೇಕ ಜಾತಿಗಳು ಅವರ ಕಸಬನ್ನು ಸೂಚಿಸುತ್ತವೆ. ಮೇದರವನು, ಪರಕೆ ಮಾಡುವವನು, ಹಗ್ಗ ಉಡಿಯುವವನು ಮೊದಲಾಗಿ ಅದನ್ನೆಲ್ಲಾ ಪಟ್ಟಿಯನ್ನು ಮಾಡಿದರೆ ಬಲವಾದ ಪಟ್ಟಿಯೇ ಆಗುತ್ತದೆ. ಆ ಕೆಲಸಗಳಿಗೆ ಪ್ರೋತ್ಸಾಹವು ಕೊಡಲ್ಪಡಬೇಕು. ಅಥವ ಅವು ಅಪ್ರಯೋಜಕಗಳಾಗಿ ಲಾಭವಿಲ್ಲದ ಕಸಬುಗಳಾದರೆ ಅವುಗಳನ್ನು ನಾಶಪಡಿಸಬೇಕು. ಅವು ಲಾಭದಾಯಕವೋ, ಅವುಗಳಿಂದ ನಷ್ಟವೋ, ಅಥವಾ ಅವು ಉಪಯುಕ್ತಗಳಾದುವೋ, ಅಪ್ರಯೋಜಕಗಳಾದುವೋ ಹೇಳುವವರು ಯಾರು? ಸ್ವದೇಶಿ ಸಂಸ್ಥೆಯಿದ್ದರೆ ಈ ಅಸಂಖ್ಯಾತಗಳಾದ ಕಸಬುಗಳನ್ನು ಕುರಿತು ತಿಳಿಯಬೇಕಾದುದನ್ನೆಲ್ಲಾ ತಿಳಿದು ಅದಕ್ಕಾಗಿ ಕೆಲಸಮಾಡುವದು ಅದರ ಕರ್ತವ್ಯ. ನಾನು ಬರೆಯುತ್ತಿರುವ ಶಾಯಿಯು ತೆನಾಲಿಯಿಂದ ಬರುತ್ತದೆ. ಅದು 12 ಜನರಿಗೆ ಜೀವನವನ್ನು ಕೊಡುತ್ತದೆ. ಅದು ಅನೇಕ ಕಷ್ಟಗಳಿಗೆ ಎದುರಾಗಿ ಹೊಡೆದಾಡುತ್ತಿದೆ. ಶಾಯಿ ತಯಾರಿಸುವ ಇನ್ನೂ 3 ಜನರು ನನಗೆ ಮಾದರಿಗಳನ್ನು ಕಳುಹಿಸಿದ್ದರು. ಅವರೆಲ್ಲಾ ತೆನಾಲಿಯವರಂತೆ ಕಷ್ಟಪಡುತ್ತಿರುವರೆಂಬುದರಲ್ಲಿ ಸಂದೇಹವಿಲ್ಲ. ಅವರಲ್ಲಿ ನನಗೆ ಕುತೂಹಲವುಂಟಾಯಿತು. ನಾನು ಅವರೊಂದಿಗೆ ಪತ್ರವ್ಯವಹಾರವನ್ನು ನಡೆಸಿದೆ. ಆದರೆ ಅದರಿಂದ ಮುಂದೆ ಏನೂ ಮಾಡಲು ನನ್ನಿಂದ ಸಾಧ್ಯವಾಗಲಿಲ್ಲ. ಸ್ವದೇಶಿಸಂಸ್ಥೆಯು ಈ ಶಾಯಿಗಳ ಮಾದರಿಗಳನ್ನೆಲ್ಲಾ, ಶಾಸ್ತ್ರೀಯವಾಗಿ ಪರಿಶೀಲಿಸಿ, ಮಾರ್ಗದರ್ಶಕವಾಗಿ, ಉತ್ತಮವಾದುದನ್ನು ಪ್ರೋತ್ಸಾಹಿಸುತ್ತದೆ. ಶಾಯಿ ಬೆಳೆಯುತ್ತಿರುವ ಒಳ್ಳೆ ಕೈಗಾರಿಕೆ. ಅದಕ್ಕೆ ರಸಾಯಿನಿಕ ಜ್ಞಾನದ ಸಹಾಯವು ಬೇಕಾಗಿದೆ.

ಕಾನ್ಪುರದಿಂದ ಒಬ್ಬ ಮನುಷ್ಯನು, ಹತ್ತಿರದ ಹಳ್ಳಿಯಲ್ಲಿ ತನ್ನ ಸ್ನೇಹಿತನು ಮಾಡುತ್ತಿದ್ದ ಕಾಗದದ ಮಾದರಿಗಳನ್ನು ಕಳುಹಿಸಿದನು. ಆ ಕೈಗಾರಿಕೆಯನ್ನು ಕುರಿತು ನಾನು ವಿಚಾರಿಸಿದೆ. ಕಾಗದವು ಮುಂದ

ವಾಗಿ ಹೊಳಪಾಗಿದ್ದಿತು. ಆದರೆ ಅದರಲ್ಲಿ ಬರೆಯಲು ಸಾಧ್ಯವಿರಲಿಲ್ಲ. ಈ ಕೈಗಾರಿಕೆಗಳಲ್ಲಿ ತೊಡಗಿರುವವರು ಬಹು ಕಷ್ಟದಿಂದ ಕೈಯಿಂದ ಬಾಯಿಗೆ ಜೀವಿಸುತ್ತಿದ್ದಾರೆ. ಸಾವಿನ ಹತ್ತಿರಕ್ಕೆ ಹೋಗುತ್ತಿರುವ ಒಬ್ಬ ಮುದುಕನು ಅವರಿಗೆ ಕಣ್ಣು. ಅದನ್ನು ಸರಿಯಾದ ದಾರಿಯಲ್ಲಿ ತೆಗೆದು ಕೊಂಡು ಹೋಗದಿದ್ದರೆ ಆ ಮುದುಕನ ಸಾವಿನ ಜತೆಯಲ್ಲಿ ಆ ಕೈಗಾರಿ ಕೆಯೂ ಸಾಯಬಹುದು.

ಕೊಳ್ಳುವವರು ಹೆಚ್ಚಾದರೆ ಯಂತ್ರದ ಕಾಗದದಬೆಲೆಗೇ ಈ ಕಾಗದ ವನ್ನು ಮಾರಬಹುದೆಂದು ನನಗೆ ತಿಳಿಯಿತು. ನಿತ್ಯವೂ ಹೆಚ್ಚುತ್ತಿರುವ ಕಾಗದದ ಆವಶ್ಯಕತೆಯು, ಕೈಕಾಗದದಿಂದ ಎಂದಿಗೂ ಪೂರೈಸುವುದಿಲ್ಲ ವೆಂದು ನನಗೆ ಗೊತ್ತು. ಆದರೆ ಏಳು ಲಕ್ಷ ಹಳ್ಳಿಗಳನ್ನೂ ಅವುಗಳ ಕೈಗಾರಿಕೆಗಳನ್ನೂ ಪ್ರೀತಿಸುವ ಜನರು, ಸುಲಭವಾಗಿ ಸಿಕ್ಕುವುದಾದರೆ ಕೈಯಿಂದ ಮಾಡಿದ ಕಾಗದವನ್ನೇ ಉಪಯೋಗಿಸಲು ಯಾವಾಗಲೂ ಸಿದ್ಧರಾಗಿರುತ್ತಾರೆ. ಕೈಯಿಂದ ಮಾಡಿದ ಕಾಗದವನ್ನು ಉಪಯೋಗಿಸು ವವರಿಗೆ ಅದರಲ್ಲಿ ಒಂದು ಸೊಬಗು ಇದೆ ಎಂಬುದು ಗೊತ್ತು. ಯಾವ ಮಿಲ್ ಕಾಗದವೂ ಬಾಳಿಕೆಯಲ್ಲೂ ನಯದಲ್ಲೂ ಅದನ್ನು ಹಿಂದಕ್ಕೆ ಹಾಕಲಾರದು.

ಹಳೆಯಕಾಲದ ಲೆಕ್ಕದ ಪುಸ್ತಕಗಳನ್ನು ಈಗಲೂ ಆ ಕಾಗದ ದಿಂದ ಮಾಡುತ್ತಾರೆ. ಆದರೆ ಕಾಗದದ ಕೈಗಾರಿಕೆಯು ಪ್ರಾಯಶಃ ಇತರ ಅನೇಕ ಕೈಗಾರಿಕೆಯಂತೆ ಸಾಯುತ್ತಿರುವ ಕೈಗಾರಿಕೆ. ಸ್ವಲ್ಪ ಪ್ರೋತ್ಸಾಹ ಕೊಟ್ಟರೂ ಸಾಕು. ಅದು ಎಂದಿಗೂ ಸಾಯುವುದಿಲ್ಲ. ಸರಿಯಾಗಿ ನೋಡಿಕೊಂಡರೆ ಅದರ ತಯಾರಿಯ ಕ್ರಮವನ್ನು ಉತ್ತಮಪಡಿಸ ಬಹುದು. ಮತ್ತು ಕೈಯಿಂದ ಮಾಡಿದ ಕಾಗದದಲ್ಲಿರುವ ಕೆಲವು ಕುಂದು ಗಳನ್ನೂ ಹೋಗಲಾಡಿಸಬಹುದು. ಈ ಅಪ್ರಸಿದ್ಧವಾದ ಸಣ್ಣ ಕೈಗಾರಿಕೆ ಗಳಲ್ಲಿ ತೊಡಗಿರುವ ಜನರ ಆರ್ಥಿಕಸ್ಥಿತಿಯನ್ನು ಕಂಡುಹಿಡಿಯುವುದು

ಆವಶ್ಯಕ ಅವರು ನಮ್ಮ ಬುದ್ಧಿವಾದವನ್ನು ನಿಜವಾಗಿಯೂ ಅನುಸರಿಸು ತ್ತಾರೆ. ಮತ್ತು ಅವರಲ್ಲಿ ಉತ್ಸಾಹತೋರಿಸುವವರಲ್ಲಿ ಕೃತಜ್ಞರಾಗಿರುತ್ತಾರೆ.

ಈ ಸ್ವದೇಶೀ ಬಯಲು ಎಷ್ಟು ಉತ್ತಮವಾದುದು ಮತ್ತು ವ್ಯವಸಾಯವಿಲ್ಲದುದು ಎಂಬುದನ್ನು ತೋರಿಸಲು ನಾನು ಬೇಕಾದಷ್ಟು ಉದಾಹರಣೆಗಳನ್ನು ಕೊಟ್ಟಿರುವೆನೆಂದು ಊಹಿಸುತ್ತೇನೆ. ಅದರಲ್ಲಿ ಮಿತಿ ಯಿಲ್ಲದ ಬೆಳವಣಿಗೆಗೆ ಅವಕಾಶವಿದೆ. ಮೂಲಧನದ ಆವಶ್ಯಕತೆಯಿಲ್ಲದೆ ಈ ಹೊಸ ಐಶ್ವರ್ಯವನ್ನು ನಾವು ಗಳಿಸಬಹುದು. ಮತ್ತು ಉದ್ಯೋಗ ವಿಲ್ಲದೆ ಸಾಯುತ್ತಿರುವ ಜನರಿಗೆ ಗೌರವವಾದ ಉದ್ಯೋಗವನ್ನು ಒದ ಗಿಸಿಕೊಡಬಹುದು. 14-9-34.

---

೪. ಸ್ವದೇಶೀ

(ಮುಂದುವರಿದುದು)

(ಸ್ವದೇಶೀಯನ್ನು ಕುರಿತ ಗಾಂಧಿಜಿಯವರ ಲೇಖನಗಳು ಅನೇಕ ರನ್ನು ಯೋಚಿಸುವಂತೆ ಮಾಡಿವೆ. ಗಾಂಧಿಜಿಯವರ ಮನಸ್ಸು ಒಪ್ಪುವ ಸ್ವದೇಶಿಸಂಸ್ಥೆ ಹುಟ್ಟುವವರೆಗೆ ಹೀಗೆಯೇ ಆಗುವುದು ಸರಿ. ಅನೇಕ ಸ್ನೇಹಿತರು ಅವರನ್ನು ಈ ವಿಚಾರದಲ್ಲಿ ಕಂಡಿದ್ದಾರೆ. ಗಾಂಧಿಜಿಯವರ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಲು, ಆ ಸಂಭಾಷಣೆಗಳ ಸಾರಾಂಶವನ್ನು ಇಲ್ಲಿ ಕೊಡುತ್ತೇನೆ. ಮ.ದೇ.)

ಪ್ರಶ್ನೆ—ಈ ಹೊಸ ಸ್ವದೇಶೀಗೂ ಹಳೆಯ ಸ್ವದೇಶೀಗೂ ವ್ಯತ್ಯಾಸ ವೇನು ?

ಉತ್ತರ—ಹಳೆಯದು, ವಸ್ತುಗಳ ಸ್ವದೇಶೀ ಸ್ವಭಾವವನ್ನು ಒತ್ತಿ ಹೇಳಿತು. ಆದರೆ ಸ್ವದೇಶೀ ಸಾಮಾನುಗಳ ತಯಾರೀ ಕ್ರಮವನ್ನೂ

ಸಾಮಾನುಗಳ ಗಿರಾಕಿ ವಿಚಾರವನ್ನೂ ಗಣನೆಗೆ ತೆಗೆದುಕೊಳ್ಳಲಿಲ್ಲ. ಚೆನ್ನಾಗಿ ವ್ಯವಸ್ಥಿತವಾದ ಕೈಗಾರಿಕೆಗಳನ್ನು ಸಂಘಗಳ ಕಾರ್ಯ ಕ್ರಮಕ್ಕೆ ಸೇರಿಸಿಲ್ಲ. ಇವಕ್ಕೆ ಕಾರಣ ಅವುಗಳು ಸ್ವದೇಶಿಗಳಲ್ಲವೆಂದಲ್ಲ. ಆದರೆ ಅವುಗಳಿಗೆ ಹೆಚ್ಚಿಗೆಯಾದ ಪ್ರೋತ್ಸಾಹದ ಆವಶ್ಯಕವಿಲ್ಲವೆಂದು; ಅವು ತಮ್ಮ ಕಾಲಮೇಲೆ ತಾವು ನಿಂತುಕೊಳ್ಳಬಲ್ಲವು. ಮತ್ತು ನಮ್ಮ ಜನರಲ್ಲಿ ಜಾಗ್ರತಿಯುಂಟಾಗಿರುವುದರಿಂದ ಅವುಗಳಿಗೆ ಗಿರಾಕಿ ಸುಲಭ ವಾಗಿ ಸಿಕ್ಕುವುದು. ಈ ಹೊಸ ನಿಯಮದಂತೆ (ಇದು ಹೊಸದಾದರೆ) ನಮ್ಮ ಸ್ವದೇಶಿ ಸಂಸ್ಥೆಯು ಎಲ್ಲಾ ಸ್ವದೇಶೀ ಕೈಗಾರಿಕೆಗಳನ್ನೂ ಹಿಡಿದು ಅವು ಹೇಗೆ ಬೆಳೆಯುತ್ತಿವೆ ಎಂಬುದನ್ನು ಕಂಡುಹಿಡಿಯಬೇಕು. ಹಳ್ಳಿಯ ವರಿಗಾಗಿ ತಮ್ಮ ಜ್ಞಾನವನ್ನು ಧಾರೆ ಎರೆಯುವ ವಿಜ್ಞಾನಿಗಳೂ ಶಾಸ್ತ್ರ ಜ್ಞರೂ ನಮಗೆ ಸಹಾಯಕರಾಗಬೇಕು. ನಮ್ಮ ಶಾಸ್ತ್ರಜ್ಞರು, ಹಳ್ಳಿ ಯವರು ಮಾಡಿದ ಸಾಮಾನುಗಳನ್ನು ಪರೀಕ್ಷಿಸಿ ಅದು ಇನ್ನೂ ಉತ್ತಮ ವಾಗುವ ದಾರಿಯನ್ನು ತಿಳಿಸಬೇಕು. ಅವರು ನಮ್ಮ ಮಾತಿಗೆ ಒಪ್ಪಿದರೆ ಅವರು ತಯಾರಿಸಿದ ಪದಾರ್ಥಗಳನ್ನು ಮಾರುವುದಕ್ಕೂ ಸಂಸ್ಥೆಯು ಏರ್ಪಡಿಸುತ್ತವೆ.

ಪ್ರಶ್ನೆ—ನೀವು ಎಲ್ಲಾ ಕೈಗಾರಿಕೆಗಳನ್ನೂ ತೆಗೆದುಕೊಳ್ಳುವಿರೊ?

ಉತ್ತರ—ಆವಶ್ಯಕವಿಲ್ಲ. ಪ್ರತಿಯೊಂದು ಕೈಗಾರಿಕೆಯನ್ನೂ ತೆಗೆದುಕೊಂಡು ಗ್ರಾಮದ ಜೀವನದಲ್ಲಿ ಅದರ ಸ್ಥಾನವನ್ನು ಪರೀಕ್ಷಿಸಿ ಅದರಲ್ಲಿ ಸ್ವಾಭಾವಿಕವಾಗಿರುವ ಶಕ್ತಿಯಿಂದ ಅದಕ್ಕೆ ಪ್ರೋತ್ಸಾಹವು ಆವಶ್ಯಕವೆಂದು ಕಂಡರೆ ಪ್ರೋತ್ಸಾಹವನ್ನು ಕೊಡಬೇಕು. ಉದಾಹರ ಣೆಗೆ ಹಳ್ಳಿಯ ಪರಕೆಗಳ ಸ್ಥಾನದಲ್ಲಿ ಆಧುನಿಕ ಪರಕೆಗಳನ್ನು ಇಡಲು ನನಗೆ ಇಷ್ಟವಿಲ್ಲ. ನನ್ನ ಹೆಂಡತಿಯನ್ನೂ ಇತರ ಸ್ತ್ರೀಯರನ್ನೂ, ಎರಡು ಬಗೆಯ ಪರಕೆಗಳಲ್ಲೂ ಇರುವ ಗುಣಗಳನ್ನು ಕೇಳುತ್ತೇನೆ. ನಾನು ಎಲ್ಲಾ ದೃಷ್ಟಿಗಳಿಂದಲೂ ಅನುಕೂಲಗಳನ್ನು ಪರಿಗಣಿಸುತ್ತೇನೆ. ಈ

ರೀತಿ ಹಳ್ಳಿಯ ಪರಕೆಗಳನ್ನೇ ಉಪಯೋಗಿಸಬೇಕೆಂದು ಕೊನೆಗೆ ತೀರ್ಮಾನಿಸುತ್ತೇನೆ. ಏಕೆಂದರೆ ಅದರಲ್ಲಿ ಸಣ್ಣ ಜೀವಿಗಳಿಗೆ ಒಂದು ದಯೆ ಗೋಚರವಾಗುತ್ತದೆ. ಆದರೆ ಬ್ರಷ್‌ನಲ್ಲಿ ಅವುಗಳೆಲ್ಲಾ ಮರೆಯಾಗುತ್ತವೆ. ಹೀಗೆ ನಾನು ಪರಕೆಯ ಹಿಂದೆ, ದೊಡ್ಡ ವೇದಾಂತವನ್ನೇ ನೋಡುತ್ತೇನೆ. ಯಾಕೆಂದರೆ ಸೃಷ್ಟಿ ಕರ್ತನು ನಮಗೂ ಅತ್ಯಂತ ಚಿಕ್ಕವುಗಳಾದ ಪ್ರಾಣಿಗಳಿಗೂ ಯಾವ ವ್ಯತ್ಯಾಸವನ್ನೂ ಉಂಟುಮಾಡಿರುವನೆಂದು ನನಗೆ ಅನ್ನಿಸುವುದಿಲ್ಲ.

ಆದುದರಿಂದ ನಾಶವಾಗುತ್ತಿರುವ ಎಲ್ಲಾ ಗ್ರಾಮ ಕೈಗಾರಿಕೆಗಳನ್ನೂ ತೆಗೆದುಕೊಂಡು, ಅವುಗಳಲ್ಲಿ ಸ್ವಾಭಾವಿಕವಾಗಿರುವ ಯೋಗ್ಯತೆಯಿಂದಲೂ ಇತರ ಗುಣಗಳಿಂದಲೂ ಉಳಿಯಲು ಅರ್ಹವಾಗಿರುವುವುಗಳನ್ನು ಆರಿಸಿಕೊಳ್ಳುತ್ತೇನೆ. ಹೀಗೆಯೇ ಮುಂದೆ ಮುಂದೆ ಪರೀಕ್ಷೆ ಮಾಡುತ್ತಾ ಹೋಗುತ್ತೇನೆ. ಉದಾಹರಣೆಗೆ, ಅತ್ಯಲ್ಪವಾದ ನಮ್ಮ ಹಲ್ಲು ಕಡ್ಡಿ(ಹಲ್ಲನ್ನು ಉಜ್ಜುವ)ಯನ್ನು ತೆಗೆದುಕೊಳ್ಳಿ. ಬೊಂಬಾಯಿ ಪಟ್ಟಣದ ನಾಗರಿಕರಿಗೆ ಅವರ ಹಲ್ಲುಜ್ಜುವ ಕಡ್ಡಿ ಸಿಕ್ಕದಿದ್ದರೆ ಅವರ ಹಲ್ಲು ಹಾಳಾಗುವುದು ಖಂಡಿತ. ಆದರೆ ಆಧುನಿಕ ಹಲ್ಲು ಬ್ರಷ್‌ಗಳು ಬಂದು ಆ ಹಲ್ಲುಜ್ಜುವ ಕಡ್ಡಿಗಳನ್ನು ಓಡಿಸುವುದನ್ನು ನಾನು ಶಾಂತಿಯಿಂದ ಯೋಚಿಸಲಾರೆ. ಈ ಬ್ರಷ್‌ಗಳು ಅನಾರೋಗ್ಯವಾದುವು. ಒಂದು ಸಲ ಉಪಯೋಗಿಸಿದನಂತರ ಅದನ್ನು ಆಚೆಗೆ ಎಸೆದುಬಿಡಬೇಕು. ಅದನ್ನು ಶುದ್ಧಿಮಾಡಲು ನೀವು ಏನೇನು ಪ್ರಯತ್ನಮಾಡಿದರೂ ಅದು ಹೊಸದರಷ್ಟು ಶುದ್ಧವಾಗುವುದಿಲ್ಲ. ಆದರೆ ಒಂದುಸಲ ಮಾತ್ರ ಉಪಯೋಗಿಸಿ ಎಸೆದು ಬಿಡುವ ಬೇವಿನ ಕಡ್ಡಿಯಲ್ಲಿ ಹಲ್ಲು ಶುದ್ಧಿಯ ಎಲ್ಲಾ ಗುಣಗಳೂ ಇವೆ. ಅದನ್ನು ನಾಲಗೆಯನ್ನು ತಿಕ್ಕುವುದಕ್ಕೂ ಉಪಯೋಗಿಸಬಹುದು. ಭರತಖಂಡದ ಹಲ್ಲುಕಡ್ಡಿಯಷ್ಟು ಆರೋಗ್ಯಕರವಾದ ಪದಾರ್ಥವನ್ನು ಪಾಶ್ಚಾತ್ಯರು ಇನ್ನು ಮೇಲೆ ಕಂಡು ಹಿಡಿಯ

ಬೇಕಾಗಿದೆ. ದಕ್ಷಿಣ ಆಫ್ರಿಕದ ಬಂಟು ಗಣಿ ಕೆಲಸಗಾರರಿಗೆ ಬಂದಿದ್ದ ಕ್ಷಯರೋಗವನ್ನು ಈ ಹಲ್ಲುಕಡ್ಡಿಯ ಉಪಯೋಗದಿಂದ ನಿಲ್ಲಿಸಿದೆನೆಂದು ಒಬ್ಬ ವೈದ್ಯರು ಹೇಳುತ್ತಿರುವುದು ನಿಮಗೆ ತಿಳಿಯದೆ ಇರಬಹುದು. ಆಧುನಿಕ ಹಲ್ಲು ಬ್ರಷ್ಷುಗಳನ್ನು ಇಂಡಿಯಾದಲ್ಲಿ ಮಾಡಿದರೂ ನಾನು ಅವುಗಳ ಉಪಯೋಗ ಮತ್ತು ಪ್ರಚಾರದಲ್ಲಿ ಭಾಗಿಯಾಗುವುದಿಲ್ಲ. ನನ್ನ ಇಷ್ಟವು ಹಲ್ಲುಕಡ್ಡಿಗಳ ಕಡಗೇ ಇದೆಯೆಂದು ಹೇಳುತ್ತೇನೆ. ಇದೇ ಪೂರ್ಣ ಸ್ವದೇಶೀ. ಇದರ ವಿಷಯದಲ್ಲಿ ನಾನು ಎಚ್ಚರಿಕೆಯಿಂದ ಇದ್ದರೆ ಉಳಿದುದು ಸರಿಯಾಗುತ್ತವೆ. ಮುಖ್ಯವಾದುದೇನೆಂದು ನನ್ನನ್ನು ಕೇಳಿ. ಮುಖ್ಯವಾದುದು ತಿಳಿದರೆ ಉಳಿದುವನ್ನು ಸರಿಮಾಡಿಕೊಳ್ಳಬಹುದು. ಸ್ವದೇಶೀ ಎಂಬ ಮಾತಿನಲ್ಲಿ ಪೂರ್ತಾ ಅರ್ಥವು ಅಡಕವಾಗಿದ್ದರೂ ನನ್ನದು ಪೂರ್ಣ ಸ್ವದೇಶಿ ಎಂದು ನಾನು ಕರೆದಿದ್ದೇನೆ. ಇಲ್ಲದಿದ್ದರೆ ಸ್ವದೇಶಿ ಎಂಬುದು ಅತಿ ಸಡಿಲವಾಗಿಬಿಡಬಹುದು. ಪೂರ್ಣ ಸ್ವದೇಶಿಯಲ್ಲಿ ಅತಿ ಉತ್ಸಾಹಶಾಲಿಗಳಿಗೂ ಸೇವೆಗೆ ಅವಕಾಶವುಂಟು. ಎಲ್ಲಾ ಬಗೆಯ ಬುದ್ಧಿಗಳನ್ನೂ ಶಕ್ತಿಗಳನ್ನು ಇಲ್ಲಿ ಉಪಯೋಗಿಸಬಹುದು.

ಪ್ರಶ್ನೆ—ಅದರ ಕೊನೆಯಲ್ಲಿ ನಿಮಗೆ ಸ್ವರಾಜ್ಯವು ಕಾಣುವುದೆ?

ಉತ್ತರ—ಯಾಕೆ ಕಾಣುವುದಿಲ್ಲ? ಒಂದು ಸಲ ನಾನು ರಾಟಿಯಲ್ಲಿ ಸ್ವರಾಜ್ಯವು ಅಡಗಿದೆ ಎಂದೆ. ಮತ್ತೊಂದು ಸಲ ಮದ್ಯಪಾನ ನಿರೋಧದಲ್ಲಿ ಸ್ವರಾಜ್ಯವು ಅಡಗಿದೆ ಎಂದೆ. ಹಾಗೆಯೇ ಪೂರ್ಣಸ್ವದೇಶೀಯಲ್ಲಿ ಸ್ವರಾಜ್ಯವು ಅಡಗಿದೆಯೆಂದು ಹೇಳುತ್ತೇನೆ. ಇದು ಕುರುಡರು ಆನೆಯನ್ನು ವಿವರಿಸಿದಂತೆ ಎಂಬುದೇನೋ ನಿಶ್ಚಯ. ಎಲ್ಲರೂ ಹೇಳಿದುದೂ ಸರಿ. ಆದರೆ ಯಾವುದೂ ಪೂರ್ಣವಾಗಿ ಸರಿಯಲ್ಲ.

ಎಲ್ಲಾ ಅವಕಾಶಗಳನ್ನೂ ಶಕ್ತಿಗಳನ್ನೂ ಸೇರಿಸಿದರೆ ನಾವು ಮೊದಲು ಇದ್ದಂತೆ ಮತ್ತೆ ಪ್ರಪಂಚದಲ್ಲೆಲ್ಲಾ ಅತ್ಯಂತ ಧನಿಕವಾದ ದೇಶವಾಗುವುದರಲ್ಲಿ ಸಂದೇಹವಿಲ್ಲ. ಸೋಮಾರಿತನವನ್ನು ಬಿಟ್ಟು

ಲಕ್ಷಾಂತರ ಜನರು ನಿರುದ್ಯೋಗದಿಂದ ಬಿಡುಗಡೆ ಹೊಂದಿದರೆ ನಾವು ಹಿಂದೆ ಇದ್ದದ್ದು ಮತ್ತೆ ಪುನರಾವರ್ತನೆಯಾಗುತ್ತದೆ. ನಾವು ಮಾಡಬೇಕಾಗಿರುವುದು ಉದ್ಯೋಗಿಗಳಾಗಿರುವುದು.—ಯಂತ್ರದಂತೆ ಅಲ್ಲ. ಜೇನುಹುಳುವಿನ ಹಾಗೆ.—ಅಹಿಂಸಾಜೇನು ಎಂಬುದಾಗಿ ನಾನು ಹೇಳುತ್ತಿರುವುದು ಇದೆಯೆ.

ಪ್ರಶ್ನೆ—ಅದು ಯಾವುದು ?

ಉತ್ತರ—ಶಾಸ್ತ್ರೀಯವಾದ ರೀತಿಯಿಂದ ತೆಗೆಯುವ ಶಾಸ್ತ್ರೀಯವಾದ ಜೇನುತುಪ್ಪ. ಅವರು ಜೇನು ಹುಳುಗಳನ್ನು ಸಾಕಿ ಅವುಗಳಿಂದ ಜೇನುತುಪ್ಪವನ್ನು ಶೇಖರಿಸುತ್ತಾರೆ. ಹುಳುಗಳು ನಾಶವಾಗುವುದಿಲ್ಲ. ಆದುದರಿಂದಲೇ ನಾನು ಅದನ್ನು ಅಹಿಂಸಾ ಜೇನುತುಪ್ಪವೆಂದು ಕರೆಯುತ್ತೇನೆ. ಈ ಕೈಗಾರಿಕೆಯು ತುಂಬ ವಿಸ್ತಾರವಾಗಲು ಅವಕಾಶವಿದೆ.

ಪ್ರಶ್ನೆ—ಆದರೆ ಅದು ಪೂರ್ಣ ಅಹಿಂಸೆ ಎಂದು ಹೇಳಬಹುದೆ? ಕರುವಿಗೆ ಹಾಲನ್ನು ತಪ್ಪಿಸುವಂತೆ ದುಂಬಿಗೆ ಜೇನು ತಪ್ಪುತ್ತದೆಯಲ್ಲವೆ?

ಉತ್ತರ—ನಿನ್ನ ಮಾತು ನಿಜ. ಆದರೆ ಪ್ರಪಂಚದಲ್ಲಿ ಬರಿಯ ವಿವೇಕಮಾತ್ರವೇ ಆಳುತ್ತಿಲ್ಲ. ಜೀವನದಲ್ಲಿ ಒಂದು ಬಗೆಯಾದ ಹಿಂಸೆ ಇದ್ದೇ ಇದೆ. ಅತ್ಯಲ್ಪವಾದ ಹಿಂಸೆಯ ದಾರಿಯನ್ನು ನಾವು ಆರಿಸಿಕೊಳ್ಳಬೇಕಾಗಿದೆ. ಸಸ್ಯಾಹಾರದಲ್ಲೂ ಹಿಂಸೆ ಇದೆಯಲ್ಲವೆ ? ಹಾಗೆಯೇ ನಮಗೆ ಜೇನುತುಪ್ಪ ಬೇಕಾದರೆ, ಜೇನುಹುಳುವಿನೊಂದಿಗೆ ಸ್ನೇಹವಾಗಿದ್ದು ಅವುಗಳಿಂದ ಪೂರ್ಣವಾಗಿ ಜೇನು ತುಪ್ಪವನ್ನು ಸಂಗ್ರಹಿಸಬೇಕು. ಅಲ್ಲದೆ ಈ ರೀತಿಯಾಗಿ ಜೇನನ್ನು ಸಾಕುವುದರಲ್ಲಿ ಜೇನು ಹುಳುವಿಗೆ ಜೇನು ಪೂರ್ಣವಾಗಿ ಇಲ್ಲದೆ ಹೋಗುವುದಿಲ್ಲ. 23-9-1934.

———

೫. ಗ್ರಾಮಕೈಗಾರಿಕೆಗಳು ಎಂದರೇನು?

ಮಾನ್ಯಮಿತ್ರರೊಬ್ಬರು ನನಗೆ ಬರೆದ ಕಾಗದದಲ್ಲಿ ಕೆಲವು ವಿಷಯುಗಳನ್ನು ತಿಳಿಸಿದ್ದರು. ನನ್ನ ಅಭಿಪ್ರಾಯದಂತೆ ಗ್ರಾಮಕೈಗಾರಿಕೆಗಳ ಕಾರ್ಯಕ್ರಮದ ಪೂರ್ಣ ಚಿತ್ರವು ಅವರ ಮನಸ್ಸಿನ ಕಣ್ಣುಮುಂದೆ ಕಟ್ಟಲಿಲ್ಲವೆಂಬುದೂ ಅವರು ಕೇಳಿದ ವಿಷಯುಗಳಲ್ಲಿ ಒಂದಾಗಿದ್ದಿತು. ಅದು ಉತ್ತಮವಾದ ಪ್ರಶ್ನೆಯೇ ಹೌದು. ಅನೇಕರಿಗೆ ಈ ಪ್ರಶ್ನೆಯು ತೋರಿರಬಹುದು. ತಾನು ಅವರಿಗೆ ಬರೆದ ಉತ್ತರದ ಸಾರಾಂಶವಿದು—

ಸಂಗ್ರಹವಾಗಿ ಹೇಳಬೇಕಾದರೆ, ನಾವು ಉಪಯೋಗಿಸುವ ಪದಾರ್ಥಗಳ ಪೈಕಿ ಹಳ್ಳಿಗಳಲ್ಲಿ ತಯಾರಾದುವುಗಳನ್ನೇ ಕೊಳ್ಳುವಂತೆ ನಿಯಮಮಾಡಿಕೊಳ್ಳಬೇಕು. ಅವರು ತಯಾರಿಸಿದ ಪದಾರ್ಥಗಳು ಒರಟಾಗಿ ಇರಬಹುದು. ತಾವು ಮಾಡುವ ಸಾಮಾನುಗಳನ್ನು ಉತ್ತಮವಾದ ರೀತಿಯಲ್ಲಿ ತಯಾರಿಸುವಂತೆ ನಾವು ಅವರಿಗೆ ಬೋಧಿಸಬೇಕು. ಪಟ್ಟಣಗಳಲ್ಲಿ ದೊಡ್ಡ ಯಂತ್ರಗಳಿಂದ ತಯಾರಾದ ಪದಾರ್ಥಗಳು ಮತ್ತು ಪರದೇಶದ ಪದಾರ್ಥಗಳು, ಹಳ್ಳಿಯ ಮಾಲುಗಳಿಗಿಂತ ಉತ್ತಮವೆಂದು ಹೇಳಿ ಹಳ್ಳಿಗಳ ಪದಾರ್ಥಗಳನ್ನು ತ್ಯಜಿಸಕೂಡದು. ಬೇರೆ ಮಾತಿನಲ್ಲಿ ಹೇಳುವುದಾದರೆ, ನಾವು ಹಳ್ಳಿಯವರಲ್ಲಿ ಕಸುಬುದಾರನ ಕೌಶಲ್ಯವನ್ನು ಹೆಚ್ಚಿಸಲು ಪ್ರಯತ್ನಿಸಬೇಕು. ಅವರಿಗೆ ನಾವು ಸಲ್ಲಿಸಬೇಕಾದ ಋಣವನ್ನು ಈ ರೀತಿಯಲ್ಲಿ ತೀರಿಸಬೇಕು. ಈ ಕೆಲಸದಲ್ಲಿ ನಮಗೆ ಜಯವಾಗುವುದೇ ಎಂಬ ಯೋಚನೆಯಿಂದ ನಾವು ಭಯಪಡಬೇಕಾಗಿಲ್ಲ. ದೇಶದ ಏಳಿಗೆಗೆ ಅವಶ್ಯಕವಾದ ಕಾರ್ಯಕ್ರಮಗಳನ್ನು ಸಾಧಿಸುವಾಗ ಎದೆಗೆಡದೆ, ಜಯವನ್ನು ಹೊಂದಿದ ಎಷ್ಟೋ ಸನ್ನಿವೇಶಗಳು ನಮ್ಮ ಅನುಭವಕ್ಕೇ ಬಂದಿವೆ. ಆದುದರಿಂದ ನಾವು ಪ್ರತಿಯೊಬ್ಬರೂ ನಮ್ಮ ಇರುವಿಕೆಗೆ ಹಳ್ಳಿಯು ಪುನಃ ಜೀವಂತವಾಗಬೇಕಾದುದು ಅವಶ್ಯಕವೆಂದು ನಂಬಿದರೆ, ಈ ಮಾರ್ಗದಿಂದ ಮಾತ್ರ. ಅಸ್ಪೃಶ್ಯತೆಯನ್ನು ತೊಡೆದುಹಾಕಿ ಯಾವ

ಜಾತಿಯವರೇ ಆಗಲಿ ಎಲ್ಲರನ್ನೂ ಸಮಭಾವದಿಂದ ನೋಡುವುದು ಸಾಧ್ಯವೆಂದು ನಂಬಿದರೆ, ನಾವು ನಮ್ಮ ಮನಸ್ಸನ್ನು ಹಳ್ಳಿಗಳ ಕಡೆ ತಿರುಗಿಸಿ, ಹಳ್ಳಿಯನ್ನು ನಾವು ಅನುಕರಿಸಬೇಕಾದ ಮಾದರಿಯಂತೆ ಕಾಣಬೇಕು. ನಾವು ಪಟ್ಟಣದ ಮಾದರಿ ಜೀವನವನ್ನು ಅವರ ಮುಂದಿಟ್ಟು ಅದನ್ನು ಅನುಸರಿಸುವಂತೆ ಮಾಡಬಾರದು. ಈ ಮನೋಭಾವವು ಸರಿಯಾದ ಪಕ್ಷದಲ್ಲಿ, ಸಹಜವಾಗಿಯೂ ನಾವು ನಮ್ಮ ಜೀವನವನ್ನೇ ಮೊದಲು ಕ್ರಮಪಡಿಸಿಕೊಳ್ಳಬೇಕು. ಉದಾಹರಣೆಗೆ, ಯಂತ್ರದ ಕಾಗದ ಉಪಯೋಗಿಸುವ ಬದಲು ಕೈಯಿಂದ ತಯಾರಾದ ಕಾಗದ, ಫೌಂಟನ್‌ಪೆನ್ ಅಥವಾ ಲೇಖನಿಯ ಬದಲು ಹಳ್ಳಿಯಲ್ಲಿ ಸಿಕ್ಕುವ ಗರಿಯ ಲೇಖನಿ (Reed), ದೊಡ್ಡ ಕಾರ್ಖಾನೆಗಳಲ್ಲಿ ತಯಾರಾದ ಶಾಯಿಗೆ ಬದಲು ಹಳ್ಳಿಯಲ್ಲಿ ಮಾಡಿದ ಶಾಯಿ ಇವುಗಳನ್ನು ನಾವು ಉಪಯೋಗಿಸಬೇಕು. ಈ ರೀತಿಯ ಉದಾಹರಣೆಗಳನ್ನು ನಾನು ನೂರು ಹೇಳಬಹುದು. ನಮ್ಮ ಮನೆಗಳಲ್ಲಿ ನಿತ್ಯ ಉಪಯೋಗಕ್ಕೆ ಬೇಕಾದ ಪದಾರ್ಥಗಳಲ್ಲಿ, ಹಳ್ಳಿಯವರು ಹಿಂದೆ ಮಾಡದುದು ಯಾವುದೂ ಇಲ್ಲ. ಈಗಲೂ ಅವರು ಅವುಗಳೆಲ್ಲವನ್ನೂ ಮಾಡಬಲ್ಲವರಾಗಿದ್ದಾರೆ. ನಿಮ್ಮ ಮನಸ್ಸು ಹಳ್ಳಿಗಳ ಕಡೆ ತಿರುಗುವಂತೆ ನಿರ್ಧರಮಾಡಿಕೊಂಡು, ಅವರ ಯೋಗಕ್ಷೇಮವನ್ನೇ ನಿಮ್ಮ ಮುಖ್ಯ ಗುರಿಯಾಗಿಟ್ಟುಕೊಳ್ಳಿ, ಅಷ್ಟು ಸಾಕು. ನಾವು ಹಳ್ಳಿಯವರ ಜೇಬಿಗೆ ಲಕ್ಷಾಂತರ ರೂಪಾಯಿಗಳನ್ನು ಹಾಕಿದಂತಾಗುವುದು. ಸದ್ಯದ ಪರಿಸ್ಥಿತಿಯಲ್ಲಿ ನಾವು ಹಳ್ಳಿಯವನನ್ನು ಸೂರೆಮಾಡುತ್ತಿದ್ದೇವೆ. ಹೇಳಿಸಿಕೊಳ್ಳುವ ಯಾವ ಪ್ರತ್ಯುಪಕಾರವನ್ನು ಅವನಿಗೆ ಮಾಡುತ್ತಿಲ್ಲ. ಈ ದುಃಖಕರವಾದ ಸ್ಥಿತಿಯು ಮುಂದುವರಿಯದಂತೆ ನಾವು ತಡೆಗಟ್ಟಬೇಕು. ಹೊಲೆಯನ ಅಸ್ಪೃಶ್ಯತೆಯನ್ನು ಹೋಗಲಾಡಿಸಿ ನಾವು ಅವನನ್ನು ಮುಟ್ಟುವಂತಾದರೆ ಸಾಲದು. ನನಗಾದರೋ ಅಸ್ಪೃಶ್ಯತಾ ನಿವಾರಣೆಯ ಚಳವಳಿಯು ಇನ್ನೂ ಹೆಚ್ಚು ಅರ್ಥವುಳ್ಳದುದಾಗಿದೆ.

ಪಟ್ಟಣದಲ್ಲಿರುವವನಿಗೆ ಹಳ್ಳಿಯವನು ಅಸ್ಪೃಶ್ಯನಾಗಿದ್ದಾನೆ. ಅವನಿಗೆ ಹಳ್ಳಿಯವರು ಗೊತ್ತಿಲ್ಲ. ಅವರ ಮಧ್ಯೆ ಅವನು ಜೀವಿಸುವುದಿಲ್ಲ; ಅಥವಾ ಒಂದು ಹಳ್ಳಿಯಲ್ಲಿ ಅವನು ಇರಬೇಕಾದರೆ ಪಟ್ಟಣದ ಜೀವನವನ್ನೇ ಅಲ್ಲಿ ಅನುಕರಿಸುತ್ತಾನೆ. ಹಳ್ಳಿಗಳಲ್ಲಿರುವ 30 ಕೋಟಿ ಜನರು ವಾಸಿಸುವಂತೆ ಪಟ್ಟಣಗಳನ್ನು ನಿರ್ಮಿಸುವುದಾದರೆ ಅಂಥ ಜೀವನವು ಸಹ್ಯವೇ ಹೌದು. ಇದು ಗ್ರಾಮಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ಅವರದಿನವೂ ಬೆಳೆಯುತ್ತಿರುವ ಬಡತನವನ್ನು ಹೋಗಲಾಡಿಸುವುದಕ್ಕಿಂತಲೂ ಅಸಾಧ್ಯವಾದುದು. 30-11-1934.

---

೬. ಗ್ರಾಮ ಕೈಗಾರಿಕೆಗಳು

ಗ್ರಾಮ ಕೈಗಾರಿಕೆಗಳ ವಿಷಯದಲ್ಲಿ ಕಾಂಗ್ರೆಸ್ಸು ಅನುಮೋದಿಸಿದ ನಿರ್ಣಯವನ್ನು* ನಾನೇ ರಚಿಸಿರುವೆನಾದುದರಿಂದಲೂ ಮತ್ತು ಆ

---

* ಬೊಂಬಾಯಿನ ಕಾಂಗ್ರೆಸ್‌ನಲ್ಲಿ 1934 ನೇ ಅಕ್ಟೋಬರ್ ತಿಂಗಳಿನಲ್ಲಿ (27-10-34) ಈ ಕೆಳಗಿನ ನಿರ್ಣಯವು ಅನುಮೋದಿಸಲ್ಪಟ್ಟಿತು.

" ಕಾಂಗ್ರೆಸ್‌ನ ಸಹಾಯದಿಂದಲೂ, ಸ್ವತಂತ್ರವಾಗಿಯೂ, ಸ್ವದೇಶೀ ಅಭಿವೃದ್ಧಿಗಾಗಿ ಅನೇಕ ಸಂಸ್ಥೆಗಳು ಉದ್ಭವವಾಗಿವೆ; ಸ್ವದೇಶಿಯ ನಿಜವಾದ ಸ್ವಭಾವವನ್ನು ಕುರಿತು ಜನರಿಗೆ ಸರಿಯಾದ ಅಭಿಪ್ರಾಯವುಂಟಾಗಿಲ್ಲ. ಪ್ರಾರಂಭದಿಂದಲೂ ಜನರೊಂದಿಗೆ ಸೇರಿಕೊಂಡು ಕೆಲಸಮಾಡುವವೇ ಕಾಂಗ್ರೆಸ್ ಸಂಸ್ಥೆಯ ಧ್ಯೇಯವಾಗಿದೆ. ಗ್ರಾಮಕೈಗಾರಿಕೆಗಳ ಪುನರುದ್ಧಾರವು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಈ ಕಾರ್ಯಕ್ರಮದಲ್ಲಿ ಖಾದಿಯಲ್ಲದೆ ಇತರ ಕೈಗಾರಿಕೆಗಳ ಸ್ಥಾಪನೆಯೂ ಬೆಳವಣಿಗೆಯೂ ಅಡಕವಾಗಿದೆ. ಈ ಕೈಗಾರಿಕೆಗಳನ್ನು ಸ್ಥಾಪಿಸಲು, ಅಖಿಲಭಾರತ ಚರ್ಕ ಸಂಘದಂತೆ ರಾಜಕೀಯವಲ್ಲದ ಒಂದು ಸ್ವತಂತ್ರವಾದ ಸಂಸ್ಥೆಯೇ ಬೇಕಾಗಿದೆ. ಈ ಕಾರಣಗಳಿಂದ ಕಾಂಗ್ರೆಸು, ಈ ಸಂಸ್ಥೆಯನ್ನು ಗಾಂಧಿಯವರ ನೇತೃತ್ವದಲ್ಲೂ ಸಲಹೆಗಳೊಡನೆಯೂ ಸ್ಥಾಪಿಸಲು ಶ್ರೀ ಜೆ. ಸಿ. ಕುಮಾರಪ್ಪ ಅವರಿಗೆ ಅಧಿಕಾರವನ್ನು

ಕೈಗಾರಿಕೆಗಳ ಅಭಿವೃದ್ಧಿಗಾಗಿ ಸ್ಥಾಪಿತವಾಗುತ್ತಿರುವ ಸಂಘದ ರೀತಿನೀತಿಗಳನ್ನು ನಿರ್ಣಯಿಸುವುದು ನನ್ನ ಮೇಲೆ ಬಿದ್ದಿರುವುದರಿಂದಲೂ, ಈ ಕೈಗಾರಿಕೆಗಳ ವಿಷಯದಲ್ಲಿ ಮಿಕ್ಕ ಜನರೊಂದಿಗೆ ನಾನು ನನ್ನ ಮನಸ್ಸಿನಲ್ಲಿರುವುದನ್ನೂ, ಮತ್ತು ಈ ಕಾರ್ಯಕ್ರಮವು ಹಳ್ಳಿಯವರ ನೈತಿಕ ಆರೋಗ್ಯ ಉನ್ನತಿಗೆ ಹೇಗೆ ಸಹಾಯವಾಗುವುದೆಂಬುದನ್ನೂ ತಿಳಿಸುತ್ತೇನೆ.

ನಾನು ಕೈಗೊಂಡ ಹರಿಜನ ಪ್ರವಾಸದಲ್ಲಿ ಮಲಬಾರನ್ನು ಪ್ರವೇಶಿಸುತ್ತಲೇ ನನಗೆ ಈ ಕಾರ್ಯಕ್ರಮದ ಯೋಜನೆ ಹೊಳೆಯಿತು. ಪಟ್ಟಣವಾಸಿಗಳು ಹಳ್ಳಿಯವರಿಂದ ಕ್ರೂರವಾಗಿ ವಿವೇಚನೆಯಿಲ್ಲದೆ ಕಸಿದುಕೊಂಡಿರುವುದು, ಅವರಿಗೇ ವಾಪಸು ಬರುವಂತೆ ಮಾಡಲು ಒಂದು ಸಂಸ್ಥೆಯು ಎಷ್ಟು ಅವಶ್ಯಕವೆಂಬುದು ಒಬ್ಬ ಖಾದಿ ಕೆಲಸಗಾರನೊಂದಿಗೆ ಮಾತನಾಡುತ್ತಿದ್ದಾಗ ನನಗೆ ಗೊತ್ತಾಯಿತು. ಹಳ್ಳಿಯವರಲ್ಲಿ ಬಹಳ ಪೆಟ್ಟುತಿಂದು ಕಷ್ಟಕ್ಕೊಳಗಾಗಿರುವವರು ಹರಿಜನರು. ಹಳ್ಳಿಯವರಿಗೆ ಸಿಕ್ಕಬಹುದಾದ ಕೈಗಾರಿಕೆಗಳಲ್ಲಿ ಬಹಳ ಸ್ವಲ್ಪವೇ ಹರಿಜನರಿಗೆ ದೊರಕುತ್ತದೆ. ಅವರಿಂದ ಆ ಕೈಗಾರಿಕೆಗಳನ್ನು ಕಸಿದುಕೊಂಡರೆ, ಅವರೂ ಮೃಗಗಳಂತಾಗಿ, ಆ ಮೃಗಗಳಂತೆಯೇ ಜೀವನ ನಡೆಸಬೇಕಾಗುತ್ತದೆ.

ಆದರೆ ಈಗ ಒಟ್ಟಿನಲ್ಲಿ, ಹಳ್ಳಿಯವರು ಯಾವ ವಿಧದಲ್ಲೂ ಉತ್ತಮ ಸ್ಥಿತಿಯಲ್ಲಿ ಇಲ್ಲ. ಬರುಬರುತ್ತಾ ಅವರು ತಮಗಿರುವ ಇಷ್ಟು ನೆಲವನ್ನು ಕೆಡಕಿಕೊಂಡು, ಕೈಬಾಯಿಗೆ ನೇರಮಾಡಿಕೊಳ್ಳುವುದೇ ಕಷ್ಟ

ಕೊಡುತ್ತದೆ. ಈ ಗ್ರಾಮ ಕೈಗಾರಿಕಾಸಂಘವು ಗ್ರಾಮೋದ್ಯೋಗಗಳ ಸ್ಥಾಪನೆಗಾಗಿಯೂ ಬೆಳವಣಿಗೆಗಾಗಿಯೂ ಕೆಲಸಮಾಡುತ್ತದೆ. ಗ್ರಾಮಗಳ ನೈತಿಕ ಮತ್ತು ಆರ್ಥಿಕಸ್ಥಿತಿಗಳನ್ನು ಬಲಪಡಿಸುತ್ತದೆ. ತನಗೆ ಬೇಕಾದ ನಿಯಮಗಳನ್ನು ಮಾಡಿಕೊಳ್ಳುವುದಕ್ಕೂ ಧನವನ್ನು ಸಂಗ್ರಹಿಸುವುದಕ್ಕೂ ತನ್ನ ಉದ್ದೇಶಸಾಧನೆಗೆ ಆವಶ್ಯಕವಾದ ಇತರ ಕೆಲಸಗಳನ್ನು ಮಾಡುವುದಕ್ಕೂ ಅದಕ್ಕೆ ಅಧಿಕಾರವಿದೆ.''

ವಾಗಿದೆ. ಭಾರತದ ಸಣ್ಣ ಸಣ್ಣ ವಾದ ಮತ್ತು ವ್ಯವಸ್ಥೆಯಿಂದಿಲ್ಲದ, ಅಲ್ಪ ಜಮೀನುಗಳ ವ್ಯವಸಾಯವು ಲಾಭಕರವಾಪುದಲ್ಲವೆಂಬುದು ಎಲ್ಲೋ ಕೆಲವರಿಗೆ ಮಾತ್ರ ಗೊತ್ತಿದೆ. ಹಳ್ಳಿಯವರು ನಿರ್ಜೀವರಾಗಿ ಮತ್ತು ಸತ್ವವಿಲ್ಲದೆ ಜೀವನ ನಡೆಸುತ್ತಿದ್ದಾರೆ. ಅವರ ಜೀವನವು ಉಪವಾಸದ ನಿಧಾನವಾದ ಸಾವು. ಸಾಲದ ಹೊರೆ ಅವರ ತಲೆಯ ಮೇಲೆ ಬಿದ್ದಿದೆ. ಲೇವಾದೇವಿ ಮಾಡುವವನು ಹಣವನ್ನು ಸಾಲವಾಗಿ ಕೊಡುತ್ತಾನೆ; ಏಕೆಂದರೆ ಅವನು ಇನ್ನೇನೂ ಮಾಡಲಾರ. ಸಾಲ ಕೊಡದಿದ್ದರೆ ಹಿಂದಿನ ದೆಲ್ಲವನ್ನೂ ಅವನು ಕಳೆದುಕೊಳ್ಳಬೇಕಾಗುತ್ತದೆ. ಹಳ್ಳಿಗಳಲ್ಲಿ ಈ ಪರಿಸ್ಥಿತಿಯಲ್ಲಿ ಯಾವ ವಿಧವಾದ ವಿಚಾರಣೆ ಶೋಧನೆಗಳೂ ವ್ಯರ್ಥವಾಗುತ್ತವೆ. ನಾವು ವಿವರವಾಗಿ ಎಷ್ಟೇ ವಿಚಾರಗಳನ್ನು ತಿಳಿದರೂ, ನಮ್ಮ ಜ್ಞಾನವು ಆಳವಿಲ್ಲದುದಾಗುತ್ತದೆ.

ಗ್ರಾಮಕೈಗಾರಿಕೆಗಳು ಮರೆಯಾಗುವುದೆಂದರೆ ಭಾರತದ 700000 ಹಳ್ಳಿಗಳ ನಾಶವು ಪೂರ್ಣವಾದಂತೆಯೆ

ಈ ವಿಷಯದಲ್ಲಿ ನಾನು ಸೂಚಿಸಿರುವ ಅಭಿಪ್ರಾಯಗಳು ದಿನ ಪತ್ರಿಕೆಗಳಲ್ಲಿ ಟೀಕೆಗಳಿಗೆ ಒಳಗಾಗುತ್ತಿರುವುದನ್ನು ನಾನು ಓದಿದ್ದೇನೆ.

ಮನುಷ್ಯನು ಕಲ್ಪನಾಶಕ್ತಿಯುಳ್ಳ ತನ್ನ ಬುದ್ಧಿಯ ಸಹಾಯದಿಂದ ತನ್ನ ಅಧೀನಕ್ಕೊಳಪಡಿಸಿಕೊಂಡಿರುವ ಪ್ರಕೃತಿ ಶಕ್ತಿಗಳಿಂದ ಉಪಯೋಗಪಡೆಯುವುದರ ಕಡೆ ನನ್ನ ಮನಸ್ಸನ್ನು ತಿರುಗಿಸಬೇಕೆಂದು ಕೆಲವರು ನನಗೆ ಬುದ್ಧಿವಾದ ಹೇಳಿದ್ದಾರೆ. ಮುಂದುವರೆಯುತ್ತಿರುವ ಪಾಶ್ಚಾತ್ಯದೇಶಗಳು ನೀರು, ವಾಯು, ಎಣ್ಣೆ, ವಿದ್ಯುಚ್ಛಕ್ತಿಗಳ ಪೂರ್ಣ ಉಪಯೋಗವನ್ನು ಪಡೆಯುವಂತೆ ನಾವೂ ಅವುಗಳ ಪ್ರಯೋಜನ ಹೊಂದಬೇಕೆಂದು ಅವರು ಹೇಳುತ್ತಾರೆ. “ಗುಪ್ತವಾಗಿರುವ ಈ ಪ್ರಕೃತಿ ಶಕ್ತಿಗಳನ್ನು ತಮ್ಮ ಅಧೀನದಲ್ಲಿಟ್ಟುಕೊಂಡಿರುವುದರಿಂದ ಪ್ರತಿಯೊಬ್ಬ ಅಮೆರಿಕದವನಿಗೂ 33 ಗುಲಾಮರನ್ನು ಇಟ್ಟುಕೊಳ್ಳುವ ಶಕ್ತಿಯುಂಟಾಗಿದೆ.”

ಭಾರತದಲ್ಲಿ ಈ ಬಗೆಯ ಬದಲಾವಣೆಗಳನ್ನು ಮಾಡಿನೋಡಿ ಪ್ರತಿಯೊಬ್ಬರೂ ಮೂವತ್ತುಮೂರು ಸೇವಕರನ್ನು ಹೊಂದುವುದು ಹೋಗಲಿ, ಆಗ ಪ್ರತಿಯೊಬ್ಬ ಭಾರತೀಯನ ಗುಲಾಮತನವು ಈಗಿರುವುದರ ಮೂವತ್ತುಮೂರರಷ್ಟು ಹೆಚ್ಚಾಗುವದು.

ಸಾಧಿಸಬೇಕಾದ ಕೆಲಸವು ಇರುವ ಜನರಿಂದ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಆಗ ಯಂತ್ರಯುಗದ ಅನುಕೂಲಗಳ ಸಹಾಯವು ಒಳ್ಳೆಯದೇ ಹೌದು. ಭಾರತದಲ್ಲಿ ಇರುವಂತೆ ಕೆಲಸಕ್ಕೆ ಬೇಕಾದವರಿಗಿಂತ ಹೆಚ್ಚು ಜನರಿದ್ದರೆ, ಆಗ ಯಂತ್ರವು ಕೆಡಕನ್ನುಂಟುಮಾಡುತ್ತದೆ. ನಾಲ್ಕಾರು ಚದುರ ಅಡಿಗಳನ್ನು ಆಗೆಯಬೇಕಾದರೆ (ನಾನು) ನೇಗಿಲನ್ನು ಉಪಯೋಗಿಸದಿರಬಹುದು. ನಮ್ಮ ಮುಂದಿರುವ ಪ್ರಶ್ನೆ ಹಳ್ಳಿಗಳಲ್ಲಿ ವಾಸಮಾಡುತ್ತಿರುವ ಲಕ್ಷಾಂತರ ಜನರಿಗೆ ವಿರಾಮ ಒದಗಿಸುವುದು ಹೇಗೆ ಎಂಬುದಲ್ಲ. ವರ್ಷಕ್ಕೆ ಆರು ತಿಂಗಳು ಅಂದರೆ ಕೆಲಸಮಾಡುವಷ್ಟು ದಿನಗಳ ವ್ಯರ್ಥಕಾಲವನ್ನು ಹೇಗೆ ಪ್ರಯೋಜನವಾಗುವಂತೆ ಉಪಯೋಗಿಸಬೇಕೆಂಬುದೇ ನಮ್ಮ ಪ್ರಶ್ನೆ. ಯಾವ ಗಿರಣಿಯೇ ಆಗಲಿ ಹಳ್ಳಿಯವನಿಗೆ ವಿರೋಧವಾಗಿಯೇ ಇದೆ. ಇದು ನೋಡುವವರಿಗೆ ಆಶ್ಚರ್ಯವಾಗುವುದು. ನಾನು ಈ ವಿಷಯದಲ್ಲಿ ಗುಣಾಕಾರಹಾಕಿ ಲೆಕ್ಕಮಾಡಿಲ್ಲ. ಆದರೂ ಪ್ರತಿಯೊಂದು ಗಿರಣಿಯ ಕೂಲಿಯೂ ಕೊನೆಯಪಕ್ಷ ಹತ್ತುಜನ ಕೂಲಿಗಾರರ ಕೆಲಸಮಾಡುತ್ತಾನೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಅಂದರೆ ಗಿರಣಿ ಇಟ್ಟಿರುವವನು ತಾನು ಅದಕ್ಕೆ ಮುಂಚೆ ಹಳ್ಳಿಯಲ್ಲಿ ಸಂಪಾದಿಸುತ್ತಿದ್ದುದಕ್ಕಿಂತ, ಹತ್ತರಷ್ಟು ಹೆಚ್ಚಾಗಿ ಸಂಪಾದನೆಮಾಡುತ್ತಾನೆ. ತನ್ನ ಜೊತೆಯಲ್ಲಿ ಹಳ್ಳಿಯಲ್ಲಿದ್ದ ಹತ್ತುಜನರ ಅನ್ನಕ್ಕೆ ಇದರಿಂದ ಕಲ್ಲು. ಈ ಕಾರಣದಿಂದ ಹತ್ತಿ ನೂಲುವ ಮತ್ತು ನೇಯುವ ಗಿರಣಿಗಳು ಬಂದು, ಹಳ್ಳಿಯವರ ಜೀವನದ ಸ್ವಲ್ಪಭಾಗ ಸಂಪಾದನೆಯೂ ಇಲ್ಲದಂತೆ ಮಾಡಿವೆ. ಹೀಗಾದರೂ ಇದಕ್ಕೆ ಬದಲಾಗಿ ಗಿರಣಿಗಳು ಉತ್ತಮವಾದ

ಮತ್ತು ಅಗ್ಗವಾದ ಬಟ್ಟೆಗಳನ್ನು ತಯಾರಿಸುತ್ತದೆಂದು ಹೇಳಿದರೆ, ಅದು ಮೇಲಿನ ಪ್ರಶ್ನೆಗೆ ಉತ್ತರವಾಗಲಾರದು. ಸಾವಿರಾರು ಕೆಲಸಗಾರರನ್ನು ಈ ಯಂತ್ರಗಳು ಹೊರದೂಡಿದಮೇಲೆ ಅತಿ ಅಗ್ಗವಾದ ಗಿರಣಿ ಬಟ್ಟೆಯು ಹಳ್ಳಿಗಳಲ್ಲಿ ತಯಾರಾದ ಅತಿ ಅಗ್ಗದ ಖಾದಿಗಿಂತಲೂ ಹೆಚ್ಚು ತುಟ್ಟಿಯೇ ಹೌದು. ಕಲ್ಲಿದ್ದಲು ಗಣಿಯಿರುವವನಿಗೆ, ಆ ಜಾಗದಲ್ಲಿ ಕಲ್ಲಿದ್ದಲು ಉಪ ಯೋಗಿಸುವುದು ತುಟ್ಟಿಯಾಗಲಾರದು; ತನ್ನ ಖಾದಿಯನ್ನು ತಾನು ತಯಾರಿಸಿಕೊಳ್ಳುವ ಹಳ್ಳಿಯವನಿಗೆ, ಖಾದಿಯು ತುಟ್ಟಿಯಾಗಲಾರದು. ಗಿರಣಿಯಲ್ಲಿ ತಯಾರಾದ ಬಟ್ಟೆಗಳು ಹಳ್ಳಿಯ ಕೆಲಸಗಾರರನ್ನು ನಿರು ದ್ಯೋಗಿಗಳಾಗಿ ಮಾಡುವದಿರಲಿ, ಗಿರಣಿಯ ಅಕ್ಕಿಯೂ ಮತ್ತು ಹಿಟ್ಟು ಹಳ್ಳಿಗಳ ಸಾವಿರಾರು ಹೆಂಗಸರ ಕೆಲಸವನ್ನು ಕಸಿದುಕೊಳ್ಳುವುದಲ್ಲದೆ, ಈ ವ್ಯಾಪಾರದಿಂದ ಹಳ್ಳಿಯ ಜನರ ಆರೋಗ್ಯ ಕೆಡುವಂತೆ ಮಾಡು ತ್ತವೆ. ಮಾಂಸಾಹಾರವನ್ನು ತೆಗೆದುಕೊಳ್ಳಲು ಯಾವ ಅಭ್ಯಂತರವೂ ಇಲ್ಲದೆ ಅದನ್ನು ಕೊಳ್ಳುವ ಶಕ್ತಿಯಿರುವವರಿಗೆ, ಗಿರಣಿಯ ಅಕ್ಕಿ ಹಿಟ್ಟು ಗಳು ಯಾವ ಕೆಡಕನ್ನೂ ಮಾಡದಿರಬಹುದು; ಆದರೆ ನಮ್ಮ ದೇಶದಲ್ಲಿ ರುವಂತೆ ಮಾಂಸಾಹಾರ ಸೇವಿಸಲು ಅಭ್ಯಂತರವಿಲ್ಲದಿದ್ದವರಿಗೂ ಅಂಥ ಆಹಾರವು ದೊರಕದೆ ಇರುವ ಸ್ಥಿತಿಯಿರುವಾಗ ಹೊಟ್ಟಿನಿಂದ ಕೂಡಿದ ಹಿಟ್ಟು ಮತ್ತು ಬೆಳ್ಳಗೆ ಮಾಡದಿರುವ ಅಕ್ಕಿ ಅಂದರೆ ಪುಷ್ಟಿಕರವಾದ ಸತ್ವದಿಂದ ಕೂಡಿದ ಆಹಾರಪದಾರ್ಥ ದೊರಕದಂತೆ ಮಾಡುವುದು ಪಾಪ ಕರವೇ ಹೌದು. ಹೊಟ್ಟಿಲ್ಲದ ಬೆಳ್ಳಗಿರುವ ಅಕ್ಕಿ ಹಿಟ್ಟುಗಳನ್ನು ಉಪ ಯೋಗಿಸುವುದರಿಂದ ಉಂಟಾಗುವ ಅಪಾಯಗಳನ್ನು ಜನರಿಗೆ ವೈದ್ಯರೂ ಮತ್ತು ಇತರ ಮುಖಂಡರೂ ಸೇರಿ ತಿಳಿವಳಿಕೆ ಕೊಡಬೇಕಾದುದು ಅಗತ್ಯ ವಾಗಿದೆ.

ಕಣ್ಣಿಗೆ ಕಾಣುವ ಕೆಲವು ಮುಖ್ಯ ವಿಷಯಗಳಕಡೆ ನಿಮ್ಮ ಗಮನ ವನ್ನು ಸೆಳೆದು, ಹಳ್ಳಿಯವರನ್ನು ಉದ್ಯೋಗಿಗಳನ್ನಾಗಿ ಮಾಡಬೇಕಾದರೆ,

ಇಲ್ಲಿಯವರಿಗೂ ಅವರು ಅನುಸರಿಸಿಕೊಂಡು ಬಂದಿರುವ ಕೈಗಾರಿಕೆಗಳ ಮೂಲಕ ಸಾಧ್ಯವೇ ಹೊರತು, ಯಂತ್ರಸ್ಥಾಪನೆಯಿಂದ ಸಾಧ್ಯವಿಲ್ಲ ವೆಂದು ನಾನು ತೋರಿಸಿದ್ದೇನೆ.

ಆದುದರಿಂದ, ನನ್ನ ಅಭಿಪ್ರಾಯದಲ್ಲಿ ಅಖಿಲ ಭಾರತ ಗ್ರಾಮೋ ದ್ಯೋಗ ಸಂಘದ ಉದ್ದೇಶವು, ಈಗ ಬದುಕಿ ಕೆಲಸಮಾಡುತ್ತಿರುವ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದು. ಎಲ್ಲೆಲ್ಲಿ ಈಗ ಸತ್ತಿರುವ ಕೈಗಾರಿಕೆಗಳನ್ನು ಪುನಃ ಸ್ಥಾಪಿಸುವುದು ಅನುಕೂಲವೋ ಮತ್ತು ಸೂಕ್ತವೋ, ಅಲ್ಲೆಲ್ಲ ಹಿಂದಿನ ಕಾಲದ ಗ್ರಾಮಪದ್ಧತಿಯಂತೆ ಅಂದರೆ ಪ್ರತಿಯೊಬ್ಬ ಹಳ್ಳಿಯವನೂ ತನ್ನ ಮನೆಯಲ್ಲೇ ಕೈಗಾರಿಕೆ ನಡೆಸುವಂತೆ, ಈ ಸಂಘವು ಕೆಲಸಮಾಡುವುದು. ಹತ್ತಿಬೀಜ ಬಿಡಿಸುವುದು, ಎಕ್ಕು ವುದು, ನೂಲುವುದು ಮತ್ತು ನೇಯುವುದು ಈ ಕೆಲಸಗಳನ್ನು ಮಾಡುವ ಕೈಸಾಧನಗಳನ್ನು ಉತ್ತಮ ಪಡಿಸುವಂತೆ, ಮೇಲಿನ ಕೈಗಾರಿಕೆಗಳ ಸುಲ ಭಸಾಧನಗಳನ್ನು ಬಹಳ ಮಟ್ಟಿಗೆ ಉತ್ತಮ ಪಡಿಸಬಹುದು.

ಹಿಂದಿನ ಪದ್ಧತಿಯು ಪೂರ್ಣವಾಗಿ ವ್ಯಕ್ತಿಗೆ ಮಾತ್ರ ಸಂಬಂಧ ಪಟ್ಟಿದೆಯೆಂದೂ, ಆ ಕಾರ್ಯಕ್ರಮವನ್ನು ಪುನಃ ಆಚರಣೆಗೆ ತಂದರೆ ಗ್ರಾಮದ ಒಗ್ಗಟ್ಟು, ಹಳ್ಳಿಯ ಯೋಗಕ್ಷೇಮ ಮತ್ತು ಸಹಕಾರ ತತ್ವಕ್ಕೆ ಇವು ಸಹಕಾರಿಯಾಗುವುದಿಲ್ಲವೆಂದೂ, ಒಬ್ಬ ವಿಮರ್ಶಕರು ಹೇಳುತ್ತಾರೆ. ಈ ಅಭಿಪ್ರಾಯವು ಆಳವಾಗಿ ಯೋಚನೆ ಮಾಡದಿರುವುದರ ಫಲವೆಂದು ಕಾಣುತ್ತದೆ. ಹಳ್ಳಿಯವರು ತಮ್ಮ ಗುಡಿಸಲುಗಳಲ್ಲಿ ಪದಾರ್ಥಗಳನ್ನು ತಯಾರಿಸಿದರೂ, ಅವುಗಳನ್ನೆಲ್ಲ ಒಟ್ಟಿಗೆ ಕೂಡಿಹಾಕಿ, ಮಾರಿದಮೇಲೆ ಬಂದ ಲಾಭವನ್ನು ಎಲ್ಲರೂ ಹಂಚಿಕೊಳ್ಳಬಹುದು. ಈ ವಿಷಯಗಳಲ್ಲಿ ಪರಿಶ್ರಮವಿರುವವರ ಮೇಲ್ವಿಚಾರಣೆಯಂತೆ, ಗೊತ್ತಾದ ಒಂದು ರೀತಿ ಯಲ್ಲಿ, ಹಳ್ಳಿಯವರು ಕೆಲಸ ಮಾಡಬಹುದು. ಹಳ್ಳಿಯವರು ಒಟ್ಟಾಗಿ ಕೂಡಿಹಾಕಿರುವ ಸಂಗ್ರಹಾಲಯದಿಂದ ಕಚ್ಚಾ ಮಾಲುಗಳನ್ನು ಎಲ್ಲ

ರಿಗೂ ಹಂಚಬಹುದು. ಸಹಕಾರ ತತ್ವವು ಹಳ್ಳಿಯವರಲ್ಲಿ ಮುಂದಟ್ಟಾಗಿ ಅವರ ಮನಸ್ಸಿನಲ್ಲಿ ಬೇರೂರಿದರೆ, ಅವರೆಲ್ಲ ಒಟ್ಟಿಗೆ ಕೆಲಸ ಮಾಡುವುದಕ್ಕೂ ಕೆಲಸವನ್ನು ವಿಭಾಗಿಸಿಕೊಂಡು ಕಾಲವನ್ನು ಉಳಿಸಿಕೊಳ್ಳುವುದಕ್ಕೂ ಮತ್ತು ಉತ್ತಮ ದರ್ಜೆಯ ಕೆಲಸ ಮಾಡುವುದಕ್ಕೂ ಬೇಕಾದಷ್ಟು ಅನುಕೂಲಗಳು ಉಂಟಾಗುತ್ತವೆ. ಮೇಲಿನ ತತ್ವವನ್ನನುಸರಿಸಿ ಅಖಿಲ ಭಾರತ ಚರಕ ಸಂಘವು 5000 ಹಳ್ಳಿಗಳಲ್ಲಿ ತನ್ನ ಕಾರ್ಯವನ್ನು ನಡೆಸುತ್ತಿದೆ.

ಭಾರತದ ಹಳ್ಳಿಗಳನ್ನು ಒಂದು ಗ್ರಹಗಳ ಗುಂಪು ಎಂದು ತಿಳಿದರೆ, ಖಾದಿಯು ಆ ಗುಂಪಿಗೆ ಸೂರ್ಯನಂತೆ. ಖಾದಿಯಿಂದ ಪಡೆಯುವ ಶಾಖ ಮತ್ತು ಸಂರಕ್ಷಣೆಗೆ ಬದಲಾಗಿ ಖಾದಿಯನ್ನು ಕಾಪಾಡುವ ಗ್ರಹಗಳೇ ಈ ಗ್ರಾಮಕೈಗಾರಿಗಳು. ಖಾದಿಯನ್ನು ಬಿಟ್ಟು, ಇತರ ಕೈಗಾರಿಗಳು ಅಭಿವೃದ್ಧಿಯಾಗುವುದಿಲ್ಲ. ಆದರೆ ನಾನು ಹಿಂದಿನ ಬಾರಿ ಕೈಕೊಂಡ ಪ್ರವಾಸದಲ್ಲಿ, ಇತರ ಕೈಗಾರಿಕೆಗಳು ಚೇತರಿಸಿಕೊಳ್ಳದಿದ್ದರೆ, ಖಾದಿಯು ಹೆಚ್ಚಿನ ಅಭಿವೃದ್ಧಿಪಡೆಯುವುದು ಅಸಾಧ್ಯವೆಂದು ನನಗೆ ಗೊತ್ತಾಯಿತು. ಏಕೆಂದರೆ ಹಳ್ಳಿಯವರು ತಮ್ಮ ವಿರಾಮಕಾಲವನ್ನು ಲಾಭದಾಯಕವಾಗಿ ಉಪಯೋಗಿಸಬೇಕಾದರೆ, ಅವರು ಜೀವನದ ಎಲ್ಲ ಭಾಗಕ್ಕೂ ಗಮನ ಕೊಡಬೇಕಾದುದು ಅಗತ್ಯ. ಅ. ಭಾ. ಚ. ಸಂ. ಮತ್ತು ಅ. ಭಾ. ಗ್ರಾ. ಸಂಘ ಇವೆರಡೂ ಆ ಕೆಲಸವನ್ನು ಮಾಡಲು ಸ್ಥಾಪಿತವಾಗಿವೆ.

ಈ ಎರಡು ಸಂಸ್ಥೆಗಳು ಸಹಜವಾಗಿಯೂ, ರಾಜಕೀಯ ಗುಂಪುಗಳ ಅಥವಾ ರಾಜಕೀಯ ವಿಷಯಗಳ ಗೋಜಿಗೆ ಬರುವುದಿಲ್ಲ. ಕಾಂಗ್ರೆಸ್ಸು ಈ ಎರಡು ಸಂಘಗಳನ್ನೂ, ರಾಜಕೀಯ ಸಂಬಂಧವಿಲ್ಲದಂತೆ, ಸ್ವತಂತ್ರ ಸಂಸ್ಥೆಗಳನ್ನಾಗಿ ಮಾಡಿದ್ದು ಒಳ್ಳೆಯದಾಯಿತೆಂದು ನನ್ನ ಅಭಿಪ್ರಾಯ. ಹಳ್ಳಿಗಳು ಆರ್ಥಿಕ, ನೈತಿಕ ಮತ್ತು ಆರೋಗ್ಯರೀತಿ

ಗಳಂಪ ಅಭಿವೃದ್ಧಿ ಹೊಂದುವಂತೆ ಮಾಡಲು ಎಲ್ಲ ಪಂಗಡದವರೂ, ಎಲ್ಲ ಕೋಮಿನವರೂ ಒಟ್ಟಿಗೆ ಕಲೆತು ಕೆಲಸಮಾಡಬಹುದು.

ಆರ್ಥಿಕ ದೃಷ್ಟಿಯಿಂದ ಪರಿಶೀಲಿಸಿದಲ್ಲಿ, ಖಾದಿಯು ಲಾಭದಾಯಕ ವಾದ ಕಾರ್ಯಕ್ರಮವಲ್ಲವೆಂದು ಯೋಚಿಸುವ ಗುಂಪು ಒಂದು ಇದೆಯೆಂದು, ನನಗೆ ಗೊತ್ತು. ಖಾದಿಯನ್ನು ಗ್ರಾಮಾಭಿವೃದ್ಧಿಯ ಮುಖ್ಯ ತಳಹದಿ ಎಂದು ನಾನು ಹೇಳಿರುವುದನ್ನು ತಿಳಿದು, ಆ ಗುಂಪಿನವರು ಹೆದರಿ ಓಡು ವುದಿಲ್ಲವೆಂದು ನಂಬಿದ್ದೇನೆ. ಖಾದಿಗೂ ಮತ್ತು ಇತರ ಗ್ರಾಮಕೈಗಾರಿಕೆ ಗಳಿಗೂ ಇದ್ದ ಸಂಬಂಧವನ್ನು, ಆ ರೀತಿ ತಿಳಿಸದಿದ್ದರೆ, ನನ್ನ ಮನಸ್ಸಿನ ಲ್ಲಿದ್ದ ಚಿತ್ರವನ್ನು ಪೂರ್ತಿಯಾಗಿ ತಿಳಿಸುವುದಕ್ಕಾಗುತ್ತಿರಲಿಲ್ಲ. ಖಾದಿ ಯನ್ನು ಹಾಗೆ ಕಾಣಲಾಗದವರು ಇತರ ಕೈಗಾರಿಕೆಗಳಿಗೆ ಮಾತ್ರ ತಮ್ಮ ಲಕ್ಷ್ಯವನ್ನು ಕೊಟ್ಟು ಗ್ರಾಮಸೇವೆ ಮಾಡಬಹುದು. ನಾನು ಈ ಲೇಖ ನದಲ್ಲಿ ಸೂಚಿಸಿರುವ ತತ್ತ್ವವನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ಆ ಕಾರ್ಯಕ್ರಮವನ್ನೂ ಕೂಡ ಈಗ ಹೊಸದಾಗಿ ಸ್ಥಾಪಿತವಾಗುವ ಸಂಸ್ಥೆಯ ಮೂಲಕ ನಡೆಸುವುದು ಸಾಧ್ಯವೆಂದು ಅವರಿಗೆ ಗೊತ್ತಾಗು ವುದು.

---

೭. ಅ. ಭಾ. ಗ್ರಾಮೋದ್ಯೋಗ ಸಂಘ—ಕಾರ್ಯಕ್ರಮ ಮತ್ತು ಉದ್ದೇಶಗಳು

[ಕಾಂಗ್ರೆಸ್ಸು ಮುಗಿದ ಈಚೆಗೆ ಹೋದವಾರ ಗಾಂಧೀಜೀಯವರಿಗೆ ಬಹಳ ಹೆಚ್ಚಿನ ಕೆಲಸ. ಗ್ರಾಮೋದ್ಯೋಗ ಸಂಘದ ಯೋಚನೆ ಅವರ ಮನಸ್ಸನ್ನು ತುಂಬಿದೆ. ಅವರಿಗೆ ಗ್ರಾಮೋದ್ಯೋಗದಮೇಲೆ ಬರುವ ಕಾಗದಗಳಿಗೆ ಜವಾಬುಕೊಡುವುದು ಅವರ ಶಕ್ತಿಗೆ ಮೀರಿದುದಾಗಿದೆ. ಗಾಂಧಿ ಸೇವಾಸಂಘದ ವಾರ್ಷಿಕ ಅಧಿವೇಶನ ನಡೆದುದರಿಂದ ಹೋದ

ವಾರ ಗಾಂಧೀಜೀಯವರ ಕೈತುಂಬ ಕೆಲಸ ಇನ್ನೂ ಹೆಚ್ಚಾಗಿದ್ದಿತು. ಈ ಸಂಘದಲ್ಲಿ ತಮ್ಮ ಕಾಲವನ್ನೆಲ್ಲಾ ಗ್ರಾಮಸೇವೆಯಲ್ಲೀ ಕಳೆದಿರುವ ಈ ದೇಶದ ಕೆಲವು ಆರಿಸಿದ ಕೆಲಸಗಾರರಿದ್ದಾರೆ. ತಾವು ಕೊಟ್ಟ ಈ ವಾರದ ಮೂರನೆ ಭಾಷಣದಲ್ಲಿ ಗಾಂಧೀಜೀಯವರು ಗ್ರಾಮೋದ್ಯೋಗ ಸಂಘದ ಕಾರ್ಯಕ್ರಮು ಮತ್ತು ಉದ್ದೇಶಗಳನ್ನು ವಿವರಿಸಿದರು. ಕೆಳಗೆ ಕೊಟ್ಟಿರುವುದು ಅದರ ಸಂಗ್ರಹ ವರದಿ. ಮ. ದೇ.]

ಗ್ರಾಮೋದ್ಯೋಗಸಂಘವು ಮೊದಲು ಹೇಗೆ ಸ್ಥಾಪಿತವಾಯಿತೆಂದು ಇಲ್ಲಿ ನೆರದಿರುವವರಲ್ಲಿ ಕೆಲವರಿಗೆ ಗೊತ್ತಿರಬೇಕು. ಹೋದ ವರುಷ ನಾನು ಹರಿಜನ ಪ್ರವಾಸಮಾಡುತ್ತಿದ್ದಾಗ ನಾವು ಖಾದಿಯ ಕೆಲಸ ನಡೆಸುತ್ತಿದ್ದ ರೀತಿಯು, ಅದನ್ನು ಭಾರತದಲ್ಲೆಲ್ಲಾ ಸಾಧಾರಣವಾಗಿ ತೊಡುವ ಬಟ್ಟೆಯಂತೆ ಮಾಡುವ ಗುರಿಗೂ ಹಳ್ಳಿಗಳ ಸತ್ವಪೂರ್ಣವಾದ ಬೆಳೆವಳಿಗೆಗೂ ಸಾಲದುದಾಗಿ ನನ್ನ ಮನಸ್ಸಿಗೆ ಸ್ಪಷ್ಟವಾಗಿ ತೋರಿಬಂದಿತು. ಎಲ್ಲೋ ಸ್ವಲ್ಪ ಜನರಿಗೆ ಮಾತ್ರ ಅದು ಸಂಬಂದಪಟ್ಟಿದೆಯೆಂದೂ, ಖಾದಿ ತೊಡುತ್ತಿದ್ದ ಕೆಲವರು ಕೂಡ ತಾವು ಇನ್ನೇನೂ ಮಾಡಬೇಕಾದ್ದಿಲ್ಲವೆಂದುಕೊಂಡು, ತಾವು ಕೊಳ್ಳುತ್ತಿದ್ದ ಇತರ ಪದಾರ್ಥಗಳು ಅವು ಎಲ್ಲಿ ಹೇಗೆ ತಯಾರಾದುವೆಂದು ತಿಳಿಯಲು ಗಮನ ಕೊಡುತ್ತಿರಲಿಲ್ಲವೆಂದೂ, ನಾನು ಆಗ ತಿಳಿದುಕೊಂಡೆನು. ಖಾದಿಯು ಈರೀತಿ ಬರಿಯ ನಿರ್ಜೀವ ಗುರುತು ಮಾತ್ರವಾಗಿ ಉಳಿಯಿತು. ಈ ಸ್ಥಿತಿಗತಿಗಳನ್ನು ಹೀಗೆಯೇ ಮುಂದುವರಿಯಲು ಬಿಟ್ಟಲ್ಲಿ, ಅರ್ಥರಹಿತವಾದ ಬರಿಯ ಶೂನ್ಯತೆಯಿಂದಲೇ ಖಾದಿಯು ಸತ್ತುಹೋಗಬಹುದೆಂದು ನನಗೆ ಕಂಡುಬಂದಿತು. ಅಂದರೆ, ಖಾದಿಗಾಗಿ ಆಳವಾದ ಮತ್ತು ಒಮ್ಮನಸ್ಸಿನಿಂದ ಪ್ರಚಾರ ಮತ್ತು ಪ್ರಯತ್ನಗಳು ನಡೆದರೆ, ಖಾದಿಯು ಜಯಹೊಂದುತ್ತಿರಲಿಲ್ಲವೆಂದು ನನ್ನ ಅರ್ಥವಲ್ಲ. ಆದರೆ ನಮ್ಮ ಕಾರ್ಯಕ್ರಮದಲ್ಲಿ ಆಗ ಏಕಾಗ್ರತೆ ಮತ್ತು ಆಸಕ್ತಿ ಇರಲಿಲ್ಲ. ಎಲ್ಲ ಜನರೂ

ತಮ್ಮ ಎಲ್ಲ ವಿರಾಮಕಾಲವನ್ನೂ ಚರಕ ಅಥವಾ ತಕ್ಲಿಯ ಉಪಯೋಗದಲ್ಲಿ ಕಳೆಯುತ್ತಿರಲಿಲ್ಲ, ಮತ್ತು ಎಲ್ಲರೂ ಖಾದಿಯನ್ನು ಪೂರ್ಣವಾಗಿ ತೊಡಲು ಪ್ರಾರಂಭಿಸಿರಲಿಲ್ಲ. ಖಾದಿ ಧರಿಸುವವರು ನೂಲುವವರಿಗಿಂತ ಹೆಚ್ಚಾಗಿದ್ದರು. ಆದರೆ ಉಳಿದವರೆಲ್ಲ ಸೋಮಾರಿಗಳಾಗಿಯೇ ಇದ್ದರು. ಬೇಕಾದಷ್ಟು ವಿರಾಮಕಾಲವು ಲಕ್ಷಗಟ್ಲೆ ಜನರ ಗುಂಪಿಗೆ ವ್ಯಾಸಲಾಗಿದ್ದಿತು. ಆ ಸ್ಥಿತಿಯು, ನಮ್ಮ ನಾಶಕ್ಕೆ ಕಾರಣವಾಗುವುದೆಂದು ನನಗೆ ಕಂಡುಬಂದಿತು. ಈ ಜನರು ಸ್ವರಾಜ್ಯವನ್ನು ಎಂದಿಗೂ ಗೆಲ್ಲಲಾರರು. ಏಕೆಂದರೆ ಪ್ರಯತ್ನಪಟ್ಟೂ ಪ್ರಯತ್ನಪಡದೆಯೂ ಇವರಿಗೆ ದೊರಕುತ್ತಿರುವ ಸೋಮಾರಿತನವು ಇವರನ್ನು ಪರದೇಶದ ಮತ್ತು ನಮ್ಮ ದೇಶದ ವ್ಯಾಪಾರ ಸೂರೆಗಾರರಿಗೆ ಯಾವಾಗಲೂ ಬಲಿಯಾಗಿ ಮಾಡಿದೆ. ಇವರನ್ನು ಸೂರೆಮಾಡುವವರು ಭಾರತದವರಾಗಲೀ, ಹೊರಗಿನವರಾಗಲಿ ಇವರ ಸ್ಥಿತಿಯು ಒಂದೇ ರೀತಿ ಇರುತ್ತದೆ. ಇವರಿಗೆ ಸ್ವರಾಜ್ಯವು ಲಭಿಸಲಾರದು ಎಂದು ನನ್ನ ಮನಸ್ಸಿನಲ್ಲಿ ನಾನು ಹೇಳಿಕೊಂಡೆ. ಈ ಜನರು ಬೇರೆ ಯಾವ ಕೆಲಸವನ್ನಾದರೂ ಮಾಡುವಂತೆ ಹೇಳೋಣ. ಖಾದಿಯ ಕಾರ್ಯಕ್ರಮದಲ್ಲಿ ಈ ಜನರಿಗೆ ಉತ್ಸಾಹಹುಟ್ಟದಿದ್ದರೆ, ಇವರ ಪೂರ್ವಿಕರು ಮಾಡುತ್ತಿದ್ದ ಮತ್ತು ಈಗ ಕಣ್ಣಿಗೆ ಕಾಣದಿರುವ ಯಾವುದಾದರೂ ಒಂದು ಕಸಬನ್ನು ಇವರು ನಡೆಸಲಿ ಎಂದು ನಾನು ಮಾತನಾಡಿಕೊಂಡೆ. ಈಗ ಕೆಲವು ವರ್ಷಗಳ ಹಿಂದೆ ಕೂಡ ಇವರು ತಮಗೆ ಬೇಕಾದ ಪದಾರ್ಥಗಳಲ್ಲಿ ಹೆಚ್ಚು ಭಾಗವನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಆದರೆ ಈಗ ಆ ಪದಾರ್ಥಗಳನ್ನು ಇವರು ಹೊರಗಿನ ಪ್ರಪಂಚದಿಂದ ತರಿಸಿಕೊಳ್ಳಬೇಕಾಗಿದೆ. ಪಟ್ಟಣಗಳಲ್ಲಿ ವಾಸಿಸುತ್ತಿರುವ ಜನರು ತಮಗೆ ಬೇಕಾದ ಎಷ್ಟೋ ಪದಾರ್ಥಗಳನ್ನು ಹಳ್ಳಿಯವನಿಂದ ತರಿಸುತ್ತಿದ್ದರು. ಆದರೆ ಈಗ ಹಳ್ಳಿಯವನು ಆ ಪದಾರ್ಥಗಳನ್ನು ದೊಡ್ಡ ದೊಡ್ಡ ಷಹರುಗಳಿಂದ ತರಿಸಿಕೊಳ್ಳುತ್ತಾನೆ. ಹಳ್ಳಿಯವರು ತಮ್ಮ ವಿರಾಮಕಾಲವನ್ನು ಲಾಭಕರವಾಗಿ ಕಳೆಯು

ವುದಕ್ಕೂ ಪಟ್ಟಣದವರು ಆ ರೀತಿಯಲ್ಲಿ ತಯಾರಾದ ಹಳ್ಳಿಯ ಪದಾರ್ಥ ಗಳನ್ನೆಲ್ಲ ಉಪಯೋಗಿಸುವುದಕ್ಕೂ ಪ್ರಾರಂಭಿಸಿದ ಕೂಡಲೇ ಈಗ ಮುರಿದಂತಿರುವ ಹಳ್ಳಿಗಳ ಮತ್ತು ಪಟ್ಟಣಗಳ ಕೊಕ್ಕೆಯು ಪುನಃ ಸೇರಿಕೊಂಡಂತೆ ಆಗುವುದು. ಅಳಿದಿರುವ ಮತ್ತು ಬಹಳ ಮುಖ್ಯವಾದ ಗ್ರಾಮ ಕೈಗಾರಿಕೆಗಳಲ್ಲಿ ಯಾವುದನ್ನು ಪುನಃ ಸ್ಥಾಪಿಸಲು ಸಾಧ್ಯವೆಂಬುದನ್ನು ನಾವು ಹಳ್ಳಿಗಳಲ್ಲಿ ಸಂಚಾರಮಾಡಿ ವಿಷಯ ಸಂಗ್ರಹವನೆಲ್ಲ ಸಿದ್ಧಮಾಡಿಕೊಂಡು ಬೇರೆ ಬೇರೆ ಬಾಬಿಗೆ ಸಂಬಂಧಿಸಿದಂತೆ ಪಟ್ಟಿ ತಯಾರಿಸಬೇಕಾಗಿತ್ತು. ಆದರೆ ಆಹಾರ ಪದಾರ್ಥಗಳೂ ಮತ್ತು ತೊಡುವ ಬಟ್ಟೆಯೂ ಬಹಳ ಮುಖ್ಯವಾದ ವಿಷಯಗಳಾದುದರಿಂದ ಅವನ್ನು ನಾನು ಆರಿಸಿಕೊಂಡೆ, ಖಾದಿಯ ವಿಷಯದಲ್ಲಿ ಕೆಲಸ ನಡೆಯುತ್ತಲೇ ಇತ್ತು. ಆಹಾರ ಸಾಮಗ್ರಿಗಳ ವಿಷಯದಲ್ಲಿ ಸ್ವಾವಲಂಬಿಗಳಾಗಿದ್ದ ಸ್ಥಿತಿಯನ್ನು ನಾವು ಬೇಗ ಕಳೆದುಕೊಳ್ಳುತ್ತಿದ್ದೇವೆ. ಸ್ವಲ್ಪವರ್ಷಗಳ ಕೆಳಗೆ ನಮ್ಮ ಭತ್ತವನ್ನು ನಾವೇ ಕುಟ್ಟಿಕೊಳ್ಳುತ್ತಿದ್ದೆವು. ನಮ್ಮ ಹಿಟ್ಟನ್ನು ಬೀಸಿಕೊಳ್ಳುತ್ತಲೂ ಇದ್ದೆವು. ಆರೋಗ್ಯದ ವಿಷಯವನ್ನು ಸದ್ಯಕ್ಕೆ ಚರ್ಚಿಸುವುದು ಬೇಡ. ಅಕ್ಕಿಯ ಗಿರಣಿಗಳೂ ಮತ್ತು ಹಿಟ್ಟುಮಾಡುವ ಯಂತ್ರಗಳೂ ಉಪಯೋಗಕ್ಕೆ ಬಂದು ಹಳ್ಳಿಯ ಲಕ್ಷಾಂತರ ಹೆಂಗಸರು ನಿರುದ್ಯೋಗಿಗಳಾಗಿ ಅವರ ಜೀವನಕ್ಕೆ ಕಲ್ಲುಬಿದ್ದಿದೆ. ಬೆಲ್ಲದ ಜಾಗವನ್ನು ದಿನೇ ದಿನೇ ಸಕ್ಕರೆಯು ಆಕ್ರಮಿಸಿಕೊಳ್ಳುತ್ತಿದೆ. ಬಿಸ್ಕತ್ತುಗಳು ಮತ್ತು ಮಿಠಾಯಿಗಳಂತಹ ಸಿದ್ಧವಾದ ತಿಂಡಿಗಳು ನಮ್ಮ ಹಳ್ಳಿಗಳಿಗೆ ಸುಲಭವಾಗಿ ಆಮದಾಗುತ್ತಿವೆ. ಹಳ್ಳಿಯವನು ಮಾಡುತ್ತಿದ್ದ ಉದ್ಯೋಗಗಳೆಲ್ಲ, ಅವನ ಕೈಬಿಟ್ಟು ಹೋಗುತ್ತಿದೆಯೆಂದು ಇದರಿಂದ ಅರ್ಥವಾಗುತ್ತಿದೆ. ಹಳ್ಳಿಯವನು ಹೊರಗಿನವನ ವ್ಯಾಪಾರಸೂರೆಗೆ ಕಚ್ಚಾ ಮಾಲುಗಳನ್ನು ಸಿದ್ಧಮಾಡಿಕೊಡುವ ವ್ಯಕ್ತಿಮಾತ್ರವಾಗಿದ್ದಾನೆ. ಅವನು ಯಾವಾಗಲೂ ಸರಬರಾಜುಮಾಡುತ್ತಾ ಇರುತ್ತಾನೆ. ಇದಕ್ಕೆ ಪ್ರತಿಯಾಗಿ

ಅವನಿಗೆ ಏನೂ ದೊರಕುವುದಿಲ್ಲ. ತಾನು ಬೆಳೆದ ಕಚ್ಚಾಮಾಲಿಗೆ ಸಿಕ್ಕುವ ಅಲ್ಪಸ್ವಲ್ಪ ಹಣವನ್ನೂ ಅವನು ಸಕ್ಕರೆ ವ್ಯಾಪಾರಿಗೂ ಬಟ್ಟೆಯ ವ್ಯಾಪಾರಿಗೂ ಕೊಟ್ಟುಬಿಡುತ್ತಾನೆ. ಅವನ ಶರೀರ ಬುದ್ಧಿಗಳು ಮೃಗದ ಶರೀರ ಬುದ್ಧಿಗಳಂತಾಗಿವೆ. ಪಾಪ! ಆ ಪ್ರಾಣಿಗಳೇ ಅವನ ನಿರಂತರ ಸಹಪಾಠಿಗಳು. ಈ ವಿಷಯದಲ್ಲಿ ನಾವು ಯೋಚನೆ ಮಾಡಿನೋಡಿದರೆ, ಇಂದಿನವನಿಗೆ ಐವತ್ತುವರ್ಷದ ಹಿಂದಿದ್ದ ಹಳ್ಳಿಯವನ ಜಾಣತನ, ಅನುಕೂಲ ಉಪಾಯಗಳಲ್ಲಿ ಅರ್ಧಕೂಡ ಇಲ್ಲ ಎಂದು ನಮಗೆ ಗೊತ್ತಾಗುವುದು. ಏಕೆಂದರೆ ಇಂದಿನವನು ಸೋಮಾರಿಯಾಗಿ ದುಃಖಕರವಾದ ಪರಾಧೀನದಲ್ಲಿ ಮುಳುಗಿರುವಾಗ, ಐವತ್ತು ವರ್ಷದ ಹಿಂದಿನ ಗ್ರಾಮಸ್ಥನು ತನ್ನ ಶರೀರಬುದ್ಧಿಗಳನ್ನು ಉಪಯೋಗಿಸಿ ತನ್ನ ಮನೆಯಲ್ಲೇ ತನಗೆ ಬೇಕಾದುದನ್ನು ತಯಾರಿಸಿಕೊಳ್ಳುತ್ತಿದ್ದನು. ಈಗ ಹಳ್ಳಿಯಲ್ಲಿ ಕಸಬು ನಡೆಸಿ ಜೀವನ ಮಾಡುವ ಕಸಬುಗಾರರಿಗೆ ಕೂಡ ಹಳ್ಳಿಯಲ್ಲಿರುವ ಇತರರಂತೆ ಈ ಹೆಡ್ಡತನವು ಹರಡಿದೆ. ಹಳ್ಳಿಯ ಬಡಗಿಯ ಹತ್ತಿರ ಹೋಗಿ ಒಂದು ಚರಕ ಮಾಡಿಕೊಡುವಂತೆ ಹೇಳಿ; ಕಮ್ಮಾರನನ್ನು ಒಂದು ಕದುರು ಮಾಡುವಂತೆ ಹೇಳಿ; ನೀವು ನಿರಾಸೆ ಹೊಂದಬೇಕಾಗುವುದು. ಹಳ್ಳಿಗಳ ಈ ಸ್ಥಿತಿಯು ದುಃಖಕರವಾಗಿದೆ. ಈ ಸ್ಥಿತಿಯನ್ನು ಉತ್ತಮಪಡಿಸಬೇಕೆಂಬ ಉದ್ದೇಶದಿಂದ ಗ್ರಾಮೋದ್ಯೋಗ ಸಂಘವು ರೂಪುಗೊಂಡಿದೆ.

'ಹಳ್ಳಿಗೆ ಹಿಂದಿರುಗೋಣ' ಎಂಬ ಈ ಕೂಗು ನಮ್ಮ ಅಭಿವೃದ್ಧಿಯ ಓಟವನ್ನು ಹಿಂದಕ್ಕೆ ತಿರುಗಿಸುವುದೆಂದು ಕೆಲವು ಜನರು ಆಕ್ಷೇಪಿಸುತ್ತಾರೆ. ಆದರೆ ನಿಜವಾಗಿಯೂ ಅದು ಹಾಗಾಗುವುದೆ? ಈ ಕಾರ್ಯಕ್ರಮದ ಉದ್ದೇಶವು? ಪೂರ್ವದ ಸ್ಥಿತಿಗೆ ಪುನಃ ನಾವು ಹೋಗುವುದೇ, ಅಥವಾ ಹಳ್ಳಿಯವರಿಗೆ ಸಲ್ಲಬೇಕಾಗಿದ್ದುದನ್ನು ನಾವು ಅವರಿಗೆ ವಾಪಸು ಕೊಡುವುದೆ? ಪಟ್ಟಣವಾಸಿಗಳನ್ನು ಹಳ್ಳಿಗೆ ಹೋಗಿ

ಜೀವಿಸಿರೆಂದು ನಾನು ಹೇಳುತ್ತಿಲ್ಲ. ಆದರೆ ಹಳ್ಳಿಯವರಿಗೆ ಯಾವುದು ನ್ಯಾಯವಾಗಿ ದೊರಕಬೇಕಾಗಿದೆಯೋ ಅದನ್ನು ಕೊಡುವಂತೆ ನಾನು ಪಟ್ಟಣವಾಸಿಗಳಿಗೆ ಹೇಳುತ್ತೇನೆ. ಪಟ್ಟಣದಲ್ಲಿ ಜೀವಿಸುವವರು ಹಳ್ಳಿಯವರಿಂದಲ್ಲದೆ, ಬೇರೆ ಜಾಗದಿಂದ ಪಡೆಯಬಹುದಾದ ಯಾವುದಾದರೂ ಒಂದು ಕಚ್ಚಾ ಪದಾರ್ಥವಿದೆಯೆ? ಹಾಗೆ ಪಡೆಯಲು ಸಾಧ್ಯವಿಲ್ಲದ ಮೇಲೆ ಹಳ್ಳಿಯವನೇ ಆ ಕಚ್ಚಾ ಪದಾರ್ಥದಲ್ಲಿ ಕೆಲಸ ಪೂರ್ತಿಮಾಡುವಂತೆ ಯಾಕೆ ಹೇಳಿಕೊಡಬಾರದು? ಪೂರ್ವದಲ್ಲಿ ಅವನು ಆ ರೀತಿ ಮಾಡುತ್ತಿದ್ದನು. ನಾವು ಒಳದಾರಿಗಳಲ್ಲಿ ಲಾಭಪಡೆಯುವ ಆಪೇಕ್ಷೆಪಡದಿದ್ದರೆ, ಈಗಲೂ ಅವನು ಹಾಗೆ ಮಾಡಲು ಸಿದ್ಧನಾಗಿದ್ದಾನೆ.

ಹಿಂದೆ ಯಾವಾಗಲೋ ಒಂದಾನೊಂದು ಕಾಲದಲ್ಲಿ ಅವನಿಗೆ ನೈಜವಾಗಿದ್ದ ಸ್ಥಾನವನ್ನು ಪಡೆದಿದ್ದ ಹಳ್ಳಿಯವನನ್ನು ಅದೇ ಸ್ಥಿತಿಯಲ್ಲಿ ಪುನಃ ಸ್ಥಾಪಿಸುವುದು ಸುಲಭವಾದ ಕೆಲಸವೇನೂ ಅಲ್ಲ. ಗ್ರಾಮೋದ್ಯೋಗ ಸಂಘದ ಶಾಸನ ನಿಯಮಗಳನ್ನು ರಚಿಸಿ, ಶ್ರೀಯುತ ಕುಮಾರಪ್ಪನವರ ಸಹಾಯದಿಂದ ಸಂಘದ ಕಾರ್ಯಕ್ರಮ ನಡೆಸುವಂತೆ ಮಾಡಲು ಸ್ವಲ್ಪ ದಿನಗಳಲ್ಲಿ ಸಾಧ್ಯವಾಗಬಹುದೆಂದು ನಾನು ಯೋಚಿಸಿದ್ದೆನು. ಆದರೆ ನಾನು ಈ ವಿಷಯದಲ್ಲಿ ಹೆಚ್ಚು ಹೆಚ್ಚು ಮುಳಿಗಿದಷ್ಟೂ, ಆ ಆಳದಿಂದ ಇನ್ನೂ ಮೇಲೆಯೇ ಇರುವೆನೆಂದು ನನಗೆ ತೋರುತ್ತಿದೆ. ಒಂದು ವಿಧದಲ್ಲಿ ನೋಡಿದರೆ ಖಾದಿ ಕೆಲಸಕ್ಕಿಂತ ಇದು ಎಷ್ಟೋ ಹೆಚ್ಚು ಕಠಿಣವಾಗಿದೆ; ಏಕೆಂದರೆ ಖಾದಿಯಲ್ಲಿ ಯಾವ ಉಪಕಷ್ಟಗಳೂ ಪ್ರಶ್ನೆಗಳೂ ನಮಗೆ ಕಾಣುವುದಿಲ್ಲ. "ಪರದೇಶದ ಮತ್ತು ಇಲ್ಲಿಯ ಗಿರಣಿಗಳ ಬಟ್ಟೆಗಗಳನ್ನು ತ್ಯಜಿಸಿ"; ಖಾದಿಯ ಬಲವಾದ ತಳಹದಿಯ ಮೇಲೆ ಸ್ಥಾಪಿತವಾದಂತಾಯಿತು ಅಷ್ಟೆ. ಆದರೆ ಇಲ್ಲಾದರೋ ಕಾರ್ಯಕ್ಷೇತ್ರವು ಬಲು ದೊಡ್ಡದು. ನಾವು ಯೋಚಿಸಬೇಕಾದ ವಿಷಯಗಳು ಮತ್ತು ಸುವ್ಯವಸ್ಥಿತವಾಗಿ ಸ್ಥಾಪಿಸುವ ಕೈಗಾರಿಕೆಗಳು ಬಹಳ ಹೆಚ್ಚಾಗಿವೆ. ಅದನ್ನು

ನಡೆಸಬೇಕಾದರೆ ನಮ್ಮ ವ್ಯವಹಾರ ಚತುರತೆ, ನಿಪುಣಬುದ್ಧಿ ಮತ್ತು ವಿಜ್ಞಾನಶಿಕ್ಷಣವನ್ನೆಲ್ಲ ಖರ್ಚುಮಾಡಬೇಕಾಗುತ್ತದೆ. ಈ ಗುರಿಯನ್ನು ಮುಟ್ಟುವುದಕ್ಕೋಸ್ಕರ ನಮ್ಮ ಎಲ್ಲಾ ಬುದ್ಧಿ ಮತ್ತು ಚತುರತೆಯನ್ನೂ ಕಷ್ಟಪಟ್ಟು ಕೆಲಸಮಾಡುವ ಸಾಮರ್ಥ್ಯವನ್ನೂ ನಿರಂತರವಾಗಿ ಉಪಯೋಗಿಸದಿದ್ದರೆ ನಾವು ಈ ಉದ್ದೇಶವನ್ನು ಸಫಲಗೊಳಿಸಲಾರೆವು. ಅದಕ್ಕೋಸ್ಕರ ನಾನು ಸುಪ್ರಸಿದ್ಧರಾದ ವೈದ್ಯರಿಗೂ ಮತ್ತು ರಸಾಯನ ಪಂಡಿತರಿಗೂ ಗಿರಣಿಯಲ್ಲಿ ಮತ್ತು ಮನೆಯಲ್ಲಿ ತಯಾರಾದ ಅಕ್ಕಿ, ಬೆಲ್ಲ ಮತ್ತು ಸಕ್ಕರೆ ಇವುಗಳ ರಸಾಯನ ಪೃಥಕ್ಕರಣ ರೀತಿಯನ್ನೂ ಮತ್ತು ಆಹಾರಸತ್ವ ನಿರ್ಮಾಣವನ್ನೂ ತಿಳಿಸುವಂತೆ ಒಂದು ಪ್ರಶ್ನಾವಳಿಯನ್ನು ತಯಾರುಮಾಡಿ ಕಳಿಸಿದೆ. ಅನೇಕ ಸ್ನೇಹಿತರು ನನಗೆ ಕೂಡಲೆ ಜವಾಬು ಕೊಟ್ಟರೆಂದು ಹೇಳಲು ಸಂತೋಷವಾಗುತ್ತದೆ. ಆದರೆ ಅವರೆಲ್ಲ, ನಾನು ಕೇಳಿರುವ ವಿಷಯಗಳಲ್ಲಿ ಯಾವ ವಿಧವಾದ ಸಂಶೋಧನೆಗಳೂ ನಡೆದಿಲ್ಲ ಎಂದು ಒಪ್ಪಿಕೊಂಡಿದ್ದಾರೆ ಅಷ್ಟೆ. ಬೆಲ್ಲದಂತಹ ಸಾಮಾನ್ಯ ಪದಾರ್ಥದ ರಸಾಯನ ಸಂಕೇತವನ್ನು ಯಾವ ವಿಜ್ಞಾನ ಪಂಡಿತನೂ ತಿಳಿಸಲಿಲ್ಲವೆನ್ನುವುದು ದುಃಖದ ವಿಷಯವಲ್ಲದೆ ಮತ್ತೇನು? ನಾವು ಹಳ್ಳಿಯವನ ಯೋಚನೆ ಮಾಡದಿರುವುದೇ ಇದಕ್ಕೆ ಕಾರಣವಾಗಿದೆ. ಜೇನುತುಪ್ಪದ ವಿಷಯ ತೆಗೆದುಕೊಳ್ಳಿ. ಪರದೇಶಗಳಲ್ಲಿ ಜೇನುತುಪ್ಪದ ವಿಷಯದಲ್ಲಿ ನಡೆಸಿರುವ ಸಂಶೋಧನೆ ಎಷ್ಟು ಪೂರ್ಣವೂ ಸೂಕ್ಷ್ಮವೂ ಆಗಿದೆಯೆಂದರೆ, ಮಾರಾಟಕ್ಕೆ ಇಡಬೇಕಾದ ಪ್ರತಿಯೊಂದು ಜೇನುತುಪ್ಪದ ಸೀಸೆಯೂ ಆ ಸಂಶೋಧನೆಯ ಫಲಿತಾಂಶಕ್ಕೆ ಅನುಸಾರವಾಗಿರಬೇಕೆಂದು ನಾನು ಅನೇಕರ ಬಾಯಿಂದ ಕೇಳಿದ್ದೇನೆ. ಭಾರತದಲ್ಲಿ ಶುದ್ಧವಾದ ಜೇನುತುಪ್ಪವನ್ನು ತಯಾರಿಸಲು ಎಷ್ಟೋ ಅನುಕೂಲಗಳಿದ್ದರೂ ಅದರಲ್ಲಿ ಪೂರ್ಣ ನೈಪುಣ್ಯವನ್ನು ಪಡೆದವರು ನಮ್ಮಲ್ಲಿ ಬಹಳಮಂದಿ ಇಲ್ಲ. ತಾವು ಇರುವ ಆಸ್ಪತ್ರೆಯಲ್ಲಿ ಗಿರಣಿಯ ಅಕ್ಕಿಯು ನಿಷೇಧಿಸಲ್ಪಟ್ಟಿದೆಯೆಂದೂ, ಇಲಿಗಳು

ಮತ್ತು ಇತರ ಪ್ರಾಣಿಗಳ ಮೇಲೆ ನಡೆಸಿದ ಪ್ರಯೋಗದಿಂದ ಅಂಥ ಅಕ್ಕಿಯು ಆರೋಗ್ಯಕ್ಕೆ ಅಪಾಯವೆಂದು ತಿಳಿದು ಬಂದಿರುವುದಾಗಿಯೂ, ಒಬ್ಬರು ಮಾನ್ಯ ವೈದ್ಯರು ನನಗೆ ಬರೆದಿದ್ದಾರೆ. ಅಂದಮೇಲೆ, ಎಲ್ಲಾ ವೈದ್ಯರೂ ತಾವು ನಡೆಸಿರುವ ಪ್ರಯೋಗಗಳ ಮತ್ತು ಸಂಶೋಧನೆಗಳ ಫಲಿತಾಂಶವನ್ನು ಏಕೆ ಪ್ರಕಟಿಸಿಲ್ಲ? ಅಂತಹ ಅಕ್ಕಿಯನ್ನು ಉಪಯೋಗಿಸುವುದರಿಂದ ಖಂಡಿತವಾಗಿ ಶರೀರದ ಆರೋಗ್ಯಕ್ಕೆ ಅಪಾಯವೆಂದು ಎಲ್ಲಾ ವೈದ್ಯರೂ ಒಟ್ಟಾಗಿ ಏಕೆ ಪ್ರಸಿದ್ಧಿಮಾಡಿಲ್ಲ ?

ಮೇಲಿನ ಒಂದೆರಡು ಉದಾಹರಣೆಗಳಿಂದ ನನ್ನ ಕೆಲಸದಲ್ಲಿ ಕಾಣುವ ಕಷ್ಟಗಳೇನೆಂಬುದನ್ನು ತಿಳಿಸಿದ್ದೇನೆ. ಯಾವ ರೀತಿಯ ಸಂಸ್ಥೆಯು ನಮಗೆ ಬೇಕಾಗಿದೆ ? ಯಾವ ಯಾವ ಸಂಶೋಧನೆಗಳನ್ನು ನಾವು ನಡೆಸಬೇಕು ? ಇವು ನಮ್ಮ ಮುಂದಿರುವ ಪ್ರಶ್ನೆಗಳು. ತಮ್ಮ ನಿಪುಣ ಪಾಂಡಿತ್ಯವನ್ನೆಲ್ಲ ಉಪಯೋಗಿಸಿ ಈ ಕಾರ್ಯಕ್ರಮ ನಡೆಸುವುದರಲ್ಲಿ ಇಷ್ಟಪಟ್ಟು ಕೆಲಸಮಾಡುವ ವಿಜ್ಞಾನಿಗಳೂ ರಸಾಯನ ಪಂಡಿತರೂ ನಮಗೆ ಅವಶ್ಯಕವಾಗಿ ಬೇಕಾಗಿದ್ದಾರೆ. ಅಷ್ಟೇ ಅಲ್ಲ. ಗಂಟೆಗಳ ಕಾಲ ಒಟ್ಟಿಗೆ ನಮ್ಮ ಸಂಶೋಧನ ಶಾಲೆಯಲ್ಲಿ ಕೂತು ನಾನು ತಿಳಿಸಿರುವ ಭಾಗಗಳಲ್ಲಿ ಪ್ರಯೋಗ ನಡೆಸಲು ಅವರು ತಯಾರಾಗಿರಬೇಕು. ಆಗಾಗ್ಗೆ ನಾವು ಈ ಸಂಶೋಧನೆಗಳ ಫಲಿತಾಂಶವನ್ನು ಪ್ರಕಟಿಸಬೇಕಾಗುವುದು. ಹಳ್ಳಿಗಳಲ್ಲಿ ತಯಾರಾದ ಅನೇಕ ಸಾಮಗ್ರಿಗಳನ್ನು ಪರೀಕ್ಷೆಮಾಡಿ ಯೋಗ್ಯತಾಪತ್ರಗಳನ್ನು ಕೊಡಬೇಕಾಗುವುದು. ಹಳ್ಳಿಯವನು ತಾನು ತಯಾರಿಸಿದ ಪದಾರ್ಥಗಳನ್ನು ಹೊರಗಡೆ ವ್ಯಾಪಾರಕ್ಕೆ ಕಳುಹಿಸಿ ಅಗ್ಗವಾದ ಹೊರಗಿನ ಪದಾರ್ಥಗಳನ್ನು ತನ್ನ ಉಪಯೋಗಕ್ಕೆ ತರಿಸಿಕೊಳ್ಳುವುದರಲ್ಲಿ ಮಾತ್ರ ತೃಪ್ತನಾಗಿದ್ದಾನೆಯೇ ಎಂಬುದನ್ನೂ ನಾವು ಕಂಡು ಹಿಡಿಯಬೇಕು. ಹಳ್ಳಿಯವರು ಮೊದಲು ತಮ್ಮ ಅವಶ್ಯಕತೆಗೆ ಬೇಕಾದುದನ್ನು ಉಪಯೋಗಿಸಿಕೊಂಡು ಹೆಚ್ಚಿಗೆ ಉಳಿದುದನ್ನು ಪಟ್ಟಣದಲ್ಲಿ

ರುವವರಿಗೆ ಮಾರುವಂತೆ ನಾವು ನೋಡಿಕೊಳ್ಳಬೇಕು. ಈ ಉದ್ದೇಶಕ್ಕೋಸ್ಕರ ಜಿಲ್ಲೆಗಳಲ್ಲಿ ನಮ್ಮ ಸಂಸ್ಥೆಗಳನ್ನೂ, ಹಾಗೆ ಜಿಲ್ಲೆಗಳು ದೊಡ್ಡದಾಗಿದ್ದರೆ ಅದನ್ನು ವಿಭಾಗಿಸಿ ಅಲ್ಲೆಲ್ಲಾ ಅನೇಕ ಸಂಸ್ಥೆಗಳನ್ನೂ ಏರ್ಪಡಿಸಬೇಕು. ಪ್ರಾಯಶಃ ಇವು ಎಲ್ಲ ಸೇರಿ ೨೫೦ ಸಂಸ್ಥೆಗಳಾಗಬಹುದು. ಪ್ರತಿಯೊಂದು ಸಂಸ್ಥೆಯಲ್ಲೂ ಒಬ್ಬ ಪ್ರತಿನಿಧಿಯು ನೇಮಕವಾಗಿ, ಅವನು ಅಲ್ಲಿಯ ಸ್ಥಿತಿಯನ್ನು ಕೂಲಂಕಷವಾಗಿ ವಿಚಾರಿಸಿ, ಮುಖ್ಯ ಸಂಸ್ಥೆಯು ಆಗಾಗ್ಗೆ ತಿಳಿವಳಿಕೆ ಕೊಡುವ ರೀತಿಯಲ್ಲಿ ವರದಿ ಒಪ್ಪಿಸಬೇಕು. ಈ ಪ್ರತಿನಿಧಿಗಳು ನಮ್ಮ ಕಾರ್ಯಕ್ರಮದಲ್ಲಿ ಪೂರ್ಣ ನಂಬಿಕೆಯುಳ್ಳವರಾಗಿ, ಈ ಕೆಲಸವನ್ನು ಪೂರೈಸುವುದರಲ್ಲೇ ತಮ್ಮ ಎಲ್ಲಾ ಕಾಲವನ್ನೂ ಉಪಯೋಗಿಸಬೇಕು. ತಮ್ಮ ನಿತ್ಯಜೀವನದಲ್ಲಿ ಈ ಸಂಬಂಧವಾಗಿ ಮಾಡಿಕೊಳ್ಳಬೇಕಾದ ಬದಲಾವಣೆಗಳಿಗೆಲ್ಲ ತತ್‌ಕ್ಷಣ ಸಿದ್ಧರಾಗಿರಬೇಕು. ಈ ಕೆಲಸಕ್ಕೆ ಹಣ ಬೇಕಾಗುತ್ತದೆ. ಆದರೆ ಅದಕ್ಕಿಂತ ಹೆಚ್ಚಾಗಿ ನಂಬಿಕೆಯಿಂದ ಇಷ್ಟಪಟ್ಟು ಕೆಲಸಮಾಡುವ ಮನುಷ್ಯರು ಅಗತ್ಯವಾಗಿ ಬೇಕಾಗಿದೆ.

ಪ್ರಶ್ನೆ—ಇನ್ನೂ ಪೂರ್ಣವಾಗಿ ಕೆಲಸ ನಡೆಯದಿರುವ ಖಾದಿ ಕಾರ್ಯಕ್ರಮವನ್ನು ಇದು ಮೂಲೆಗೊತ್ತರಿಸುವುದಿಲ್ಲವೆ?

ಉತ್ತರ—ಇಲ್ಲ. ಖಾದಿಯು ಪಡೆದಿರುವ ಮುಖ್ಯಸ್ಥಾನದಿಂದ ಅದನ್ನು ಅಲ್ಲಾಡಿಸಕೂಡದು. ಕೈಗಾರಿಕೆಗಳು ಗ್ರಹಗಳ ಗುಂಪೆಂದು ತಿಳಿದರೆ ಖಾದಿಯು ಆ ಗುಂಪಿನ ಸೂರ್ಯನಂತೆ. ಇತರ ಎಲ್ಲ ಕೈಗಾರಿಕೆಗಳೂ ಖಾದಿಯಿಂದ ಉತ್ತೇಜನವನ್ನೂ ಪೋಷಣೆಯನ್ನೂ ಪಡೆಯುತ್ತವೆ.

ಪ್ರಶ್ನೆ—ನಾವು ಪುನಃ ಸ್ಥಾಪಿಸುವ ಅಥವಾ ಅಭಿವೃದ್ಧಿಮಾಡುವ ಕೈಗಾರಿಕೆಗಳು ಯಾವುವು, ನಿಖರವಾಗಿ ಹೇಳಿ?

ಉತ್ತರ—ನಾನು ಕೆಲಸ ನಡೆಯಬೇಕಾದ ರೀತಿಯನ್ನು ವಿವರಿಸಿದ್ದೇನೆ. ಈಗ ಕೆಲವು ವರ್ಷಗಳ ಹಿಂದೆ ಬದುಕಿದ್ದು ಪ್ರಯೋಜನವಾಗಿದ್ದ

ಮತ್ತು ಅವುಗಳ ನಾಶವು ಜನರ ನಿರುದ್ಯೋಗಕ್ಕೆ ಕಾರಣವಾಗಿರುವ ಕೈಗಾರಿಕೆಗಳೆಲ್ಲವನ್ನೂ ನಾವು ಅಭಿವೃದ್ಧಿ ಪಡಿಸಬೇಕು.

ಪ್ರಶ್ನೆ—ಅಕ್ಕಿಯ ಮತ್ತು ಹಿಟ್ಟುಮಾಡುವ ಗಿರಣಿಗಳಿಗೆ ನಾವು ಬಹಿಷ್ಕಾರ ಹಾಕಬೇಕೆ ?

ಉತ್ತರ—ಅವುಗಳಿಗೆ ಬಹಿಷ್ಕಾರ ಹಾಕಬೇಕಾಗಿಲ್ಲ. ಆದರೆ ನಾವು ಜನರಿಗೆ ತಮ್ಮ ಅಕ್ಕಿಯನ್ನು ತಾವೇ ಮಾಡಿಕೊಳ್ಳುವಂತೆಯೂ, ತಮ್ಮ ಹಿಟ್ಟನ್ನು ತಾವೇ ಬೀಸಿಕೊಳ್ಳುವಂತೆಯೂ ಹೇಳೋಣ. ಕೈಯ್ಯಲ್ಲಿ ಮಾಡಿದ ಅಕ್ಕಿ, ಬೀಸಿದ ಹಿಟ್ಟು ಆರೋಗ್ಯದ ದೃಷ್ಟಿಯಿಂದ ಉತ್ತಮವಾದ ಆಹಾರ ಪದಾರ್ಥಗಳೆಂದು ನಾವು ಅರವತ್ತುಗಳಿಗೆಯೂ ಪ್ರಚಾರ ನಡೆಸೋಣ. ನಾವು ಸೋಮಾರಿತನಕ್ಕೆ ಬಹಿಷ್ಕರ ಹಾಕೋಣ.

ಪ್ರಶ್ನೆ—ಕಾಂಗ್ರೆಸ್ ಕಮಿಟಿಗಳನ್ನು ನಮ್ಮ ಸಹಾಯಕ್ಕೆ ಉಪಯೋಗಿಸಿಕೊಳ್ಳಬಹುದೆ ?

ಉತ್ತರ—ಖಂಡಿತವಾಗಿ ; ಎಲ್ಲಾ ಸಾಧನಗಳನ್ನೂ ಉಪಯೋಗಿಸಿಕ್ಕೊಂಡು ಎಲ್ಲರ ಸಹಾಯವನ್ನೂ ನಾವು ಪಡೆಯೋಣ. ಈ ಕಾರ್‍ಯವಲ್ಲಿ ನಾವು ರಾಜಕೀಯ ಪಂಗಡಗಳ ಭೇದವನ್ನು ಎಣಿಸಕೂಡದು.

ಪ್ರಶ್ನೆ—ಮುಖ್ಯ ಸಭೆಯನ್ನು ರಚಿಸುವುದೆಂದರೆ ಕೇಂದ್ರೀಕರಣ ತತ್ವವನ್ನು ಅನುಸರಿಸಿದಂತಾಗುವುದಿಲ್ಲವೆ ?

ಉತ್ತರ—ಇಲ್ಲ. ಜಿಲ್ಲೆಗಳು ಕಾರ್ಯ ನಡೆಯುವ ಕ್ಷೇತ್ರಗಳಾಗುತ್ತವೆ. ಮುಖ್ಯ ಕಛೇರಿಯು ಭಾರತಕ್ಕೆಲ್ಲ ಅನುಕೂಲವಾದ ಸಲಹೆಗಳನ್ನು ನೀಡುತ್ತ ಅಂಗಸಂಸ್ಥೆಗಳಿಗೆಲ್ಲಾ ಮಾರ್ಗದರ್ಶಕವಾಗಿರುತ್ತದೆ. ಆದರೆ ಮುಖ್ಯ ಕಛೇರಿಯು ಆಡಳಿತ ನಡೆಸುವ ಸಭೆಯಲ್ಲ. ಪ್ರತಿನಿಧಿಗಳು ತಮ್ಮ ಕೆಲಸದಲ್ಲಿ ಅನುಸರಿಸುತ್ತಿರುವ ರೀತಿಯನ್ನೂ, ಪರಸ್ಪರ ಅಭಿಪ್ರಾಯವನ್ನೂ ಒಬ್ಬರಿಗೊಬ್ಬರಿಗೆ ತಿಳಿಸುವುದಕ್ಕೆ ಈ ಮುಖ್ಯ

ಕಛೇರಿಯು ಸಾಧನೆಯಾಗುತ್ತದೆ. ಆಡಳಿತ ಕೇಂದ್ರೀಕರಣವನ್ನು ನಾವು ತಪ್ಪಿಸಲು ಅಪೇಕ್ಷಿಸುತ್ತೇವೆ. ನಮಗೆ ಬೇಕಾಗಿರುವುದು ಆಲೋಚನೆಗಳ ಕೇಂದ್ರೀಕರಣ; ವಿಜ್ಞಾನ ತಿಳಿವಳಿಕೆ ಮತ್ತು ವಿಷಯಸಂಗ್ರಹದ ಒಂದುಗೂಡುವಿಕೆ. 7-12-1934.

---

೮. ಇದರ ಅರ್ಥ.

" ಈಗಿನ ಕಾಲದ ನಾಗರೀಕತೆಗೆ ವಿರೋಧವಾಗಿ, ಕೊನೆಯಿಲ್ಲದ ಒಂದು ಹುಚ್ಚು ಚಳುವಳಿಯನ್ನು ನೀವು ಪ್ರಾರಂಭಿಸಿರುವಿರೆಂದು ನಿಸ್ಸಹಾಯಕವಾದ ನನ್ನ ಬುದ್ಧಿಗೆ ತೋರುತ್ತಿದೆ. ನೀವು ಆದರ ಆಜನ್ಮಶತ್ರುವೆಂದೂ ಬಹಳ ದಿನಗಳ ಹಿಂದೆಯೇ ಬಹಿರಂಗವಾಗಿ ಹೇಳಿದಿರಿ. ನಿಮಗೆ ಸಾಧ್ಯವಾದರೆ, ಈ ನಾಗರೀಕತೆಯನ್ನು ಕೆಲವು ಸಾವಿರ ವರುಷಗಳ ಹಿಂದೆ ಇದ್ದ ಸ್ಥಿತಿಗೆ ತಳ್ಳಲು ಪ್ರಯತ್ನಿಸುತ್ತಿದ್ದೀರಿ. ನಿಮ್ಮ ಕಾರ್ಯಕ್ರಮದ ಆಲೋಚನೆಯೇ ನನ್ನನ್ನು ತಲೆ ತಿರುಗಿ ಬೀಳುವಂತೆ ಮಾಡಿದೆ."

ನಾನು ಕೈಕೊಂಡಿರುವ ಪ್ರಯತ್ನದಲ್ಲಿ ಸಹಕರಿಸುತ್ತೀರಾ ಎಂದು ಬರೆದ ಒಂದು ಕಾಗದಕ್ಕೆ ಆಪ್ತಸ್ನೇಹಿತರೊಬ್ಬರು ನನಗೆ ಉತ್ತರವಾಗಿ ಮೇಲೆ ಹೇಳಿರುವಂತೆ ಬರೆದಿದ್ದಾರೆ. ಆ ಸ್ನೇಹಿತರು ಸೂಚಿಸಿರುವ ಅಭಿಪ್ರಾಯವು ಇನ್ನೂ ಅನೇಕರ ಮನಸ್ಸಿನಲ್ಲಿ ಇರುವುದರಿಂದ ನನ್ನ ಮನಸ್ಸಿನಲ್ಲಿರುವುದೇನೆಂಬುದನ್ನು ತಿಳಿಸುವುದು ಒಳ್ಳೆಯದಾಗಿ ಕಾಣುತ್ತದೆ. ನನ್ನ ಉದ್ದೇಶಗಳು ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಗುರಿಯಾಗಿಲ್ಲದಿದ್ದರೆ ನನ್ನ ಅಭಿಪ್ರಾಯವನ್ನು ತಿಳಿಸುವುದು ಅಪ್ರಕೃತವಾದ ಮಾತಾಗುವುದು.

ಹಳ್ಳಿಗಳಲ್ಲಿ ಮತ್ತೊಮ್ಮೆ ಸ್ಥಾಪಿಸಬಹುದಾದಂತಹ ಉದ್ಯೋಗಗಳನ್ನು ಅಭ್ಯಾಸಕ್ಕೆ ತರಬೇಕೆಂದಿರುವ ನಾನು ನನ್ನ ಸ್ನೇಹಿತರು ಮೇಲೆ

ತಿಳಿಸಿರುವಂತಹ ಯಾವ ಕಾರ್ಯಸಾಧನೆಗೂ ಹೊರಟಿಲ್ಲ. ಹಳ್ಳಿಯ ಜೀವನವನ್ನು ಪ್ರೀತಿಸುವ ಪ್ರತಿಯೊಬ್ಬರೂ, ಹಳ್ಳಿಗಳು ಛಿದ್ರಛಿದ್ರವಾಗಿ ಹಾಳಾಗುತ್ತಿರುವ ದುಃಖಸನ್ನಿವೇಶವನ್ನು ತಿಳಿದ ಪ್ರತಿಯೊಬ್ಬರೂ, ಮಾಡುತ್ತಿರುವ ಅಥವಾ ಮಾಡಬೇಕೆಂದಿರುವ ಸೇವೆಯನ್ನೇ ನಾನು ಮಾಡಬೇಕೆಂದು ಪ್ರಯತ್ನಿಸುತ್ತಿದ್ದೇನೆ. ತಮಗೆ ಬೇಕಾದ ಹಿಟ್ಟನ್ನು ತಾವೇ ಬೀಸಿಕೊಂಡು ಹೊಟ್ಟಿನಿಂದಿರುವ ಹಿಟ್ಟನ್ನು ತಿನ್ನಿರೆಂದು ಹೇಳಿದರೆ, ಅಥವಾ ತಾವು ಬೆಳೆದ ಕಬ್ಬಿನಿಂದ ಬೆಲ್ಲವನ್ನು ತಯಾರಿಸಿ, ಮಾರುವುದಕ್ಕಿಲ್ಲದಿದ್ದರೂ, ತಮ್ಮ ಮನೆಯಲ್ಲೇ ಉಪಯೋಗಿಸುವಂತೆ ಹೇಳಿದರೆ, ನಾನು ಈಗಿನ ನಾಗರೀಕತೆಯ ಓಟವನ್ನು ಹಿಂದಕ್ಕೆ ತಿರುಗಿಸಿದ ಹಾಗಾಯಿತೇ ? ಕಚ್ಚಾಮಾಲುಗಳನ್ನು ಬೆಳೆದರೆ ಮಾತ್ರ ಸಾಲದು, ಅದನ್ನು ವ್ಯಾಪಾರಕ್ಕೆ ಅನುಕೂಲವಾಗುವ ಪದಾರ್ಥಗಳಂತೆ ತಯಾರಿಸಿ ನಿಮ್ಮ ಉತ್ಪತ್ತಿಗೆ ಇನ್ನೆರಡು ಕಾಸು ಸೇರಿಸಿಕೊಳ್ಳಿರೆಂದು ನಾನು ಹಳ್ಳಿಯವರಿಗೆ ಹೇಳಿದರೆ, ಅದರಿಂದ ಈಗಿನ ನಾಗರೀಕತೆಯನ್ನು ಹಾಳುಮಾಡಿದ ಹಾಗಾಯಿತೇ ?

ಇನ್ನೊಂದು ವಿಷಯ. ಈಗ ನಾವು ಕಾಣುತ್ತಿರುವ ನಾಗರೀಕತೆಯು ಸಾವಿರ ವರ್ಷದ್ದಲ್ಲ. ಅದು ಯಾವಾಗ ಪ್ರಾರಂಭವಾಯಿತೆನ್ನುವುದನ್ನು ನಾವು ಸರಿಯಾಗಿ ಹೇಳಬಹುದು. ನನಗೆ ಸಾಧ್ಯವಿದ್ದರೆ, ಈಗ ನಾಗರೀಕತೆಯ ಹೆಸರಿನಲ್ಲಿ ಆಗುತ್ತಿರುವ ಬದಲಾವಣೆಗಳನ್ನೂ ಸ್ಥಿತಿಗತಿಗಳನ್ನೂ ಖಂಡಿತವಾಗಿಯೂ ಹಾಳುಮಾಡುತ್ತಿದ್ದೆ. ಆದರೆ ಅದು ನಮ್ಮ ಜೀವನದ ಒಂದು ಹಳೆಯ ಕತೆಯಂತಿದೆ. ಆ ಪ್ರಯತ್ನವು ನಿಸ್ಸಂದೇಹವಾಗಿಯೂ ನಡೆಯುತ್ತಲೇ ಇದೆ. ಅದರ ಜಯವು ದೇವರ ಅನುಗ್ರಹವನ್ನು ಅವಲಂಬಿಸಿದೆ. ಲಾಭದಾಯಕವಾದ ಗ್ರಾಮೋದ್ಯೋಗಗಳಿಗೆ ಉತ್ತೇಜನಕೊಟ್ಟು ಅವು ಬದುಕುವಂತೆ ಮಾಡುತ್ತಿರುವುದು ಆ ಪ್ರಯತ್ನದ ಒಂದು ಭಾಗವಲ್ಲ. ಅಥವಾ ಅಹಿಂಸಾತತ್ವದ ಬೆಳೆವಣಿಗೆ ಮೊದಲ್ಗೊಂಡು ನನ್ನ ಇತರ ಕಾರ್ಯಕ್ರಮವನ್ನೆಲ್ಲ ಮೇಲಿನ ಪ್ರಯತ್ನಕ್ಕೆ ಸಹಾಯಕ

ವೆಂದು ಹೇಳುವುದಾದರೆ ಈ ಕಾರ್ಯಭಾಗವೂ ಅದೇ ಬಗೆಯದೆಂದು ಹೇಳಬಹುದು. ಖಾದಿ ಕೆಲಸದ ತತ್ವವನ್ನು ಇನ್ನೂ ಹೆಚ್ಚಾಗಿ ಕಾರ್ಯ ಭಾಗದಲ್ಲಿ ತರುವುದೇ ಈ ಗ್ರಾಮೋದ್ಯೋಗ ಸಂಘದ ಕಾರ್ಯಕ್ರಮದ ಉದ್ದೇಶ. ಕೈಯ್ಯಲ್ಲಿ ತಯಾರಾದ ಬಟ್ಟೆ, ಕೈಕಾಗದ, ಕೈಯ್ಯಲ್ಲಿ ಮಾಡಿದ ಅಕ್ಕಿ, ಮನೆಯಲ್ಲಿ ತಯಾರಾದ ರೊಟ್ಟಿ ಮತ್ತು ಮುರಬ್ಬಾ ಇವುಗಳೆಲ್ಲವೂ ಪಾಶ್ಚಾತ್ಯ ದೇಶಗಳಲ್ಲಿ ಅಪರೂಪವಲ್ಲ. ಆದರೆ ನಾವು ಭಾರತದಲ್ಲಿ ಇವುಗಳಿಗೆ ಕೊಡುವ ಪ್ರಾಮುಖ್ಯತೆಯನ್ನು ನೂರರಲ್ಲಿ ಒಂದು ಪಾಲು ಅವರು ಅಲ್ಲಿ ಕೊಡುವುದಿಲ್ಲ. ಏಕೆಂದರೆ ನಮ್ಮ ಸ್ಥಿತಿಯಲ್ಲಿ ಈ ಕೈಗಾರಿಕೆಗಳ ಬೆಳೆವಣಿಗೆ ಹಳ್ಳಿಯವನ ಜೀವನ. ಅವುಗಳ ನಾಶ ಹಳ್ಳಿಯವನ ಸಾವು. ಹಳ್ಳಿಗಳಿಗೆ ಹೋದರೆ ಇದರ ಸತ್ಯಾಂಶವು ಎಲ್ಲರಿಗೂ ಕಂಡು ಬರುವುದು. ಈ ಯಂತ್ರಯುಗವು ಏನನ್ನು ಮಾಡಿದರೂ ನಿರುದ್ಯೋಗಿಗಳಾಗುವ ಲಕ್ಷಾಂತರ ಜನರಿಗೆ ಎಂದಿಗೂ ಕೆಲಸವನ್ನು ಕಲ್ಪಿಸಲಾರದು.

4-1-1935.

---

೧೦. ಮೊದಲುಮಾಡುವುದು ಹೇಗೆ?

ಗ್ರಾಮೋದ್ಯೋಗ ಕೆಲಸವನ್ನು ಹೇಗೆ ಪ್ರಾರಂಭಿಸಬೇಕೆಂದೂ ಮೊದಲು ಯಾವುದನ್ನು ಮಾಡಬೇಕೆಂದೂ ಅನೇಕ ಸ್ನೇಹಿತರು ನನ್ನನ್ನು ಕಂಡು ಪ್ರಶ್ನೆಕೇಳುತ್ತಿದ್ದಾರೆ. ಬಾತ್ಮೀದಾರರು ಈ ವಿಷಯಗಳಲ್ಲಿ ಕಾಗದ ಬರೆದಿದ್ದಾರೆ.

ಈ ಪ್ರಶ್ನೆಗೆ ಉತ್ತರವು ಎಲ್ಲರಿಗೂ ತಿಳಿದೇ ಇದೆ. ನಿನ್ನಿಂದ ಮೊದಲು ಪ್ರಾರಂಭವಮಾಡಿಕೊ. ನಿನಗೆ ಯಾವುದು ಎಲ್ಲದಕ್ಕಿಂತ ಸುಲಭವೊ ಅದನ್ನು ಮೊದಲು ಮಾಡು.

ಆದರೆ ಈ ಉತ್ತರವು ಪ್ರಶ್ನೆಕೇಳಿದವರಿಗೆ ಸಮಾಧಾನವನ್ನು ಉಂಟುಮಾಡುವುದಿಲ್ಲ. ಆದುದರಿಂದ ನಾನು ಸ್ಪಷ್ಟವಾಗಿ ಅದನ್ನು ತಿಳಿಸುತ್ತೇನೆ.

ಪ್ರತಿಯೊಬ್ಬರೂ ತಾವು ದಿನವಹಿ ಉಪಯೋಗಿಸುವ ಆಹಾರ ವಸ್ತುಗಳನ್ನೂ ತೊಡುವ ಬಟ್ಟೆಗಳನ್ನೂ ಮತ್ತು ಇತರ ಸಾಮಾನು ಗಳನ್ನೂ ಪರೀಕ್ಷಿಸಬಹುದು. ಅಂದರೆ ಪಟ್ಟಣಗಳಲ್ಲಿ ಅಥವಾ ಪರದೇಶದಲ್ಲಿ ತಯಾರಾದ ಸಾಮಾನುಗಳಿಗೆ ಬದಲಾಗಿ, ಹಳ್ಳಿಯವರು ತಮ್ಮ ಮನೆಗಳಲ್ಲಿ ಅಥವಾ ಹೊಲಗಳಲ್ಲಿ ತಾವು ಸುಲಭವಾಗಿ ಉಪಯೋಗಿಸು ವಂತಹ ಜೆಲೆಬಾಳದ ಸಾಧನಗಳಿಂದ ತಯಾರಿಸಿದ ಪದಾರ್ಥಗಳನ್ನು ಉಪಯೋಗಿಸಬೇಕು. ಈ ಬಗೆಯ ಬದಲಾವಣೆಯು ಮಹತ್ವವಾದ ವಿದ್ಯಾರ್ಜನೆಗೆ ಕಾರಣವಾಗುವುದು. ಈ ರೀತಿಯಲ್ಲಿ ಪ್ರಾರಂಭಿಸಿದರೆ, ಸರಿಯಾದ ತಳಹದಿಯಿಂದ ಮೊದಲುಮಾಡಿದಂತೆಯೇ ಸರಿ. ಮುಂದಿನ ಮೆಟ್ಟಲು ತಾನಾಗಿಯೇ ಅವನಿಗೆ ಕಾಣಿಸಿಕೊಳ್ಳುವುದು. ಉದಾಹರಣೆಗೆ ಹಳ್ಳಿಯಸೇವೆ ಮಾಡಬೇಕೆಂದಿರುವವನು ಇಲ್ಲಿಯವರೆಗೂ ಬೊಂಬಾಯಿ ಕಾರ್ಖಾನೆಯಲ್ಲಿ ತಯಾರಾದ ಹಲ್ಲುಜ್ಜುವ ಬ್ರಷ್ಷನ್ನು ಉಪಯೋಗಿಸು ತ್ತಿದ್ದನೆನ್ನಿ. ಅದರ ಬದಲು ಹಳ್ಳಿಯ ಬ್ರಷ್ಷನ್ನು ಉಪಯೋಗಿಸಬೇಕೆಂದು ಅವನ ಆಸೆ. ಬೇವಿನ ಕಡ್ಡಿಯನ್ನು ಉಪಯೋಗಿಸುವಂತೆ ಅವನಿಗೆ ನಾನು ಬೋಧಿಸುತ್ತೇನೆ. ಅವನಿಗೆ ದುರ್ಬಲವಾದ ಹಲ್ಲುಗಳಿದ್ದರೆ ಅಥವಾ ಹಲ್ಲುಗಳಿಲ್ಲದೆ ಇದ್ದರೆ ಆ ಕಡ್ಡಿಯ ಒಂದು ತುದಿಯನ್ನು ಗಟ್ಟಿಯಾದ ಸ್ಥಳದಲ್ಲಿಟ್ಟು ದುಂಡಾದ ಕಲ್ಲಿನಿಂದ ಅಥವಾ ಸುತ್ತಿಗೆಯಿಂದ ಜಜ್ಜಿಕೊಳ್ಳ ಬೇಕು. ಹಲ್ಲುಜ್ಜಿದನಂತರ ಇನ್ನೊಂದು ತುದಿಯನ್ನು ಚಾಕುವಿನಿಂದ ಸೀಳಿ, ಆ ಎರಡು ಭಾಗಗಳನ್ನೂ ನಾಲಿಗೆ ತಿಕ್ಕುವುದಕ್ಕೆ ಉಪಯೋಗಿಸ ಬೇಕು. ಈ ಬ್ರಷ್ಷುಗಳು ಕಾರ್ಖಾನೆಗಳಲ್ಲಿ ತಯಾರಾದ, ಆರೋಗ್ಯಕ್ಕೆ ವಿರೋಧವಾದ ಬ್ರಷ್ಷುಗಳಿಗಿಂತ ಬಹಳ ಅಗ್ಗವಾಗಿಯೂ ಮತ್ತು ಹೆಚ್ಚು

ಶುದ್ಧವಾಗಿಯೂ ಇರುವುವೆಂದು ಅವನಿಗೆ ಗೊತ್ತಾಗುತ್ತದೆ. ಗಿರಣಿಬಟ್ಟೆಗೆ ಬದಲು ಖಾದಿಯನ್ನೂ, ಗಿರಣಿಯ ಅಕ್ಕಿಗೆ ಬದಲು ಮನೆಯಲ್ಲಿ ಮಾಡಿದ ಮೇಲಿನ ಸಿಪ್ಪೆಯೊಂದಿಗಿರುವ ಅಕ್ಕಿಯನ್ನೂ, ಸಕ್ಕರೆಗೆ ಬದಲು ಬೆಲ್ಲವನ್ನೂ ಉಪಯೋಗಿಸಲು ಅವನು ಮೊದಲುಮಾಡಬೇಕು. ಈ ಪತ್ರಿಕೆಯಲ್ಲಿ ಹಿಂದೆಯೇ ಸೂಚಿಸಿದ್ದ ಈ ಪದಾರ್ಥಗಳನ್ನೇ ಉದಾಹರಣೆಗೋಸ್ಕರ ತಿಳಿಸಿದ್ದೇನೆ. ಈ ಪದಾರ್ಥಗಳ ವಿಷಯದಲ್ಲಿ ಕಷ್ಟ ಸೂಚಿಸಿರುವವರಿಗೆ ಪುನಃ ಆ ವಿಷಯ ತಿಳಿಸುವುದಕ್ಕೋಸ್ಕರ ಈ ಉದಾಹರಣೆಗಳನ್ನೇ ಇಲ್ಲಿ ತೆಗೆದುಕೊಂಡಿದ್ದೇನೆ. ಅಕ್ಕಿಯ ವಿಷಯದಲ್ಲಿ ಕೆಲವರು, ಕೈಯ್ಯಲ್ಲಿ ಮಾಡಿದ ಮೇಲಿನ ಸಿಪ್ಪೆಯುಳ್ಳ ಅಕ್ಕಿಯು ಗಿರಣಿಯ ಅಕ್ಕಿಗಿಂತ ಬಹಳ ತಗ್ಗಿ ಎಂದೂ, ಇನ್ನು ಕೆಲವರು ಕೈಯ್ಯಲ್ಲಿ ಅಕ್ಕಿ ತಯಾರಿಸುವ ಅಭ್ಯಾಸ ಮರೆತು ಹೋಗಿದೆ, ಈರೀತಿ ಅಕ್ಕಿಮಾಡುವ ಕೆಲಸಗಾರರೇ ಸಿಕ್ಕುವುದಿಲ್ಲ ಎಂದೂ ಹೇಳುತ್ತಾರೆ. ಆದರೆ ಮತ್ತೆ ಕೆಲವರು ನಮ್ಮ ಕಡೆ ಗಿರಣಿಯ ಅಕ್ಕಿ ಸಿಕ್ಕುವುದೇ ಇಲ್ಲ. ರೂಪಾಯಿಗೆ 19 ಸೇರಿನಂತೆ ಕೈಯ್ಯಲ್ಲಿ ಮಾಡಿದ ಹೊಟ್ಟಿನಿಂದಿರುವ ಅಕ್ಕಿಯನ್ನು ನಾವು ತರಿಸಿಕೊಡಲು ಸಿದ್ಧರಾಗಿದ್ದೇವೆ ಎಂದು ಹೇಳುತ್ತಾರೆ. ಇವುಗಳಲ್ಲಿ ಎಲ್ಲರ ಮಾತೂ ಸರಿ ಮತ್ತು ಎಲ್ಲರ ಮಾತೂ ತಪ್ಪು ಎಂದು ಹೇಳಬಹುದು. ತಮ್ಮ ಜಿಲ್ಲೆಯಲ್ಲಿ ತಾವು ಅನುಭವ ಪಡೆದಿರುವಷ್ಟು ಮಟ್ಟಿಗೆ ಮಾತ್ರ ಪ್ರತಿಯೊಬ್ಬರ ಮಾತೂ ಸರಿ. ನಿಜವಾದ ಸತ್ಯವು ಇವರೊಬ್ಬರಿಗೂ ಗೊತ್ತಿಲ್ಲದೆ ಇರುವುದರಿಂದ ಎಲ್ಲರ ಮಾತೂ ತಪ್ಪು. ನಾನು ಪ್ರತಿದಿನವೂ ಆಶ್ಚರ್ಯವಾದ ಅನುಭವಗಳನ್ನು ಕೂಡಿಸುತ್ತಿದ್ದೇನೆ. ತಮ್ಮಿಂದ ಪ್ರಾರಂಭಮಾಡಿಕೊಂಡರೆ ಈ ಅನುಭವಗಳನ್ನೆಲ್ಲ ಹೊಂದಲು ಸಾಧ್ಯವಾಗುತ್ತದೆ. ಇಲ್ಲಿಯವರೆಗೂ ನಾನು ನೋಡಿರುವ ಪರಿಶ್ರಮಗಳ ಫಲಿತಾಂಶಗಳು ಈರೀತಿ ಇವೆ.

ಮೇಲಿನ ತವಡಿನೊಡಗೂಡಿ ಬೆಳ್ಳಗೆ ಮಾಡದಿರುವ ಅಕ್ಕಿಯು ಪೇಟೆಗಳಲ್ಲಿ ಸಿಕ್ಕುವುದಿಲ್ಲ. ಅದು ಪುಷ್ಟಿಕರವಾಗಿಯೂ ಕಣ್ಣಿಗೆ ಅಂದ

ವಾಗಿಯೂ ನಾಲಿಗೆಗೆ ರುಚಿಯಾಗಿಯೂ ಇರುತ್ತದೆ. ಮಿಲ್ಲಿನ ಅಕ್ಕಿಯು ಕೈಯಲ್ಲಿ ಕುಟ್ಟಿದ ಅಕ್ಕಿಗೆ ಯಾವಾಗಲೂ ಸಮ ಬರಲಾರದು. ಸುಲಭವಾಗಿ ಬತ್ತದ ಸಿಪ್ಪೆಯನ್ನು ಸುಲಿಯಬಹುದು. ಹಗುರವಾದ ಒಂದು ಚಕ್ಕಿಯಿಂದ ಕಷ್ಟವಿಲ್ಲದೆ ಹೆಚ್ಚುಭಾಗ ಭತ್ತದ ಸಿಪ್ಪೆಯನ್ನು ಸುಲಿಯಬಹುದು. ಕೆಲವು ಜಾತಿಯ ಭತ್ತಗಳು ಸುಲಭವಾಗಿ ಸಿಪ್ಪೆಗಳನ್ನು ಬಿಟ್ಟುಕೊಡುವುದಿಲ್ಲ. ಈ ಜಾತಿಯ ಭತ್ತವನ್ನು ಸುಲಿಯಬೇಕಾದರೆ ಅದನ್ನು ಬೇಯಿಸಿ ಅನಂತರ ಹೊಟ್ಟು ಕಾಳುಗಳನ್ನು ಬೇರೆ ಮಾಡಬಹುದು. ಈ ಅಕ್ಕಿಯು ಮಿಕ್ಕ ರೀತಿಯಲ್ಲಿ ತಯಾರಾದ ಅಕ್ಕಿಗಳಿಗಿಂತಲೂ ಹೆಚ್ಚು ಪುಷ್ಟಿಯಾದುದೆಂದು ಗೊತ್ತಾಗಿದೆ. ಸಹಜವಾಗಿಯೂ ಇಂಥ ಅಕ್ಕಿಯು ಎಲ್ಲ ಅಕ್ಕಿಗಳಿಗಿಂತಲೂ ಅಗ್ಗವಾಗಿರಬೇಕು. ಹಳ್ಳಿಗಳಲ್ಲಿ ತಮ್ಮ ತಮ್ಮ ಅಕ್ಕಿಯನ್ನು ಅಲ್ಲಿಯವರೇ ತಯಾರಿಸಿಕೊಂಡರೆ ಅದು ಮೇಲಿನ ಸಿಪ್ಪೆಯಿಂದ ಕೂಡಿರಲಿ ಇಲ್ಲದಿರಲಿ ಗಿರಣಿಯಲ್ಲಿ ಮಾಡಿದ ಅಕ್ಕಿಗಿಂತ ಅಗ್ಗವಾಗಿರುತ್ತದೆ. ಗಿರಣಿಯಲ್ಲಿ ಮಾಡಿರಲಿ ಅಥವಾ ಕೈಯ್ಯಲ್ಲಿ ಮಾಡಿರಲಿ, ಪೇಟೆಗಳಲ್ಲಿ ಸಾಧಾರಣವಾಗಿ ಮಾರುವ ಬಹುಭಾಗ ಅಕ್ಕಿಯು ಸ್ವಲ್ಪ ಹೆಚ್ಚು ಕಡಿಮೆ ಮೇಲಿನ ಹೊಟ್ಟಿಲ್ಲದೆ ಇರುತ್ತದೆ. ಪೂರ್ಣವಾಗಿ ಹೊಟ್ಟಿನಿಂದಿರುವ ಅಕ್ಕಿಯು ಕೈಯ್ಯಿಂದ ತಯಾರಾಗಬೇಕು. ಗಿರಣಿಯಲ್ಲಿ ತಯಾರಾದ ಅದೇ ಜಾತಿಯ ಅಕ್ಕಿಗಿಂತ ಈ ಅಕ್ಕಿಯು ಅಗ್ಗವಾಗಿರುತ್ತದೆ.

ಇಲ್ಲಿಯವರೆಗೂ ನಡೆದಿರುವ ಶೋಧನೆಗಳಿಂದ ತಿಳಿಯುವುದೇನೆಂದರೆ, ಅನ್ನ ಊಟಮಾಡುವ ಲಕ್ಷಾಂತರ ಜನರು ನಮ್ಮ ಉದಾಸೀನದಿಂದ ಸತ್ವಹೀನವಾದ ಅಕ್ಕಿಯನ್ನು ಉಪಯೋಗಿಸುತ್ತಾರೆ. ಅದನ್ನು ಕೊಳ್ಳುವುದಕ್ಕೆ ಹೆಚ್ಚು ಬೆಲೆ ಕೊಡುತ್ತಾರೆ. ಈ ಶೋಧನೆಗಳ ನಿಜಾಂಶವನ್ನು ಗ್ರಾಮಸೇವಕನು ಪರೀಕ್ಷಿಸಲಿ. ಅದೇನೂ ಅಲ್ಪವಾದ ಪ್ರಾರಂಭವಾಗುವುದಿಲ್ಲ.

ಮುಂದಿನವಾರ ಬೆಲ್ಲ ಮತ್ತು ಇತರ ಆಹಾರಪದಾರ್ಥಗಳು ಮತ್ತು ಗ್ರಾಮಸೇವೆಯ ಇನ್ನೊಂದು ಭಾಗದ ಮೇಲೆ ಬರೆಯುತ್ತೇನೆ.
25-1-1935.

II

ಹೋದವಾರ ನಾನು ಅಕ್ಕಿಯ ವಿಷಯ ಚರ್ಚಿಸಿದೆ. ಈಗ ಗೋಧಿಯನ್ನು ತೆಗೆದುಕೊಳ್ಳೋಣ. ಇದು ಎರಡನೆಯ ಮುಖ್ಯವಾದ—ಮೊದಲನೆಯದಲ್ಲದಿದ್ದರೆ—ಆಹಾರ ಸಾಮಗ್ರಿಯಾಗಿದೆ. ಪುಷ್ಟಿಯಾದ ಆಹಾರದ ದೃಷ್ಟಿಯಿಂದ ಇದು ಧಾನ್ಯಗಳಲ್ಲಿ ರಾಜನಂತಿದೆ. ಅಕ್ಕಿಗಿಂತಲೂ ಇದು ಚೆನ್ನಾದ ಪದಾರ್ಥವೂ ಹೌದು. ಹೊಟ್ಟನಿಂದ ಕೂಡಿಲ್ಲದ ಗೋಧಿಯ ಹಿಟ್ಟು ಬೆಳ್ಳಗೆ ಮಾಡಿದ ಮೇಲಿನ ಹೊದಿಕೆಯೊಂದಿಗಿಲ್ಲದ ಅಕ್ಕಿಯಂತೆ. ಹೊಟ್ಟನಿಂದ ಕೂಡಿಲ್ಲದ ಹಿಟ್ಟು ಹೊದಿಕೆಯೊಂದಿಗಿಲ್ಲದ ಅಕ್ಕಿಯಷ್ಟೇ ಅಪಾಯಕರವಾದುದೆಂದು ಎಲ್ಲಾ ವೈದ್ಯರೂ ಅಭಿಪ್ರಾಯ ಪಟ್ಟಿದ್ದಾರೆ. ಪೇಟೆಗಳಲ್ಲಿ ಸಿಕ್ಕುವ ಕಣ್ಣಿಗೆ ಚೆನ್ನಾಗಿ ಕಾಣುವ ಹಿಟ್ಟಿಗಿಂತಲೂ ಮನೆಯಲ್ಲಿ ಕಲ್ಲಿನಿಂದ ಬೀಸಿದ ಹೊಟ್ಟನೊಂದಿಗಿರುವ ಗೋಧಿಯ ಹಿಟ್ಟು ಉತ್ತಮವಾದುದು ಮತ್ತು ಆ ಹಿಟ್ಟು ಅಗ್ಗವೂ ಹೌದು. ಬೀಸುವುದಕ್ಕೆ ಕೊಡುವ ಕೂಲಿಯು ಮಿಗುವುದರಿಂದ ಅದು ಅಗ್ಗವಾಗಿರುತ್ತದೆ. ಪೂರ್ಣವಾದ ಗೋಧಿಯ ಹಿಟ್ಟು ತೂಕದಲ್ಲಿ ಕಡಿಮೆಯಾಗುವುದಿಲ್ಲ. ಆದರೆ ಪೇಟೆಯಲ್ಲಿ ಮಾರುವ ಕಣ್ಣಿಗೆ ಅಂದವಾಗಿ ಕಾಣುವ ಹಿಟ್ಟು ತೂಕದಲ್ಲಿ ಕಡಿಮೆಯಾಗಿರುತ್ತದೆ. ಹೆಚ್ಚು ಪುಷ್ಟಿಕರವಾದ ಸಾರವೆಲ್ಲ ಗೋಧಿಯ ಹೊಟ್ಟನಲ್ಲಿ ಇದೆ. ಗೋಧಿಯಿಂದ ಹೊಟ್ಟನ್ನು ಬೇರೆಮಾಡಿಬಿಟ್ಟರೆ ಆಹಾರದ ಪುಷ್ಟಿಕರವಾದ ಭಾಗದಲ್ಲಿ ಬಹಳ ನಷ್ಟವಾಗುತ್ತದೆ. ಚಕ್ಕಿಗಳಲ್ಲಿ ಹೊಟ್ಟನೊಂದಿಗಿರುವ ಗೋಧಿಯನ್ನು ಬೀಸಿ, ಹೊಟ್ಟನೊಂದಿಗಿರುವ ಹಿಟ್ಟನ್ನು ಉಪಯೋಗಿಸುವ ಹಳ್ಳಿಯವರು ಹಣವನ್ನೂ ಮತ್ತು ಅದಕ್ಕಿಂತ ಮುಖ್ಯವಾದ ಆರೋಗ್ಯವನ್ನೂ ಉಳಿಸಿಕೊ

ಳ್ಳುತ್ತಾರೆ. ಈ ಬೀಸುವ ಕೆಲಸವು ಹಳ್ಳಿಗಳಲ್ಲಿ ಪುನಃ ಅಭ್ಯಾಸಕ್ಕೆಬಂದರೆ ಹಿಟ್ಟು ಬೀಸುವ ಗಿರಣಿಗಳಿಗೆ ಹೋಗುತ್ತಿರುವ ಲಕ್ಷಾಂತರ ರೂಪಾಯಿಗಳ ಹೆಚ್ಚು ಭಾಗವು ನಮ್ಮಲ್ಲೇ ಉಳಿದು, ಹಳ್ಳಿಗಳ ಯೋಗ್ಯರಾದ ಬಡ ಬಗ್ಗರಲ್ಲಿ ಆ ಹಣವು ಚಲಾವಣೆಯಾಗುತ್ತದೆ.

ಕಲ್ಲಿನಿಂದ ಬೀಸುವುದು ಬಹಳ ಪ್ರಯಾಸವಾದ ಕೆಲಸವೆಂದೂ, ಪದೇ ಪದೇ ಗೋಧಿಯ ಹಿಟ್ಟು ಹೆಚ್ಚು ಕಡಿಮೆಯಾಗಿಯೂ ಸಣ್ಣದಪ್ಪ ನಾಗಿಯೂ ಬೀಳುತ್ತದೆಂದೂ ಗೋಧಿಯನ್ನು ತಾವೇ ಬೀಸಿಕೊಳ್ಳುವು ದರಿಂದ ಹಳ್ಳಿಯವರಿಗೆ ಏನೂ ಗೀಟುವು (ಲಾಭಸಿಗುವು) ದಿಲ್ಲವೆಂಪೂ ಇದರ ಮೇಲೆ ಆಕ್ಷೇಪಣೆಗಳು ಬಂದಿವೆ. ಪೂರ್ವಕಾಲದಲ್ಲಿ ಹಳ್ಳಿಯವರು ತಾವೇ ಬೀಸಿಕೊಳ್ಳುತ್ತಿದ್ದುದರಿಂದ ಲಾಭವಾಗುತ್ತಿದ್ದರೆ, ಹಿಟ್ಟುಮಾಡುವ ಗಿರಣಿಗಳು ಪ್ರಾರಂಭವಾದ ಮಾತ್ರಕ್ಕೆ ಈ ಮಾತಿನಲ್ಲಿ ಯಾವ ವ್ಯತ್ಯಾ ಸವೂ ಆಗಬೇಕಾಗಿಲ್ಲ. ಪುರಸತ್ತಿಲ್ಲವೆಂದು ಹಳ್ಳಿಯವರು ಸಬೂಬು ಹೇಳುವಂತಿಲ್ಲ. ಈ ಕೆಲಸ ಮಾಡುವಾಗ ಬುದ್ಧಿಯನ್ನು ಉಪಯೋಗಿಸಿದರೆ ಬೀಸುವ ಕಲ್ಲಿನ ಅಭಿವೃದ್ಧಿಗೆ ಎಲ್ಲಾ ಆಶಾದಾಯಕವಾದ ಸೂಚನೆಗಳೂ ತೋರಿಬರುತ್ತವೆ. ಸಮನಾಗಿ ಕಲ್ಲಿನಿಂದ ಬೀಸುವುದಕ್ಕಾಗುವುದಿಲ್ಲ ಎಂಬ ವಾದವು ಬೆಲೆಯಾದುದಲ್ಲ. ಏಕೆಂದರೆ ಕಲ್ಲು ಬೀಸುವುದಕ್ಕೆ ಅನು ಕೂಲವಾದ ಸಾಧನವಾಗದಿದ್ದರೆ, ಬಹಳ ಹಿಂದಿನ ಕಾಲದಿಂದ ಅದನ್ನು ಜನರು ಉಪಯೋಗಿಸುತ್ತಿರಲಿಲ್ಲ. ಆದರೂ ಸರಿಯಾಗಿ ಬೀಸಿಲ್ಲದ ಹಿಟ್ಟನ್ನು ಉಪಯೋಗಿಸುವುದರಿಂದ ಆಗುವ ಅಪಾಯವನ್ನು ತಪ್ಪಿಸಲು ನಾನು ಈ ಮಾರ್ಗವನ್ನು ಸೂಚಿಸುತ್ತೇನೆ. ಆ ರೀತಿ ಅನುಮಾನ ಬಂದಾಗ ಸರಿಯಾಗಿ ಬೀಸಿಲ್ಲದ ಹಿಟ್ಟನ್ನು ಜರಡಿಮಾಡಿ, ಸರಿಯಾದ ಹಿಟ್ಟನ್ನು ಉಪಯೋಗಿಸಬಹುದು. ಜರಡಿಯಲ್ಲಿ ಉಳಿಯುವ ದಪ್ಪ ಹಿಟ್ಟನ್ನು ಗಟ್ಟಿಯಾಗಿ ಗಂಜಿ ಮಾಡಿಕೊಂಡು ಚಪಾತಿಯೊಂದಿಗೋ ಅಥವಾ ಚಪಾತಿಯನ್ನು ತಿಂದನಂತರವೋ ಉಪಯೋಗಿಸಬಹುದು. ಈ

ಮಾರ್ಗವನ್ನು ಅನುಸರಿಸಿದರೆ ಕೆಲಸವು ಬಹಳ ಸುಲಭವಾಗುವುದು ಮತ್ತು ಹೆಚ್ಚು ಕೆಲಸವನ್ನೂ ಕಾಲವನ್ನೂ ಉಳಿತಾಯ ಮಾಡಿಕೊಂಡಂತಾಗುವುದು.

ಈ ಬದಲಾವಣೆಗಳನ್ನೆಲ್ಲ ಕಾರ್ಯರಂಗಕ್ಕಿಳಿಸಬೇಕಾದರೆ ಈ ವಿಷಯದಲ್ಲಿ (ಹಳ್ಳಿಯವರು) ಸರಿಯಾದ ತಿಳಿವಳಿಕೆ ಪಡೆಯಬೇಕು. ಗ್ರಾಮಸೇವಕರು ಮೊದಲು ತಮ್ಮ ಕಾರ್ಯಕ್ರಮವನ್ನು ಸಿದ್ಧಮಾಡಿ ಇಟ್ಟುಕೊಂಡಿರಬೇಕು. ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಮಾಡಬೇಕಾದ ಕೆಲಸವಿದು. ಹಳ್ಳಿಯವರು ಸರಸವಾಗಿ ಸುಖವಾಗಿ ಆರೋಗ್ಯದಿಂದ ಜೀವಿಸಲು ಈ ಕೆಲಸವನ್ನು ಅಗತ್ಯವಾಗಿ ಮಾಡಬೇಕಾಗಿದೆ.

ಬೆಲ್ಲದ ಉಪಯೋಗಕ್ಕೆ ಗಮನ ಕೊಡುವುದು ನಮ್ಮ ಎರಡನೆಯ ಕೆಲಸ. ಈ ಪುಟಗಳಲ್ಲಿ ನಾನು ಹಿಂದೆಯೇ ತಿಳಿಸಿರುವಂತೆ ವೈದ್ಯರ ಅಭಿಪ್ರಾಯದಲ್ಲಿ ಬೆಲ್ಲವು ಯಾವಾಗಲೂ ನಾಜೋಕಾದ ಸಕ್ಕರೆಗಿಂತ ಹೆಚ್ಚು ಸತ್ವವಾಗಿರುವ ಪದಾರ್ಥವೆಂದು ಗೊತ್ತಾಗಿದೆ. ಹಳ್ಳಿಯವರು ಬೆಲ್ಲ ತಯಾರಿಸುವುದನ್ನು, ಈಗಾಗಲೇ ನಮಗೆ ಕಾಣುತ್ತಿರುವಂತೆ, ತ್ಯಜಿಸಿದರೆ ಅವರ ಮನೆಯ ಮಕ್ಕಳಿಗೆ ಆಹಾರದಲ್ಲಿ ಪುಷ್ಟಿಕರವಾದ ಒಂದು ಪದಾರ್ಥವು ಇಲ್ಲದೆಹೋಗುತ್ತದೆ. ಹಳ್ಳಿಯವರು ಪ್ರಾಯಶಃ ಬೆಲ್ಲವಿಲ್ಲದೆ ಜೀವಿಸಬಹುದು, ಆದರೆ ಅವರ ಮಕ್ಕಳು ಬೆಲ್ಲ ಉಪಯೋಗಿಸದೆ ಇದ್ದರೆ ಅವರ ಬೆಳವಣಿಗೆಗೆ ತೊಂದರೆಯಾಗುತ್ತದೆ. ಪೇಟೆಗಳಲ್ಲಿ ಸಿಗುವ ಸಿಹಿತಿಂಡಿಗಳಿಗಿಂತಲೂ ಮತ್ತು ಸಕ್ಕರೆಗಿಂತಲೂ ಬೆಲ್ಲ ಉತ್ತಮವಾದ ಪದಾರ್ಥ. ಬೆಲ್ಲವನ್ನು ತಯಾರಿಸಿ ಅದನ್ನು ನಿತ್ಯಜೀವನದಲ್ಲಿ ಉಪಯೋಗಿಸಿದರೆ ಹಳ್ಳಿಯವರು ಕೋಟ್ಯಂತರ ರೂಪಾಯಿಗಳನ್ನು ತಮ್ಮಲ್ಲೇ ಉಳಿಸಿಕೊಳ್ಳಬಹುದು.

ಬೆಲ್ಲ ತಯಾರಿಸುವುದಕ್ಕೆ ಖರ್ಚಾಗುವ ಹಣವು ಬೆಲ್ಲ ಮಾರುವುದರಿಂದ ಸಿಕ್ಕುವುದಿಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ತಮ್ಮ ಜೆಳೆ

ಇನ್ನೂ ಹಾಗೆಯೇ ನಿಂತಿರುವಾಗಲೇ ಹಣ ಅಪೇಕ್ಷಿಸುವ ರೈತರು ಕಬ್ಬನ್ನು ಬೆಲ್ಲ ಮಾಡಿ ಮಾರುವವರೆಗೂ ಕಾಯಲು ಸಾಧ್ಯವಿಲ್ಲವೆಂದು ಅವರ ವಾದ. ಇದಕ್ಕೆ ವಿರುದ್ಧವಾದ ಎಷ್ಟೋ ಅಭಿಪ್ರಾಯಗಳು ನನಗೆ ತಿಳಿದುಬಂದಿದ್ದರೂ ಮೇಲಿನ ಮಾತಿನಲ್ಲಿ ನಿಜವಿಲ್ಲದೆ ಇಲ್ಲ. ಅದಕ್ಕೆ ಸರಿಯಾದ ಸಿದ್ಧಮಾಡಿಕೊಂಡ ಉತ್ತರವನ್ನು ನಾನು ಕೊಡಲಾರೆ. ಉಪಯೋಗಕ್ಕೆ ಬೇಕಾದ ಒಂದು ಪದಾರ್ಥವನ್ನು ಕಚ್ಚಾ ಪದಾರ್ಥವು ಸಿಕ್ಕುವ ಸ್ಥಳದಲ್ಲೇ ತಯಾರಿಸಿದರೆ, ತಯಾರಾಗುವ ಕೂಲಿಯು ಸಿಕ್ಕುವು ದಿಲ್ಲವೆಂದರೆ ಆ ವ್ಯವಸ್ಥೆಯಲ್ಲಿ ಮೂಲರೂಪವಾದ ಏನೋ ತಪ್ಪು ಇದ್ದೇ ಇರಬೇಕು. ಈ ವಿಷಯವನ್ನು, ಆ ಸ್ಥಳದ ಸುತ್ತಮುತ್ತಲ ಪರಿಸ್ಥಿತಿಯ ನ್ನನುಸರಿಸಿ, ಕೂಲಂಕಷವಾಗಿ ವಿಚಾರಮಾಡಬೇಕು. ಹಳ್ಳಿಯವರು ಹೇಳುವ ಮಾತುಗಳನ್ನು ಕೇಳಿಕೊಂಡು ಅಲ್ಲಿ ಕೆಲಸಮಾಡುವ ಸೇವಕರು ನಿರಾಶೆಹೊಂದಬಾರದು. ರಾಷ್ಟ್ರೀಯ ಬೆಳೆವಣಿಗೆಯೂ ಮತ್ತು ಹಳ್ಳಿ ಪಟ್ಟಣಗಳ ಒಂದುಗೂಡಿದ ಒಗ್ಗಟ್ಟೂ ಬೆಲ್ಲದಂತಹ ತೊಂದರೆಕೊಡುವ ಒಗಟು ಪ್ರಶ್ನೆಗಳ ವಿಮರ್ಶೆಯನ್ನೇ ಅವಲಂಬಿಸಿದೆ. ಪಟ್ಟಣಗಳಲ್ಲಿ ವಾಸಿಸುವ ಜನರು ಒಂದು ಕಾಸು ಹೆಚ್ಚಾಗಿ ಕೊಟ್ಟರೂ ಚಿಂತೆಯಿಲ್ಲ, ಬೆಲ್ಲದಂತಹ ಉಪಯೋಗ ವಸ್ತುವು ಹಳ್ಳಿಗಳಿಂದ ಮಾಯವಾಗದಂತೆ ಉಳಿಯಲು ನಾವೆಲ್ಲ ಮನಸ್ಸುಮಾಡಬೇಕು. 1-2-1935.

III

ನಾನು ಕೆಲವು ಮುಖ್ಯವಾದ ಆಹಾರ ಪದಾರ್ಥಗಳ ವಿಷಯ ಮೇಲೆ ತಿಳಿಸಿದ್ದೇನೆ. ಹಳ್ಳಿಯವರ ಆರೋಗ್ಯ ಮತ್ತು ಐಶ್ವರ್ಯದ ದೃಷ್ಟಿಯಿಂದ ಅವು ಎಷ್ಟು ಮುಖ್ಯವಾದುವೆಂದೂ ತೋರಿಸಿದ್ದೇನೆ. ನೈರ್ಮಲ್ಯ ಮತ್ತು ಆರೋಗ್ಯಶಾಸ್ತ್ರವು ಇವುಗಳಷ್ಟೇ ಮುಖ್ಯವಾಗಿದೆ. ಈ ವಿಷಯಗಳಿಗೆ ಸರಿಯಾದ ಗಮನಕೊಡುವುದೆಂದರೆ ಆರೋಗ್ಯ ದೇಹಶಕ್ತಿ ಮತ್ತು ಐಶ್ವರ್ಯಗಳನ್ನು ಹೆಚ್ಚಿಸಿಕೊಂಡಂತೆಯೇ.

ಪ್ರಪಂಚದಲ್ಲಿ ಭಾರತವು ವ್ಯಕ್ತಿಗಳಿಗೆ ಮಾತ್ರ ಸಂಬಂಧಿಸಿದ ವಿಷಯಗಳಲ್ಲಿ ಶುಚಿಯಾಗಿರುವುದರಲ್ಲಿ ಮೊದಲನೆಯ ಸ್ಥಾನಪಡೆದಿದೆ ಯೆಂದು ಅನೇಕ ಜನ ಪರದೇಶದವರು ಪರೀಕ್ಷಿಸಿ ಅಭಿಪ್ರಾಯವನ್ನು ಸೂಚಿಸಿದ್ದಾರೆ. ನೈರ್ಮಲ್ಯ ಅಥವಾ ಹಳ್ಳಿಗಳಿಗೆ ಸಂಬಂಧಪಟ್ಟ ನೈರ್ಮ ಲ್ಯದ ವಿಷಯದಲ್ಲಿ ಇದೇ ಅಭಿಪ್ರಾಯವನ್ನು ಸೂಚಿಸಲು ಅಸಾಧ್ಯವೆಂದು ನನಗೆ ತೋರುತ್ತದೆ. ಬೇರೆ ಮಾತಿನಲ್ಲಿ ಹೇಳಬೇಕಾದರೆ ನಮ್ಮ ಮನೆಯ ನೈರ್ಮಲ್ಯದ ಮಟ್ಟ ಬಿಟ್ಟು ನಾವು ಮುಂದೆ ಬಹಳ ದೂರ ಹೋಗಿಲ್ಲ. ನಮ್ಮ ಹಳ್ಳಿಗಳು—ಅಥವಾ ಅದೇ ನಮ್ಮ ಜನಾಂಗವೆಂದು ನಾವು ಹೇಳಬಹುದು—ಅದನ್ನು ಕೂಡ ಮರೆತು ಮನೆಯ ನೈರ್ಮಲ್ಯ ವನ್ನು ಉಳಿಸಿಕೊಳ್ಳಲು ನಾವು ಯಾವ ತ್ಯಾಗಮಾಡಲೂ ಕೂಡ ಸಿದ್ಧ ರಾಗುತ್ತೇವೆ.

ಸಂಸಾರದಲ್ಲಿರುವ ಪ್ರತಿಯೊಬ್ಬನೂ ತನ್ನ ಮನೆಯನ್ನು ಶುದ್ಧವಾಗಿ ಇಟ್ಟುಕೊಳ್ಳುತ್ತಾನೆ. ಆದರೆ ತನ್ನ ಮನೆಯ ಅಕ್ಕಪಕ್ಕದ ನೈರ್ಮಲ್ಯಕ್ಕೆ ಅವನು ಗಮನಕೊಡುವುದಿಲ್ಲ. ಹಳ್ಳಿಯವರು ತಮ್ಮ ಮನೆಯ ಅಂಗಳ ವನ್ನು ಕೊಳೆ, ಕ್ರಿಮಿ, ಹಾವುಹಲ್ಲಿಗಳಿಲ್ಲದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ. ಆದರೆ ಅವುಗಳನ್ನೆಲ್ಲ ಪಕ್ಕದ ಮನೆಯ ಅಂಗಳಕ್ಕೆ ದೂಡಲು (ಸರಿಸಲು) ಅವರು ಹಿಂದುಮುಂದು ನೋಡುವುದಿಲ್ಲ. ನಮ್ಮ ಜನರಲ್ಲಿ ಸಂಘ ಜವಾಬ್ದಾರಿಯು ಪದ್ಧತಿಯಲ್ಲಿ ಇಲ್ಲದಿರುವುದರಿಂದ ನಮ್ಮ ಹಳ್ಳಿಗಳೆಲ್ಲ ಗೊಬ್ಬರದ ಗುಂಡಿಗಳಾಗಿವೆ. ನಮ್ಮ ದೇಶದ ಜನರು ಬರಿಯ ಕಾಲಿನಲ್ಲೇ ನಡೆಯುವ ಅಭ್ಯಾಸವಿರುವವರಾದರೂ, ನಾವು ರಸ್ತೆಗಳನ್ನೂ ಬೀದಿಗಳನ್ನೂ ಕೊಳೆಯಿಂದ ತುಂಬಿ, ಸೂಕ್ಷ್ಮಸ್ವಭಾವದ ಯಾವ ಮನು ಷ್ಯನಿಗಾಗಲೀ ಬರಿಗಾಲಿನಲ್ಲಿ ನಡೆಯುವುದು ಅಸಹ್ಯವಾಗುವಂತೆ ಮಾಡು ತ್ತೇವೆ. ಹಳ್ಳಿಯ ಬಾವಿ ಕೆರೆ ಹೊಳೆಗಳಲ್ಲಿ ಶುದ್ಧವಾದ ನೀರು ಸಹಿತ ಕುಡಿಯುವುದಕ್ಕೆ ಸಿಕ್ಕುವುದಿಲ್ಲ. ಹಳ್ಳಿಯು ಹತ್ತಿರವಾದಂತೆಲ್ಲ ಯಾರಾ ದರೂ ಗೊಬ್ಬರ ಮತ್ತು ಹೊಲಸು ಗುಡ್ಡೆ ಹಾಕಿರುವುದನ್ನು ಕಾಣಬಹುದು.

ಗ್ರಾಮನೈರ್ಮಲ್ಯವು ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಮುಂದೆ ಇರುವ ಬಹಳ ಕಷ್ಟವಾಗಿರುವ ಕೆಲಸ. ಯಾವ ಸರ್ಕಾರವೂ ಹಳ್ಳಿಯವರ ಪೂರ್ಣ ಸಹಕಾರವಿಲ್ಲದೆ ಅವರ ಯಾವ ಅಭ್ಯಾಸಗಳನ್ನೂ ಬಿಡಿಸುವುದಕ್ಕಾಗುವುದಿಲ್ಲ. ಹಳ್ಳಿಯವರ ಪೂರ್ಣ ಸಹಕಾರವು ದೊರೆತಲ್ಲಿ ಸರ್ಕಾರದವರು ಈ ಕಾರ್ಯಕ್ರಮದಲ್ಲಿ ಹೆಚ್ಚಿಗೆ ಶ್ರಮಪಡಬೇಕಾಗಿಲ್ಲ.

ಬುದ್ಧಿವಂತರೆನ್ನಿಸಿಕೊಂಡಿರುವ ವೈದ್ಯವರ್ಗದವರೂ ಮತ್ತು ವಿದ್ಯಾರ್ಥಿಗಳೂ ಜಾಣತನದಿಂದಲೂ ಮನಃಪೂರ್ತಿಯಾದ ಉತ್ಸಾಹ ದಿಂದಲೂ ಹಳ್ಳಿಗಳಲ್ಲಿ ಈ ಕೆಲಸವನ್ನು ಪ್ರತಿದಿನವೂ ತಾವೇ ಮಾಡಿದರೆ, ಈ ಕಾರ್ಯವನ್ನು ಜಯಪ್ರದವಾಗಿ ನಡೆಸಬಹುದು. ತನ್ನ ಮತ್ತು ತಾನು ವಾಸಿಸುವ ಹಳ್ಳಿಯ ನೈರ್ಮಲ್ಯ ರಕ್ಷಣೆಯೇ ಸರಿಯಾದ ವಿದ್ಯಾಭ್ಯಾಸದ ತಳಹದಿ.

ಬಾವಿ ಕಟ್ಟೆಗಳನ್ನು ಶೋಧಿಸುವುದು ಮತ್ತು ಅವುಗಳನ್ನು ಶುಚಿ ಯಾಗಿಡುವುದು, ಗೊಬ್ಬರದ ಗುಂಡಿಗಳಿಲ್ಲದಂತೆ ಮಾಡುವುದು ಈ ಕೆಲಸ ಗಳಿಗೆ ನಾವು ಲಕ್ಷ್ಯಕೊಡಬೇಕು. ಗ್ರಾಮಸೇವಕರು ಕೆಲಸವನ್ನು ತಾವೇ ಮೊದಲು ಪ್ರಾರಂಭಮಾಡಬೇಕು. ಕೂಲಿ ತೆಗೆದುಕೊಳ್ಳುವ ಭಂಗಿಗಳಂತೆ ಪ್ರತಿದಿನವೂ ಕೆಲಸಮಾಡುತ್ತ ಹಳ್ಳಿಯವರೊಂದಿಗೆ ತಾವೂ ಈ ಕೆಲಸದಲ್ಲಿ ಸೇರಿಕೊಂಡು, ಮುಂದೆ ಹೊರಗಿನವರ ಸಹಾಯ ವಿಲ್ಲದೆ ಕೆಲಸಮಾಡಿಕೊಂಡು ಹೋಗುವ ಶಕ್ತಿ ಸಂಪಾದಿಸಬೇಕೆಂದು ಅವರಿಗೆ ತಿಳಿಸಬೇಕು. ಹೀಗೆ ಮಾಡಿದರೆ ಹಳ್ಳಿಯವರು ಜಾಗ್ರತೆಯಾ ಗಿಯೋ ಇಲ್ಲ ತಡವಾಗಿಯೋ ಅಂತೂ ಇವರ ಜೊತೆಯಲ್ಲಿ ಸಹಕರಿಸು ವುದು ಖಂಡಿತ. ದಕ್ಷಿಣ ಆಫ್ರಿಕ ಮತ್ತು ಚಂಪಾರಣ್ಯದಲ್ಲಿ ನನಗೆ ಈ ರೀತಿಯ ಅನುಭವವಾಯಿತು. ಕಾಲನಡೆಯಲ್ಲಿ ಒರಿಸ್ಸಾ ಪ್ರವಾಸ ಮಾಡಿ ದಾಗಲೂ ಇದೇ ರೀತಿ ಅನುಭವವಾಯಿತು.

ರಸ್ತೆಗಳನ್ನೂ ಮತ್ತು ಓಣಿಗಳನ್ನೂ ಯಾವ ಕೊಳೆಯೂ ಇಲ್ಲದಂತೆ ನಿರ್ಮಲಮಾಡಬೇಕು. ಈ ಕೊಳೆಯನ್ನು ಬೇರೆಬೇರೆ ಜಾತಿಯಾಗಿ ವಿಂಗಡಿಸಬೇಕು. ಕೆಲವು ಭಾಗಗಳಿಂದ ಗೊಬ್ಬರವಾಗುವುದು. ಇನ್ನು ಕೆಲವು ಭಂಗಗಳನ್ನು ನಾವು ಹೂಳಬೇಕು. ಉಳಿದುದರಿಂದ ಹಣವನ್ನು ಸಂಪಾದಿಸಬಹುದು. ಮೂಳೆಯೂ ಬೆಲೆಯಾದ ಕಚ್ಚಾ ಮಾಲು. ಇದರಿಂದ ನಾವು ಉಪಯೋಗವಾದ ಪದಾರ್ಥಗಳನ್ನು ಮಾಡಿಕೊಳ್ಳ ಬಹುದು. ಅಥವಾ ಅದನ್ನು ಪುಡಿಮಾಡಿ ಸಾರವಾದ ಗೊಬ್ಬರವಾಗಿ ಮಾಡಬಹುದು. ಚಿಂದಿ ಬಟ್ಟೆಗಳು ಮತ್ತು ಹಳೆಯ ಕಾಗದದ ಚೂರು ಗಳಿಂದ ಕಾಗದ ತಯಾರುಮಾಡಬಹುದು. ಪಾಯಿಖಾನೆಯನ್ನು ಕೂಡಿ ಹಾಕಿದರೆ ಅದು ಹಳ್ಳಿಯ ಹೊಲಗಳಿಗೆ ಚಿನ್ನದಂಥ ಗೊಬ್ಬರವಾಗುತ್ತದೆ. ಪಾಯಖಾನೆಯಿಂದ ಕೆಳಗೆ ತಿಳಿಸಿರುವಂತೆ ನಾವು ಉಪಯೋಗವನ್ನು ಹೊಂದಬಹುದು. ಗಟ್ಟಿಯಾದ ಮತ್ತು ನೀರಾದ ಎಲ್ಲ ಪಾಯಖಾನೆ ಯನ್ನೂ ಒಂದು ಅಡಿಗಿಂತ ಆಳವಿಲ್ಲದ ಹಳ್ಳದಲ್ಲಿ ಹಾಕಿ ಮೇಲೆ ಮಣ್ಣು ಮುಚ್ಚಬೇಕು. ಒಂಭತ್ತು ಅಂಗುಲದಿಂದ ಹನ್ನೆರಡು ಅಂಗುಲಗಳಿಗೆ ಹೆಚ್ಚಾಗಿ ಆಳವಾಗಿಲ್ಲದ ಗುಂಡಿಯಲ್ಲಿ ಪಾಯಖಾನೆಯನ್ನು ಹೂಳಬೇಕೆಂದು ಹಳ್ಳಿಯ ಆರೋಗ್ಯದ ಮೇಲೆ ಬರೆದಿರುವ ಪುಸ್ತಕದಲ್ಲಿ ಡಾಕ್ಟರ್ ಪೂರ್ ರವರು ತಿಳಿಸಿರುತ್ತಾರೆ, ಎಂದು ನನಗೆ ಜ್ಞಾಪಕ. ಮೇಲೆ ಮುಚ್ಚಿರುವ ಮಣ್ಣು ಸಣ್ಣ ಸಣ್ಣ ಜೀವದ ಅಣುಗಳಿಂದ ತುಂಬಿದೆಯೆಂದೂ [ವಿದ್ಯುಚ್ಛಕ್ತಿ ಯಿಂದ ಕೂಡಿರುವುದೆಂದೂ] ಈ ಅಣುಗಳ ಮಾರ್ಗವಾಗಿ ಬೆಳಕು ಗಾಳಿಗಳು ಸುಲಭವಾಗಿ ತೂರಿಕೊಂಡುಹೋಗಿ ಒಳಗಿರುವ ಪಾಯಖಾನೆಯನ್ನು ಸುವಾಸನೆಯಾದ ಮೆತ್ತಗಿರುವ ಉತ್ತಮವಾದ ಮೆಕ್ಕಲುಮಣ್ಣಿನಂತೆ ಮಾಡುವುದೆಂದೂ ಗ್ರಂಥಕರ್ತರು ಆ ಪುಸ್ತಕದಲ್ಲಿ ತಿಳಿಸಿರುತ್ತಾರೆ. ಈ ವಿಷಯವನ್ನು ಹಳ್ಳಿಯವರು ಯಾರಾಗಲೀ ಪರೀಕ್ಷಿಸಬಹುದು. ಈ ಕೆಲಸವನ್ನು ಎರಡು ರೀತಿಯಲ್ಲಿ ಮಾಡಬಹುದು. ಕಕ್ಕಸುಗಳಲ್ಲಿ ಮಣ್ಣಿನ

ಅಥವಾ ಕಬ್ಬಿಣದ ಬಕೀಟುಗಳನ್ನಿಟ್ಟು, ಕೆಲಸವಾದನಂತರ ಅದರಲ್ಲಿರುವುದನ್ನು ಪ್ರತಿನಿತ್ಯವೂ ಒಂದೊಂದು ಗುಂಡಿ ತೋಡಿ ಆ ಸ್ಥಳದಲ್ಲಿ ಹೂಳಬಹುದು. ಭೂಮಿಯಲ್ಲಿ ಚೌಕಚೌಕನಾಗಿ ಅಗೆದಿರುವ ಗುಂಡಿಗಳಲ್ಲಿ ನಮ್ಮ ಕೆಲಸವನ್ನು ಪೂರೈಸಿಕೊಂಡು ಅದರ ಮೇಲೆ ಮಣ್ಣು ಮುಚ್ಚಬಹುದು. ಹಳ್ಳಿಗೆ ಒಟ್ಟಾಗಿರುವ ಒಂದು ಹಳ್ಳದಲ್ಲಿ ಪಾಯಖಾನೆಯನ್ನು ಹೂಳಬಹುದು. ಅಥವಾ ಅವರವರ ಹೊಲಗಳಲ್ಲಿ ಹಾಕಿ ಮಣ್ಣಿನಿಂದ ಮುಚ್ಚಬಹುದು. ಹಳ್ಳಿಯವರ ಸಹಕಾರದಿಂದ ಮಾತ್ರ ಈ ಕೆಲಸ ಸಾಧ್ಯ. ಹಾಗೆ ನಡೆಯದಿದ್ದರೆ ಒಬ್ಬ ಮುಖಂಡನಾದ ಹಳ್ಳಿಯವನು ಪಾಯಖಾನೆಯೆಲ್ಲವನ್ನೂ ಕೂಡಿಸಿ, ಗೊಬ್ಬರಮಾಡಿ, ಲಾಭವನ್ನು ಪಡೆಯಬೇಕು. ಸಧ್ಯದಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಈ ಗೊಬ್ಬರವು ಪ್ರತಿನಿತ್ಯವೂ ವ್ಯರ್ಥವಾಗುತ್ತಿದೆ. ಅಷ್ಟೇ ಅಲ್ಲ. ಅದರಿಂದ ಗಾಳಿಯೂ ಕೆಟ್ಟು ರೋಗರುಜಿನಗಳು ಹುಟ್ಟಲು ಕಾರಣವಾಗಿದೆ.

ಹಳ್ಳಿಯ ಕೊಳಗಳು ಸ್ನಾನಕ್ಕೂ, ಬಟ್ಟೆ ಒಗೆಯುವುದಕ್ಕೂ ಅಡಿಗೆಗೂ ಕುಡಿಯುವುದಕ್ಕೂ ತಾರತಮ್ಯವಿಲ್ಲದೆ ಉಪಯೋಗವಾಗುತ್ತಿವೆ. ಕೆಲವು ಹಳ್ಳಿಗಳಲ್ಲಿ ದನಕರುಗಳೂ ಇವೇ ಕೊಳಗಳನ್ನು ಉಪಯೋಗಿಸಿಕೊಳ್ಳುತ್ತವೆ. ಎಮ್ಮೆಗಳು ಈ ಕೊಳಗಳಲ್ಲಿ ಹೊರಳಾಡುತ್ತಿರುವುದನ್ನು ಪದೇ ಪದೇ ಕಾಣಬಹುದು. ಹಳ್ಳಿಗಳಲ್ಲಿ ಕೊಳಗಳನ್ನು ಈರೀತಿ ದುರುಪಯೋಗಪಡಿಸುತ್ತಿದ್ದರೂ ಸಾಂಕ್ರಾಮಿಕ ರೋಗಗಳಿಂದ ಹಳ್ಳಿಗಳು ಹಾಳಾಗದೆ ಉಳಿದಿರುವುದು ಆಶ್ಚರ್ಯವೇ ಸರಿ. ಹಳ್ಳಿಯವರು ಅನುಭವಿಸುತ್ತಿರುವ ಕಾಯಿಲೆಗಳಲ್ಲಿ ಹೆಚ್ಚುಭಾಗವು ಶುದ್ಧವಾದ ಕುಡಿಯುವ ನೀರನ್ನು ಹಳ್ಳಿಯವರು ಉಪಯೋಗಿಸದಿರುವುದರಿಂದಲೇ ಎಂದು ಎಲ್ಲ ವೈದ್ಯರೂ ಅಭಿಪ್ರಾಯಪಟ್ಟಿದ್ದಾರೆ.

ಈರೀತಿ ನರಳುತ್ತಿರುವ ಭಾರತದ ಜನರಿಗೆ ಮೇಲೆ ತಿಳಿಸಿರುವ ಕಾರ್ಯಕ್ರಮವು ಹೆಚ್ಚು ಲಾಭದಾಯಕವಾಗುವುದು. ಈ ಬಗೆಯ

ಸೇವೆಯು ಅತ್ಯಂತ ಪ್ರಯೋಜನಕಾರಿಯೂ, ಇತರರಿಗೆ ಮಾರ್ಗದರ್ಶಕವೂ ಅತ್ಯಂತ ಮಹತ್ವವೂ ಆದುದೆಂದು ಎಲ್ಲರೂ ಒಪ್ಪಲೇ ಬೇಕು. ಲೇಖನಿ, ಸೀಸದಕಡ್ಡಿಗಳನ್ನು ಹಿಡಿಯುವಷ್ಟೇ ಸುಲಭವಾಗಿಯೂ ಅಭಿಮಾನ ಜಂಭದಿಂದಲೂ ಪರಕೆ ಮೊರಗಳನ್ನು ಉಪಯೋಗಿಸುವ ಉತ್ಸಾಹಿಗಳಾದ ಸೇವಕರು ದೊರೆತು, ನಾನು ಮೇಲೆ ವಿವರಿಸಿರುವ ರೀತಿಯಲ್ಲಿ ಈ ಕಾರ್ಯಕ್ರಮವನ್ನು ನಡೆಸಿದರೆ ಹಣದ ಖರ್ಚಿನ ಪ್ರಶ್ನೆಯೇ ಏಳುವುದಿಲ್ಲವೆಂದು ನನ್ನ ನಂಬಿಕೆ. ಒಂದು ಪರಕೆ, ಒಂದು ಮೊರ, ಒಂದು ಬುಟ್ಟಿ, ಒಂದು ಗುದ್ದಲಿ ಮತ್ತು ಸಾಧ್ಯವಿದ್ದರೆ ರೋಗದ ಸುಂಕು ಹೋಗಲಾಡಿಸುವ ಯಾವುದಾದರೂ ವಸ್ತು, ಇವಿಷ್ಟು ಮಾತ್ರ ನಮಗೆ ಬೇಕಾದ ಸಾಧನಗಳು. ಒಣಗಿರುವ ಬೂದಿಯು, ಪ್ರಾಯಶಃ ಅಂಗಡಿಯಲ್ಲಿ ದೊರಕುವ ರಸಾಯನ ವಸ್ತುವಿನಷ್ಟೇ ಶಕ್ತಿಯುಳ್ಳ ಕ್ರಿಮಿನಾಶಕ ಸಾಧನವಾಗಿದೆ. ಆದರೆ ಈ ವಿಷಯದಲ್ಲಿ ಪರೋಪಕಾರಬುದ್ಧಿಯುಳ್ಳ ರಸಾಯನಪಂಡಿತರು, ಹಳ್ಳಿಯವರು ಸುಲಭವಾಗಿ ತಯಾರಿಸಿಕೊಳ್ಳುವಂಥ ಅಗ್ಗವಾದ ಮತ್ತು ಹೆಚ್ಚು ಫಲಕಾರಿಯಾದ ಕ್ರಿಮಿನಾಶಕ ಪದಾರ್ಥ ಯಾವುದೆಂಬುದನ್ನು ನಮಗೆ ಹೇಳಲಿ. 8-2-1935.

---

೧೦. ಚರ್ಮ ಹದಮಾಡುವುದು ಮತ್ತು ಅದರ ಸಾಧ್ಯತೆಗಳು

ಹಳ್ಳಿಗಳಲ್ಲಿ ಚರ್ಮವನ್ನು ಹದಮಾಡುವ ಉದ್ಯೋಗವು ಭಾರತದಷ್ಟೇ ಹಳೆಯದಾಗಿದೆ. ಈ ಉದ್ಯೋಗವನ್ನು ಯಾವಾಗ ಹೀನವೃತ್ತಿ ಎಂದು ತಿಳಿದರೋ ಅದನ್ನು ಹೇಳುವುದಕ್ಕಾಗುವುದಿಲ್ಲ. ಬಹಳ ಪ್ರಯೋಜನಕಾರಿಯೂ ಆವಶ್ಯಕವೂ ಆಗಿದ್ದ ಕೈಗಾರಿಕೆಗಳಲ್ಲಿ ಒಂದಾದ ಈ ಉದ್ಯೋಗವು ಇಂದು ಹತ್ತು ಲಕ್ಷ ಜನರನ್ನು ವಂಶಪಾರಂ

ಪಡ್ಯವಾಗಿ ಅಸ್ಪೃಶ್ಯರ ಗುಂಪಿಗೆ ಸೇರಿಸಿದೆಯೆಂದು ನಮಗೆ ಗೊತ್ತಾಗಿದೆ. ಕೆಲಸವೆಂದರೆ ತಿರಸ್ಕಾರವನ್ನು ಸೂಚಿಸಿ ಅದರಿಂದ ಉದ್ಯೋಗಗಳನ್ನು ಅಸಡ್ಡೆಯಿಂದ ಕಾಣುವ ದುರ್ದಿನವೊಂದು ಈ ದುರದೃಷ್ಟ ದೇಶದಲ್ಲಿ ಮೊದಲಾಯಿತು. ಯಾರ ಕಸುಬುಗಳಿಂದ ಈ ದೇಶವು ತನ್ನ ರಕ್ಷಣೆಯನ್ನು ಮಾಡಿಕೊಂಡಿದ್ದಿತೋ ಅಂತಹ ಅಸಂಖ್ಯಾತ ಜನರು, ಈ ಭೂಮಿಯ ಸತ್ವದಂತಿದ್ದವರು, ಕೀಳು ಜಾತಿಯವರೆನ್ನಿಸಿಕೊಂಡರು. ವಿರಾಮವನ್ನು ಅನುಭವಿಸುತ್ತಿದ್ದ ಸ್ವಲ್ಪ ಮಂದಿ ಉಚ್ಚ ಪಂಗಡದವರು ಎನಿಸಿದರು. ಈ ದುಃಸ್ಥಿತಿಯಿಂದ ಭಾರತವು ನೈತಿಕವಾಗಿಯೂ ಆರ್ಥಿಕವಾಗಿಯೂ ಕಷ್ಟವನ್ನು ಅನುಭವಿಸಬೇಕಾಯಿತು. ಇವೆರಡರಲ್ಲಿ ಯಾವುದು ದೊಡ್ಡ ನಷ್ಟವೆಂಬುದನ್ನು ತಿಳಿಯುವುದು ಬಹಳ ಕಷ್ಟವಾಗಿದೆ. ಭಾರತವು ಅತ್ಯುತ್ತಮವಾದ ವಾಯುಗುಣದಿಂದಲೂ, ದೊಡ್ಡ ಬೆಟ್ಟಗಳಿಂದಲೂ, ಉದ್ದವಾದ ನದಿಗಳಿಂದಲೂ, ಸಮುದ್ರ ತೀರಗಳಿಂದಲೂ ಕೂಡಿಕೊಂಡು ಮಿತಿಯಿಲ್ಲದ ಅನುಕೂಲಗಳುಳ್ಳದುದಾಗಿದೆ. ಭಾರತದ ಹಳ್ಳಿಗಳ ಈ ಅನುಕೂಲಗಳನ್ನು ಉಪಯೋಗಿಸಿಕೊಂಡಿದ್ದರೆ ಬಡತನ ರೋಗಗಳಿಂದ ನಾವು ಎಷ್ಟೋ ಮಟ್ಟಿಗೆ ಪಾರಾಗುತ್ತಿದ್ದೆವು. ನಾವು ಶರೀರವನ್ನೂ ಬುದ್ಧಿಯನ್ನೂ ಬೇರೆಬೇರೆ ಮಾಡಿರುವುದರಿಂದ ಪ್ರಾಯಶಃ ಎಲ್ಲರಿಗಿಂತಲೂ ಕಡಿಮೆ ಆಯುಸ್ಸುಳ್ಳವರಾಗಿ ಯಾವ ಸೌಕರ್ಯಗಳನ್ನೂ ಉಪಯೋಗಿಸಿಕೊಳ್ಳದೆ ನಮ್ಮ ದೇಶವನ್ನು ಎಲ್ಲಕ್ಕಿಂತಲೂ ಹೆಚ್ಚಾದ ಸೂರೆಗೆ ಒಳಪಡಿಸಿದ್ದೇವೆ. ಈ ನನ್ನ ಆಕ್ಷೇಪಣೆಗೆ ಹಳ್ಳಿಯಲ್ಲಿ ಚರ್ಮ ಹದಮಾಡುವ ಕಸುಬಿನ ಹೀನ ಸ್ಥಿತಿಯು, ಬಹುಶಃ ಸರಿಯಾದ ಸಾಕ್ಷಿಯಾಗಿದೆ. ಮಾನವ ಜನಾಂಗದ ಒಂದು ಭಾಗಕ್ಕೆ ಆಗುತ್ತಿದ್ದ ಅಪರಾಧವನ್ನು ನನಗೆ ದಿವಂಗತ ಮಧುಸೂದನ ದಾಸರು ಕಣ್ಣುಬಿಟ್ಟು ನೋಡುವಂತೆ ಹೇಳಿದರು. ಈ ತಪ್ಪನ್ನು ಸರಿಮಾಡುವುದಕ್ಕಾಗಿ ಅವರು ಒಂದು ಚರ್ಮ ಹದಮಾಡುವ ವಿದ್ಯಾಶಾಲೆಯನ್ನು ಪ್ರಾರಂಭಮಾಡಿದರು.

ಅವರ ಆಶೆ ಎಷ್ಟಿತ್ತೋ ಅಷ್ಟು ದೂರ ಈ ಶಾಲೆಯು ಮುಂದುವರಿಯ ಲಿಲ್ಲ. ಆದರೂ ಕಟಕ್ ನಗರದ ನೂರಾರು ಮೋಚಿಗಳ ಜೀವನ ನಡೆಯಲು ಇವರೇ ಮುಖ್ಯಕಾರಣರು.

ವರ್ಷವರ್ಷವೂ ಭಾರತದಿಂದ 9 ಕೋಟಿ ರೂಪಾಯಿ ಬೆಲೆ ಬಾಳುವ ಕಚ್ಚಾ ಚರ್ಮವು ಹೊರಗೆ ರಫ್ತಾಗುತ್ತದೆಯೆಂದು ಅಂದಾಜಾ ಗಿದೆ. ಅವಷ್ಟು ಚರ್ಮವೂ ತಯಾರಾದ ಚರ್ಮದ ಸಾಮಾನಾಗಿ ನಮ್ಮ ದೇಶಕ್ಕೆ ಬರುತ್ತಿದೆ. ಇದರಿಂದ ಹಣ ಹೋಗುವುದರ ಜೊತೆಗೆ ನಮ್ಮ ಬುದ್ಧಿಶಕ್ತಿಯೂ ಕಡಿಮೆಯಾದಂತೆಯೇ ಸರಿ. ಏಕೆಂದರೆ ಚರ್ಮ ಹದಮಾಡುವುದಕ್ಕೆ ಆವಶ್ಯಕವಾದ ಶಿಕ್ಷಣವು ನಮಗೆ ಇದರಿಂದ ತಪ್ಪಿ ಹೋಗಿ ದಿನದಿನದ ಉಪಯೋಗಕ್ಕೆ ಬೇಕಾದ ಅನೇಕ ಚರ್ಮದ ಸಾಮಾ ನುಗಳನ್ನು ಮಾಡಿಕೊಳ್ಳಲು ಬೇಕಾದ ಅಭ್ಯಾಸವು ನಮಗೆ ಇಲ್ಲದಂತಾಗಿದೆ.

ಚರ್ಮವನ್ನು ಹದಮಾಡುವುದಕ್ಕೆ, ಅದಕ್ಕೆ ಸಂಬಂಧಪಟ್ಟ ವಿಶೇಷ ವಾದ ನೈಪುಣ್ಯ ಆವಶ್ಯಕ. ಈ ಮಹತ್ವದ ಕೈಗಾರಿಕೆಯಲ್ಲಿ ರಸಾಯನ ಶಾಸ್ತ್ರವನ್ನು ತಿಳಿದ ಒಂದು ದಂಡೇ, ಹೊಸ ಹೊಸ ಮಾರ್ಗಗಳನ್ನು ಕಂಡುಹಿಡಿಯುವ ತಮ್ಮ ಕಲ್ಪನಾಶಕ್ತಿಗೆ ಅವಕಾಶ ಕಲ್ಪಿಸಿಕೊಳ್ಳ ಬಹುದು. ಈ ಕೈಗಾರಿಕೆಯನ್ನು ಎರಡು ದಾರಿಯಲ್ಲಿ ಅಭಿವೃದ್ಧಿಪಡಿಸ ಬಹುದು. ಹಳ್ಳಿಗೆ ದೂರದಲ್ಲಿ ಬೇರೆಯಾಗಿರುವ ಕತ್ತಲು ಗುಡಿಸಲುಗಳಲ್ಲಿ ವಾಸಮಾಡುತ್ತ, ಕೀಳುದರ್ಜೆಯ ಕೊಳಕು ಜೀವನ ನಡೆಸುತ್ತಾ ಜೀವ ಧಾರಣೆಗೆ ಬೇಕಾದಷ್ಟು ಮಾತ್ರ ಸಂಪಾದಿಸುತ್ತಿರುವ ಹರಿಜನರ ಅಭಿ ವೃದ್ಧಿಯಲ್ಲಿ ತೊಡಗುವುದು ಮೊದಲನೆಯ ಕೆಲಸ. ಹೀಗೆ ಮಾಡಿದರೆ, ಹಳ್ಳಿಗಳಿಗೆ ವಿದ್ಯಾಭ್ಯಾಸ, ಕಲೆ, ಶುಚಿತ್ವ, ಗೌರವ ಸಂಪತ್ತುಗಳನ್ನು ಒದಗಿಸಿ ಅವುಗಳ ಪುನರುಜ್ಜೀವನ ಮಾಡಿದಂತಾಗುವುದು. ಈ ಕಾರ್ಯದಿಂದ ವಿಜ್ಞಾನದ ಸೌಲಭ್ಯಗಳನ್ನು ಹಳ್ಳಿಗಳ ಅಭಿವೃದ್ಧಿಗೆ ಉಪಯೋಗಿಸಿದ ಹಾಗಾಗುವುದು. ಚರ್ಮವನ್ನು ಹದಮಾಡುವುದನ್ನು ತಿಳಿದಿರುವ ರಸಾ

ಯನ ಪಂಡಿತರು, ಉತ್ತಮ ರೀತಿಯಲ್ಲಿ ಚರ್ಮವನ್ನು ಹದಮಾಡುವುದನ್ನು ಕಂಡುಹಿಡಿಯಬೇಕು. ಹಳ್ಳಿಯಲ್ಲಿರುವ ರಸಾಯನ ಪಂಡಿತನು ಜಯಶೀಲನಾಗಬೇಕಾದರೆ ನಮ್ರತೆಯಿಂದಿರಬೇಕು. ಅವನು ಹಳ್ಳಿಯವರು ಹಿಂದಲ ಕ್ರಮದಲ್ಲಿ ಹದಮಾಡುತ್ತಿರುವುದನ್ನು ಅರ್ಥಮಾಡಿಕೊಂಡು ಅದನ್ನು ಕಲಿಯಬೇಕು. ನಮ್ಮ ಜನರ ಔದಾಸೀನ್ಯದಿಂದ–ಸಹಾಯಮಾಡುವ ವಿಷಯ ಹಾಗಿರಲಿ!–ಈ ಕಸಬು ಇನ್ನೇನು ಸಾಯುವ ಸ್ಥಿತಿಯಲ್ಲಿದೆ. ಸರಿಯಾದ ರೀತಿಯಲ್ಲಿ ಪರಿಶೋಧನೆ ನಡೆಸುವುದಕ್ಕೆ ಮೊದಲು ಈ ಹಳೆಯ ರೀತಿಯನ್ನು ಬಿಡಬಾರದು. ಏಕೆಂದರೆ ಅನೇಕ ಶತಮಾನಗಳಿಂದ ಈ ರೀತಿಯಲ್ಲಿ ಕೆಲಸ ಜಯಪ್ರದವಾಗಿ ನಡೆದಿದೆ. ಈ ಭಾಗದಲ್ಲಿ ಪರಿಶೋಧನೆ ನಡೆಯುತ್ತಿರುವುದು ಶಾಂತಿನಿಕೇತನದಲ್ಲಿ ಮಾತ್ರವೆಂದು ನನಗೆ ತೋರುತ್ತದೆ. ಅನಂತರ, ಈಗ ಅಳಿದಿರುವ ಸಬರ್ಮತಿ ಆಶ್ರಮದಲ್ಲಿ ಈ ಕಾರ್‍ಯನಡೆಯುತ್ತಿತ್ತು. ಶಾಂತಿ ನಿಕೇತನದಲ್ಲಿ ನಡೆಯುತ್ತಿರುವ ಕೆಲಸದ ಅಭಿವೃದ್ಧಿಯನ್ನು ನಾನು ತಿಳಿದುಕೊಂಡಿಲ್ಲ. ಸಬರ್ಮತಿ ಆಶ್ರಮದ ಬದಲಾಗಿ ಸ್ಥಾಪಿತವಾಗಿರುವ ಹರಿಜನ ಆಶ್ರಮದಲ್ಲಿ, ಈ ಉದ್ಯೋಗವನ್ನು ನಡೆಸಬೇಕೆಂಬ ಅಭಿಲಾಷೆ ಪೂರ್ಣವಾಗಬಹುದು. ನಡೆಯಬೇಕಾಗಿರುವ ಪರಿಸಂಶೋಧನೆಗಳಲ್ಲಿ ಈ ಎರಡು ಕಾರ್‍ಯಕ್ಷೇತ್ರಗಳು ಸಾಗರದ ತೊಟ್ಟುಗಳಂತೆ.

ಗೋರಕ್ಷಣೆಯು ಹಿಂದೂಮತದ ಒಂದು ಅಂಗ. ಯೋಗ್ಯನೆನ್ನಿಸಿಕೊಳ್ಳುವ ಯಾವ ಹರಿಜನನೂ ತನ್ನ ಆಹಾರಕ್ಕಾಗಿ ಹಸುವನ್ನು ಕೊಲ್ಲುವುದಿಲ್ಲ. ಆದರೆ, ಅವರು ಅಸ್ಪೃಶ್ಯರೆನಿಸಿಕೊಂಡನಂತರ, ಸತ್ತ ಪ್ರಾಣಿಯ ಮಾಂಸವನ್ನು ತಿನ್ನುವ ಕೆಟ್ಟ ಅಭ್ಯಾಸವನ್ನು ಅವನು ಕಲಿತಿದ್ದಾನೆ. ಆತನು ಹಸುವನ್ನು ಕೊಲ್ಲುವುದಕ್ಕೆ ಸಿದ್ಧನಾಗಿಲ್ಲ; ಆದರೆ ಅವನು ಬಹಳ ಸಂತೋಷದಿಂದ ಸತ್ತ ಹಸುವಿನ ಮಾಂಸವನ್ನು ತಿನ್ನುತ್ತಾನೆ. ಶರೀರಶಾಸ್ತ್ರದ ಪ್ರಕಾರ ಇದು ಅಪಾಯವಿಲ್ಲದಿರಬಹುದು. ಆದರೆ ಮನಸ್ಸಿನ

ಮೇಲಾಗುವ ಪರಿಣಾಮದ ದೃಷ್ಟಿಯಿಂದ ನೋಡಿದರೆ, ಸತ್ತ ಪ್ರಾಣಿಯ ಮಾಂಸವನ್ನು ತಿನ್ನುವುದಕ್ಕಿಂತ ಅಸಹ್ಯವಾದುದು ಯಾವುದೂ ಇಲ್ಲ. ಇಷ್ಟಾದರೂ ಸತ್ತಹಸುವನ್ನು ಚರ್ಮ ಹದಮಾಡುವ ಹರಿಜನನ ಮನೆಗೆ ತಂದಾಗ, ಮನೆಯವರಿಗೆಲ್ಲ ಅಂದು ಸಂತೋಷದ ಸಂಭ್ರಮದ ದಿನವಾಗಿರುತ್ತದೆ. ಹುಡುಗರು ಆ ಮಾಂಸದ ಸುತ್ತ ಕುಣಿದಾಡುತ್ತಾರೆ. ಆ ಸತ್ತ ಪ್ರಾಣಿಯ ಚರ್ಮವನ್ನು ಸುಲಿದಾಗ, ಮೂಳೆ ಮಾಂಸಗಳ ಚೂರುಗಳನ್ನು ತೆಗೆದುಕೊಂಡು ಒಬ್ಬರ ಮೇಲೊಬ್ಬರು ಎಸೆದಾಡುತ್ತಾರೆ. ಹರಿಜನ ಆಶ್ರಮದಲ್ಲಿ ವಾಸಿಸುತ್ತಿರುವ ತೊಗಲು ಹದಮಾಡುವವನೊಬ್ಬನು ತಾನು ತ್ಯಜಿಸಿರುವ ತನ್ನ ತಂದೆಯಮನೆಯಲ್ಲಿ ಸತ್ತ ಪ್ರಾಣಿಯನ್ನು ಕಂಡ ಕೂಡಲೆ ಮನೆಯವರೆಲ್ಲರೂ ಹೇಗೆ ಸಂತೋಷದಿಂದ ಮತ್ತರಾಗುವರೆಂದು ನನಗೆ ಹೇಳಿದ್ದಾನೆ. ಹರಿಜನರ ಮಧ್ಯೆ ಕೆಲಸಮಾಡುತ್ತಿರುವ ನನಗೆ ಮನುಷ್ಯತ್ವವನ್ನು ನಾಶಮಾಡುವ ಈ ಕೊಳೆತ ಮಾಂಸ ತಿನ್ನುವ ಅಭ್ಯಾಸದಿಂದ ಅವರನ್ನು ಬಿಡಿಸುವುದು ಎಷ್ಟು ಕಷ್ಟವೆಂಬುದು ಗೊತ್ತು. ಸುದಾರಿಸಿದ ರೀತಿಯಲ್ಲಿ ಚರ್ಮವನ್ನು ಹದಮಾಡುವುದು ಮೊದಲಾದರೆ ಈ ಸತ್ತ ಪ್ರಾಣಿಗಳನ್ನು ತಿನ್ನುವುದು ತಾನಾಗಿಯೇ ಬಿಟ್ಟುಹೋಗುತ್ತದೆ.

ಹೆಚ್ಚು ಬುದ್ಧಿಯನ್ನು ಉಪಯೋಗಿಸುವುದಕ್ಕೂ ಮತ್ತು ಅಂಗಾಂಗಗಳನ್ನು ಕುಯ್ಯುವ ಕಲೆಗೂ ಈ ಉದ್ಯೋಗದಲ್ಲಿ ಬೇಕಾದಷ್ಟು ಅವಕಾಶವಿದೆ. ಗೋರಕ್ಷಣೆಯ ಭಾಗದಲ್ಲಿ ಇದು ಒಂದು ದೊಡ್ಡ ಮೆಟ್ಟಿಲು. ಹಸುವು ಹಾಲನ್ನು ಹೆಚ್ಚಾಗಿ ಕೊಡುವಂತೆ ಕಾಪಾಡುವ ರಹಸ್ಯವನ್ನು ನಾವು ತಿಳಿಯದಿದ್ದರೆ, ಅದರ ಸಂತಾನವನ್ನು ಉತ್ತಮಪಡಿಸಿ, ಹೋರಿಗಳನ್ನು ಹೊಲಗಳಲ್ಲೂ ಮತ್ತು ಮೂಟೆ ಹೊರುವುದರಲ್ಲೂ ಹೆಚ್ಚು ಉಪಯೋಗವಾಗುವಂತೆ, ಮಾಡಿಕೊಳ್ಳದಿದ್ದರೆ, ಅದರ ಸಗಣಿಯನ್ನು ಸಾರವಾದ ಗೊಬ್ಬರ ಮಾಡುವ ರೀತಿಯನ್ನು ತಿಳಿಯದಿದ್ದರೆ, ಹಸುವೂ ಅದರ ಕರು

ಗಳೂ ಸತ್ತಾಗ ಚರ್ಮ ಮೂಳೆ, ಕರುಳು ಮಾಂಸಗಳನ್ನು ಸರಿಯಾಗಿ ಉಪಯೋಗಿಸದಿದ್ದರೆ, ಆಗ ಹಸುಗಳು ಕಟುಗರ ಕೈಯಲ್ಲಿ ಸಾಯ ಬೇಕಾಗುತ್ತವೆ.

ಸತ್ತ ಹಸುವಿನಿಂದ ಉಪಯೋಗವನ್ನು ಪಡೆಯುವದು ಈಗ ನನ್ನ ಗಮನದಲ್ಲಿದೆ. ದೇವರ ದಯದಿಂದ ಹಳ್ಳಿಯ ಚರ್ಮ ಹದಮಾಡು ವವನು ಕೊಂದ ಹಸುವಿನ ಬದಲು ಸ್ವಾಭಾವಿಕವಾಗಿ ಸತ್ತ ಹಸುವಿನ ಪ್ರಯೋಜನವನ್ನು ಪಡೆಯುವನೆಂಬುದನ್ನು ನಾವು ಜ್ಞಾಪಕದಲ್ಲಿಡಬೇಕು. ಸತ್ತ ಹಸುವನ್ನು ನಾಜೋಕಾಗಿ ಸುಲಭವಾಗಿ ಮನೆಗೆ ಸಾಗಿಸುವುದಕ್ಕೆ ಕೂಡ ಅವನಲ್ಲಿ ಒಳ್ಳೆಯ ಸಾಧನಗಳಿಲ್ಲ. ಅವನು ಹಸುವನ್ನು ಎತ್ತು ತ್ತಾನೆ. ರಸ್ತೆಯ ಮೇಲೆ ಎಳೆದಾಡುತ್ತಾನೆ. ಇದರಿಂದ ಚರ್ಮವು ಕೆಟ್ಟು ಅದರ ಬೆಲೆಯು ಕಡಿಮೆಯಾಗುತ್ತದೆ. ಚರ್ಮವನ್ನು ಹದಮಾಡು ವವನು ನಡೆಸುತ್ತಿರುವ ಅಮೂಲ್ಯವಾದ ಮತ್ತು ಉತ್ತಮವಾದ ಸೇವೆ ಯನ್ನು ಹಳ್ಳಿಯವರು ಅರ್ಥಮಾಡಿಕೊಂಡರೆ ಆಗ, ಅವರು ಹದಮಾಡು ವವನಿಗೆ ಸತ್ತ ಪ್ರಾಣಿಯನ್ನು ಸಾಗಿಸಲು ಅನುಕೂಲವಾದ ಮತ್ತು ಚರ್ಮಕ್ಕೆ ಅಪಾಯವಾಗದಂತಿರುವ ಸರಳವಾದ ಮತ್ತು ಉಪಯೋಗ ವಾದ ಸಾಧನಗಳನ್ನು ಒದಗಿಸಿಕೊಡುತ್ತಾರೆ.

ಆ ಪ್ರಾಣಿಯ ಚರ್ಮಸುಲಿಯುವುದು ಮುಂದಿನ ಕೆಲಸ. ಇದಕ್ಕೆ ಹೆಚ್ಚಾದ ಕುಶಲತೆ ಬೇಕು. ಶಸ್ತ್ರವೈದ್ಯರಾಗಲೀ ಅಥವಾ ಇತರರೇ ಆಗಲಿ, ಈ ಕೆಲಸವನ್ನು ಹಳ್ಳಿಯವನು ನಾಡು ಚಾಕುವಿನಿಂದ ಮಾಡು ವುದಕ್ಕಿಂತ ಶೀಘ್ರವಾಗಿಯೂ ಮತ್ತು ಉತ್ತಮವಾಗಿಯೂ ಮಾಡುವುದಿಲ್ಲ ವೆಂದು ನನಗೆ ಜನರು ತಿಳಿಸಿದ್ದಾರೆ. ಈ ವಿಷಯದಲ್ಲಿ ಪರಿಶ್ರಮವಿರುವವ ರನ್ನೂ ನಾನು ವಿಚಾರಿಸಿದ್ದೇನೆ. ಅವರೂ ಸಹ ಹಳ್ಳಿಯವನ ಪದ್ಧತಿಗಿಂತ ಉತ್ತಮವಾದ ಯಾವ ಬದಲಾವಣೆಯನ್ನೂ ಮಾಡಿ ತೋರಿಸಲು ಶಕ್ತರಾಗಿಲ್ಲ. ಅಂದರೆ ಇದಕ್ಕಿಂತ ಉತ್ತಮವಾದ ರೀತಿಯೇ

ಇಲ್ಲವೆಂದು ಅರ್ಥವಲ್ಲ. ನನ್ನ ಅಲ್ಪಪರಿಶ್ರಮದಿಂದ ನನಗೆ ತಿಳಿದಿರುವ ವಿಷಯವನ್ನು ನಾನು ಓದುಗರಿಗೆ ತಿಳಿಸಿದ್ದೇನೆ ಅಷ್ಟೆ. ಹಳ್ಳಿಯಲ್ಲಿ ಚರ್ಮ ಹದಮಾಡುವವನಿಗೆ ಮೂಳೆಗಳಿಂದ ಯಾವ ಪ್ರಯೋಜನವೂ ಇಲ್ಲ. ಅದನ್ನು ಆವನು ಎಸೆದುಬಿಡುತ್ತಾನೆ. ಆ ಪ್ರಾಣಿಯ ಚರ್ಮ ಸುಲಿಯುವಾಗ ನಾಯಿಗಳು ಸುತ್ತ ಮುತ್ತಿರುತ್ತವೆ. ಮಧ್ಯೆ ಕೆಲವು ಮೂಳೆಗಳನ್ನು ಅವು ಕಚ್ಚಿಕೊಂಡು ಓಡುತ್ತವೆ. ಇದರಿಂದ ದೇಶಕ್ಕೆ ಅನ್ಯಾಯವಾದ ನಷ್ಟವಾಗುತ್ತದೆ. ಮೂಳೆಗಳನ್ನು ಚೆನ್ನಾಗಿ ಪುಡಿಮಾಡಿದರೆ, ಇತರ ಉಪಯೋಗಗಳ ವಿಷಯ ಹೋಗಲಿ—ಉತ್ತಮವಾದ ಗೊಬ್ಬರಕ್ಕಾದರೂ ಪ್ರಯೋಜನವಾಗುತ್ತದೆ. ನಾಯಿಗಳು ಕಚ್ಚಿಕೊಂಡು ಮಿಕ್ಕದ್ದು ಪರದೇಶಗಳಿಗೆ ರಫ್ತಾಗಿ ಅಲ್ಲಿಂದ ಗುಂಡಿಗಳು ಕೈಹಿಡಿಗಳು ಮುಂತಾದ ಪದಾರ್ಥಗಳಾಗಿ ಪುನಃ ನಮ್ಮ ಕೈಸೇರುತ್ತವೆ.

ಈ ದೊಡ್ಡ ಕೈಗಾರಿಕೆಯು ಪಟ್ಟಣದಲ್ಲಿ ಹೆಚ್ಚುಹೆಚ್ಚಾಗಿ ನಡೆಯುತ್ತಿರುವುದನ್ನು ಗಮನದಲ್ಲಿಟ್ಟುಕೊಳ್ಳುವುದು ಕೆಲಸಗಾರನ ಎರಡನೆಯ ಕರ್ತವ್ಯ. ಭಾರತದಲ್ಲಿ ಈ ಕೈಗಾರಿಕೆ ನಡೆಯುವ ಕಾರ್ಖಾನೆಗಳು ಬೇಕಾದಷ್ಟಿವೆ. ಅವುಗಳ ಪರಿಶೀಲನೆ ನಡೆಸುವುದು ಈ ಲೇಖನದ ಉದ್ದೇಶವಲ್ಲ. ಹರಿಜನರಿಗೂ ಅದಕ್ಕಿಂತ ಕಡಿಮೆಯಾಗಿ ಹಳ್ಳಿಯವರಿಗೂ, ಈ ರೀತಿಯ ಪಟ್ಟಣಗಳ ಕಾರ್ಖಾನೆಗಳು ಒಳ್ಳೆಯದನ್ನು ಮಾಡುವುದಿಲ್ಲ. ಇದರಿಂದ ಹಳ್ಳಿಗಳ ಸಂಪತ್ತು ಪಟ್ಟಣಗಳಿಗೆ ಎರಡು ರೀತಿಯಲ್ಲಿ ಹರಿಯಲು ಕಾರಣವಾಗುತ್ತದೆ. ಭಾರತದಲ್ಲಿ ಕೈಗಾರಿಕೆಗಳು ಪಟ್ಟಣಗಳಲ್ಲಿ ನಡೆಯುವಂತಾದರೆ ಅದರಿಂದ ಈ ದೇಶದ ಹಳ್ಳಿಗಳು ಮತ್ತು ಅವುಗಳಲ್ಲಿಯ ಜನರು ಸಾಯುವುದು ಖಂಡಿತವಾದ ಮಾತು. 700000 ಹಳ್ಳಿಗಳಲ್ಲಿ ನೂರಕ್ಕೆ ತೊಂಬತ್ತರಂತೆ ವಾಸಿಸುತ್ತಿರುವ ಜನಸಂಖ್ಯೆಯನ್ನು ಪಟ್ಟಣಗಳ ಕಾರ್ಯಕ್ರಮವು ಖಂಡಿತ ಕಾಪಾಡಲಾರದು. ಹಳ್ಳಿಗಳಿಂದ ಚರ್ಮವನ್ನು ಹದಮಾಡುವುದು, ಮತ್ತು ಅಂತಹ

ಇತರ ಉದ್ಯೋಗಗಳನ್ನು ಪಟ್ಟಣಗಳಿಗೆ ರವಾನಿಸಿದರೆ ಕೈ ಮತ್ತು ಬುದ್ಧಿಗಳನ್ನು ಕುಶಲತೆಯಿಂದ ಉಪಯೋಗಿಸಲು ಇರುವ ಅಲ್ಪಸ್ವಲ್ಪ ಅನುಕೂಲಗನ್ನು ಕಿತ್ತುಕೊಂಡಂತಾಗುತ್ತದೆ. ಹೀಗೆ ಗ್ರಾಮ ಕೈಗಾರಿಕೆಗಳು ಅಳಿದು ಹೋದರೆ ಹೊಲಗದ್ದೆಗಳಲ್ಲಿ ತಮ್ಮ ಎತ್ತುಗಳೊಂದಿಗೆ ಕೆಲಸಮಾಡುವ ಹಳ್ಳಿಯ ಜನರು ವರ್ಷದಲ್ಲಿ ನಾಲ್ಕು ಅಥವಾ ಆರು ತಿಂಗಳು ಸೋಮಾರಿಗಳಾಗಿ ಇರಬೇಕಾಗುತ್ತದೆ. ಮಧುಸೂದನದಾಸರ ಮಾತಿನಲ್ಲಿ ಹೇಳಬೇಕಾದರೆ "ಈ ಜನರು ಮೃಗಗಳಿಗೆ ಸಮಾನರಾಗಿ ಹೊಟ್ಟೆಗಿಲ್ಲದೆ ಮನಸ್ಸು ದೇಹಗಳ ಬೆಳೆವಣಿಗೆಗೆ ಅವಕಾಶವಿಲ್ಲದೆ ಸಂತೋಷವನ್ನೇ ಕಾಣದೆ ನಿರಾಶೆಯಿಂದ ಕಾಲಕಳೆಯಬೇಕಾಗುತ್ತದೆ."

ಹದಿನಾರಾಣೆ ಸ್ವದೇಶೀ ಪ್ರೇಮವುಳ್ಳವರಿಗೆ ಈ ಭಾಗದಲ್ಲಿ ಸರಿಯಾದ ಸೇವೆಗೆ ಅವಕಾಶವಿದೆ. ಈ ಮಹತ್ವವಾದ ಕೈಗಾರಿಕೆಯಲ್ಲಿ ಅನುಕೂಲವಾಗಿ ಕೆಲಸವನ್ನು ನಡೆಸುವುದಕ್ಕೂ ಜ್ಞಾನಪರಿಶ್ರಮವನ್ನು ಪೂರ್ಣವಾಗಿ ಉಪಯೋಗಿಸುವುದಕ್ಕೂ ಇಲ್ಲಿ ಸಾಕಾದಷ್ಟು ಅವಕಾಶವಿದೆ. ಈ ಉದ್ಯೋಗವನ್ನು ನಡೆಸಿದರೆ ಒಂದೇ ಏಟಿಗೆ ಮೂರು ಸೇಬಿನಹಣ್ಣನ್ನು ಕೆಡವಿದಂತಾಯಿತು. ಇದರಿಂದ ಹರಿಜನರಿಗೆ ಜೀವನೋಪಾಯ ನಡೆಯುವುದು. ಹಳ್ಳಿಯವರಿಗೆ ಸಹಾಯವಾಗುವುದು. ಮತ್ತು ಬುದ್ಧಿವಂತರಾದ ಮಧ್ಯಮವರ್ಗದ ಕೆಲಸಗಾರರಿಗೆ ಗೌರವಯುತವಾದ ಉದ್ಯೋಗವು ದೊರೆತಂತೆ ಆಗುವುದು. ಮತ್ತು ವಿದ್ಯಾವಂತರಾದ ಜನರು ಹಳ್ಳಿಯವರ ಜೊತೆಗೆ ಸೇರಲು ಇದು ಒಳ್ಳೆಯ ಅನುಕೂಲವಾದ ಸಾಧನವಾಗುವುದು.

7-9-1934.

೧೧. ಕೆಲಸವನ್ನು ಕಡಿಮೆಮಾಡುವ ಸಲಕರಣೆ, ಉಪಾಯಗಳು ಏಕೆ ಕೂಡದು?

ಅಖಿಲ ಭಾರತ ಗ್ರಾಮೋದ್ಯೋಗ ಸಂಘವು ಸ್ಥಾಪನೆಯಾಗುತ್ತದೆ ಯೆಂಬ ವಿಷಯವನ್ನು ತಿಳಿದು ಉತ್ಸಾಹಪೂರಿತಳಾದ ಒಬ್ಬಳು ಗೆಳತಿಯು ಆ ಸಂಘದ ಮೊದಲಿನ ಕಾರ್ಯಕ್ರಮವನ್ನು ಕುರಿತು ನಾನು ಪತ್ರಿಕೆಗಳಿಗೆ ಕೊಟ್ಟಿರುವ ಹೇಳಿಕೆಯಮೇಲೆ, ಈರೀತಿ ಬರೆದಿದ್ದಾಳೆ—

"ಹಳ್ಳಿಗಳಲ್ಲಿ ಅಕ್ಕಿಯನ್ನು ಕೈಯಿಂದ ತಯಾರುಮಾಡುವ ಮತ್ತು ಚಕ್ಕಿಯಿಂದ ಬೀಸುವ ಉದ್ಯೋಗಗಳನ್ನು ಪುನಃ ಅಭ್ಯಾಸಕ್ಕೆ ತಂದು ಅವು ಗಳಿಗೆ, ಬೆಂಬಲಕೊಡಬೇಕೆಂಬ ಬರಿಯ ಕಲ್ಪನೆಯೇ ನನ್ನ ಗ್ರಾಮ ಸೇವೆಯ ಉತ್ಸಾಹವನ್ನು ಕಡಿಮೆಮಾಡಿ, ಆ ಕಾರ್ಯಕ್ಷೇತ್ರದಿಂದ ಓಡಿ ಹೋಗುವಂತೆ ಮಾಡಿದೆ. ಹಳ್ಳಿಗಳನ್ನು ಉತ್ತಮಪಡಿಸಬೇಕೆಂದಿರುವ ರಚನಾಕಾರ್ಯದಲ್ಲಿ ದೇಹಶ್ರಮವನ್ನು ಕಡಮೆಮಾಡುವ ಸಾಧನಗಳ ಉಪಯೋಗವನ್ನು ಪಡೆಯದಿದ್ದರೆ ನಮ್ಮ ಹೆಚ್ಚುಕಾಲವೂ ಮತ್ತು ಶಕ್ತಿಯೂ ವ್ಯರ್ಥವಾಗುವುದೆಂದು ನನಗೆ ತೋರುತ್ತದೆ. ಹಳ್ಳಿಯವರೂ, ಮತ್ತು ಆ ಗ್ರಾಮದಲ್ಲಿ ಕೆಲಸಮಾಡುವ ಸೇವಕರೂ ಅಕ್ಕಿಯನ್ನು ತಯಾರಿಸಿ ಹಿಟ್ಟು ಬೀಸುವುದಾದರೆ ಅವರಿಗೆ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿ ಕೊಳ್ಳುವುದಕ್ಕೆ ಹೊತ್ತೇ ಉಳಿಯುವುದಿಲ್ಲ. ಅದಲ್ಲದೆ, ಪೂರ್ವದ ಅನಾಗರಿಕ ಪದ್ಧತಿಗಳನ್ನೇ ಪುನಃ ಸ್ಥಾಪಿಸಿದರೆ, ಗಂಡಸರೇನೋ ಮೊದಲ ಉತ್ಸಾಹದ ಭರದಲ್ಲಿ ಈ ಕೆಲಸಕ್ಕೆ ಕೈಹಾಕುತ್ತಾರೆ. ಆದರೆ ಕೊನೆಯಲ್ಲಿ ಈ ಕೆಲಸಗಳ ಹೊರೆಯೆಲ್ಲ, ಹೆಂಗಸರಾದ ನಮ್ಮಮೇಲೆ ಬೀಳುತ್ತದೆ. ಇದರಿಂದ ನಾವು ಹೊಂದುತ್ತಿರುವ ಸ್ವಲ್ಪಭಾಗದ ಅಭಿವೃದ್ಧಿಗೂ ಲೋಪ ಬರುತ್ತದೆ."

ಈ ವಾದಸರಣಿಯಲ್ಲಿ ಒಂದು ತಪ್ಪುಭಾವನೆಯಿದೆ. ಇಲ್ಲಿ ಕೆಲಸ ವನ್ನು ಸುಲಭಮಾಡುವ ಸಾಧನಗಳ ಉಪಯೋಗವನ್ನು ನಿರಾಕರಿಸುವ

ಪ್ರಶ್ನೆಯೇ ಇಲ್ಲ. ನಮ್ಮ ಆರೋಗ್ಯರಕ್ಷಣೆಯು ಅಷ್ಟು ಮುಖ್ಯವಲ್ಲ ಎಂದು ಊಹಿಸಿಕೊಂಡರೂ ಅಥವಾ ಮನೆಯಲ್ಲಿ ಕುಟ್ಟುವ ಮತ್ತು ಬೀಸುವ ಹಿಟ್ಟಿಗೂ ಗಿರಣಿಯಲ್ಲಿ ಬೀಸುವ ಹಿಟ್ಟಿಗೂ ಅಕ್ಕಿಗೂ ವ್ಯತ್ಯಾಸವಿಲ್ಲ ಎಂದು ತಿಳಿದುಕೊಂಡರಾಗಲೀ, ಹಳ್ಳಿಯವರಿಗೆ ಸಾಕಾದಷ್ಟು ಅನ್ನಬಟ್ಟೆಗಳು ಸಿಕ್ಕು ತ್ತಿದ್ದರೆ; ಕೈಯ್ಯಲ್ಲಿ ಹಿಟ್ಟುಬೀಸುವುದಕ್ಕೂ ಮತ್ತು ಅಕ್ಕಿ ತಯಾರಿಸುವು ದಕ್ಕೂ ಕಾರಣವಿರುತ್ತಿರಲಿಲ್ಲ. ಆದರೆ ಈಗ ನಮ್ಮ ಮುಂದಿರುವ ಪ್ರಶ್ನೆಯೇ ಬೇರೆ. ಹಳ್ಳಿಯವರು ಹಿಟ್ಟು ಬೀಸುವುದು ಮತ್ತು ಅಕ್ಕಿ ತಯಾರಿಸುವುದು ಈ ಕೆಲಸಗಳನ್ನು ತ್ಯಜಿಸಿದಮೇಲೆ ಸೋಮಾರಿಗಳಾದರು. ತಮ್ಮ ಸ್ಥಿತಿ ಯನ್ನು ಉತ್ತಮಪಡಿಸಿಕೊಳ್ಳುವುದಕ್ಕಾಗಲೀ ಅಥವಾ ಮತ್ತಾವ ಸುಧಾ ರಣೆಗಾಗಲೀ ಈ ಉಳಿದ ಕಾಲವನ್ನು ಸರಿಯಾಗಿ ಉಪಯೋಗಿಸಿಕೊ ಳ್ಳಲಿಲ್ಲ. ಹೊಟ್ಟೆಗಿಲ್ಲದೆ ಸಾಯುತ್ತಿರುವ ಗಂಡಸಾಗಲೀ ಹೆಂಗಸಾಗಲೀ ತನ್ನ ವಿರಾಮಕಾಲದಲ್ಲಿ ಕೆಲಸಮಾಡಿ ಒಂದು ಆಣೆಯನ್ನು ಸಂಪಾದಿಸಲು ಖಂಡಿತ ಸಂತೋಷದಿಂದ ಒಪ್ಪುತ್ತಾರೆ. ಏಕೆಂದರೆ ಹಳ್ಳಿಯವರು ತಮ್ಮ ಹಸಿವನ್ನು ತೀರಿಸಿಕೊಳ್ಳಲು ಎರಡು ದುಡ್ಡು ಸಂಪಾದಿಸುವ ಬದಲು, ಕೆಲಸಮಾಡುವ ಕಷ್ಟವನ್ನು ತಪ್ಪಿಸಿಕೊಳ್ಳಬೇಕೆಂಬ ಬುದ್ಧಿ ವಾದಕ್ಕೆ ಒಪ್ಪುವುದಿಲ್ಲ. ಹಳ್ಳಿಗಳಲ್ಲಿ ಸೇವೆಮಾಡತಕ್ಕವರು ಬೀಸ ಬೇಕೆಂದಾಗಲೀ ಅಥವಾ ಅಕ್ಕಿ ತಯಾರಿಸಬೇಕೆಂದಾಗಲೀ ನನಗೆ ಕಾಗದ ಬರೆದಿರುವರು ತಿಳಿದಿರುವುದು ತಪ್ಪು ಭಾವನೆ. ಆದರೆ ಆ ಗ್ರಾಮಸೇವಕನು ಮೇಲಿನ ಸಾಧನಗಳನ್ನೂ ಮತ್ತು ಅವರಿಂದ ಕೆಲಸ ಮಾಡುವುದನ್ನೂ ತಿಳಿದಿರಬೇಕು. ಏಕೆಂದರೆ ಆ ಸಾಧನಗಳನ್ನು ಉತ್ತಮಪಡಿಸಲು ಬೇಕಾದ ಸಲಹೆಗಳನ್ನು ಕೊಟ್ಟು ಅವುಗಳ ಕಾರ್ಯಶಕ್ತಿ ಏನೆಂಬುದನ್ನು ತಿಳಿಯಲು ಮೇಲಿನ ಪರಿಶ್ರಮವು ಸಹಾಯವಾಗುತ್ತದೆ. "ಈ ಕಾರ್ಯಕ್ರಮದ ಪ್ರಾರಂಭದಲ್ಲಿ ಉತ್ಸಾಹದಿಂದ ಗಂಡಸರು, ತಾವೇ ಇಷ್ಟಪಟ್ಟಾಗಲೀ ಅಥವಾ ಮಾಡಬೇಕೆಂದು ಹೇಳಿಸಿಕೊಂಡಾಗಲೀ

ಒಟ್ಟು ಬೀಸಿ ಅಕ್ಕಿ ತಯಾರಿಸುವರು. ಆದರೆ ಮುಂದೆ ಆ ಕೆಲಸದ ಹೊರೆಯೆಲ್ಲ ನಮ್ಮ ಮೇಲೆ ಬೀಳುವುದು" ಎಂದು ಅವರು ಹೇಳಿರುವ ಮಾತು ಸರಿಯಾಗಿಲ್ಲ. ನಿಜಾಂಶವೇನೆಂದರೆ, ಅಕ್ಕಿ ತಯಾರಿಸುವ ಮತ್ತು ಹಿಟ್ಟು ಮಾಡುವ ಕೆಲಸಗಳು ಹೆಂಗಸರ ವಿಶೇಷಾಧಿಕಾರಕ್ಕೆ ಸೇರಿತ್ತು. ಗೌರವಯುತವೂ ಶಕ್ತಿಯನ್ನು ಉಂಟುಮಾಡುವುದೂ ಆದ ಈ ಕೆಲಸ ಮಾಡಿ ಹತ್ತಾರುಸಾವಿರ ಹೆಂಗಸರು ತಮ್ಮ ಜೀವನ ನಡೆಸಿಕೊಳ್ಳುತ್ತಿದ್ದರು. ಅವರಿಂದ ನಾವು ಕಸಿದುಕೊಂಡಿರುವ ಈ ಎರಡು ಕಸಬುಗಳಿಗೆ ಬದಲಾಗಿ ಬೇರೆ ಇನ್ನೊಂದು ಉದ್ಯೋಗವನ್ನು ಕಂಡು ಹಿಡಿಯಲು ನಮಗೆ ಸಾಧ್ಯವಾಗಿಲ್ಲದುದರಿಂದ, ಅವರಲ್ಲಿ ಹೆಚ್ಚುಭಾಗ ಸ್ತ್ರೀಯರು ಬಲವಂತದಿಂದ ಸೋಮಾರಿಗಳಾಗಬೇಕಾಗಿದೆ.

ನನಗೆ ಕಾಗದ ಬರೆದಿರುವ ಮಹಿಳೆಯು "ಈಗೀಗ ಸ್ವಲ್ಪ ಅಭಿವೃದ್ಧಿಯಾಗುತ್ತಿದೆ" ಎಂದು ಹೇಳುವಾಗ ಅವರ ಮನಸ್ಸಿನಲ್ಲಿ ಪಟ್ಟಣದಲ್ಲಿ ವಾಸಮಾಡುವವರನ್ನು ನಿಸ್ಸಂಶಯವಾಗಿ ಊಹಿಸಿಕೊಂಡಿದ್ದಾರೆ. ಏಕೆಂದರೆ ಹಳ್ಳಿಗಳಲ್ಲಿ ಅಂತಹ ಅಭಿವೃದ್ಧಿ ಕೆಲಸ ನಡೆಯುವುದಕ್ಕೆ ಆ ಬಗೆಯ ಕೆಲಸಗಾರರೇ ಅಲ್ಲಿಗೆ ಕಾಲಿಟ್ಟಿಲ್ಲ. 700000 ಹಳ್ಳಿಗಳಲ್ಲಿ ಜನರು ಹೇಗೆ ಜೀವಿಸುತ್ತಿದ್ದಾರೆಂಬುದೇ ಹೆಚ್ಚು ಜನರಿಗೆ ತಿಳಿದಿಲ್ಲ. ಪುಷ್ಟಿಯಾದ ಆಹಾರ ಮತ್ತು ಚಳಿ ಮಳೆಯನ್ನು ತಡೆಯುವ ಬಟ್ಟೆಗಳಿಲ್ಲದೆ ಅವರು ಬಡವಾಗುತ್ತಿರುವ ವಿಷಯ ನಮಗೆ ತಿಳಿದಿಲ್ಲ. ಸತ್ವವಿಲ್ಲದ ಗಿರಣಿಯ ಅಕ್ಕಿ ಮತ್ತು ಹಿಟ್ಟನ್ನು ಆಹಾರಕ್ಕೆ ಉಪಯೋಗಿಸಿ ಅವರೂ ಮತ್ತು ಅವರ ಮಕ್ಕಳೂ ಇರುವ ಅಲ್ಪ ಸ್ವಲ್ಪ ಶಕ್ತಿಯನ್ನೂ ದೇಹದಾರ್ಢ್ಯವನ್ನೂ ಹೇಗೆ ಕಳೆದುಕೊಳ್ಳುತ್ತಿದ್ದಾರೆಂಬುದು ನಮಗೆ ಗೊತ್ತಿಲ್ಲ.

ಅಕ್ಕಿ ಕುಟ್ಟುವ ಮತ್ತು ಹಿಟ್ಟು ಮಾಡುವ ಈ ಹಿಂದಿನ ಪದ್ಧತಿಗಳು ಈಗ ರೂಢಿಗೆ ಬರಬೇಕೆಂದು ನಾನು ಅವುಗಳ ವಿಷಯದಲ್ಲಿ ನನಗಿರುವ ಪಕ್ಷಪಾತಕ್ಕೋಸ್ಕರ ಮಾತ್ರ ಹೇಳುತ್ತಿಲ್ಲ. ಈ ಪದ್ಧತಿಯು ಪುನಃ

ರೂಢಿಗೆ ಬರಬೇಕೆಂದು ನಾನು ಸೂಚಿಸುತ್ತೇನೆ. ಏಕೆಂದರೆ ಸೋಮಾರಿಗಳಾಗಿರುವ ಅಸಂಖ್ಯಾತ ಹಳ್ಳಿಯ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡಲು ಬೇರೆ ಯಾವ ಮಾರ್ಗವೂ ಕಾಣುವುದಿಲ್ಲ. ಈಗಿನ ಆರ್ಥಿಕ ದುಃಸ್ಥಿತಿಯನ್ನು ಪರಿಹರಿಸದೆ ಇದ್ದರೆ ಹಳ್ಳಿಗಳನ್ನು ಅಭಿವೃದ್ಧಿಗೆ ತರುವುದು ಅಸಾಧ್ಯ ಎಂದು ನನ್ನ ಅಭಿಪ್ರಾಯ. ಆದುದರಿಂದ ಹಳ್ಳಿಯವರು ಈಗ ಅವರು ವ್ಯರ್ಥಮಾಡುತ್ತಿರುವ ಕಾಲವನ್ನು ಸದುಪಯೋಗಪಡಿಸುವಂತೆ ಪ್ರೇರಿಸಿದರೆ ಅದೇ ಗ್ರಾಮಾಭಿವೃದ್ಧಿ ಕಾರ್ಯವಾಗುವುದು. ನನಗೆ ಕಾಗದ ಬರೆದಿರುವ ಗೆಳತಿಗೂ ಮತ್ತು ಅವರಂತೆಯೇ ಯೋಚಿಸುತ್ತಿರುವ ಇತರರಿಗೂ ನಾನು ಹೇಳುವುದಿಷ್ಟು. ಅವರು ಹಳ್ಳಿಗಳಿಗೆ ಹೋಗಿ ಅಲ್ಲಿಯವರಂತೆ ಸ್ವಲ್ಪಕಾಲ ಜೀವನ ನಡೆಸಲಿ. ಆಗ ನನ್ನ ಮಾತು ಎಷ್ಟು ಹಿತವಾಗಿದೆ ಎಂಬುದು ಅವರಿಗೆ ಜಾಗ್ರತೆ ಗೊತ್ತಾಗುವುದು. 30-11-1934.

೧೨. ಅಖಿಲಭಾರತ ಗ್ರಾಮೋದ್ಯೋಗಸಂಘ ಅದರ ಉದ್ದೇಶವೇನು?

[28-1-35 ರಲ್ಲಿ ಸಂಯುಕ್ತಪ್ರಾಂತದ ಒಬ್ಬರು ಮಹನೀಯರು ಗಾಂಧೀಜಿಯವರನ್ನು ಕಂಡು ಅವರಿಗೆ ಈ ಕೆಳಗಿನ ಪ್ರಶ್ನೆಗಳನ್ನು ಹಾಕಿದರು. ಅವುಗಳನ್ನೂ ಆ ಪ್ರಶ್ನೆಗೆ ಗಾಂಧೀಜೀಯವರು ಕೊಟ್ಟ ಉತ್ತರಗಳನ್ನೂ ದೈನಂದಿನ ಪತ್ರಿಕೆಯಿಂದ ಆರಿಸಿ ಈ ಕೆಳಗೆ ಕೊಟ್ಟಿದೆ. ಪ್ರಕಟವಾಗುವುದಕ್ಕೆ ಮೊದಲು ಗಾಂಧೀಜಿಯವರು ಇದನ್ನು ನೋಡಿ ತಿದ್ದಿದ್ದಾರೆ. ಮ. ದೇ]

ಪ್ರಶ್ನೆ—ಗ್ರಾಮೋದ್ಯೋಗಸಂಘದ ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಪ್ರಾರಂಭಿಸುವುದಕ್ಕೆ ನಿಮಗೆ ಯಾವಾಗ ಸಾಧ್ಯವಾಗುವುದೆಂದು ಊಹಿಸಿರುವಿರಿ ?

ಗಾಂಧೀಜಿ—"ಪ್ರಾರಂಭ" ಎನ್ನುವುದಕ್ಕೆ ನಿಮ್ಮ ಅರ್ಥವೇನೊ ಅದನ್ನು ತಿಳಿಯುವುದು ಕಷ್ಟವಾಗಿದೆ. ಆದರೆ ಆ ಮಾತಿಗೆ ಹಳ್ಳಿಗಳಲ್ಲಿ ಬೇರೆ ಬೇರೆ ಸಂಸ್ಥೆಗಳಿಂದ ಕೆಲಸ ಪ್ರಾರಂಭಿಸುವುದೆಂದು ಅರ್ಥವಾದರೆ ಸರಿಯಾದ ದಿನವನ್ನು ಗೊತ್ತುಮಾಡಲು ನನಗೆ ಸಾಧ್ಯವಿಲ್ಲ. ಏಕೆಂದರೆ ನಾವು ಮಾಡಬೇಕಾದ ಕೆಲಸಗಳು ಬಗೆಬಗೆಯ ಕಾರ್ಯಕ್ರಮವನ್ನೊಳ ಗೊಂಡಿರುವುದರಿಂದ ನಾವು ಬಹಳ ಎಚ್ಚರಿಕೆಯಿಂದ ಮುಂದುವರಿಯು ತ್ತಿದ್ದೇವೆ. ಎಚ್ಚರಿಕೆ ಎಂದರೆ ಸಾಧ್ಯವಾದಮಟ್ಟಿಗೂ ತಪ್ಪುಗಳನ್ನು ಮಾಡದೆ ಇರುವುದು. ಈ ಕಾರ್ಯಕ್ರಮವು ಇದುವರೆಗೆ ಪ್ರಯಾಣ ಮಾಡದೆ ದಾರಿಯನ್ನು ಗುರುತುಮಾಡದೆ ಇರುವ ಸಮುದ್ರದಲ್ಲಿ ಹಡಗು ನಡೆಸಿದಂತೆ. ಮುಂದಿನ ತಿಂಗಳು ಒಂಬನೇ ತಾರೀಖು ವಾರ್ಧಾ ದಲ್ಲಿ ಈ ಸಂಘದ ಸಭೆ ಕೂಡುವುದು. ಆಗ ನಿಷ್ಕೃಷ್ಟವಾದ ಒಂದು ಕಾರ್ಯಕ್ರಮವು ಬಹುಶಃ ಗೊತ್ತಾಗಬಹುದು. ಆದರೆ ಈ ಮಧ್ಯೆ ನಾವು ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆದಿಲ್ಲ. ನಾವು ಮುಖ್ಯವಾದ ವಿಷಯಗಳ ಸಂಗ್ರಹಮಾಡುತ್ತಿದ್ದೇವೆ. ಈ ಕಾರ್ಯದಲ್ಲಿ ಸಹಾಯ ಮಾಡುತ್ತೇವೆಂದು ಭರವಸೆಗಳು ಅನೇಕ ಕಡೆಗಳಿಂದ ನಮಗೆ ಬಂದಿವೆ.

ಪ್ರಶ್ನೆ—ಈ ಸಂಘದ ಉಪಸಂಸ್ಥೆಗಳನ್ನು ಎಲ್ಲ ಪ್ರಾಂತ್ಯಗಳಲ್ಲೂ ಒಟ್ಟಿಗೆ ಸ್ಥಾಪಿಸುವಿರಾ? ಅಥವಾ ಕೆಲವು ಆರಿಸಿದ ಸ್ಥಳಗಳಲ್ಲಿ ಮಾತ್ರ ಮೊದಲು ಕೆಲಸ ಮಾಡಬೇಕೆಂಬುದು ನಿಮ್ಮ ಅಭಿಪ್ರಾಯವೆ? ಸಂಘದ ಮುಖ್ಯ ಕಛೇರಿಯು ಎಲ್ಲಿರುವುದು? ನೀವು ಇಲ್ಲಿಂದ ಪ್ರಯಾಣ ಮಾಡು ವುದರೊಳಗೆ ಒಂದು ಉಪಸಂಸ್ಥೆಯು ಇಲ್ಲಿ ಸ್ಥಾಪಿತವಾಗುವುದೆ?

ಗಾಂಧೀಜೀ—ಸಂಘದ ಶಾಖೆಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ತೆರೆಯಕೂಡದೆಂಬುದೇ ನಮ್ಮ ಉದ್ದೇಶ. ಆದರೆ ಭಾರತದ ಹಳ್ಳಿಗಳ ಲ್ಲೆಲ್ಲಾ ಈ ಸಂಘದ ಕಾರ್ಯಕ್ರಮ ನಡೆಸುವ ಪ್ರತಿನಿಧಿಗಳಿರಬೇಕು. ಸಂಘದ ಕೆಲಸಗಳು ಸರಿಯಾಗಿ ವಿಭಾಗವಾಗಬೇಕಾದರೆ ಭಾರತದಲ್ಲಿ

ಎಷ್ಟು ಹಳ್ಳಿಗಳಿವೆಯೋ ಅಷ್ಟು ಕಾರ್ಯನಡೆಯುವ ಕ್ಷೇತ್ರಗಳಿರಬೇಕೆಂದು ನಮ್ಮ ಗುರಿ. ಈ ಪ್ರಯತ್ನವು ಜಯಪ್ರದವಾಗಿ ನಡೆಯಬೇಕಾದರೆ ನಮ್ಮ ಕಾರ್ಯಕ್ರಮವು ಕೇಂದ್ರೀಕೃತವಾಗಿ ಒಂದುಗೂಡದಂತೆ ನೋಡಿಕೊಳ್ಳಬೇಕು. ನಾನು ಡಿಲ್ಲಿಯನ್ನು ಬಿಡುವುದಕ್ಕೆ ಮುಂಚೆ ಇಲ್ಲಿ ಒಂದು ಶಾಖೆಯು ಏರ್ಪಡುವುದೋ ಇಲ್ಲವೋ ಹೇಳಲಾರೆ. ಆದರೆ ದೊರಕಬಹುದಾದ ಎಲ್ಲಾ ಸಂಗತಿಗಳನ್ನು ನಾನು ಕೂಡಿಸುತ್ತಿದ್ದೇನೆ. ಕೇಂದ್ರ ಸಂಸ್ಥೆಯು ಕೊನೆಯ ತೀರ್ಮಾನವನ್ನು ಮಾಡುವುದು. ಸಂಘದ ಮುಖ್ಯಕಛೇರಿ ವಾರ್ಧಾದಲ್ಲಿದೆ. ಅಲ್ಲಿ ಸೇಠ್ ಜಮುನಾಲಾಲ್ ಬಜಾಜರು ಉತ್ಕೃಷ್ಟವಾದ ತೋಟವನ್ನೂ ಬೆಲೆಯಾದ ಕಟ್ಟಡವನ್ನೂ ಸಂಘದ ಕೆಲಸಗಳಿಗೆ ಕೊಟ್ಟಿದ್ದಾರೆ. ಆವಶ್ಯಕವಾದರೆ ಇನ್ನೂ ಹೆಚ್ಚು ಜಮೀನನ್ನು ಕೊಡುವುದಾಗಿ ವಾಗ್ದಾನಮಾಡಿದ್ದಾರೆ.

ಪ್ರಶ್ನೆ—ಗ್ರಾಮೋದ್ಯೋಗಸಂಘವು ಪುನರುಜ್ಜೀವನಗೊಳಿಸುವ ಕೈಗಾರಿಕೆಗಳಿಗೆ ಬೇಕಾದ ಅಂಕಿ ಅಂಶಗಳನ್ನು ಸಂಗ್ರಹಿಸಲು ತನ್ನ ಮೇಲೆಯೇ ಅವಲಂಬಿಸುವುದೆ? ಅಥವಾ ಈಗ ಈ ದೇಶದಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಸಹಾಯವನ್ನು ತೆಗೆದುಕೊಳ್ಳುವುದೆ?

ಗಾಂಧೀಜಿ—ಮಾಡಬೇಕಾದ ಕೆಲಸ ಬಹಳವಾಗಿದೆ. ಇತರರ ಸಹಾಯವಿಲ್ಲದೆ ಸಂಘವು ಯಾವ ಕೆಲಸವನ್ನೂ ಮಾಡುವುದಿಲ್ಲ. ಆದುದರಿಂದ ಅದು ಎಲ್ಲರ ಸಹಾಯವನ್ನು ಕೇಳಿ ತೆಗೆದುಕೊಳ್ಳುತ್ತದೆ. ಸರ್ಕಾರಿ ಸಂಸ್ಥೆಗಳ ಸಹಾಯವನ್ನೂ ತೆಗೆದುಕೊಳ್ಳುತ್ತದೆ.

ಪ್ರಶ್ನೆ—ಜಗತ್ತಿನ ಆರ್ಥಿಕ ತತ್ವಗಳಿಗೆ ಅನುಸಾರವಾಗಿ ಭಾರತದಲ್ಲಿ ಸ್ಥಾಪಿತವಾಗಿರುವ ಕೈಗಾರಿಕೆಗಳಿಗೆ ವಿರೋಧವಾಗಿ ಪರಿಣಮಿಸದಂತಹ ಗ್ರಾಮಕೈಗಾರಿಕೆಗಳನ್ನು ಮಾತ್ರ ಸ್ಥಾಪನೆ ಮಾಡಲು ಈ ಸಂಘವು ಪ್ರಯತ್ನಿಸುವುದೆ? ಅಥವಾ ಹಿಂದಿನ ಕಾಲದಲ್ಲಿ ಆ ಕೈಗಾರಿಕೆ

ಗಳು ಒಳ್ಳೆಯ ಸ್ಥಿತಿಯಲ್ಲಿದ್ದಾಗ ಹಳ್ಳಿಯ ಅಸಂಖ್ಯ ಜನರಿಗೆ ಅನ್ನ ಸಿಗುತ್ತಿತ್ತು; ಎಂಬ ತತ್ವದ ಮೇಲೆ ಅವುಗಳ ಪುನಃಸ್ಥಾಪನೆಯಿಂದ ಯಾವ ಪಕ್ಷಕ್ಕೆ ವಿರೋಧವಾದರೂ ಸರಿಯೆ ನಾಶವಾಗಿರುವ ಎಲ್ಲಾ ಕೈಗಾರಿಕೆಗಳನ್ನೂ ಮೊದಲಿನ ಸ್ಥಿತಿಗೆ ತರಲು ಯತ್ನಿಸುವುದೆ?

ಗಾಂಧೀಜಿ—ಹಳ್ಳಿಯ ಜನರ ನೈತಿಕ ಮತ್ತು ಆರ್ಥಿಕ ಬೆಳೆವಣಿಗೆಗೆ ಆವಶ್ಯಕವಾದ ಕೈಗಾರಿಕೆಗಳನ್ನೆಲ್ಲ ಪುನಃ ಸ್ಥಾಪಿಸಿ ಅವುಗಳ ಅಭಿವೃದ್ಧಿಗೆ ಬೇಕಾದ ಸಹಾಯವನ್ನೆಲ್ಲ ಸಂಘವು ನೀಡುತ್ತದೆ. ಈ ಕಾರ್ಯಕ್ರಮವು ಈಗ ಪ್ರಪಂಚದಲ್ಲಿ ನಡೆಯುತ್ತಿರುವ ಆರ್ಥಿಕ ವ್ಯಾಪಾರಿಕ ಸ್ಥಿತಿಗತಿಗಳಿಗೆ ವಿರೋಧವಾಗಿದ್ದರೂ ಸಂಘವು ಈ ಕಾರಣಕ್ಕೋಸ್ಕರ ತನ್ನ ಉದ್ದೇಶದಲ್ಲಿ ಹಿಂದೆ ಬೀಳುವುದಿಲ್ಲ.

ಪ್ರಶ್ನೆ—ಭಾರತದ ಹತ್ತಿಯ ಗಿರಣಿಗಳು ಖಾದಿಗೆ ಸರಿಯಾದ ಸಹಾನುಭೂತಿಯನ್ನು ತೋರಿಸುತ್ತಿಲ್ಲ ಎನ್ನುವುದು ಎಲ್ಲರೂ ಒಪ್ಪಿರುವ ಸಂಗತಿ. ಸಂಘವು ನಾಶವಾಗಿರುವ ಮತ್ತು ಇನ್ನೇನು ಸಾಯುವ ಸ್ಥಿತಿಯಲ್ಲಿರುವ ಮತ್ತು ಸರಿಯಾದ ವ್ಯವಸ್ಥೆಯಲ್ಲಿ ಕೆಲಸ ನಡೆಸದೆ ಇರುವ ಗ್ರಾಮ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದೆಂದು ನೀವು ಹೇಳಿರುವಿರಿ. ಸುವ್ಯವಸ್ಥಿತವಾದ ದೇಶೀಯ ದೊಡ್ಡ ಕೈಗಾರಿಕೆಗಳ ಅಭಿವೃದ್ಧಿಗೆ ಗ್ರಾಮಕೈಗಾರಿಕೆಗಳು ತಡೆಯಾಗಿ ಅಡ್ಡಬಂದರೆ ಆಗ ಸಂಘಕ್ಕೆ ಈ ದೊಡ್ಡ ಕೈಗಾರಿಕೆಗಳ ವಿರೋಧ ಉಂಟಾಗಬಹುದೆಂಬುದು ನಿಮ್ಮ ಮನಸ್ಸಿಗೆ ಬಂದಿಲ್ಲವೆ?

ಗಾಂಧೀಜಿ—ಸಕ್ಕರೆಗಿರಣಿ, ಅಕ್ಕಿಯಗಿರಣಿ, ಹಿಟ್ಟುಮಾಡುವ ಗಿರಣಿ ಮುಂತಾದ ಯಂತ್ರ ಕೈಗಾರಿಕೆಗಳ ವಿರೋಧವನ್ನು ಸಂಘವು ಪ್ರಾಯಶಃ ಎದುರಿಸಬೇಕಾಗುವುದು. ಇಂತಹ ಕಷ್ಟದಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಹುಡುಕುವುದು ನಮ್ಮ ಕೆಲಸ. ಈ ತೊಂದರೆಗಳನ್ನು ನಾವು ನಿವಾರಿಸಿಕೊಳ್ಳಬಹುದೆಂಬ ನಂಬಿಕೆ ನನಗೆ ಇದೆ.

ಪ್ರಶ್ನೆ—ಸಕ್ಕರೆಯ ಬದಲು ಬೆಲ್ಲ ತಯಾರಿಸಿದೆವೆನ್ನಿ. ಸಕ್ಕರೆ ಕೈಗಾರಿಕೆಗೆ ರಕ್ಷಣೆಯಿದೆ. ಈಗ ಅದು ತಕ್ಕಮಟ್ಟಿಗೆ ಸುವ್ಯವಸ್ಥಿತವಾದ ಕೈಗಾರಿಕೆಯಾಗಿದೆ. ಸ್ವಲ್ಪ ದಿನಗಳ ಹಿಂದೆ ಪತ್ರಿಕೆಗಳು, ಸಂಘವು ಬೆಲ್ಲ ಖರ್ಚಾಗುವುದನ್ನು ಹೆಚ್ಚಿಸುವ ಪ್ರಯತ್ನಮಾಡುತ್ತಿದೆಯೆಂದು ಬರೆದಿದ್ದವು ಈ ಮಾತು ನಿಜವಾದರೆ, ಹಾಗೆ ಮಾಡುವುದರಿಂದ ಸಂಘವು ಸಕ್ಕರೆ ಕೈಗಾರಿಕೆಯ ವಿರೋಧವನ್ನು ಎಬ್ಬಿಸಿದಂತಾಗುವುದಿಲ್ಲವೆ?

ಗಾಂಧೀಜಿ–ಹಾಗಾಗಬಹುದು. ಬೆಲ್ಲ ಖರ್ಚಾಗುವುದು ಹೆಚ್ಚಾಗಿ, ಸಕ್ಕರೆಯ ಉಪಯೋಗ ಕಡಿಮೆಯಾದರೆ, ಅದು ಭಾರತದ ಪುಣ್ಯವೆಂದೇ ಹೇಳಬೇಕು. ಏಕೆಂದರೆ ಸಕ್ಕರೆಗಿಂತ ಬೆಲ್ಲದಲ್ಲಿ ಶರೀರದ ಪೋಷಣೆಗೆ ಬೇಕಾದ ಸತ್ವ ಜಾಸ್ತಿ ಇದೆಯೆಂದು ವೈದ್ಯರು ನಿರ್ಧರಿಸಿದ್ದಾರೆ. ಜನರ ಆರೋಗ್ಯದ ಬೆಳೆವಣಿಗೆಗೆ ಯಾವ ಯಾಂತ್ರಿಕ ಕೈಗಾರಿಕೆಗಳೂ ಅಡ್ಡ ಬರದಂತೆ ನೋಡಿಕೊಳ್ಳುವುದು ಸಾರ್ವಜನಿಕರ ಮತ್ತು ಈ ಸಂಘದ ಕರ್ತವ್ಯವಾಗಿದೆ.

ಪ್ರಶ್ನೆ—ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ವಿರೋಧವಾಗದಂತೆ ಮತ್ತು ಅವುಗಳ ಜೊತೆಯಲ್ಲೇ ಗ್ರಾಮಕೈಗಾರಿಕೆಗಳೂ ಕೆಲಸಮಾಡುವಂತೆ ಸಂಘದ ಉದ್ದೇಶವಿರಬೇಕೇ ಕೂಡದೇ ಎಂಬ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ತಿಳಿಸುವಿರಾ?

ಗಾಂಧೀಜಿ—ಈ ಪ್ರಶ್ನೆಗೆ ಉತ್ತರವನ್ನು ಮೊದಲೇ ಹೇಳಿದ್ದೇನೆ.

ಪ್ರಶ್ನೆ—ನೀವು ಯೋಚಿಸುತ್ತಿರುವ ನಾಶವಾಗಿರುವ ಗ್ರಾಮಕೈಗಾರಿಕೆಗಳ ಪುನರುಜ್ಜೀವನವು, ಭವಿಷ್ಯದಲ್ಲಿ ಭಾರತದಲ್ಲಿ ಆಗಬೇಕಾಗಿರುವ ವಿವೇಕ, ಜಾಣತನ ಮತ್ತು ಮನುಷ್ಯತ್ವದಿಂದ ಕೂಡಿದ ಕೈಗಾರಿಕೋದ್ಯಮಸ್ಥಿತಿಗೆ [ಅತ್ಯಾಸೆಯ ಬಂಡವಾಳತನಕ್ಕೆ ವಿರೋಧವಾದಂತೆ] ಮೊದಲ ಮೆಟ್ಟಲೆಂದು ನಾನು ಸೂಚಿಸಿದರೆ ಅದು ತಪ್ಪೆ?

ಗಾಂಧೀಜಿ—ವರ್ಷದಲ್ಲಿ ನಾಲ್ಕು ತಿಂಗಳು ಬೇರೆ ಏನೂ ಕೆಲಸ ಮಾಡಲು ತೋಚದೆ ಸೋಮಾರಿಗಳಾಗಿರುವ ಲಕ್ಷಾಂತರ ಜನರಿರುವ

ಈ ದೊಡ್ಡ ದೇಶದಲ್ಲಿ, ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಇಟ್ಟುಕೊಂಡು ಎಲ್ಲರೂ ಸರಳವಾದ ಸುಖಜೀವನ ನಡೆಸುವುದು ಹೇಗೆ ಸಾಧ್ಯವೆಂದು ನನಗೆ ಗೊತ್ತಾಗಿಲ್ಲ. ಭಾರತದಲ್ಲಿ ಹಳ್ಳಿಗಳಲ್ಲಿ ನಡೆಸಲಾಗದಂತಹ ಕೈಗಾರಿಕೆಗಳು ಹೊರತು ಉಳಿದುವು ಪಟ್ಟಣಗಳಲ್ಲಿ ಸ್ಥಾಪನೆಯಾದ ಮೇಲೆ ನಿರುದ್ಯೋಗಿಗಳಾಗುವ ಅಷ್ಟು ಲಕ್ಷಜನರಿಗೂ ಗೌರವವಾದ ಉದ್ಯೋಗವನ್ನು ದೊರಕಿಸಿಕೊಡದ ಪಕ್ಷದಲ್ಲಿ, ಅವರೆಲ್ಲ ಉಪವಾಸದಿಂದ ಇರಬೇಕಾಗುವುದು ಖಂಡಿತ.

ಪ್ರಶ್ನೆ—ಗ್ರಾಮೋದ್ಯೋಗ ಸಂಘದ ಕಾರ್ಯಕ್ರಮವನ್ನು ಮೊದಲೇ ಊಹಿಸಿ, ಸರ್ಕಾರದವರು ಹೊರಡಿಸಿರುವ ಪ್ರಸಿದ್ಧಪತ್ರಿಕೆಯನ್ನು ಕುರಿತು ವೃತ್ತಪತ್ರಿಕೆಗಳು ಹೇಳುವುದು ನಿಶ್ಚಯವಾದರೆ, ಸಂಘಕ್ಕೂ ಸರ್ಕಾರಕ್ಕೂ ಹೋರಾಟ ನಡೆಯುವ ಸಂಭವವಿದೆಯೆಂದು ನೀವು ಯೋಚಿಸುವಿರಾ?

ಗಾಂಧೀಜಿ—ಸಂಘಕ್ಕೂ ಸರ್ಕಾರಕ್ಕೂ ಹೋರಾಟ ನಡೆಯುವ ಸಂಭವವಿಲ್ಲ. ಏಕೆಂದರೆ ಸಂಘದ ಧ್ಯೇಯವು, ಗ್ರಾಮನೈರ್ಮಲ್ಯದ ವಿಷಯ ಒಂದು ಬಿಟ್ಟು, ಮಿಕ್ಕ ಕಾರ್ಯಕ್ರಮಗಳಲ್ಲೆಲ್ಲ ಸರ್ಕಾರದ ಕೆಲಸ ರೀತಿಗಳಿಗೆ ಬೇರೆಯಾಗಿದೆಯೆಂದು ನನಗೆ ತೋರುತ್ತದೆ. ಸರ್ಕಾರದವರು ತಮ್ಮ ಅಧಿಕಾರಿಗಳಿಂದ ಎಲ್ಲೆಲ್ಲಿ ಗ್ರಾಮನೈರ್ಮಲ್ಯ ಕೆಲಸಗಳನ್ನು ನಡೆಸು ತ್ತಿರುವರೋ ಅಲ್ಲಿ ನಾವು ಆ ಕೆಲಸದಲ್ಲಿ ಕೈಹಾಕಕೂಡದು. ಸರ್ಕಾರದ ಕಾರ್ಯಕ್ಷೇತ್ರವನ್ನು ಸ್ಥಾನಭ್ರಷ್ಟಮಾಡಬೇಕೆಂಬ ಯೋಚನೆಯೇ ನಮ ಗಿಲ್ಲ. ಅವರ ಕೆಲಸದಲ್ಲಿ ಸಹಾಯವಾಗಬೇಕೆಂಬುದೇ ನಮ್ಮ ಉದ್ದೇಶ.

ಪ್ರಶ್ನೆ—ಈ ಸಂಘದ ಮೂಲಕ ಹಳ್ಳಿಗಳೊಂದಿಗೆ ಹೆಚ್ಚಾಗಿ ನಿಕಟಸಂಬಂಧ ಬೆಳೆಸುವ ಅವಕಾಶವನ್ನು ಕಲ್ಪಿಸಿಕೊಂಡು ಅದರಿಂದ ಕಾಯಿದೆ ಭಂಗ ಚಳುವಳಿಯನ್ನು ಹಿಂದಿನದಕ್ಕಿಂತಲೂ ಬಹಳ ದೊಡ್ಡ ರೀತಿಯಲ್ಲಿ ಪುನಃ ಪ್ರಾರಂಭಿಸಲು ಉಪಯೋಗಿಸಿಕೊಳ್ಳುವಿರೆಂದು ಸರ್ಕಾರ ದವರು ಸಂದೇಹ ಪಡುತ್ತಿರುವುದು ನಿಮಗೆ ಗೊತ್ತಿರಬೇಕು?

ಗಾಂಧೀಜಿ—ಈ ವಿಷಯವು ನಮ್ಮ ಮನಸ್ಸಿಗೆ ಹೊಳೆಯಲೇ ಇಲ್ಲ. ಇಂತಹ ಅಪ್ರತ್ಯಕ್ಷ ರೀತಿಯಲ್ಲಿ ನಾನು ಎಂದಿಗೂ ಕೆಲಸವನ್ನು ಮಾಡಿಲ್ಲ. ನನ್ನ ಮನಸ್ಸಿನಲ್ಲಿರುವ ಮುಖ್ಯ ಗುರಿಯನ್ನೇ ಇದು ಹಾಳು ಮಾಡಬಹುದು. ನೈತಿಕ ಮತ್ತು ಆರ್ಥಿಕ ಉನ್ನತಿಯು ಹಳ್ಳಿಯವರ ಸುಖಜೀವನಕ್ಕಾಗಿ ಆಗಬೇಕೆಂದು ನನ್ನ ಇಚ್ಛೆ. ಅದಷ್ಟು ಕೆಲಸ ನಡೆದರೆ ನನ್ನ ಇಷ್ಟವು ಸಫಲವಾದಂತೆಯೇ ಸರಿ. ಅದೇ ರೀತಿ ಕಾನೂನು ಭಂಗ ಚಳುವಳಿಯನ್ನು ನಾನು ಯಾವಾಗಲಾದರೂ ನಡೆಸಬೇಕಾದರೆ ಇನ್ನಾವ ಕಾರ್ಯಕ್ರಮಕ್ಕೂ ಸಂಬಂಧವಿಲ್ಲದಂತೆ ಸ್ವತಂತ್ರವಾಗಿ ಅದನ್ನು ನಡೆಸಲಾಗುವುದು. 'ಕಾಯಿದೆ' ಎಂಬ ಮಾತಿಗೆ ಸರಿಯಾದ ಅರ್ಥವನ್ನು ಕಲ್ಪಿಸಿಕೊಂಡರೆ, ಇಂಥ ಅನುಮಾನಗಳೆಲ್ಲ ಪರಿಹಾರವಾಗುವುದು. ಆದರೆ ನನಗೆ ಸಾಕಾದಷ್ಟು ತಾಳ್ಮೆಯಿದೆ. ನಾನು ಹೇಳಿರುವುದು ಸತ್ಯವೆಂದು ತಿಳಿದರೆ, ಇನ್ನು ಮುಂದೆ ನನಗೆ ಹೆಚ್ಚು ಶ್ರಮವಾಗದೆ, ಇಂತಹ ಅನುಮಾನಗಳೆಲ್ಲ ದೂರವಾಗುವುವೆಂದು ನನಗೆ ನಂಬಿಕೆಯಿದೆ.

ಪ್ರಶ್ನೆ—ನಾನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. ಸರ್ಕಾರದವರು ನೀವು ಕೈಗೊಂಡಿರುವ ಗ್ರಾಮೋದ್ಯೋಗ ಕಾರ್ಯಕ್ರಮದ ನೈಜವಾದ ಸತ್ವವನ್ನು ಅರಿತುಕೊಂಡು ಸಹಾಯ ಮಾಡಿದರೆ, ಆಗ ಅದ್ಭುತವಾದ ಕೆಲಸಮಾಡಿ ತೋರಿಸುತ್ತೇನೆಂದು ನೀವು ಹೇಳಿದಿರಿ. 'ಸಹಾಯ' ವೆಂದರೆ ಅರ್ಥವೇನು? ಹಾಗೆಂದರೆ ಧನಸಹಾಯವೆ?

ಗಾಂಧೀಜಿ—ನಾನು ಹೇಳುವುದಿಷ್ಟು. ಸರ್ಕಾರದವರು, ನಾನು ಕೆಲಸಮಾಡುವ ಕ್ರಮದ ಗುಟ್ಟನ್ನು ತಿಳಿದುಕೊಂಡು ನನ್ನ ಕಾರ್ಯಕ್ರಮದಲ್ಲಿ ಪೂರ್ಣವಾದ ಸಹಕಾರ ನೀಡಿದರೆ, ನಾನು ಅದ್ಭುತ ಫಲಗಳನ್ನು ತೋರಿಸಬಲ್ಲೆನೆಂದು ಹೇಳುತ್ತೇನೆ. ದ್ರವ್ಯಸಹಾಯದ ಸಹಕಾರ ನನಗೆ ಬೇಕಾಗಿಲ್ಲ. ನನಗೆ ಬೇಕಾದುದು ಸರ್ಕಾರದ ಉತ್ಸಾಹಪೂರಿತವಾದ ನೈತಿಕ ಬೆಂಬಲ ಮತ್ತು ನನ್ನ ಕಾರ್ಯಕ್ರಮದ ಅನುಮೋದನೆ. 8-2-1935.

೧೩. ನಿರಾಸೆ ಇಲ್ಲ

ಭಾರತದಲ್ಲಿ ಬಹುಶಃ ಎಲ್ಲರಿಗಿಂತ ಹಿರಿಯ ಕೆಲಸಗಾರರಾದ ಶ್ರೀ ಹರದಯಾಲ್‌ನಾಗ್‌ರವರು ಈರೀತಿ ಬರೆಯುತ್ತಾರೆ:—

" ನೀವು ನಡೆಸುತ್ತಿರುವ ಅಖಿಲಭಾರತ ಗ್ರಾಮೋದ್ಯೋಗಸಂಘದ ಕಾರ್ಯಕ್ರಮದಲ್ಲಿ ನಿಮಗೆ ಸಾಕಾದಷ್ಟು ಬೆಂಬಲ ಕೊಡುವ ಸೇವಕರ ಗುಂಪು ಇಲ್ಲದಿರುವುದು ನನಗೆ ನಿರಾಸೆಯುಂಟುಮಾಡಿದೆ. ಈ ಭಾಗದಲ್ಲಿ ನಾನು ನನ್ನ ಕರ್ತವ್ಯದಲ್ಲಿ ಉದಾಸೀನನಾಗಿದ್ದೇನೆಂದು ನೀವು ಆಪಾದನೆ ಮಾಡಿದರೆ ಅದಕ್ಕೆ ತಪ್ಪಿತಸ್ಥನೆಂದು ಒಪ್ಪಿಕೊಳ್ಳದೆ ನನಗೆ ಬೇರೆ ಮಾರ್ಗವಿಲ್ಲ. ಸಾರ್ವಜನಿಕ ಸೇವೆಗೆ ಪ್ರವೇಶಿಸಿದಂದಿನಿಂದಲೂ ನಾನು ಹಳ್ಳಿಗಳಲ್ಲಿ ಉದ್ಯೋಗಸ್ಥಾಪನೆ ಮಾಡುವುದರಿಂದ ಅಲ್ಲಿಯವರ ಆರ್ಥಿಕಸ್ಥಿತಿ ಹೇಗೆ ಬದಲಾಯಿಸುವುದೆಂಬುದನ್ನು ಕಂಡು ಹಿಡಿಯುತ್ತಿದ್ದೇನೆ. ನಿಮ್ಮ ಕಾರ್ಯಕ್ರಮವು ನನಗೆ ಬಹಳ ಉತ್ಸಾಹವನ್ನುಂಟುಮಾಡುವುದಾಗಿಲ್ಲ. ಏಕೆಂದರೆ ಅದರಲ್ಲಿ ಮೇಲಿನ ಆರ್ಥಿಕ ಪ್ರಶ್ನೆಯು ಮರೆಯಾಗಿಹೋಗಿವೆ. ನನ್ನ ತಪ್ಪಿನಿಂದ ನನಗೆ ಹಾಗೆ ತೋರಬಹುದು. ನಾನು ಈ ವಿಷಯದಲ್ಲಿ ತಿಳಿವಳಿಕೆಯನ್ನು ಅತ್ಯವಶ್ಯಕವಾಗಿ ಪಡೆಯಬೇಕಾಗಿದೆ.

ಭಾರತದ ಮೂಲೆಮೂಲೆಗಳಲ್ಲೂ ಸ್ಥಾಪಿತವಾಗಿದ್ದ ಗ್ರಾಮೋದ್ಯೋಗಗಳನ್ನು ಬಾಯಿಗೆ ಹಾಕಿಕೊಂಡ ಪರದೇಶದ ವ್ಯಾಪಾರವೆಂಬ ತೋಳವು ಹಿಂದಿನಂತೆ ಈ ದಿನವೂ ಇದ್ದೇ ಇದೆ. ವ್ಯಾಪಾರದ ಇಂದ್ರಜಾಲ ವಿದ್ಯೆಯು " ಅಗ್ಗವಾದ ಜಾಗದಲ್ಲಿ ನಿಮ್ಮ ಪದಾರ್ಥವನ್ನು ಕೊಳ್ಳಿರೆಂಬ " ಕೂಗಿನಿಂದ ಜನರನ್ನು ಮೋಹಿಸಿ ಹೆಚ್ಚು ಹೆಚ್ಚು ಪರಿಣಾಮಕಾರಿಯಾಗುತ್ತಲೇ ಇದೆ. ಭಾರತವು ಗ್ರಾಮ ಕೈಗಾರಿಕೆಗಳಿಂದ ತಯಾರಾದ ಪದಾರ್ಥಗಳಿಂದ ತುಂಬಿಹೋಗುವುದೆಂದು ಊಹಿಸೋಣ.

ಆದರೆ ಅವುಗಳನ್ನು ಕೊಳ್ಳುವವರು ಅಥವಾ ಖರ್ಚುಮಾಡುವವರು ಇಲ್ಲದಿದ್ದರೆ ಈ ಪದಾರ್ಥಗಳ ತಯಾರಿಯು ಬರಿಯ ನಷ್ಟವಾಗಿ ಪರಿಣಮಿಸುವುದು. ಕೈ ಮಗ್ಗದಿಂದ ಖಾದಿಯನ್ನು ತಯಾರಿಸಬಹುದು. ಆದರೆ ಅದರಿಂದ ಕೊಂಡುಕೊಳ್ಳುವವರನ್ನು ಸೃಷ್ಟಿಮಾಡುವುದಕ್ಕಾಗುವುದಿಲ್ಲ. ತಾವು ನೂತ ನೂಲಿನಿಂದ ತಯಾರಾದ ಬಟ್ಟೆಯನ್ನು ಕೂಡ ನೂಲುವವರು ಉಪಯೋಗಿಸುವುದಿಲ್ಲವೆಂಬುದು ನನ್ನ ವಿಷಾದಕರವಾದ ಅನುಭವದಿಂದ ಕಂಡುಬಂದಿದೆ. ನೂಲುವವರಲ್ಲಿ ಹೆಚ್ಚು ಜನರು ಖಾದಿಯನ್ನು ಧರಿಸುವುದಿಲ್ಲ. ಆ ನೂಲನ್ನು ಮಾರುವುದರಿಂದ ಅವರಿಗೆ ದೊರಕುವ ಹಣ ಅತಿ ಸ್ವಲ್ಪ. ಕೆಲವರು ಅದು ಗೌರವಕ್ಕೆ ಕಡಮೆಯೆಂಬ ಭಾವನೆಯಿಂದ ಮಾರುವುದಕ್ಕೂ ಒಪ್ಪುವುದಿಲ್ಲ. ಹಾಗೆಯೇ ದಾನವಾಗಿ ಕೊಡುವುದಕ್ಕೂ ಅವರು ಇಷ್ಟಪಡುವುದಿಲ್ಲ. ಬರಿಯ ವಿನೋದಕ್ಕಾಗಿ ಅಭ್ಯಾಸ ಮಾಡುತ್ತಿರುವ ಇಂತಹ ಜನರು ಬಹಳದಿನ ನೂಲುವ ಕೆಲಸವನ್ನು ಮಾಡಲಾರರು. ಭಾರತದ ಎಲ್ಲ ಹಳ್ಳಿಗಳೂ ತಮ್ಮಿಂದ ತಯಾರಾದ ಪದಾರ್ಥಗಳನ್ನು ತಮ್ಮ ಉಪಯೋಗಕ್ಕಲ್ಲದೆ ವ್ಯಾಪಾರಕ್ಕೋಸ್ಕರ ಇಟ್ಟರೆ ಅವುಗಳನ್ನು ಕೊಂಡುಕೊಳ್ಳುವವರು ಎಲ್ಲಿಂದ ಬರಬೇಕು? ಭಾರತದ ರಾಜಕೀಯ ಗುಲಾಮತನವು ಎಂದಿನವರೆಗೆ ನಿಲ್ಲುವುದೋ ಅಲ್ಲಿಯವರೆಗೂ ಯಾವ ಪರದೇಶದವರೂ ಈ ಸಾಮಾನುಗಳನ್ನು ಕೇಳುವುದಿಲ್ಲ. ನಮ್ಮ ದೇಶದವರು ಯಾವುದಾದರೂ ಸಾಮಾನನ್ನು ತ್ಯಜಿಸುವುದಾದರೆ, ಮೊದಲು ನಮ್ಮಲ್ಲಿ ತಯಾರಾದ ಈ ಒರಟು ಪದಾರ್ಥಗಳನ್ನು ತ್ಯಜಿಸುವರು. ಬೆಲ್ಲ ತಯಾರಿಸುವವನು ದೇಶಭಕ್ತಿಯನ್ನು ತೋರಿಸುವುದಕ್ಕೋಸ್ಕರ ಸ್ವಲ್ಪ ಬೆಲ್ಲವನ್ನು ರುಚಿನೋಡಬಹುದು ಅಷ್ಟೆ. ಆದರೆ ಅವನು ತನ್ನ ಚಹ ಮತ್ತು ಹಾಲಿಗೆ ಅದನ್ನು ಉಪಯೋಗಿಸುವನೆ? ಹಳ್ಳಿಯಲ್ಲಿ ಜೋಡುಗಳನ್ನು ತಯಾರಿಸುವ ಗ್ರಾಮಕೈಗಾರಿಕೆಯ ಮಾಲೀಕನು ಸೊಗಸಾಗಿಯೂ, ಹಿತಕರವಾಗಿಯೂ

ಅಗ್ಗವಾಗಿಯೂ ಇರುವ ಹೊರದೇಶದ ಜೋಡುಗಳನ್ನು ಮೆಟ್ಟುವುದನ್ನು ಬಿಟ್ಟು ತನ್ನ ಸಣ್ಣ ಕಾರ್ಖಾನೆಯಲ್ಲಿ ತಯಾರಾದ ಒರಟು ಜೋಡುಗಳನ್ನು ಉಪಯೋಗಿಸುವನೆ! ವ್ಯಾಪಾರಮಾಡಿ ಹಣ ಸಂಪಾದನೆಮಾಡಬೇಕೆಂಬ ಉದ್ದೇಶದಿಂದಲೇ ಪದಾರ್ಥಗಳನ್ನು ತಯಾರುಮಾಡುತ್ತಿರುವ ಅನೇಕ ಕೈಗಾರಿಕೆಗಳು ಊರ್ಜಿತವಾಗದೆ ಹಾಳಾಗಿರುವ ದುರದೃಷ್ಟವನ್ನು ನಾನೇ ಅನೇಕ ಕಡೆಗಳಲ್ಲಿ ನೋಡಿದ್ದೇನೆ. ಧನ ಕೂಡಿಸಬೇಕೆಂಬುದೇ ಅವುಗಳ ಮುಖ್ಯೋದ್ದೇಶವಾಗಿದ್ದುದರಿಂದ ಅವುಗಳು ದಿವಾಳಿ ಏಳುವುದು ಸ್ವಾಭಾವಿಕವಾಯಿತು. ಹಳ್ಳಿಯವರು ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಸುತ್ತಮುತ್ತಲ ಕಚ್ಚಾ ಪದಾರ್ಥಗಳಿಂದ ವಿರಾಮಕಾಲಗಳಲ್ಲಿ ತಾವೇ ತಯಾರಿಸಿಕೊಳ್ಳುವ ಸಾಮಾನುಗಳು ಯಾವ ಪರದೇಶದ ಮಾಲಿಗಿಂತಲೂ ಅಗ್ಗವಾದುದೆಂದು ಅವರಿಗೆ ಮನಮುಟ್ಟುವಂತೆ ಬೋಧಿಸಿದ ಹೊರತು ಈ ದೇಶದ ಹಳ್ಳಿಯವರು ಪರದೇಶದಿಂದ ಬಂದ ಮಾಲುಗಳನ್ನು ತ್ಯಜಿಸುವುದಿಲ್ಲ. ಹೊರದೇಶದ ಪದಾರ್ಥಗಳನ್ನು ಕೊಳ್ಳಬೇಕಾದರೆ ಹಣವನ್ನು ಸಾಲ ಪಡೆಯಬೇಕು. ಆದರೆ ಜೀವನಕ್ಕೆ ಅವಶ್ಯಕವಾದ ಪದಾರ್ಥಗಳನ್ನು ನಾವೇ ತಯಾರಿಸಿಕೊಂಡರೆ ಸಾಲಮಾಡುವ ಅವಶ್ಯಕತೆಯಿಲ್ಲ. ಹಳ್ಳಿಯವರ ಮಟ್ಟಿಗೆ ಈಗಿರುವ ಹಣದ ಚಲಾವಣೆ ಪದ್ಧತಿಗಿಂತ ಅಲ್ಲಿಯ ಜನರ ಸಹಕಾರದೊಂದಿಗೆ ಏರ್ಪಡಿಸಿದ ಸಾಮಾನುಗಳ ಅದಲು ಬದಲು ಪದ್ಧತಿಯು ಎಷ್ಟೋ ಮೇಲಾಗಿ ಕಾಣುತ್ತದೆ. ಪರದೇಶದ ವ್ಯಾಪಾರವೆಂಬ ತೋಳನಿಂದ ಹಳ್ಳಿಯವರು ಎಷ್ಟರಮಟ್ಟಿಗೆ ನೀತಿಗೆಟ್ಟಿದ್ದಾರೆಂದರೆ ಹಣವನ್ನು ಬಿಟ್ಟು ಅವರು ಇನ್ನಾವ ವಿಧದಲ್ಲೂ ಯೋಚನೆಯನ್ನು ಕೂಡ ಮಾಡುವುದಿಲ್ಲ."

ಹರದಯಾಲ್‌ಬಾಬುಗಳು ತಮ್ಮ ವಿಶ್ರಾಂತಿಗೆ ಅರ್ಹತೆಯನ್ನು ಸಂಪಾದಿಸಿಕೊಂಡಿದ್ದಾರೆ. ಸಾರ್ವಜನಿಕ ಜೀವನವನ್ನು ಬಿಟ್ಟು ಅವರು ವಿರಾಮವನ್ನು ತೆಗೆದುಕೊಂಡರೆ ಯಾರೂ ಅವರನ್ನು ಆಕ್ಷೇಪಿಸುವ

ಹಾಗಿಲ್ಲ. ಅವರೂ ಹುರುಡುಕಟ್ಟಿ ಕೆಲಸಮಾಡುತ್ತಿರುವ ಪಂಡಿತ ಮಾಳ ವೀಯರು, ಅಬ್ಬಾಸ್ ತಯಾಬ್ಜಿ* ಮತ್ತು ವಿಜಯರಾಘವಾಚಾರ್ಯರಂತೆ ಅವರು ಇನ್ನೂ ಸೇವೆ ಮಾಡಬೇಕೆಂದು ಇಚ್ಛಿಸಿದ್ದಾರೆ. ಈ ಕಾರಣದಿಂದ ಅವರು ವಿಮರ್ಶಕರಿಂದ ವಯಸ್ಸಾಗಿದೆಯೆಂಬ ರಿಯಾಯ್ತಿಯನ್ನು ಅಪೇ ಕ್ಷಿಸಲಾರರು. ಆ ಬಗೆಯ ರಿಯಾಯತಿ ಅವರಿಗೆ ಬೇಕಿಲ್ಲವೆಂದು ನನಗೆ ಗೊತ್ತು. ಅವರ ಶರೀರವೂ, ಬುದ್ಧಿಯೂ ಹಿಂದಿನಂತೆ ಚುರುಕಾಗಿಯೇ ಇದ್ದು, ದೇಶಸೇವೆಗೆ ಯಾವಾಗಲೂ ಸಿದ್ಧವಾಗಿಯೇ ಇವೆ.

ಅಂದ ಮೇಲೆ ನಾನು ಅವರಿಗೆ, ನಿಜವಾಗಿಯೂ ಈ ದೃಷ್ಟಿಯಲ್ಲಿ ಕೆಲಸಮಾಡುತ್ತಿರುವವರು ನಿರಾಸೆಯ ಮನಸ್ಸುಳ್ಳವರಾಗಿಲ್ಲವೆಂದು ಹೇಳ ಲಿಚ್ಛಿಸುತ್ತೇನೆ. ಈ ಕಾರ್ಯಕ್ರಮದ ಭೂಮಿಯು ಇನ್ನೂ ಹೊಸದಾಗಿರು ವುದರಿಂದ, ಅದನ್ನು ಬೆಳೆಕೊಡುವಂತೆ ಸಿದ್ಧಮಾಡಿಕೊಳ್ಳುವುದಕ್ಕೆ ಇನ್ನೂ ಬಹಳ ದಿನಗಳು ಬೇಕು. ತಮ್ಮ ಮುಂದಿರುವ ಕಾರ್ಯಕ್ರಮ ವನ್ನು ನಡೆಸುವುದಕ್ಕೇ ಗ್ರಾಮಸೇವಕರಿಗೆ ಸಾಧ್ಯವಿಲ್ಲವಾಗಿದೆ.

ಹರಿದಯಾಲ್‌ಬಾಬುರವರಿಗೆ ನಿರಾಸೆಯ ಮನೋಭಾವ ಕಂಡು ಬಂದಿರುವುದಕ್ಕೆ, ಅವರು ತಿಳಿಸಿರುವ ವಿಷಯವೇ ಕಾರಣವೆಂದು ನಾನು ಸೂಚಿಸುತ್ತೇನೆ. ತಮ್ಮ ಕರ್ತವ್ಯವನ್ನು ನಡೆಸಿಲ್ಲ ಎಂದು ಅವರು ತಪ್ಪನ್ನು ಒಪ್ಪಿಕೊಂಡಿದ್ದಾರೆ. ಅವರ ಪದ್ಧತಿಯಂತೆ, ಈ ಕೆಲಸವನ್ನೂ ಕೈಗೊಂಡಿ ದ್ದರೆ ಇದು ಕಷ್ಟವಾದುದೆಂದೇನೊ ಅವರಿಗೆ ಕಂಡು ಬರುತ್ತಿತ್ತು; ಆದರೆ ಖಂಡಿತ ನಿರಾಸೆಗೆ ಮಾತ್ರ ಅವಕಾಶವಾಗುತ್ತಿರಲಿಲ್ಲ. ಇದರಲ್ಲಡಗಿರುವ ಆರ್ಥಿಕಪ್ರಶ್ನೆಯು ಅವರಿಗೆ ಮರೆಯಾಗಿದೆ; ಏಕೆಂದರೆ ಅದನ್ನು ಕಂಡು ಕೊಳ್ಳುವಂತೆ ಅವರು ಕೆಲಸ ನಡೆಸಿಲ್ಲ.

ಹರಿಜನರ ಸೇವೆಯಲ್ಲಿ ನಾನು ಮುಳುಗಿದ್ದಾಗ, ಭಾರತವು ನಾಶ ವಾಗದೆ ಉಳಿಯಬೇಕಾದರೆ ನಾವು ಏಣಿಯ ಕೆಳಗಿನ ಮೆಟ್ಟಲಿನಿಂದ

---

* ಈಚೆಗೆ ದಿವಂಗತರು.

ಕೆಲಸ ಪ್ರಾರಂಭಿಸಬೇಕೆಂಬುದು ನನಗೆ ತೋರಿತು. ಅದು ಭದ್ರವಿಲ್ಲದೆ ಕೆಟ್ಟುಹೋಗಿದ್ದರೆ ಮೇಲಿನ ಮೆಟ್ಟಿಲುಗಳನ್ನಾಗಲಿ ಅಥವಾ ಮಧ್ಯದ ಮೆಟ್ಟಿಲುಗಳನ್ನಾಗಲೀ ಸರಿಮಾಡಿದರೆ ಅದು ನಿಷ್ಪ್ರಯೋಜಕವಾಗುವುದು ಖಂಡಿತ.

ನಮ್ಮ ದೇಶದ ಮುಂದಿರುವ ಈ ಕಾರ್ಯಕ್ರಮದಲ್ಲಿ ಆರ್ಥಿಕ ಸುದಾರಣೆಯಲ್ಲದೆ ಬೇರೆ ಉದ್ದೇಶಗಳೂ ಅಡಗಿವೆ. ಈಗಿನ ಕಾರ್ಯ ಕ್ರಮದಲ್ಲಿ ಸೂಚಿಸಿರುವ ರೀತಿಯಲ್ಲಿ ಪುಷ್ಟಿಯಾದ ಆಹಾರವನ್ನು ದೇಶಕ್ಕೆ ಒದಗಿಸಿದರೆ, ಆರೋಗ್ಯ ಐಶ್ವರ್ಯಗಳೆರಡನ್ನೂ ನಮ್ಮ ಜನರಿಗೆ ಒದಗಿಸಿದಂತಾಗುವುದು. ಹಳ್ಳಿಯವರು ತಮಗೆ ಬೇಕಾದ ಅಕ್ಕಿಯನ್ನು ತಾವೇ ತಯಾರಿಸಿಕೊಂಡು ತವಡಿನಿಂದಿರುವ ಆ ಸತ್ವವಿರುವ ಅಕ್ಕಿಯನ್ನು ತಿಂದರೆ ಕೊನೆಯಪಕ್ಷ ವರ್ಷಕ್ಕೆ 30 ಕೋಟಿ ರೂಪಾಯಿ ಉಳಿದಂತಾಗು ವುದು ಮತ್ತು ಅವರ ಆರೋಗ್ಯವನ್ನೂ ಉತ್ತಮಪಡಿಸಿಕೊಂಡಂತಾಗು ವುದು. ಪೇಟೆಗಳಲ್ಲಿ ತವಡಿನಿಂದಿರುವ, ಬೆಳ್ಳಗೆಮಾಡದಿರುವ ಅಕ್ಕಿಯು ಸಿಕ್ಕುವುದಿಲ್ಲವೆಂದರೆ ಅದು ವಿಷಾದಕರವಾದ ಸಂಗತಿ. ದೇಶಕ್ಕೆ ಸರಿಯಾದ ಮಾರ್ಗ ತೋರಿಸಬೇಕಾದರೆ ಗ್ರಾಮೋದ್ಯೋಗ ಸಂಘವು ಇನ್ನೂ ಸ್ವಲ್ಪ ಕಾಲ ತಡೆಯಬೇಕಾಗಿದೆ. ಎಂತಹ ಆಹಾರವನ್ನು ತೆಗೆದುಕೊಳ್ಳಬೇಕು ಮತ್ತು ಅದನ್ನು ತಯಾರಿಸಿಕೊಳ್ಳುವ ವಿಧಾನ ಹೇಗೆ ಎನ್ನುವುದನ್ನು ದೇಶದ ಜನರಿಗೆಲ್ಲ ಮೊದಲು ತಿಳಿಸಬೇಕಾಗಿದೆ.

ಅನುಪಯುಕ್ತವಾದ ಉತ್ತಮವಲ್ಲದ ಪದಾರ್ಥಗಳನ್ನು ತಯಾರು ಮಾಡಿ, ಅದನ್ನು ಇಷ್ಟವಿಲ್ಲದವರು ಕೊಂಡುಕೊಳ್ಳುವಂತೆ ಜನರಮೇಲೆ ಹೊರಿಸಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ನಾವು ನಡೆಸುತ್ತಿಲ್ಲ; ಪರದೇಶದಲ್ಲಿ ತಯಾರಾದ ಅಥವ ಈ ದೇಶದಲ್ಲಿ ತಯಾ ರಾಗುವ ಅಂಥದೇ ಸಾಮಾನುಗಳೊಂದಿಗೆ ಈ ಪದಾರ್ಥಗಳು ಪೈಪೋಟಿ ನಡೆಸಕೂಡದು. ಹಾಗೇನಾದರೂ ನಡೆದರೆ ಮುಂದೆ ಇವುಗಳ ನಾಶವು

ಖಂಡಿತವಾಗುತ್ತದೆ. ಪದಾರ್ಥಗಳನ್ನು ತಯಾರುಮಾಡುವ ಹಳ್ಳಿಯವರೇ ಅವನ್ನು ಕೊಂಡು ಉಪಯೋಗಿಸುವ ಗಿರಾಕಿಗಳಾಗಬೇಕು. ತಾವು ತಯಾರಿಸುವುದನ್ನು ಮೊದಲು ಅವರು ಖರ್ಚುಮಾಡಬೇಕು. ನೂರಕ್ಕೆ ತೊಂಬತ್ತರಂತೆ ಈ ಜನಸಂಖ್ಯೆಯಿರುವುದರಿಂದ ಈ ರೀತಿ ಖರ್ಚಾಗುವುದು ಕಷ್ಟವಲ್ಲ. ಪಟ್ಟಣದ ಜನರಿಗೆ ಆವಶ್ಯಕವಾಗಿ ಬೇಕಾದ ಪದಾರ್ಥಗಳನ್ನು ಹಳ್ಳಿಯವರು ಅವು ತಮಗೆ ಉಪಯೋಗವಾಗುವಂತಿದ್ದರೆ, ತಯಾರು ಮಾಡಬೇಕು. ಹಾಲು ಮತ್ತು ಚಹಗಳಿಗೆ ಬೆಲ್ಲವನ್ನೇ ಉಪಯೋಗಿಸುವಂತೆ ಎಲ್ಲ ಜನರಿಗೂ ತಿಳಿವಳಿಕೆ ಕೊಡುತ್ತೇವೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಹಾಲು ಅಥವಾ ಚಹಾಕ್ಕೆ ಬೆಲ್ಲವನ್ನು ಉಪಯೋಗಿಸಿದರೆ ಆರೋಗ್ಯಕ್ಕೆ ಕೆಟ್ಟದ್ದಾಗುತ್ತದೆಂಬ ಮೂಢ ನಂಬಿಕೆಯು ಸರಿಯಾದುದಲ್ಲವೆಂದು ಈಗ ಹೇಳುತ್ತಿರುವಂತೆ ಇನ್ನು ಮುಂದೆಯೂ ತಿಳಿವಳಿಕೆ ಕೊಡುತ್ತೇವೆ. ಸಕ್ಕರೆಗೆ ಬದಲಾಗಿ ಬೆಲ್ಲವನ್ನು ಚಹಾಕ್ಕೆ ಉಪಯೋಗಿಸಿದುದರಿಂದ ತನ್ನ ಹೆಂಡತಿಯ ಮಲಬದ್ಧತೆಯು ವಾಸಿಯಾಯಿತೆಂದು ಒಬ್ಬರು ನನಗೆ ಕಾಗದ ಬರೆದಿದ್ದಾರೆ. ಈ ವಿಷಯವು ನನಗೆ ಆಶ್ಚರ್ಯವಲ್ಲ. ಏಕೆಂದರೆ ಬೆಲ್ಲದಲ್ಲಿ ಭೇದಿಯಾಗುವುದಕ್ಕೆ ಅನುಕೂಲಪಡಿಸುವ ಮೃದುವಾದ ಶಕ್ತಿ ಇದೆ. ಸಕ್ಕರೆಯಲ್ಲಿ ಈ ಗುಣವಿಲ್ಲ. ಮಧ್ಯವರ್ಗದ ಜನರು ಹಳ್ಳಿಯವರನ್ನು ಸೂರೆಮಾಡಿದ್ದಾರೆ. ಅವರಲ್ಲಿ ಕೆಲವರು ದೇಶದ ನೂತನ ರಚನೆಯಲ್ಲಿ ಹಳ್ಳಿಯವರಿಗೆ ಇರುವ ಪ್ರಾಮುಖ್ಯತೆ ಗೌರವಗಳನ್ನು ಜನರಿಗೆ ತಿಳಿಸಿ ತಮ್ಮ ಹಿಂದಿನ ತಪ್ಪನ್ನು ಕಳೆದುಕೊಂಡಿದ್ದಾರೆ.

ಇನ್ನು ಉಳಿದಿರುವುದು ನೈರ್ಮಲ್ಯದ ಪ್ರಶ್ನೆ. ಅದಕ್ಕೆ ಸರಿಯಾಗಿ ಗಮನ ದೊರೆತಿಲ್ಲ. ಆದರಿಂದ ದೇಶಕ್ಕೆ ಆಳಿಗೆ ವರ್ಷಕ್ಕೆ ಎರಡು ರೂಪಾಯಿಯಂತೆ ಆದಾಯವಿದೆ. ಅಂದರೆ ಉತ್ತಮವಾದ ದೇಹಾರೋಗ್ಯ ಮತ್ತು ಒಳ್ಳೆಯ ಕಾರ್ಯಸಾಧನೆಯೊಂದಿಗೆ ವರ್ಷಕ್ಕೆ 60 ಕೋಟಿ ರೂಪಾಯಿ ಉಳಿದಂತಾಯಿತು. ನಾವು ನಡೆಸುತ್ತಿರುವ ಸವ್ಯದ ಕಾರ್ಯ

ಕ್ರಮವು ಭಾರತದ ಏಳು ಲಕ್ಷ ಹಳ್ಳಿಗಳ ಸಾವಿನ ಅವಸ್ಥೆಯನ್ನು ಎಲ್ಲ ದೃಷ್ಟಿಗಳಿಂದಲೂ ಉತ್ತಮಪಡಿಸಬೇಕೆಂದಿರುವ ತಳಹದಿಯಾಗಿದೆ. ಎಂದೋ ಆಗಬೇಕಾಗಿದ್ದ ಹಾಗೆಯೇ ಉಳಿದಿರುವ [ಭಾರತದ ಇಂದಿನ ರಾಜಕೀಯ ಸ್ಥಿತಿ ಏನಾಗಿದ್ದರೂ] ಈ ಕೆಲಸವನ್ನು ಮೊದಲು ನಡೆಸಬೇಕಾಗಿದೆ. ಸಾಹುಕಾರನು ಮೊದಲ್ಗೊಂಡು ಕಸಗುಡಿಸುತ್ತಿರುವವನವರೆಗೆ ಗ್ರಾಮದ ಪ್ರತಿಯೊಂದು ಗುಂಪಿನವರೂ ಈ ಕಾರ್ಯಕ್ರಮದಲ್ಲಿ ಸೇರಬಹುದು. ಎಲ್ಲ ಪಂಗಡದವರೂ ಪರಸ್ಪರ ಸ್ನೇಹದಿಂದಲೂ ಒಂದೇ ಮನಸ್ಸಿನಿಂದಲೂ ಈ ಕಾರ್ಯಕ್ರಮ ನಡೆಸುವುದರಲ್ಲಿ ನೆರವಾಗಬಹುದು. ಗ್ರಾಮಸೇವರು ಸಿಕ್ಕುವದು ನಿಶ್ಚಿತವಾದರೆ ಗ್ರಾಮೋದ್ಯೋಗಸಂಘದ ಭವಿಷ್ಯ ಸಾಧಿಸುವುದು ಖಂಡಿತವಾದಂತೆಯೆ. 13-4-1935.

---

೧೪. ತಪ್ಪು ವಾದ.

ಈಗ ಸದ್ಯದಲ್ಲಿ ನಡೆಸುತ್ತಿರುವ ಕಾರ್ಯಕ್ರಮವನ್ನು, ಅವಕ್ಕೆ ಸಂಬಂಧಪಟ್ಟ ವಿಷಯಗಳನ್ನೂ ಲಕ್ಷ್ಯದಿಂದ ನೋಡುತ್ತಿರುವವರೊಬ್ಬರು ನನಗೆ ಈ ರೀತಿ ಬರೆದಿದ್ದಾರೆ—

"ತಾವು ಉತ್ತರರೂಪವಾಗಿ ಬರೆದಿರುವ ಕಾಗದಕ್ಕೆ ಅನುಸಾರವಾಗಿ ಅದರಲ್ಲಿ ತಿಳಿಸಿರುವ ಮಾರ್ಗದಲ್ಲಿ ಕೆಲಸ ನಡೆದರೆ ನಾವು ಮಾಡುವ ಕಾರ್ಯಕ್ರಮಗಳಿಗೆ ಬೇಕಾದಷ್ಟು ಅವಕಾಶವಿದೆಯೆಂದು ತೋರುವುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಗ್ರಾಮಕೈಗಾರಿಕೆಗಳಿಗೆ ಒಂದು ಸ್ಥಾನವಿದೆ. ನನ್ನ ಮನಸ್ಸಿನಲ್ಲಿರುವುದನ್ನು ಸ್ಪಷ್ಟವಾಗಿ ತಿಳಿಸಬೇಕಾದರೆ, ಈ ಮಾರ್ಗದಲ್ಲಿ ಕೆಲಸಮಾಡಿ, ಭಾರಿ ಭಾರಿ ಕೈಗಾರಿಕೆಗಳನ್ನು ನಾವು

ತೆಗೆದುಹಾಕುವುದು ಅಸಾಧ್ಯ ಎಂದು ತೋರುವುದು. ಅಂತಹ ದೊಡ್ಡ ಕೈಗಾರಿಕೆಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವರ ಧನದ ಬೆಂಬಲದ ಮಾತು ಹಾಗಿರಲಿ; ದೇಶದ ಹಿತದ ದೃಷ್ಟಿಯಿಂದ, ಈಗ ಇರುವ ದೊಡ್ಡ ಕೈಗಾರಿಕೆಗಳನ್ನೂ, ಇದೇರೀತಿ ಮುಂದೆ ಸ್ಥಾಪಿತವಾಗಬಹುದಾದ ದೊಡ್ಡ ಕೈಗಾರಿಕೆಗಳನ್ನು ನಾಶಮಾಡುವುದು ಸರಿಯಲ್ಲ ಎಂದು ನನಗೆ ತೋರುತ್ತದೆ. ಯಂತ್ರಯುಗದ ಬೆಳೆವಳಿಗೆಗೆ ವಿರೋಧವಾಗಿರುವ ಮುಖ್ಯವಾದ ಆಕ್ಷೇಪಣೆ ಎಂದರೆ ಅದನ್ನು ನಡೆಸುತ್ತಿರುವವರು ಕೆಲಸ ಮಾಡುವ ಕೂಲಿಗಾರರ ಸಂಖ್ಯೆಯನ್ನು ದಿನಕಳೆದಂತೆ ಕಡಿಮೆಮಾಡಲು ಪ್ರಯತ್ನಿಸುವರೆಂಬುದು. ಈ ಕಾರಣದಿಂದ ನಿರುದ್ಯೋಗ ಹೆಚ್ಚಾಗುವುದು. ಲಾಭ ಹಂಚಿಕೊಳ್ಳುವ ಈಗಣ ರೀತಿಯೂ ಬದಲಾವಣೆ ಹೊಂದಬೇಕು. ಆದರೆ ವಿರಾಮವು—ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದಾದರೆ—ಇವುಗಳಿಗಿಂತ ಮತ್ತು ಇನ್ನೂ ಅನೇಕ ಪದಾರ್ಥಗಳಿಗಿಂತ ಹೆಚ್ಚು ಮುಖ್ಯವಾಗಿದೆ. ಸುಮ್ಮನೆ ಹೆಚ್ಚುಜನ ಕೆಲಸಗಾರರನ್ನು ನೇಮಿಸುವುದಕ್ಕಾಗಿ ಯಂತ್ರಗಳ ಕೆಲಸ ತೆಗೆಯುವ ಸಾಮರ್ಥ್ಯವನ್ನೂ, ಮತ್ತು ಅವುಗಳಿಂದಾಗುವ ಆರ್ಥಿಕ ಲಾಭವನ್ನು ನಾವು ಉದಾಸೀನ ಮಾಡಬಾರದು. ಯಂತ್ರವು ಅನೇಕರಿಗೆ ಆಹಾರ ವಿರಾಮಗಳನ್ನು ಒದಗಿಸಿಕೊಡಬೇಕು. ಅನೇಕರು ಎಂದರೆ ಆ ಕೈಗಾರಿಕೆಗೆ ಸಂಬಂಧಪಡದ ಬಲು ದೂರದ ಜನರನ್ನೂ ಕೂಡ ನಾನು ಸೇರಿಸುತ್ತೇನೆ. ಭಾರತವು ಹೆಚ್ಚು ಜನಸಂಖ್ಯೆಯುಳ್ಳ ಮತ್ತು ದಿನೇ ದಿನೇ ಬೆಳೆಯುತ್ತಿರುವ ದೇಶ. ಇಂತಹ ದೇಶದಲ್ಲಿ ಎಲ್ಲ ಜನರೂ ಸಾಮಾನ್ಯವಾದ ಸುಖದಲ್ಲಿರುವಂತೆ ಮಾಡಲು ಯಾವಾಗಲೂ ಸಾಧ್ಯವಾಗುವುದಿಲ್ಲ. ನೈರ್ಮಲ್ಯವನ್ನು ಉತ್ತಮಪಡಿಸಿ, ಉಪಯುಕ್ತವಾದ ವಿದ್ಯೆಯನ್ನು ಕಲಿಸಿದರೆ ಮನುಷ್ಯನ ಜೀವಮಾನಕಾಲವು ಹೆಚ್ಚುವುದು. ಇದರಿಂದ ಸಾಯುವವರ ಸಂಖ್ಯೆ ಕಡಮೆಯಾಗುವದು. ಜನಸಂಖ್ಯೆ ಅಧಿಕವಾಗಿರು

ವುದರಿಂದ ನಮ್ಮ ಸ್ಥಿತಿಯು ಇನ್ನೂ ಹೀನದೆಸೆಗೆ ಬರುವುದು. ಆದುದರಿಂದ ನಾವು ಕೈಗೊಳ್ಳುವ ಮೊದಲ ಕರ್ತವ್ಯವು. ಜನಸಂಖ್ಯೆಯನ್ನು ಹೆಚ್ಚದ ಹಾಗೆ ಮಾಡುವುದಾಗಿರಬೇಕು. ಹೀಗಾಗುವುದು ಸಂತಾನ ನಿಯಮವನ್ನು ಅನುಸರಿಸುವುದರಿಂದ ಮಾತ್ರ ಸಾಧ್ಯ. ನೀವು ಈ ಕ್ರಮವನ್ನು ವಿರೋಧಿಸಿರುವರೆಂಬುದು ನನಗೆ ತಿಳಿದಿದೆಯಾದರೂ ಈ ರೀತಿ ವ್ಯಕ್ತಪಡಿಸಿರುವುದಕ್ಕೆ ನನ್ನನ್ನು ಕ್ಷಮಿಸುವಿರೆಂದು ನಂಬಿದ್ದೇನೆ. ಆದರೆ ತಾವು ಈಗ ಹಳ್ಳಿಗಳ ನೈರ್ಮಲ್ಯ, ಪುಷ್ಟಿಯಾದ ಆಹಾರವನ್ನು ಒದಗಿಸುವ ಮಾರ್ಗ, ಸಣ್ಣಸಣ್ಣ ಕೈಗಾರಿಕೆಗಳು, ಈ ವಿಷಯಗಳಲ್ಲಿ ನಿಮ್ಮ ಮನಸ್ಸು ಹರಿಯಿಸಿ, ಅದರಿಂದ ಈಗಿನ ಆರ್ಥಿಕ ಸ್ಥಿತಿಯನ್ನು ಬದಲಾವಣೆ ಮಾಡಬೇಕೆಂದಿರುವುದರಿಂದ, ನಾನು ಮೇಲೆ ಸೂಚಿಸಿರುವ ಪ್ರಶ್ನೆಯೂ ಇವುಗಳಂತೆ ಗಮನಾರ್ಹವಲ್ಲವೆ, ಎನ್ನುವುದನ್ನು ಯೋಚಿಸಬೇಕಾಗಿ ಬೇಡುತ್ತೇನೆ.”

ಈ ಕಾಗದ ಬರೆದಿರುವವರು ನ್ಯಾಯವಾಗಿ ಯೋಚನೆ ಮಾಡತಕ್ಕ ಶಕ್ತಿಯುಳ್ಳವರು. ಆದರೂ ಅವರು ತಮ್ಮ ಮನಸ್ಸಿನಲ್ಲಿರುವ ಎರಡು ಸಂಸ್ಥೆಗಳ ಕಾರ್ಯಕ್ರಮದ ಮುಖ್ಯ ಗುರಿಯನ್ನು ಅರ್ಥಮಾಡಿಕೊಂಡಿಲ್ಲವೆಂದು ನನಗೆ ತೋರುತ್ತದೆ. ಆ ಸಂಸ್ಥೆಗಳ ಉದ್ದೇಶವು ದೊಡ್ಡ ಕೈಗಾರಿಕೆಗಳನ್ನು ಹಾಳುಮಾಡಬೇಕೆಂಬುದಾಗಲೀ ಅಥವಾ ಅವುಗಳ ಜಾಗದಲ್ಲಿ ತಮ್ಮ ಕಾರ್ಯಕ್ರಮವನ್ನು ನಡೆಸಬೇಕೆಂಬುದಾಗಲೀ ಅಲ್ಲ. ಅವುಗಳ ಗುರಿಯು ಸತ್ತುಹೋಗಿರುವ ಮತ್ತು ಇನ್ನೇನು ಸಾಯುವ ಸ್ಥಿತಿಯಲ್ಲಿರುವ ಕೈಗಾರಿಕೆಗಳನ್ನು ಪುನಃ ಸ್ಥಾಪಿಸಿ ಅವುಗಳಿಂದ ಸೋಮಾರಿಗಳಂತೆ ಜೀವಿಸುತ್ತಿರುವ ಹೊಟ್ಟೆಗಿಲ್ಲದ ಜನರಿಗೆ ಬಲವಂತವಾಗಿ ಉದ್ಯೋಗ ಕಲ್ಪಿಸುವುದಾಗಿದೆ. ಆದುದರಿಂದ ಈ ಕಾರ್ಯಕ್ರಮವು ರಚನಾತ್ಮಕವಾಗಿದೆಯೇ ಹೊರತು ನಾಶಕರವಾಗಿಲ್ಲ. ದೊಡ್ಡವೆನಿಸಿಕೊಂಡಿರುವ ಕೈಗಾರಿಕೆಗಳು ಈಗ ಇರುವ ಅನೇಕ ಲಕ್ಷ

ನಿರುದ್ಯೋಗಿಗಳಿಗೂ ಕೆಲಸ ಹೊಂದಿಸಿಕೊಡಲಾರವು. ಹಾಗೆ ಮಾಡಲು ಸಾಧ್ಯವೂ ಇಲ್ಲ. ಅವುಗಳ ಮುಖ್ಯ ಉದ್ದೇಶವು ಅದಕ್ಕೆ ಸಂಬಂಧಪಟ್ಟ ಕೆಲವು ಜನ ಬಂಡವಾಳಗಾರರಿಗೆ ಹಣ ಮಾಡಿಕೊಡುವುದು. ಕೆಲಸವಿಲ್ಲದೆ ಇರುವ ಲಕ್ಷ, ಲಕ್ಷ ಜನರಿಗೆ ಉದ್ಯೋಗ ಕೊಡಿಸಬೇಕೆಂಬ ಗುರಿಯನ್ನು ಅವುಗಳು ಇಟ್ಟುಕೊಂಡು ಕೂಡ ಇಲ್ಲ. ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು ಇನ್ನೂ ಬಹಳಕಾಲದವರೆಗೆ ದೊಡ್ಡ ಕೈಗಾರಿಕೆಗಳನ್ನು ತಡೆಯುವ ಸ್ಥಿತಿಯಲ್ಲಿಲ್ಲ. ಹಳ್ಳಿಯಲ್ಲಿರುವ ನಾವು ತಪ್ಪಾಗಿ ಗುಡಿಸಲುಗಳೆಂದು ಕರೆಯುತ್ತಿರುವ ಕತ್ತಲು ಗವಿಗಳಿಗೆ ಒಂದು ಕಿರಣ ಬೆಳಕನ್ನು ಕಳುಹಿಸುವವೆಂದು ಖಾದಿ ಮತ್ತು ಗ್ರಾಮೋದ್ಯೋಗಸಂಘದವರು ಆಶಿಸಬಹುದು, ಅಷ್ಟೆ. ಮೇಲಿನ ಮಾನ್ಯರಾದ ಬಾತ್ಮೀದಾರರು ' ವಿರಾಮವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಾದರೆ ಅದು ಇನ್ನೂ ಅನೇಕ ಪದಾರ್ಥಗಳಿಗಿಂತ ಮುಖ್ಯವಾದುದು ' ಎಂದು ಹೇಳಿ ತಮ್ಮ ಪಕ್ಷವನ್ನೇ ಕೈಬಿಟ್ಟಿದ್ದಾರೆ. ಅವರು ತಮ್ಮ ಮನಸ್ಸಿನಲ್ಲಿಟ್ಟಿರುವ ಗುರಿಯನ್ನೇ ಅವರ ಟೀಕೆಗೆ ಗುರಿಯಾಗಿರುವ ಮೇಲಿನ ಕಾರ್ಯಕ್ರಮಗಳು ಸಾಧಿಸಬೇಕೆಂದು ಹೊರಟಿವೆ. ಸೋಮಾರಿಗಳಾಗಿರುವ ಅನೇಕ ಲಕ್ಷ ಜನರ ವಿರಾಮ ಕಾಲವನ್ನು " ಸರಿಯಾದ ರೀತಿಯಲ್ಲಿ " ಉಪಯೋಗಿಸಲು ಈ ಕಾರ್ಯಕ್ರಮವು ಸಾಧಿಸುವುದಾಗಿದೆ.

ಇದು ಯಂತ್ರಗಳಿಗೂ ಅವುಗಳಿಂದ ಅಸಂಖ್ಯಾತ ಜನರಿಗೆ ಉಂಟಾಗುತ್ತಿರುವ ಕೆಡಕುಗಳಿಗೂ ಎದುರಾದ ಯುದ್ಧವಲ್ಲ. ನಿರ್ಜೀವವಾದ ಯಂತ್ರಗಳನ್ನು ಭಾರತದ ಏಳು ಲಕ್ಷ ಹಳ್ಳಿಗಳಲ್ಲಿ ನೆಲಸಿರುವ ಅನೇಕಲಕ್ಷ ಜೀವದ ಯಂತ್ರಗಳಿಗೆ ಎದುರಾಗಿ ನಿಲ್ಲಿಸಕೂಡದು. ಯಂತ್ರವು ಸರಿಯಾಗಿ ಉಪಯೋಗವಾಗಬೇಕಾದರೆ ಅದು ಮನುಷ್ಯನಿಗೆ ಸಹಾಯವಾಗಿ ಅವನ ಕೆಲಸವನ್ನು ಸುಲಭಮಾಡಬೇಕು. ಈಗಿನ ಸ್ಥಿತಿಯಲ್ಲಾದರೋ ಯಂತ್ರಗಳು ಅಸಂಖ್ಯಾತ ಸ್ತ್ರೀ ಪುರುಷರ ಅನ್ನವನ್ನು ಅವರ ಬಾಯಿಂದ

ಕಸಿದುಕೊಂಡು, ನಾಲ್ಕಾರು ಜನ ಬಂಡವಾಳಗಾರರಲ್ಲಿ ಆ ಹಣವು ಕೂಡುವಂತೆ ಮಾಡುತ್ತಿದೆ. ಅ. ಭಾ. ಚ. ಸಂಘ ಮತ್ತು ಅ. ಭಾ. ಗ್ರಾ. ಸಂಘಗಳು ನಡೆಸುತ್ತಿರುವ ಕಾರ್ಯಕ್ರಮವು ಬಹಳ ಸೂಕ್ಷ್ಮವಾದ ಈ ಮಾನವ ಯಂತ್ರಗಳ ಸ್ಥಳದಲ್ಲಿ ನಿರ್ಜೀವವಾದ ಯಂತ್ರಗಳನ್ನು ಸ್ಥಾಪಿಸಿ ಧನವನ್ನು ಕೂಡಿಹಾಕಬೇಕೆಂಬ ಈಗಿನ ಹುಚ್ಚನ್ನು ಕಡಿಮೆ ಮಾಡುವುದೇ ಆಗಿದೆ.

ಎಲ್ಲ ಜನರನ್ನೂ ಸಾಮಾನ್ಯವಾದ ಸುಖದಲ್ಲಿರುವಂತೆ ಮಾಡಲು ಯಾವಾಗಲೂ ಸಾಧ್ಯವಿಲ್ಲವೆಂದು ಕಾಗದಬರೆದಿರುವವರು ಅನುಮಾನ ವನ್ನು ಸೂಚಿಸಿದ್ದಾರೆ. ಹಳ್ಳಿಗಳಲ್ಲಿ ಕೆಲಸಮಾಡುತ್ತಿರುವವರಲ್ಲಿ ಈ ಭಯವು ಕಂಡುಬಂದಿಲ್ಲ. ಹಳ್ಳಿಯವರೊಂದಿಗೆ ಹೆಚ್ಚು ಹೆಚ್ಚಾಗಿ ಸೇರಿ ಹಳ್ಳಿಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ಆ ಜನಗಳಲ್ಲಿ ಬೇರೂರಿರುವ ಸಾಂಪ್ರದಾಯಕವಾದ ಸೋಮಾರಿತನವನ್ನು ಕಿತ್ತೊಗೆಯುವಂತೆ ಹುರಿ ದುಂಬಿಸಿದರೆ ಆಗ ಯಾವ ಹೆಚ್ಚು ಬದಲಾವಣೆಗಳೂ ಇಲ್ಲದೆ ಎಲ್ಲರನ್ನೂ ನ್ಯಾಯವಾದ ಸುಖದಲ್ಲಿರಿಸಬಹುದೆಂಬ ನಂಬಿಕೆ ಅಲ್ಲಿ ಕೆಲಸಮಾಡುವ ಗ್ರಾಮಸೇವಕರಲ್ಲಿ ಹೆಚ್ಚಾಗುತ್ತಿದೆ. ಕ್ರೂರವಾದ ಮತ್ತು ಅನ್ಯಾಯ ವಾದ ಕೆಲವು ಸ್ಥಿತಿಗತಿಗಳನ್ನು ನಾವು ಕಡಿಮೆಮಾಡಬೇಕಾಗುತ್ತದೆ. ಸ್ಥಾಪಿತವಾದ ಹಕ್ಕುಗಳನ್ನುಳ್ಳ ಬಂಡವಾಳಗಾರರ ಸಹಾನುಭೂತಿ ಸಹ ಕಾರಗಳು ದೊರೆತರೆ ಈ ಬದಲಾವಣೆಯೂ ಕೂಡ ಗೋಚರವಾಗದಂತೆ ನಡೆದುಹೋಗುವುದು.

ಈಗಿರುವ ಜನಸಮುದಾಯಕ್ಕೆ ನ್ಯಾಯವಾದ ಸುಖ ದೊರಕಿಸ ಲಾರೆವೆಂಬ ಭಯವು ಬಾತ್ಮೀದಾರರನ್ನು ಸಹಜವಾಗಿ ಹೆಚ್ಚು ಜನಸಂಖ್ಯೆ ಇದೆ ಎಂಬ ಊಹನೆಯಿಂದ ಭಯಗ್ರಸ್ತರನ್ನಾಗಿ ಮಾಡಿದೆ. ಸಂತಾನ ನಿಯಮವನ್ನು ಅನುಸರಿಸಬೇಕೆಂಬುದು ಈ ಬಗೆಯ ವಾದಸರಣಿಯ ಮುಂದಿನ ನ್ಯಾಯವಾದ ಮೆಟ್ಟಲು. ನನಗೆ 'ಸಂತಾನ ನಿಯಮ'ವು

ಕತ್ತಲು ತುಂಬಿರುವ ಭಯಂಕರವಾದ ಪಾತಾಳದಂತಿದೆ. ಅದನ್ನು ಅನುಸರಿಸುವುದು ನಮಗೆ ಗೊತ್ತಿಲ್ಲದ ಶಕ್ತಿಗಳೊಂದಿಗೆ ಆಟವಾಡಿದಂತೆ. ಕೆಲವು ಸ್ಥಿತಿಗತಿಗಳಲ್ಲಿ ಕೃತಕಸಹಾಯಗಳಿಂದ ಸಂತಾನ ನಿಯಮವನ್ನು ಆಚರಣೆಗೆ ತರುವುದು ನ್ಯಾಯವೆನಿಸಿದರೂ, ಹೆಚ್ಚು ಸಂಖ್ಯೆಯ ಜನರಲ್ಲಿ ಅದನ್ನು ಪ್ರಯೋಗಿಸುವುದು ಖಂಡಿತ ಅಸಾಧ್ಯವೆಂದು ನನಗೆ ತೋರುತ್ತದೆ. ಕೃತಕಸಾಧನಗಳಿಂದ ಸಂತಾನವನ್ನು ನಿರೋಧಿಸಿರೆಂದು ಅವರಿಗೆ ಬೋಧಿಸುವುದಕ್ಕಿಂತ ಸಂಯಮದಿಂದ ಬ್ರಹ್ಮಚರ್ಯವನ್ನು ಅಭ್ಯಾಸ ಮಾಡಿರೆಂದು ಒಪ್ಪಿಸುವುದು ಸುಲಭವೆಂದು ನನಗೆ ತೋರುತ್ತದೆ. ಈ ಸಣ್ಣಪ್ರಪಂಚವು ನೆನ್ನೆ ತಯಾರಾದ ಆಟದ ಗೊಂಬೆಯಲ್ಲ. ಕೋಟಿ, ಕೋಟಿ ವರ್ಷಗಳಿಂದ ಬೆಳೆದು ಬಂದಿರುವ ಈ ಪ್ರಪಂಚವು ಯಾವಾಗಲೂ ಹೆಚ್ಚು ಜನಸಂಖ್ಯೆಯ ಭಾರದಿಂದ ಕಷ್ಟಕ್ಕೊಳಗಾಗಿಲ್ಲ. ಕೃತಕಸಹಾಯಗಳಿಂದ ಜನಸಂಖ್ಯೆ ಹೆಚ್ಚದಂತೆ ತಡೆಯದಿದ್ದರೆ ಪ್ರಪಂಚವು ಆಹಾರ ಸಾಲದೆ ನಾಶವಾಗುವುದೆಂಬ ಸತ್ಯಾಂಶ ಇದ್ದಕ್ಕಿದ್ದಂತೆ ಥಟಕ್ಕನೆ ಕೆಲವರಿಗೆ ಕಾಣಿಸಿಕೊಂಡಿತೇನು?

ಮೇಲಿನ ಕಾಗದ ಬರೆದಿರುವವರು ಒಂದು ತಪ್ಪು ತಿಳಿವಳಿಕೆಯಿಂದ ಮತ್ತೊಂದನ್ನು ಊಹಿಸಿಕೊಂಡು ಕೊನೆಗೆ ದೊಡ್ಡ ಪ್ರಮಾಣದಲ್ಲಿ ಸಂತಾನವನ್ನು ತಡೆಗಟ್ಟಬೇಕೆಂಬ ಕೆಸರು ಹಳ್ಳದಲ್ಲಿ ತಮ್ಮ ವಾದವನ್ನು ಕೊನೆಗಾಣಿಸಿದ್ದಾರೆ. 14-9-1935.

೧೪. ಯಂತ್ರಗಳಿಗೆ ಎದುರಾಗಿ ಯುದ್ಧ

ಬೊಂಬಾಯಿ ರಾಷ್ಟ್ರಮಹಾಸಭೆಯಲ್ಲಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ನಿರ್ಣಯವು ಅನುಮೋದಿಸಲ್ಪಟ್ಟ ಈಚೆಗೆ ಗಾಂಧಿಜಿಯವರ ಮೇಲೆ ಪತ್ರಗಳ ಸುರಿಮಳೆಯಾಗುತ್ತಿದೆ. ಪ್ರಶ್ನೆಗಳು, ವಿಚಾರ ವಿವರಣೆ, ಸೂಚನೆಗಳು, ಸೇವೆಮಾಡಲು ಸಿದ್ಧವಾಗಿರುವವರು, ಇವೇ ದೇಶದ ಎಲ್ಲಾ ಕಡೆಗಳಿಂದಲೂ ಬರುತ್ತಿರುವ ಆ ಪತ್ರಗಳ ವಿಷಯಗಳು. ಗಾಂಧಿಜಿಯವರು ಸಕಾಲದಲ್ಲಿ ಅವುಗಳ ವಿಷಯವನ್ನೆಲ್ಲಾ ತೀರ್ಮಾನಿಸುತ್ತಾರೆ. ಇನ್ನೇನು ಸಿದ್ಧವಾಗುವ ಸಂಘದ ಕಾರ್ಯನಿರ್ವಾಹಕ ಮಂಡಲಿಯು ಎಲ್ಲಾ ಸೂಚನೆಗಳನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸುವುದು. ಆದರೆ ಪದೇ ಪದೇ ಜನರು ಕೇಳುತ್ತಿರುವ—ಅಂತು ನನ್ನನ್ನು ಕೇಳುತ್ತಿರುವ—ಒಂದು ಪ್ರಶ್ನೆಗೆ ಈಗಲೇ ಉತ್ತರವನ್ನು ಕೊಡಬಹುದು. ಪ್ರಶ್ನೆಗಳನ್ನು ಕೇಳುವವರಲ್ಲಿ ಒಬ್ಬರು ಈ ರೀತಿ ಕೇಳಿದರು “ ಮಿಲ್‌ನಲ್ಲಿ ಕೆಲಸಮಾಡುವ ಪ್ರತಿಯೊಬ್ಬ ಕೂಲಿಯೂ, ಹತ್ತುಜನ ಹಳ್ಳಿಯವರು ಮಾಡುವಷ್ಟು ಕೆಲಸ ಮಾಡುತ್ತಾನೆ. ಅಂದರೆ ಅಷ್ಟು ಜನರಿಗೆ ನಿರುದ್ಯೋಗವನ್ನು ಕಲ್ಪಿಸುತ್ತಾನೆ ” ಎಂದು ಗಾಂಧಿಜಿಯವರು ಬರೆದಿದ್ದರು. ಹಾಗೆ ನೋಡಿದರೆ ಎಲ್ಲಾ ಯಂತ್ರವೂ ಕೆಲವರಿಂದ ಉದ್ಯೋಗವನ್ನು ಕಿತ್ತುಕೊಳ್ಳುತ್ತದೆ. ಕೈಯ್ಯಲ್ಲಿ ಹೊಲಿಯುವುದಕ್ಕಿಂತ, ಹೊಲಿಯುವ ಯಂತ್ರವು ಅಗ್ಗವಾಗಿಯೂ ಸುಲಭವಾಗಿಯೂ ಕೆಲಸ ನಡೆಸುತ್ತದೆ. ಹೊಲಿಯುವ ಯಂತ್ರದಿಂದ, ಎಷ್ಟುಜನ ಕೈಯ್ಯಲ್ಲಿ ಹೊಲಿಯುವ ಚಿಪ್ಪಿಗರು ನಿರುದ್ಯೋಗಿಗಳಾಗಿದ್ದಾರೆಯೋ ನನಗೆ ತಿಳಿಯದು. ಆದರೆ ಗ್ರಾಮೋದ್ಯೋಗ ಸಂಘವು, ತನ್ನ ಯುದ್ಧಯಾತ್ರೆಗೆ ಬಟ್ಟೆಹೊಲಿಯುವ ಯಂತ್ರವನ್ನು ಸೇರಿಸಿಕೊಳ್ಳುವುದೆ ? ಆಗಲೇ ನೀವು ಅಕ್ಕಿಯ ಯಂತ್ರದ ಮೇಲೂ ಯುದ್ಧವನ್ನು ಘೋಷಿಸಿದ್ದೀರಿ. ನಿಮ್ಮದು ಯಂತ್ರಗಳ ಮೇಲೆಲ್ಲಾ ಯುದ್ಧ ಎಂದು ಯಾಕೆ ಸ್ಪಷ್ಟವಾಗಿ ಹೇಳಬಾರದು ” ?

ಮೇಲಿನ ಪ್ರಶ್ನೆಯ ವಾದ ತಪ್ಪು. ತೀರ್ಮಾನವು ಸಾವಧಾನವಾಗಿ ಯೋಚಿಸದುದರಿಂದ ಉಂಟಾಗಿದೆ. ಮಿಲ್ ಕೂಲಿಯು ಹತ್ತುಜನರ ಕೆಲಸವನ್ನು ತೆಗೆದುಕೊಳ್ಳುತ್ತಾನೆನ್ನುವ ವಾದವು ಬಟ್ಟೆ ಹೊಲಿಯುವ ಯಂತ್ರಕ್ಕೆ ಅನ್ವಯಿಸುವುದಿಲ್ಲ. ಯಾಕೆಂದರೆ ಬಟ್ಟೆ ಹೊಲಿಯುವ ಯಂತ್ರವು ಮನುಷ್ಯನ ಕೂಲಿಯೊಡನೆ ಸಹಕರಿಸುತ್ತದೆ. ಕೂಲಿಯನ್ನು ಇಲ್ಲದಂತೆ ಮಾಡುವುದಿಲ್ಲ. ಆದರೆ ಬಟ್ಟೆ ಗಿರಣಿಯು ಆವಶ್ಯಕವಾದ ಒಂದು ಕೈಗಾರಿಕೆಯ ಸ್ಥಳವನ್ನು ಆಕ್ರಮಿಸಿ, ಆ ಕೈಗಾರಿಕೆಯಿಂದ ಜೀವನ ನಡೆಸುತ್ತಿದ್ದ ಅನೇಕ ಜನರನ್ನು ಹಾಳುಮಾಡಿದೆ. ಹಳ್ಳಿಯವನು ಉಪ ಯೋಗಿಸುವುದಕ್ಕೆ ಅನುಕೂಲವಾಗಿದ್ದು ಆದರಿಂದ ಅವನ ಜೀವನವಾಗು ವಂತಿದ್ದರೆ ಯಾವ ಯಂತ್ರವೂ ಉಪಯೋಗಕರವಾದುದು ಮಾತ್ರವೇ ಅಲ್ಲ. ಆವಶ್ಯಕವೂ ಹೌದು. ಚರಕವೂ ಒಂದು ಯಂತ್ರವೇ. ಬೀಸುವ ಕಲ್ಲೂ ಒಂದು ಯಂತ್ರವೇ. ಇಂತಹ ಯಂತ್ರಗಳಿಂದ ಹೆಚ್ಚು ಹೆಚ್ಚು ಕೆಲಸ ತೆಗೆಯುವ ಯಾವ ಪ್ರಯತ್ನವನ್ನೂ ಮಾಡದಿರಕೂಡದು.

ಬಟ್ಟೆ ಗಿರಣಿಯು ತನ್ನ ಜತೆಯಲ್ಲಿ ನಿರುದ್ಯೋಗ ಮತ್ತು ಬಡತನ ವನ್ನು ತಂದಿತು. ಆದರೆ ಅಕ್ಕಿ ಗಿರಣಿಯೂ ಹಿಟ್ಟಿನ ಗಿರಣಿಯೂ ತಮ್ಮ ಜತೆಯಲ್ಲಿ ನಿರುದ್ಯೋಗ ಮತ್ತು ಬಡತನವನ್ನು ಮಾತ್ರ ತರದೆ ಅನಾ ರೋಗ್ಯ ರೋಗಗಳನ್ನು ತಂದಿದೆ. ಗಾಂಧಿಜಿಯವರು ಈ ವಿಷಯದ ಮೇಲೆ ವೈದ್ಯರ ಮತ್ತು ಪ್ರವೀಣರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿ ದ್ದಾರೆ. ಈ ಮಾತುಗಳ ಸತ್ಯತೆಯನ್ನು ಅವರು ಪೂರ್ಣವಾಗಿ ಪ್ರತಿ ಪಾದಿಸಿ ತೋರಿಸುವುದರಲ್ಲಿ ಸಂದೇಹವಿಲ್ಲ.

ಯಂತ್ರಗಳೂ, ದೊಡ್ಡ ಪ್ರಮಾಣದ ಕಾರ್ಖಾನೆಯ ಪದಾರ್ಥ ಗಳ ತಯಾರಿಯೂ ಕಲೆ, ಅಂದ ಮತ್ತು ಸ್ವಂತ ಬುದ್ಧಿವಂತಿಕೆಯನ್ನು ಹಾಳುಮಾಡುವುದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಸಹಕಾರಿಗಳಾಗಿವೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಗ್ರಾಮೋದ್ಯೋಗ ಸಂಘವು ಘೋಷಿಸಿರುವ ಯಂತ್ರದ ಮೇಲೆ ಯುದ್ಧವು, ಈ ಕಾರಣದಿಂದ ಯಂತ್ರಕ್ಕೆ ವಿರೋಧವಾದ ಯುದ್ಧವಲ್ಲ. ಆದರೆ ಎಲ್ಲಿ ಯಂತ್ರಗಳಿಂದ ದಾರಿದ್ರ್ಯ ನಿರುದ್ಯೋಗ ಅನಾರೋಗ್ಯ ಮತ್ತು ರೋಗಗಳೂ ಕಲೆಯ ಕೊಲೆಯೂ ಉಂಟಾಗುತ್ತದೋ ಅದಕ್ಕೆ ಎದುರಾದ ಯುದ್ಧ. ಆದರೆ ಇದು ನಿಜವಾಗಿಯೂ ಯಂತ್ರದ ಮೇಲಿನ ಯುದ್ಧವಲ್ಲ. ಅದರ ಧ್ಯೇಯವು, ಅನೇಕ ಕಾರಣಗಳಿಂದ ನಾಶವಾಗಿರುವ, ನಮ್ಮ ದೇಶಕ್ಕೆ ಪ್ರಾಣಪ್ರಾಯವಾದ, ಅನೇಕ ಉದ್ಯೋಗಗಳನ್ನು ಪುನರುಜ್ಜೀವನಗೊಳಿಸುವುದು ಮತ್ತು ನಿರುದ್ಯೋಗವನ್ನು ಪೂರ್ಣವಾಗಿ ನಾಶಮಾಡುವುದು ಆಗಿದೆ.

ಸಾರ್ವತ್ರಿಕ ಯಂತ್ರಪ್ರಚಾರದಿಂದ ಈ ದೇಶದ ನಿರುದ್ಯೋಗವೂ ಅದರ ಜತೆಯ ಇತರ ಕೆಡಕುಗಳೂ ನಿವಾರಣೆಯಾಗುವಂತಿದ್ದರೆ ಗಾಂಧಿಜಿಯವರು ಅದನ್ನೂ ಪ್ರಯತ್ನಿಸಿ ನೋಡಲು ಹಿಂದೆಗೆಯುವವರಲ್ಲ. ಆದರೆ ಯಂತ್ರಗಳಿಂದ ಆ ಪರಿಣಾಮವಾಗುವುದಿಲ್ಲ. ಈ ಮುಂದಲ ಅಂಕಿ ಅಂಶಗಳಿಂದ ಇದು ಸ್ಪಷ್ಟವಾಗುವುದು. ಹಿಂದೂದೇಶದ ಜನಸಂಖ್ಯೆಯ ಸಮಸ್ಯೆ ಎಂಬ ಪುಸ್ತಕದಲ್ಲಿ ಶ್ರೀ|| ಪಿ. ಕೆ. ವಟ್ಟಾಲ್ ಎಂಬುವರು ಈ ಫಲಗಳನ್ನು ಎಚ್ಚರಿಕೆಯಿಂದ ಪರಿಗಣಿಸಿದ್ದಾರೆ. ಅವರು ಈಗಿನ ದೊಡ್ಡ ದೊಡ್ಡ ಕೈಗಾರಿಕೆಗಳ ಪಟ್ಟಿಯನ್ನು ತಯಾರಿಸಿದ್ದಾರೆ. ಆದರೆ ಜೂಟ್, ಟೀ ಮತ್ತು ಕಲ್ಲಿದ್ದಲುಗಳನ್ನು ಅವರು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಯಾಕೆಂದರೆ ಆ ಕೈಗಾರಿಕೆಗಳನ್ನು ಇನ್ನೂ ಹೆಚ್ಚಾಗಿ ವಿಸ್ತರಿಸಲು ಅವಕಾಶವಿಲ್ಲ. ಆದರೆ ಅವರು ಇತರ ಕೈಗಾರಿಕೆಗಳನ್ನು ತಕ್ಕಮಟ್ಟಿಗೆ ವಿಸ್ತಾರವಾಗಿ ವ್ಯಾಸಂಗ ಮಾಡಿದ್ದಾರೆ. ಆ ವ್ಯಾಸಂಗದ ಫಲಗಳು ಗಮನಾರ್ಹವಾಗಿವೆ. ಬಟ್ಟೆ ಮಿಲ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಜನರ ಸಂಖ್ಯೆ 1931ರಲ್ಲಿ 492284 ಇದ್ದಿತು. ಇವರು ಇಂಡಿಯಾವಿಗೆ ಬೇಕಾದ ಬಟ್ಟೆಯ ¾ ಭಾಗವನ್ನು ತಯಾರು ಮಾಡಿದರು. ಹೊರಗಿನಿಂದ ¼ ಭಾಗ

ಬಟ್ಟೆಮಾತ್ರ ಇಲ್ಲಿಗೆ ಬರುತ್ತಿದೆ. ಈ ಕೈಗಾರಿಕೆಯು ಮುಂದಲ ವರುಷ ಗಳಲ್ಲಿ, ದೇಶಕ್ಕೆ ಪೂರ್ಣವಾಗಿ ಬಟ್ಟೆಗಳನ್ನು ಒದಗಿಸುವ ಮಟ್ಟಿಗೆ ವಿಸ್ತಾರವಾಗುವುದೆಂದು ನಾನು ಒಪ್ಪಿಕೊಂಡರೂ ಇದರಲ್ಲಿ $1/3 \times 492284$ ಅಥವಾ 164494 ಕ್ಕಿಂತ ಹೆಚ್ಚು ಜನರಿಗೆ ಬಟ್ಟೆಯ ಯಂತ್ರಗಳು ಕೆಲಸವನ್ನು ಒದಗಿಸಲಾರವು.

ಸಕ್ಕರೆಯ ವಿಚಾರವನ್ನು ತೆಗೆದುಕೊಳ್ಳೋಣ. ಯುದ್ಧಕ್ಕೆ ಮುಂಚೆ ಈ ದೇಶಕ್ಕೆ 14 ಕೋಟಿ ರೂಪಾಯಿ ಬೆಲೆ ಬಾಳುವ ಸಕ್ಕರೆಯು ಹೊರಗಿ ನಿಂದ ಬರುತ್ತಿದ್ದಿತು. ಆದರೆ 1932-33 ರ ವೇಳೆಗೆ ಅದರ ಬೆಲೆಯು 4 ಕೋಟಿಯಷ್ಟಕ್ಕೆ ಇಳಿಸಲ್ಪಟ್ಟಿತು. ಈಗ ಈ ಕೈಗಾರಿಕೆಯು ಇಂಡಿಯಾ ದೇಶಕ್ಕೆ ಬೇಕಾದ ಸಕ್ಕರೆಯನ್ನೆಲ್ಲಾ ಒದಗಿಸಬಲ್ಲದು. ಆದರೆ ಪರದೇಶ ಗಳಲ್ಲಿ ಸಕ್ಕರೆ ಹೆಚ್ಚಾಗಿ ನಿಂತಿರುವುದರಿಂದ ಇಲ್ಲಿಂದ ಪರದೇಶಗಳಿಗೆ ಸಕ್ಕರೆಯನ್ನು ಕಳುಹಿಸಲು ಸಾಧ್ಯವಿಲ್ಲ. ಈ ಕಾರಣಗಳಿಂದ ಸಕ್ಕರೆ ಕೈಗಾರಿಕೆಯಲ್ಲಿ ಈಗ ಇರುವವರಿಗಿಂತ ಹೆಚ್ಚು ಜನರನ್ನು ಕೆಲಸದಲ್ಲಿ ಸೇರಿಸಲು ಸಾಧ್ಯವಿಲ್ಲ. ಈಗ ಈ ಕೈಗಾರಿಕೆಯಲ್ಲಿ ಉದ್ಯೋಗ ಸಿಕ್ಕಿರುವುದು 62500 ಜನರಿಗೆ ಮಾತ್ರ.

ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಲ್ಲಿ, 1932-33 ರಲ್ಲಿ ಪರದೇಶ ಗಳಿಂದ ಇಲ್ಲಿಗೆ ಬಂದ ಕಬ್ಬಿಣದ ಸಾಮಾನುಗಳು ಬಹಳ ಕಡಿಮೆಯಾಗಿ ಒಟ್ಟು 326000 ಟನ್‌ಗಳು ಮಾತ್ರ ಆಯಿತು. ಆ ಕೈಗಾರಿಕೆಯಲ್ಲಿ ಈಗ ಇರುವವರಿಗಿಂತ ಹೆಚ್ಚು ಜನರಿಗೆ ಉದ್ಯೋಗವನ್ನು ಒದಗಿಸಲು ಸಾಧ್ಯವಿಲ್ಲ.

ಎಣ್ಣೆ ಕೈಗಾರಿಕೆಯ ವಿಚಾರದಲ್ಲಿ, ಬರ್ಮಾವನ್ನು ಇಂಡಿಯಾದಿಂದ ಬೇರೆ ಮಾಡುವುದರಿಂದ ಆ ಕೈಗಾರಿಕೆ ಇಂಡಿಯಾಕ್ಕೆ ಸೇರಿದುದೆಂದು ನಾವು ಗಣಿಸುವುದಕ್ಕಾಗುವುದಿಲ್ಲವೆಂದು ಶ್ರೀ ವಟ್ಟಲ್ ಅವರು ಯೋಚಿ ಸುತ್ತಾರೆ. ಕಾಗದದ ಕೈಗಾರಿಕೆಯಲ್ಲಿ ಕಳೆದ ಜನಗಣನೆ (ಸೆನ್‌ಸಸ್) ಯಂತೆ 7000 ಜನರಿಗೆ ಉದ್ಯೋಗ ದೊರೆತಿದ್ದಿತು. "ವ್ಯಾಪಾರದ ಸ್ಥಿತಿ

ಗತಿಗಳು ಅಭಿವೃದ್ಧಿಯಾದರೂ, ಹೊಸ ಕಾಗದದ ಯಂತ್ರಗಳನ್ನು ಸ್ಥಾಪಿಸುವ ಸ್ಥಿತಿಯೊದಗಬೇಕಾದರೆ ಇನ್ನೂ ಬಹುಕಾಲ ಬೇಕೆಂದು ತಿಳಿದವರ ಅಭಿಪ್ರಾಯ" ಸಿಮೆಂಟ್ ಕೈಗಾರಿಕೆಯು ಕಳೆದ ಹದಿನೈದು ವರುಷದಲ್ಲಿ ತಕ್ಕಮಟ್ಟಿಗೆ ಬೆಳೆದು 20-25 ಸಾವಿರ ಜನರಿಗೆ ಉದ್ಯೋಗ ವನ್ನು ದೊರಕಿಸಿದೆ. ಈಗ ಇಂಡಿಯಾಕ್ಕೆ ಬೇಕಾದ ಸಿಮೆಂಟ್ ಪೈಕಿ 1/6 ಭಾಗ ಮಾತ್ರ ಪರದೇಶಗಳಿಂದ ಬರುತ್ತಿದೆ. ಈ ಕೈಗಾರಿಕೆಯಲ್ಲಿ ಇನ್ನು ಸುಮಾರು 3-4 ಸಾವಿರ ಜನರಿಗೆ ಕೆಲಸ ದೊರಕಬಹುದು ಅಷ್ಟೆ. ಬೆಂಕಿ ಕಡ್ಡಿ ಕೈಗಾರಿಕೆಯಲ್ಲಿ ಇಂಡಿಯಾಕ್ಕೆ ಬೇಕಾದಷ್ಟು ಕಡ್ಡಿಗಳು ಈಗ ಪೂರ್ಣವಾಗಿ ಇಲ್ಲೇ ದೊರಕುತ್ತಿವೆ. ಈ ಕೈಗಾರಿಕೆಯಲ್ಲಿ ಹೆಚ್ಚು ಜನರಿಗೆ ಇನ್ನು ಅವಕಾಶವೇ ಇಲ್ಲ.

ಆದುದರಿಂದ ನಮಗೆ ಇರುವ ಒಂದೇ ದಾರಿ, ಖಾದಿ ಮತ್ತು ಸಣ್ಣಸಣ್ಣ ಗ್ರಾಮಕೈಗಾರಿಕೆಗಳ ಅಭಿವೃದ್ಧಿಯಲ್ಲಿ. ಶ್ರೀವಟಾಲ್ ಅವರು ಖಾದಿಯನ್ನು ಗಣನೆಗೇ ತೆಗೆದುಕೊಂಡಿಲ್ಲ. ನಿರುದ್ಯೋಗಿಗಳಿಗೆ ಕೆಲಸ ವನ್ನು ಒದಗಿಸಬಹುದಾದ, ದೇಶಕ್ಕೆ ಬಟ್ಟೆಯನ್ನು ಒದಗಿಸುವ ಖಾದಿ ಯನ್ನು ಕುರಿತು ಮ|| ರಾ|| ವಟಾಲ್‌ರವರು ಯೋಚಿಸುವುದೇ ಇಲ್ಲ. ಸಣ್ಣ ಸಣ್ಣ ಗ್ರಾಮಕೈಗಾರಿಕೆಗಳನ್ನು ಅವರು ಒಂದೇ ಮಾತಿನಲ್ಲಿ ಮುಗಿಸಿ ಬಿಡುತ್ತಾರೆ. "ಈ ಗ್ರಾಮಕೈಗಾರಿಕೆಗಳು ಕೊಡಬಹುದಾದ ಸಹಾಯವು ಅತ್ಯಲ್ಪ ಮತ್ತು ಆಯಾ ಪ್ರದೇಶಗಳಿಗೆ ಮಾತ್ರ ಅನ್ವಯಿಸುವಂಥಾದ್ದು. ಅವು ಎಂದಿಗೂ ದೊಡ್ಡ ದೊಡ್ಡ ಕೈಗಾರಿಕೆಗಳೊಂದಿಗೆ ಸ್ಪರ್ಧಿಸಲಾರವು. ಎಲ್ಲಿಗೆ ಆಮದಾದ ಪದಾರ್ಥಗಳು ಬರುವುದಿಲ್ಲವೊ ಅಲ್ಲಿಮಾತ್ರ ಆ ಗ್ರಾಮ ಕೈಗಾರಿಕೆಗಳ ಸಾಮಾನಿಗೆ ಪ್ರವೇಶವಿರುವುದು"

ಗ್ರಾಮೋದ್ಯೋಗಸಂಘವು ಈ ಮಾತನ್ನು ಪ್ರತಿಭಟಿಸುತ್ತದೆ. ಮ|| ರಾ|| ವತ್ತಾಲ್ ಅವರ ಅಭಿಪ್ರಾಯದಲ್ಲಿ ಸಾಬೂನು ಮಾಡುವುದು, ಹೆಣಿಗೆ ಕೆಲಸ, ಬೂಡ್ಸು ಇವುಗಳೇ ಸಣ್ಣಸಣ್ಣ ಕೈಗಾರಿಕೆಗಳು. ಆದರೆ ಇವು

ಗ್ರಾಮೋದ್ಯೋಗಸಂಘದ ದೃಷ್ಟಿಯ ಕೈಗಾರಿಕೆಗಳಲ್ಲ. ಗ್ರಾಮೋದ್ಯೋಗ ಸಂಘದ ದೃಷ್ಟಿಯಲ್ಲಿರುವ ಸತ್ತಿರುವ ಮತ್ತು ಸಾಯುತ್ತಿರುವ ಕೈಗಾರಿಕೆಗಳು, ವ್ಯವಸಾಯಕ್ಕೂ ಕೈ ಕಸಬಿಗೂ ಸಂಬಂಧಪಟ್ಟವಾಗಿರಬೇಕು. ನಿರುದ್ಯೋಗವನ್ನು ಹೋಗಲಾಡಿಸುವಂತೆ ಅನಾರೋಗ್ಯವನ್ನೂ ಹೋಗಲಾಡಿಸಬೇಕು. ಇತರ ದೇಶಗಳಲ್ಲಿರುವಂತೆ ಗೃಹಕೈಗಾರಿಕೆಗಳ ವಿಷಯದಲ್ಲಿ ನಮಗೆ ಅಂಕಿ ಅಂಶಗಳು ದೊರೆಯುವುದಿಲ್ಲ. ೧೯೧೧ನೇ ವರ್ಷದ ಇಟಲಿ ದೇಶದ ಕೈಗಾರಿಕೆಗಳ ಗಣತಿಯಲ್ಲಿ (ಸೆನ್‌ಸಸ್) ಒಬ್ಬರಿಂದ ಐದು ಜನದವರೆಗೆ ಕೆಲಸಗಾರರನ್ನು ನೇಮಿಸುವ ಕೈಗಾರಿಕೆಗಳ ಸಂಖ್ಯೆ ಇಟಲಿಯಲ್ಲಿ ೧೮೯೨೪೪ ಇವೆಯೆಂದು ಗೊತ್ತಾಗುತ್ತದೆ. ಗಿನಾಲೊಂಬ್ರೊಸೊ ಎಂಬುವನು "ಫ್ರಾನ್ಸು ಯೂರೋಪಿನಲ್ಲಿ ಅತ್ಯಂತ ಧನಿಕವಾದ ರಾಷ್ಟ್ರವಾಗಿರಲು ಅದರ ದೊಡ್ಡ ಕೈಗಾರಿಕೆಗಳು ಕಾರಣವಲ್ಲ. ಅದು ದೊಡ್ಡ ಕೈಗಾರಿಕೆಗಳಿಗೆ ವಿರೋಧವಾಗಿರುವುದು ಕಾರಣ" ಎಂದು ಹೇಳುತ್ತಾನೆ. "ಫ್ರಾನ್ಸಿನ ಐಶ್ವರ್ಯವು ಪರದೇಶದವರು ಮೆಚ್ಚುತ್ತಿರುವ ಅದರ ದೊಡ್ಡ ಕೈಗಾರಿಕೆಗಳಿಂದ ಬಂದುದಲ್ಲ. ಆ ಐಶ್ವರ್ಯವು ವ್ಯವಸಾಯ ಮತ್ತು ಕೈಕಸಬುಗಳಿಂದ ಬಂದುದು. ಫ್ರಾನ್ಸಿನಲ್ಲಿರುವ ೪೦೦೦೦೦೦ ಸಂಬಳ ತೆಗೆದುಕೊಳ್ಳುವ ಕೆಲಸಗಾರರ ಪೈಕಿ ೫೦೦ ಜನರಿಗಿಂತ ಹೆಚ್ಚು ಕೆಲಸಗಾರರುಳ್ಳ ಕಾರ್ಖಾನೆಗಳಲ್ಲಿ ೭೭೪೦೦೦ ಜನರು ಮಾತ್ರ ಉದ್ಯೋಗವನ್ನು ಪಡೆದಿದ್ದರು. ಉಳಿದವರೆಲ್ಲ ಸಣ್ಣ ಸಣ್ಣ ಕೈಗಾರಿಕೆಯಲ್ಲಿದ್ದರು. ಫ್ರಾನ್ಸಿನ ಐಶ್ವರ್ಯವನ್ನು ಸೃಷ್ಟಿಸಿ ಅದರ ಕೈಗಾರಿಕೆಗೆ ಬೆನ್ನುಮೂಳೆಯಾಗಿರುವವರು ಫ್ರಾನ್ಸಿನ ಈ ಸಣ್ಣ ಕೈಗಾರಿಕಾಧಣಿಗಳು. ಬಟ್ಟೆಯೊಂದರಲ್ಲಿಯೇ ಫ್ರಾನ್ಸು ವರುಷಕ್ಕೆ ೧೬೫೨೭೦೦೦೦೦೦ ಫ್ರಾಂಕು ಬೆಲೆಬಾಳುವಷ್ಟನ್ನು ಪರದೇಶಗಳಿಗೆ ಕಳುಹಿಸುತ್ತದೆ. ಅಲ್ಲದೆ ಫ್ರಾನ್ಸಿನಲ್ಲೇ ನೇರವಾಗಿ ಪರದೇಶದವರಿಗೆ ೪೦೦೦೦೦೦ ಫ್ರಾಂಕು ಬೆಲೆಬಾಳುವಷ್ಟು ಉಡುಪುಗಳನ್ನು ಮಾರುತ್ತದೆ. ಲಿಯಾನ್ಸ್ ಎಂಬುದರ ಪ್ರಸಿದ್ಧವಾದ ರೇಶಿಮೆಯು ಫ್ಯಾಷನ್‌ಗಳಿಗೆ

ಮೂಲಸ್ಥಾನವೆಂದು ಕೊಳ್ಳುವ ಮಿಲ್‌ಗಳಲ್ಲಿ ತಯಾರಾಗದೆ ದೇಶದಲ್ಲೆಲ್ಲಾ ಹರಡಿರುವ ಸಣ್ಣ ಸಣ್ಣ ಕೆಲಸಗಾರರಿಂದ ನೇಯಲ್ಪಡುತ್ತದೆ. ಲಿಯಾನ್ಸ ಸುತ್ತ ಒಂದರಿಂದ ಹತ್ತರವರೆಗೆ ಮಗ್ಗಗಳನ್ನಿಟ್ಟುಕೊಂಡಿರುವ ಸುಮಾರು ೪೦೦೦ ಜನ ನೇಯ್ಗೆಯವರಿದ್ದಾರೆ. ಅವರೇ ಲಿಯಾನ್ಸಿನ ರೇಶ್ಮೆ ಕೈಗಾರಿಕೆಯ ಬೆನ್ನುಮೂಳೆ.

ಯಂತ್ರಕ್ಕೆ ಪೂರ್ಣವಾಗಿ ವಶವಾದ ಫ್ರಾನ್ಸ್ ನಂತಹ ದೇಶದಲ್ಲಿ ಹೀಗಿರುವುದಾದಮೇಲೆ, ಇಂಡಿಯಾದಲ್ಲಿ ಆ ಸ್ಥಿತಿಗಳನ್ನು ಉಂಟುಮಾಡಿ ಕೊಳ್ಳುವುದು ಫ್ರಾನ್ಸಿನಲ್ಲಿರುವುದಕ್ಕಿಂತಲೂ ಸುಲಭ. ಫ್ರಾನ್ಸು ಯಂತ್ರದ ಮೇಲೆ ಯುದ್ಧವನ್ನು ಹೂಡಿಲ್ಲ. ಫ್ರಾನ್ಸು, ಯಂತ್ರಗಳು ತಮ್ಮನ್ನು ಗುಲಾಮರನ್ನಾಗಿ ಮಾಡಲು ಅವಕಾಶಕೊಡದೆ ತಮ್ಮ ಮನುಷ್ಯತ್ವವನ್ನು ಉಳಿಸಿ ಕೊಳ್ಳುವಂತೆ ಮಾಡಿದೆ; ಫ್ರಾನ್ಸು, ಜನರ ನಿರುದ್ಯೋಗವನ್ನು ತಪ್ಪಿಸಿದೆ; ಅವರ ಕಲೆಯು ನಾಶವಾಗದಂತೆ ನೋಡಿಕೊಂಡಿದೆ. ಈ ಮೇಲಿನ ಉದ್ದೇಶಸಾಧನೆಗಳಿಗಾಗಿ ಗ್ರಾಮೋದ್ಯೋಗ ಸಂಘವು 700000 ಹಳ್ಳಿಗಳಲ್ಲಿಯ ಕೈಗಾರಿಕೆಗಳನ್ನು ಕಂಡುಹಿಡಿದು, ಅವುಗಳನ್ನು ಬೆಳೆಸಿ ಅವುಗಳಿಂದ ಪೂರ್ಣ ಫಲವನ್ನು ಪಡೆಯಬೇಕಾಗಿದೆ. ಮ. ದೇ. 23-11-1934.

---

೧೫. ಅಪಾಯಕರವಾದ ಹುಸಿವಾದ

'ಹರಿಜನ' ಪತ್ರಿಕೆಯಲ್ಲಿ ವಿಮರ್ಶಿಸಬೇಕೆಂದು ಒಬ್ಬ ಬಾತ್ಮೀದಾರರು ಕೇಳಿರುವ ಪ್ರಶ್ನೆಗಳಲ್ಲಿ ಈ ಕೆಳಗಿನದು ಸ್ವಲ್ಪ ದಿನಗಳಿಂದಲೂ ನನ್ನ ಕಾಗದ ಪತ್ರಗಳೊಂದಿಗೆ ಸೇರಿಕೊಂಡಿದೆ—

"ರಾಜಕೀಯದಲ್ಲಿ ಅಧಿಕಾರವನ್ನು ಸಂಪಾದಿಸದೆ, ಯಾವ ದೊಡ್ಡ ಸುಧಾರಣೆಯನ್ನೂ ನಡೆಸುವುದು ಅಸಾಧ್ಯವೆಂದು ನಿಮಗೆ ತೋರುವು

ದಿಲ್ಲವೆ? ಈಗಿನ ಆರ್ಥಿಕ ಸ್ಥಿತಿಯನ್ನೂ ನಾವು ಆಲೋಚನೆ ಮಾಡಬೇಕು. ರಾಜಕೀಯದಲ್ಲಿ ಹೊಸ ರಚನೆಯು ಆಗುವುದಕ್ಕೆ ಮುಂಚೆ ಇತರ ಯಾವ ಭಾಗದಲ್ಲಿಯೂ ಸುಧಾರಣೆ ಸಾಧ್ಯವಿಲ್ಲ. ಒಪ್ಪಮಾಡಿದ ಬಿಳಿಯ ಅಕ್ಕಿ ಮತ್ತು ಮೇಲಿನ ಮುಸುಕಿನಿಂದ ಕೂಡಿದ ಅಕ್ಕಿ, ಆರೋಗ್ಯನಿಯಮವನ್ನನುಸರಿಸಿದ ಆಹಾರ ಮುಂತಾದ ಈಗಿನ ಮಾತುಗಳೆಲ್ಲ ನನ್ನ ಬುದ್ಧಿಗೆ ಬರಿಯ ತಿಪ್ಪೆಸಾರಿಸುವುದೆಂದು ತೋರುತ್ತದೆ."

ಯಾವ ಕೆಲಸವನ್ನೂ ಮಾಡದೆ ಇರುವುದಕ್ಕೆ ಈ ಮೇಲಿನ ವಾದ ಸರಣಿಯನ್ನು ನೆವಮಾಡಿ ಹೇಳುವುದನ್ನು ನಾನು ಅನೇಕ ಸಲ ಕೇಳಿದ್ದೇನೆ. ರಾಜಕೀಯ ಸ್ವಾತಂತ್ರ್ಯವಿಲ್ಲದೆ ನಡೆಸುವುದಕ್ಕಾಗದ ಕೆಲವು ಕಾರ್ಯಕ್ರಮಗಳು ಇವೆಯೆಂದು ನಾನು ಒಪ್ಪುತ್ತೇನೆ. ಆದರೆ ಆ ಸ್ವಾತಂತ್ರ್ಯದ ಮೇಲೆ ಅವಲಂಬಿಸಿಲ್ಲದ ಅನೇಕ ಕೆಲಸಗಳೂ ಇವೆಯೆಂದು ನಾನು ಹೇಳಬೇಕಾಗಿದೆ. ಥೋರೊ (Thoreau) ಎಂಬ ವಿಚಾರಶೀಲನು ಯಾವ ಸರ್ಕಾರವು ಆದಷ್ಟು ಕಡಿಮೆ ಆಳ್ವಿಕೆ ನಡೆಸುತ್ತದೋ, ಆ ಸರ್ಕಾರವೇ ಅತ್ಯುತ್ತಮವಾದ ಸರ್ಕಾರ ಎಂದು ಹೇಳಿರುವನು. ಪ್ರಜೆಗಳು ಆಡಳಿತದ ಅಧಿಕಾರವನ್ನು ಪಡೆದರೆ, ಜನಸಮುದಾಯದ ಸ್ವಾತಂತ್ರ್ಯಕ್ಕೆ ಅಪಾಯವು ಬಹಳ ಕಡಿಮೆ. ಆದಷ್ಟು ಕಡಿಮೆಯಾಗುವುದು ಎಂಬ ಅರ್ಥದಲ್ಲಿ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಯಾವ ದೇಶವು ತನ್ನ ವ್ಯವಹಾರಗಳನ್ನು [ಸರ್ಕಾರದ ಆತಂಕವಿಲ್ಲದೆ] ದಕ್ಷತೆಯಿಂದಲೂ, ತೊಡಕುಗಳಿಲ್ಲದೆಯೂ ನಡೆಸಿಕೊಳ್ಳುವುದೋ ಆ ಸರ್ಕಾರವು ಪ್ರಜೆಗಳ ಸರ್ಕಾರವೆನ್ನಿಸಿಕೊಳ್ಳುವುದು. ಇದು ಎಲ್ಲಿ ಮಾಯವಾಗಿದೆಯೋ ಆ ಸರ್ಕಾರವು ಹೆಸರಿಗೆ ಮಾತ್ರ "ಪ್ರಜಾಸತ್ತಾತ್ಮಕ" ಎನಿಸಿಕೊಳ್ಳುವುದು.

ನಾವು ಯೋಚನೆ ಮಾಡತಕ್ಕ ಶಕ್ತಿಗೆ, ಯಾವ ತಡೆಯಾಗಲೀ ಅಂತ್ಯವಾಗಲಿ ನಿಜವಾಗಿಯೂ ಇಲ್ಲ. ಈಗಿನ ಕಾಲದ ಸುಧಾರಕರು ಒಂದು ಹೊಸ ತತ್ವಶಾಸ್ತ್ರಕ್ಕೆ ಪ್ರಾಮುಖ್ಯತೆ ಕೊಡುತ್ತಿರುವುದನ್ನು ಜ್ಞಾಪಕದಲ್ಲಿ

ಡಬೇಕು. ನಮ್ಮ ಅಭಿಪ್ರಾಯಗಳಲ್ಲಿ ಸುಧಾರಣೆಗಳನ್ನು ಮಾಡಿಕೊಳ್ಳಲು ನಮ್ಮಲ್ಲಿ ಎಷ್ಟು ಜನರು ತಯಾರಿದ್ದಾರೆ? ಆಧುನಿಕ ಕಾಲದ ವಿಜ್ಞಾನಿಗಳು ಮನಸ್ಸಿನ ಯೋಚನಾಶಕ್ತಿಗೆ ಅತಿ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಮನುಷ್ಯನ ಯೋಚನೆಗೆ ಅನುಸಾರವಾಗಿ ಅವನ ವ್ಯಕ್ತಿತ್ವ ಹೊರಬೀಳುವುದೆಂದು ಹೇಳುವುದು ಈ ಕಾರಣದಿಂದಲೇ. ದರೋಡೆ ಯೋಚನೆಯನ್ನು ಯಾವಾಗಲೂಮಾಡುತ್ತಿರುವವನು ಮುಂದೆ ದರೋಡೆಗಾರನೇ ಆಗುವನು. ರೀತಿ ತಪ್ಪಿದ ಹಾದರದ ಆಲೋಚನೆಯಲ್ಲಿರುವವನು ತನ್ನ ನಡವಳಿಕೆಗಳಲ್ಲೂ ಅದೇ ಮಾರ್ಗ ಹಿಡಿಯುವನು. ಇದಕ್ಕೆ ವಿರುದ್ಧವಾಗಿ ಅಹಿಂಸೆ ಮತ್ತು ಸತ್ಯದ ವಿಷಯ ಯೋಚಿಸುವವನು ಅಹಿಂಸಾವ್ರತಿಯೂ, ಸತ್ಯವಂತನೂ ಆಗುವನು. ದೇವರ ಮೇಲೆ ತನ್ನ ಯೋಚನೆಗಳನ್ನೆಲ್ಲ ಗುರಿಯಿಟ್ಟಿರುವವನು ದೇವಾಂಶವುಳ್ಳ ಸಾತ್ವಿಕನಾಗುವನು. ಈ ಯೋಚನಾರಾಜ್ಯದಲ್ಲಿ ರಾಜಕೀಯ ಅಧಿಕಾರವು ಅಡ್ಡಬರುವುದಿಲ್ಲ. ಹಾಗೆಯೇ ನಮ್ಮ ಅನೇಕ ಕಾರ್ಯಕ್ರಮಗಳಲ್ಲೂ ರಾಜಕೀಯದ ಅಧಿಕಾರ ಅಥವಾ ಅದರ ಅಭಾವವು ಮುಖ್ಯವಾಗುವುದಿಲ್ಲ. ನನಗೆ ಕಾಗದ ಬರೆದಿರುವವರಿಗೆ ನಾನು ಒಂದು ಸಲಹೆ ಕೊಡುತ್ತೇನೆ. ಅವರು ತಮ್ಮ ಪ್ರತಿನಿತ್ಯದ ಕೆಲಸಗಳನ್ನೆಲ್ಲಾ ಒಂದು ಪುಸ್ತಕದಲ್ಲಿ ಗುರುತು ಮಾಡಲಿ. ಅವುಗಳಲ್ಲಿ ಹೆಚ್ಚು ಭಾಗವು ರಾಜಕೀಯ ಅಧಿಕಾರಕ್ಕೆ ಸಂಬಂಧವಿಲ್ಲದೆ ನಡೆದುವೆಂದು ಅವರಿಗೆ ಖಂಡಿತ ಗೊತ್ತಾಗುವುದು. ಮನುಷ್ಯನು ತಾನು ಪೂರ್ಣ ನಿರಂಕುಶಾಧಿಕಾರಿಯಾಗದಿರುವುದಕ್ಕೆ ತನ್ನಷ್ಟಕ್ಕೆತಾನೆ ಸಂತೋಷಪಟ್ಟುಕೊಳ್ಳಬೇಕು. ತನಗೆ ಇಷ್ಟಬಂದಾಗ ಮನುಷ್ಯನು ಸ್ವತಂತ್ರನಾಗಬಹುದು.

ನನಗೆ ಕಾಗದ ಬರೆದಿರುವವರು ಮಹತ್ವದ ಸುಧಾರಣೆಗಳ ಮಾತೆತ್ತಿ ಅದರಿಂದ ಒಂದು ದೊಡ್ಡ ಭೂತವನ್ನೇ ನಿರ್ಮಿಸಿರುತ್ತಾರೆ. (ಅನಂತರ ಹಾಗೇ ಅವನ್ನು ಕೈಬಿಟ್ಟಿದ್ದಾರೆ.) ಸಣ್ಣ ಸಣ್ಣ ಸುಧಾರಣೆಗಳನ್ನು ಕಾರ್ಯಕ್ಕೆ ಇಳಿಸಲು ಯಾರು ಸಿದ್ಧರಾಗಿಲ್ಲವೋ ಅಂಥವರು

ದೊಡ್ಡ ಸುಧಾರಣೆಗಳಿಗೂ ಸಿದ್ಧರಾಗಿರುವುದಿಲ್ಲ. ತಮ್ಮಲ್ಲಿರುವ ಶಕ್ತಿಯನ್ನು ಉಪಯೋಗಿಸುವವರು ಅದನ್ನು ದಿನೇ ದಿನೇ ಹೆಚ್ಚಿಸಿಕೊಳ್ಳುವರು. ಮತ್ತು ದೊಡ್ಡ ಸುದಾರಣೆಯೆಂದು ತಿಳಿದಿದ್ದ ಕಾರ್ಯಕ್ರಮವು ದಿನ ಕಳೆದರೆ ಸಣ್ಣ ಸುದಾರಣೆಯಂತೆಯೇ ಅವರಿಗೆ ಗೋಚರವಾಗುವುದು. ಈ ರೀತಿಯಲ್ಲಿ ತನ್ನ ಜೀವನವನ್ನು ಒಂದು ಸುವ್ಯವಸ್ಥಿತವಾದ ರೀತಿಗೆ ಹೊಂದಿಸಿಕೊಳ್ಳುವವರು ಪ್ರಕೃತಿಯ ನಿಯಮಕ್ಕೆ ಅನುಸಾರವಾಗಿ ಜೀವಿಸುತ್ತಾರೆ. ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸುವವರು ಅದರ ಗುರಿಯನ್ನು ಮರೆಯಬೇಕು. ಪ್ರತಿಯೊಂದು ಹೆಜ್ಜೆಯಲ್ಲೂ, ನಾವು ಮಾಡುವ ಪ್ರತಿಯೊಂದು ಕಾರ್ಯದಲ್ಲೂ, ರಾಜಕೀಯ ಪ್ರಶ್ನೆಯಲ್ಲಿ ಎಷ್ಟು ದೂರ ಮುಂದುವರಿದೆವೆಂದು ಯೋಚಿಸುವುದು ಅಪ್ರಕೃತವಾಗಿ ಧೂಳು ಏಳಿಸಿದಂತೆ. ಯಾವುದು ನಮ್ಮ ವಶವಾಗದಿರಲು ಸಾಧ್ಯವಿಲ್ಲವೋ ಅದರ ವಿಷಯದಲ್ಲಿ ತಲೆಕೆಡಿಸಿಕೊಳ್ಳುವುದೇಕೆ? ಈ ರೀತಿ ನಮ್ಮ ಆಯಸ್ಸು ಇರುವುದಕ್ಕಿಂತ ಮುಂಚೆ ದುಃಖದಲ್ಲಿ ಏಕೆ ಸಾಯಬೇಕು?

ಈ ಕಾರಣಗಳಿಂದ ನಾನು ಜೀವಸತ್ವಗಳು, ತರಕಾರಿ, ಸೊಪ್ಪುಗಳು, ಮತ್ತು ಹೊದಿಕೆಯಿಂದಿರುವ ಅಕ್ಕಿ, ಈ ವಿಷಯಗಳನ್ನು ಚರ್ಚಿಸುವುದರಲ್ಲಿ ಅತ್ಯಾಸಕ್ತಿಯನ್ನು ತೋರಿಸಬಲ್ಲೆನು. ನಮ್ಮ ಕಕ್ಕಸುಗಳನ್ನು ಯಾವ ರೀತಿ ಉತ್ತಮವಾಗಿ ಶುದ್ಧಮಾಡಬಹುದು? ಭೂಮಿತಾಯಿಯನ್ನು ಹೊಲಸುಮಾಡುತ್ತಿರುವ ನಮ್ಮ ಜನರನ್ನು ಯಾವರೀತಿ ಆ ಘೋರವಾದ ಪಾಪದಿಂದ ಬಿಡುಗಡೆಮಾಡುವುದು ಎಂಬ ವಿಷಯಗಳಲ್ಲಿ ನಾನು ಉತ್ಸಾಹ ಮತ್ತು ಶ್ರದ್ಧೆ ತೋರಿಸಲು ಸಾಧ್ಯವಾಗಿರುವುದು. ಈ ಕಾರಣಗಳಿಂದಲೇ ನಮಗೆ ಅವಶ್ಯಕವಾಗಿರುವ ಈ ವಿಷಯಗಳನ್ನು ಯೋಚಿಸಿ ಅವಕ್ಕೆ ಒಂದು ಮಾರ್ಗವನ್ನು ಕಂಡುಹಿಡಿಯುವುದು ರಾಜಕೀಯಕ್ಕೆ ಸಂಬಂಧಿಸುವುದಿಲ್ಲ ಎನ್ನುವುದು ಹೇಗೆಂಬುದು ನನಗೆ ಅರ್ಥವಾಗುವುದಿಲ್ಲ. ಇದೇ ರೀತಿ ಸರ್ಕಾರದ ನೀತಿಯನ್ನು ಪರೀಕ್ಷಿಸಿದರೆ ಆಗ ಅದಕ್ಕೆ

ರಾಜಕೀಯದ ಸಂಬಂಧ ಹೇಗೆ ಉಂಟಾಗುವುದೆಂಬುದೂ ನನಗೆ ಅರ್ಥವಾಗದ ಮಾತು. ಈಗ ನಾನು ಮಾಡುತ್ತಿರುವುದೂ ಮತ್ತು ಅದರಂತೆ ನಡೆಯಿರೆಂದು ಇತರರಿಗೆ ಹೇಳುವುದೂ, ಆಳುವವರ ರೀತಿನೀತಿಗಳನ್ನು ವಿಮರ್ಶಿಸುವ ಶಕ್ತಿಯಿಲ್ಲದ ಲಕ್ಷಾವಧಿ ಜನರು ಮಾಡಬಹುದಾದ ಕೆಲಸವೆಂದು ನನಗೆ ಸ್ಪಷ್ಟವಾಗಿ ತಿಳಿದಿದೆ. ಆ ರೀತಿ ಆಡಳಿತದ ನೀತಿಗಳನ್ನು ವಿಮರ್ಶಿಸುವುದು ಕೆಲವರ ಕರ್ತವ್ಯವೆಂಬುದನ್ನು ನಾನು ಇಲ್ಲ ಎನ್ನಲಾರೆ. ಆ ಕೆಲಸಮಾಡಲು ಶಕ್ತಿಯಿರುವವರು ಆ ಕಡೆ ಸಾಧ್ಯವಾದಷ್ಟು ಹೆಚ್ಚು ಗಮನ ಕೊಡಲಿ. ಈ ಮುಂದಾಳುಗಳು ಮಹತ್ವದ ಬದಲಾವಣೆಗಳನ್ನು ಕಾರ್ಯರೂಪಕ್ಕೆ ತರುವ ಮುಂಚೆ ನನ್ನಂತಹ ಅಸಂಖ್ಯೆಯ ಜನರು, ನಮಗೆ ಕೊಟ್ಟಿರುವ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಏಕೆ ಉಪಯೋಗಿಸಬಾರದು? ನಮ್ಮ ಶರೀರವನ್ನು ಸೇವೆಗೋಸ್ಕರ ಉತ್ತಮಸಾಧನವನ್ನಾಗಿ ಏಕೆ ಮಾಡಿಕೊಳ್ಳಬಾರದು? ನಮ್ಮ ಮನೆಯನ್ನೂ ಮತ್ತು ಸುತ್ತುಮುತ್ತಲನ್ನೂ ಗುಡಿಸಿ ಅಲ್ಲಿಯ ಕಸ ಧೂಳುಗಳನ್ನು ನಾವೇ ಏಕೆ ಹೊರಗೆ ಹಾಕಬಾರದು? ರೋಗದ ಹಿಡಿತದಲ್ಲಿ ಯಾವಾಗಲೂ ಸಿಕ್ಕಿಕೊಂಡು, ತಾವೂ ಸಹಾಯಮಾಡಿಕೊಳ್ಳದಂತೆ, ಇತರರಿಗೂ ಸಹಾಯವಾಗಿರದಂತಹ ಸ್ಥಿತಿಯಲ್ಲಿ ಏಕೆ ಒದ್ದಾಡಬೇಕು?

ಅದಾಗದು. ಬಾತ್ಮೀದಾರರು ಕೇಳಿರುವ ಈ ಪ್ರಶ್ನೆಯು ಅವರ ಸೋಮಾರಿತನವನ್ನೂ ನಿರಾಶೆಯನ್ನೂ ಹೊರಗೆಡಹುವುದೆಂದು ನನಗೆ ತೋರುತ್ತದೆ. ಈ ಬಗೆಯ ನಿರುತ್ಸಾಹವು ನಮ್ಮಲ್ಲಿ ಬಹಳ ಜನರಿಗೆ ಕವಿದುಕೊಂಡಿದೆ. ಸ್ವಾತಂತ್ರ್ಯವನ್ನು ಹೊಂದಬೇಕೆಂಬ ಆತುರ ಮತ್ತು ಆಸೆಗಳಲ್ಲಿ ನಾನು ಯಾರಿಗೂ ಕಡಿಮೆಯಿಲ್ಲವೆಂದು ದೃಢವಾಗಿ ಹೇಳಬಲ್ಲೆ. ಆಯಾಸ ಮತ್ತು ನಿರುತ್ಸಾಹವು ನನ್ನನ್ನು ಆವರಿಸಿಲ್ಲ. ಬಹಳ ವರ್ಷಗಳಿಂದಲೂ ನಾನು ನಡೆಸುತ್ತಿರುವ ಕಾರ್ಯಕ್ರಮವು, ನನ್ನ ಶಕ್ತಿ ಮತ್ತು ಗಮನವನ್ನು ಸೆಳೆಯುತ್ತಿರುವ ಈ ಕೆಲಸಗಳೂ, ದೇಶದ ಸ್ವಾತಂತ್ರ್ಯ

ವನ್ನು ಸಂಪಾದಿಸಲು ಅವಶ್ಯಕವೆಂದು ನನಗೆ ನಂಬಿಕೆಯಾಗಿದೆ. ಅಹಿಂಸಾ ರೂಪದ ಸ್ವಾತಂತ್ರ್ಯವು ಈ ಕ್ರಮವನ್ನನುಸರಿಸಿದರೆ ಸಾಧ್ಯ ಎಂದು ನನಗೆ ಎನಿಸುತ್ತದೆ. ಈ ಕಾರಣದಿಂದಲೇ ನಾನು ಪ್ರತಿಯೊಬ್ಬನನ್ನೂ, ಅವನು ಗಂಡಸಾಗಲಿ, ಹೆಂಗಸಾಗಲೀ, ಮುದುಕನಾಗಿರಲಿ, ಯುವಕ ನಾಗಿರಲಿ ಈಗ ನಡೆಯಬೇಕಾಗಿರುವ ಮಹಾಜ್ಞಾನದಲ್ಲಿ ತನ್ನ ತನ್ನ ಪಾಲಿನ ಸೇವೆಯನ್ನು ಸಲ್ಲಿಸಬೇಕೆಂದು ಕರೆಯುತ್ತೇನೆ. 11-1-1936.

೧೬. ದೇಶೀಯ ಕೈಗಾರಿಕೆಗಳು

ದೇಶೀಯ ಕೈಗಾರಿಕೆ ಎಂದರೆ ಯಾವುದು? ಈ ಪ್ರಶ್ನೆಯನ್ನು ಜನರು ಅನೇಕವೇಳೆ ಕೇಳುತ್ತಾರೆ. ಭಾರತದಲ್ಲಿ ಏರ್ಪಡಿಸುವ ಪ್ರದರ್ಶನ ಗಳಲ್ಲಿ ಸಾಧಾರಣವಾಗಿ ಈ ಪ್ರಶ್ನೆಯು ಏಳುತ್ತದೆ. ಭಾರತದಲ್ಲಿ ನಡೆ ಯುವ ಕೈಗಾರಿಕೆಗಳೆಲ್ಲ ದೇಶೀಯ ಕೈಗಾರಿಕೆಗಳೆಂದು ಮೊದಮೊದಲು ಅರ್ಥಮಾಡಿಕೊಳ್ಳುತ್ತಿದ್ದರು. ಉದಾಹರಣೆಗೆ ಈ ದೇಶದಲ್ಲಿ ವಾಸಿಸ ದಿರುವ ಯೂರೋಪಿಯನರು ಬಂಡವಾಳವನ್ನೂ, ಯಂತ್ರಸಾಮಗ್ರಿ ಗಳನ್ನೂ ಮತ್ತು ಅದನ್ನು ನಡೆಸಲು ಬೇಕಾಗುವ ವಿದ್ಯಾವಂತರನ್ನೂ ತಮ್ಮ ದೇಶದಿಂದ ಇಲ್ಲಿಗೆ ಕಳುಹಿಸಿ, ಆ ಯಂತ್ರವು ಭಾರತದಲ್ಲಿ ಸ್ಥಾಪನೆ ಯಾಗಿ ಕೆಲಸ ನಡೆಸಿದರೆ, ಅದನ್ನು ದೇಶೀಯ (ಭಾರತೀಯ) ಕೈಗಾರಿಕೆ ಎಂದೇ ಕರೆಯುತ್ತಿದ್ದರು. ಭಾರತದ ಜನಸಮುದಾಯಕ್ಕೆ ಇದರಿಂದ ಕೇಡಾದರೂ ಅದು 'ದೇಶೀಯ ಕೈಗಾರಿಕೆ' ಎನಿಸಿಕೊಳ್ಳುತ್ತಿದ್ದಿತು. ಈ ಅಭಿಪ್ರಾಯದಿಂದ ನಾವು ಈಗ ಬಹಳ ದೂರ ಮುಂದುವರಿದಿದ್ದೇವೆ. ಒಂದು ಕೈಗಾರಿಕೆಯು 'ದೇಶೀಯ' ಎನಿಸಿಕೊಳ್ಳಬೇಕಾದರೆ ಅದರಿಂದ ಇಲ್ಲಿಯ ಜನಸಮುದಾಯಕ್ಕೆ ಕಂಡಹಾಗೆ ಪ್ರಯೋಜನವಾಗುವಂತಿರ ಬೇಕು. ಆ ಕೈಗಾರಿಕೆಯು ವಿದ್ಯಾವಂತರಾದ ಭಾರತೀಯರಿಂದಲೂ,

ಭಾರತೀಯ ಕೆಲಸಗಾರರಿಂದಲೂ ನಡೆಸಲ್ಪಡಬೇಕು. ಅದಕ್ಕೆ ಬೇಕಾದ ಬಂಡವಾಳವೂ, ಯಂತ್ರಸಾಮಗ್ರಿಯೂ ಈ ದೇಶದವಾಗಿರಬೇಕು. ಈ ಕೈಗಾರಿಕೆಯಲ್ಲಿ ಕೆಲಸಮಾಡುವವರಿಗೆ ಜೀವನಕ್ಕೆ ಸಾಕಾಗುವಷ್ಟು ಕೂಲಿ ದೊರಕಬೇಕು. ಅವರಿಗೆ ಅನುಕೂಲವಾದ ಮನೆಗಳಿರಬೇಕು. ಅವರ ಮಕ್ಕಳ ಯೋಗಕ್ಷೇಮವನ್ನು ಕೈಗಾರಿಕೆಯನ್ನು ನಡೆಸುವ ನೌಕರುದಾರರು ನೋಡಿಕೊಳ್ಳುವೆವೆಂದು ಭರವಸೆ ಕೊಡಬೇಕು. ಇದಿಷ್ಟೂ 'ದೇಶೀಯ (ಭಾರತೀಯ) ಕೈಗಾರಿಕೆ' ಎನ್ನುವುದಕ್ಕೆ ಸೂತ್ರ. ಅಖಿಲಭಾರತ ಚರಕ ಸಂಘ, ಮತ್ತು ಅಖಿಲಭಾರತ ಗ್ರಾಮೋದ್ಯೋಗ ಸಂಘ, ಇವೆರಡು ಮಾತ್ರ ಪ್ರಾಯಶಃ ಈ ಸೂತ್ರಕ್ಕೆ ಅನುಸಾರವಾಗಿ ನಡೆಯುತ್ತಿರಬಹುದು. ಈ ಸಂಸ್ಥೆಗಳೂ ಕೂಡ ಈ ದಿಕ್ಕಿನಲ್ಲಿ ಇನ್ನೂ ಎಷ್ಟೋ ಮುಂದುವರಿಯಬೇಕು. ಆದಾಗ್ಯೂ ಮೇಲಿನ ಸೂತ್ರವನ್ನು ಪೂರ್ತಿಯಾಗಿ ಅನುಸರಿಸಬೇಕೆಂಬುದು ಈ ಸಂಸ್ಥೆಗಳ ಹತ್ತಿರದ ಗುರಿಯಾಗಿದೆ.

ಈ ಮೇಲಿನ ವಿವರಣೆಗೂ ಮತ್ತು ೧೯೨೦ ಕ್ಕೆ ಮುಂಚೆ ಕಾಂಗ್ರೆಸ್ಸು ಅನುಮೋದಿಸಿದ್ದ ಸೂತ್ರಕ್ಕೂ ಮಧ್ಯೆ ಅನೇಕ ತರಹದ ಅರ್ಥಗಳು ಬರುವಂತೆ ಭಾರತೀಯ ಕೈಗಾರಿಕೆ ಎಂಬ ಮಾತಿಗೆ ಬಗೆಯ ಬಗೆಯ ಗುಣನಿರೂಪಗಳನ್ನು ಇಟ್ಟುಕೊಂಡಿದ್ದರು. ಭಾರತದಲ್ಲಿ ತಯಾರಾಗುವ ಎಲ್ಲ ಪದಾರ್ಥಗಳನ್ನೂ ಮಿಲ್ಲಿನ ಬಟ್ಟೆಯೊಂದನ್ನು ಬಿಟ್ಟು 'ಸ್ವದೇಶಿ' ಎಂದು ಕಾಂಗ್ರೆಸ್ಸು ಅನುಮೋದಿಸಿದೆ. ಈಗ ಪ್ರಬಲವಾಗಿರುವ ಈ ದೇಶದ ಮಿಲ್ಲುಬಟ್ಟೆಯ ಕೈಗಾರಿಕೆಯು, 'ಸ್ವದೇಶೀ ಕೈಗಾರಿಕೆ' ಎಂದು ಹೇಳಿಕೊಳ್ಳಬಹುದು. ಈ ಕೈಗಾರಿಕೆಯು, ಜಪಾನ್, ಲಾಂಕಷೈರ್ಗಳೊಂದಿಗೆ ಪೈಪೋಟಿನಡೆಸಿ, ಈ ದೇಶದಲ್ಲಿ ಸ್ಥಾಪಿತವಾಗಿದ್ದರೂ, ಈ ಕೈಗಾರಿಕೆಯು ಬಡಜನರನ್ನು ಸುಲಿಗೆಮಾಡಿ, ಅವರ ಬಡತನವನ್ನು ಹೆಚ್ಚಿಸುತ್ತಿದೆ. ಖಾದಿಯಮೇಲೆ ಇದು ಎಷ್ಟರಮಟ್ಟಿಗೆ ಜಯಹೊಂದುವುದೋ ಅಷ್ಟರ ಮಟ್ಟಿಗೆ ಇದು ಬಡವರ ದಾರಿದ್ರ್ಯವನ್ನು ಹೆಚ್ಚಿಸುತ್ತದೆ. ದೊಡ್ಡದೊಡ್ಡ

ಕೈಗಾರಿಕೋದ್ಯಮಗಳು ಸ್ಥಾಪನೆಯಾಗಬೇಕೆಂಬ ಹುಚ್ಚು ಕೂಗು ಎದ್ದಿರುವ ಈ ಸುಸಮಯದಲ್ಲಿ, ನನ್ನ ತತ್ವವು, ಮೂಲೆಗೆ ಸೇರದಿದ್ದರೂ ಚರ್ಚೆಗೆ ಆಸ್ಪದವನ್ನುಂಟುಮಾಡಿದೆ. ಕೈಗಾರಿಕೋದ್ಯಮವು ದಿನೇದಿನೇ ಅಭಿವೃದ್ಧಿಯಾದಂತೆ ಜನಸಮುದಾಯದ ಬಡತನವು ಹೆಚ್ಚುವುದು ಸ್ವಾಭಾವಿಕವೆಂದು ಈ ಜನರು ಸಮಾಧಾನ ಹೇಳುತ್ತಾರೆ. ಇಂಥಾ ದಾರಿದ್ರ್ಯವನ್ನು ಅನುಭವಿಸುವ ಮಾತು ಹಾಗಿರಲಿ, ಈ ಕೆಡಕು ಅನಿವಾರ್ಯವೆಂದೂ, ತಪ್ಪಿಸಲಸಾಧ್ಯವೆಂದೂ ನಾನು ನಂಬಲಾರೆ. ಹಳ್ಳಿಗಳಿಂದ ತುಂಬಿರುವ ಈ ದೇಶದ ಜನರು, ತಮ್ಮ ವಿರಾಮಕಾಲದಲ್ಲಿ ನೂಲುವುದು ಮತ್ತು ಅದಕ್ಕೆ ಬೇಕಾದ ಎಲ್ಲ ಕೆಲಸಗಳನ್ನೂ ಮಾಡಿದರೆ, ದೇಶಕ್ಕೆಲ್ಲ ಬೇಕಾಗುವಷ್ಟು ಬಟ್ಟೆಯನ್ನು ತಯಾರಿಸಬಹುದೆಂದು ಅಖಿಲಭಾರತ ಚರಕಸಂಘವು ತೋರಿಸಿಕೊಟ್ಟಿದೆ. ಆದರೆ ನಮ್ಮ ದೇಶದಲ್ಲಿ ಯಂತ್ರದ ಬಟ್ಟೆಯನ್ನು ಉಪಯೋಗಿಸುವ ಚಾಳಿಯನ್ನು ತಪ್ಪಿಸುವುದು ಕಷ್ಟವಾಗಿದೆ. ಈ ಅಭ್ಯಾಸವನ್ನು ಹೇಗೆ ತಪ್ಪಿಸಬೇಕೆಂದು ನಾನು ವಿವರಿಸಲು ಇದು ಸರಿಯಾದ ಸಮಯವಲ್ಲ. ಈ ಲೇಖನವನ್ನು ಬರೆಯುವಾಗ ನನಗಿದ್ದ ಉದ್ದೇಶವು 'ಸ್ವದೇಶೀ ಕೈಗಾರಿಕೆ' ಎಂದರೆ, ಕೋಟಿ ಸಂಖ್ಯೆಯ ಜನರ ಯೋಗಕ್ಷೇಮದ ದೃಷ್ಟಿಯಿಂದ ಯಾವುದು? ಮತ್ತು ಹಾಗೆ ಹೇಳಲು ನನ್ನ ಕಾರಣಗಳೇನು ಎಂದು ತಿಳಿಸುವುದಾಗಿದೆ. ನಮ್ಮ ಜನರ ಸಹಾಯ ಸಹಾನುಭೂತಿಗಳು ಯಾವ ಕೈಗಾರಿಕೆಗಳಿಗೆ ಅವಶ್ಯಕವೋ, ಅಂಥವುಗಳ ಉಪಯೋಗಕ್ಕಾಗಿ ರಾಷ್ಟ್ರೀಯ ಪ್ರದರ್ಶನಗಳು ಏರ್ಪಡಬೇಕೇ ಹೊರತು, ಪ್ರದರ್ಶನಗಳ ಪ್ರಚಾರ ಮತ್ತು ಇತರ ಸಹಾಯಗಳಿಲ್ಲದೆ ಅಭಿವೃದ್ಧಿಹೊಂದುತ್ತಿರುವ ಕೈಗಾರಿಕೆಗಳ ಸಹಾಯಕ್ಕಾಗಿ ಅಲ್ಲ. ಆ ಕೈಗಾರಿಕೆಗಳು ತಮಗೆ ಅವಶ್ಯಕವಾದ ಪ್ರದರ್ಶನಗಳನ್ನು ತಾವೇ ಏರ್ಪಾಡು ಮಾಡಿಕೊಳ್ಳಬಹುದು. 23-10-1937

---

೧೭. ಗ್ರಾಮಸೇವೆ ಎಂದರೇನು?

[ಗಾಂಧಿಜಿಯವರು ತಮ್ಮ ಉಪವಾಸವನ್ನು ಮುಗಿಸಿ ಆರೋಗ್ಯ ಹೊಂದುತ್ತಿದ್ದಾಗ ಕೆಲಸಗಾರರೊಂದಿಗೆ ಆಗಾಗ ಸಂಭಾಷಣೆ ನಡೆಸುತ್ತಿದ್ದರು. ಅವರ ಕಷ್ಟ ಸಂಶಯಗಳನ್ನು ತಿಳಿಯುವದಕ್ಕೋಸ್ಕರ ಪ್ರತಿ ನಿತ್ಯವೂ ಸ್ವಲ್ಪಕಾಲ ಅವರ ಮಧ್ಯೆ ಕುಳಿತು ಮಾತನಾಡುತ್ತಿದ್ದರು. ಅವರ ಬಳಿಗೆ ಬರುತ್ತಿದ್ದವರಲ್ಲಿ ಗುಜರಾತಿನ ವಿದ್ಯಾಪೀಠದ ಉಪಾಧ್ಯಾಯರುಗಳು ಕೆಲವರು. ಅವರು ನಡೆಸಿದ ಚರ್ಚೆಯು ಗ್ರಾಮಸೇವೆಗೆ ಸಂಬಂಧಿಸಿರುವುದರಿಂದಲೂ ಮತ್ತು ಹರಿಜನ ಯೋಗಕ್ಷೇಮಕ್ಕೆ ಮುಖ್ಯವಾಗಿರುವುದರಿಂದಲೂ ಆದರ ಸಾರಾಂಶವನ್ನು ಕೆಳಗೆ ಕೊಟ್ಟಿದ್ದೇನೆ. ಮ. ದೇ]

ವಿದ್ಯಾಪೀಠದ ಮುಖ್ಯವಾದ ಕಾರ್ಯಕ್ರಮವು ಹಳ್ಳಿಗಳಲ್ಲಿ ನಡೆಯಬೇಕಾಗಿದೆ. ವಿದ್ಯಾಪೀಠವು ಸ್ಥಾಪಿತವಾದಂದಿನಿಂದಲೂ ಈ ವಿಷಯವನ್ನು ನಾನು ಒತ್ತಿಹೇಳುತ್ತಿದ್ದೇನೆ. ಕೆಲವು ವರ್ಷಗಳ ಹಿಂದೆ, ಸರ್ಕಾರದವರು ವಿದ್ಯಾಪೀಠವನ್ನು ಅಕ್ರಮಕೂಟವೆಂದು ಆಜ್ಞೆ ಮಾಡಿ, ಅಲ್ಲಿ ಕೆಲಸಮಾಡುತ್ತಿದ್ದ ವಿದ್ಯಾರ್ಥಿಗಳನ್ನೂ ಅಧ್ಯಾಪಕರನ್ನೂ ಸೆರೆಮನೆಗೆ ತಳ್ಳಿದರು. ಅಲ್ಲಿಯವರೆಗೂ ನಾವೆಲ್ಲ, ಹಳ್ಳಿಗಳ ಸೇವೆಯು ಗುಜರಾತಿನ ಮುಖ್ಯಪಟ್ಟಣದಲ್ಲಿ ಸ್ಥಾಪಿತವಾಗಿರುವ ಈ ಸಂಸ್ಥೆಯ ಮೂಲಕವೇ ಸಾಧ್ಯ ಎಂದು ನಂಬಿದ್ದೆವು. ಆದರೆ ಬದಲಾವಣೆ ಹೊಂದಿರುವ ಈಗಿನ ಪರಿಸ್ಥಿತಿಯಲ್ಲಿ ಆ ಹಿಂದಿನ ಧ್ಯೇಯವನ್ನೇ ಈಗಿನ ಚರ್ಚೆಯ ಮುಖ್ಯ ವಿಷಯವಾಗಿ ಆರಿಸಿಕೊಂಡು, ನಮ್ಮ ಮುಂದಿನ ಕಾರ್ಯಕ್ರಮವು ಯಾವರೀತಿ ಇರಬೇಕೆಂಬುದನ್ನು ಈಗ ನಾವೆಲ್ಲ ಸೇರಿರುವ ಈ ಸಂದರ್ಭದಲ್ಲಿ ಆಲೋಚನೆ ಮಾಡೋಣ. ಜೀವವುಳ್ಳ ಸಂಸ್ಥೆಗಳ ಆಶ್ರಯದಲ್ಲಿ ಕೆಲಸಮಾಡುತ್ತಿರುವ ಪ್ರತಿನಿಧಿಗಳು, ಅವರು ಎಲ್ಲೇ ಇರಲಿ, ಆ ಸಂಸ್ಥೆಯ ಧ್ಯೇಯಗಳನ್ನ ಪ್ರತಿಬಿಂಬಿಸುವ ಮೂರ್ತಿ

ಗಳಂತಿರಬೇಕು. ಈ ಭಾವನೆಯು ನಾವು ಮಾಡುವ ಕೆಲಸಗಳಲ್ಲಿ ಮೂಡು ವುದಾದರೆ, ಆ ಸಂಸ್ಥೆಗೆ ಒಂದು ಮನೆ ಇದೆಯೆ ಇಲ್ಲವೆ, ಸರಕಾರದಿಂದ ಅದಕ್ಕೆ ಅನುಮತಿ ದೊರೆತಿದೆಯೆ ಇಲ್ಲವೇ ಎಂಬ ವಿಷಯಗಳು ಮುಖ್ಯ ವಾಗುವುದಿಲ್ಲ.

ಆದುದರಿಂದ, ವಿದ್ಯಾಪೀಠದ ಧ್ಯೇಯಗಳನ್ನು ಪ್ರಿಯವೆಂದೆಣಿಸಿ ಅದರಂತೆ ನಡೆಯಬೇಕೆಂದಿರುವ ನೀವುಗಳೆಲ್ಲರೂ ನೇರವಾಗಿ ಹಳ್ಳಿಗಳಿಗೆ ಹೋಗಿ ನೆಲೆಸಿ, ಅಲ್ಲಿ ನಿಮ್ಮ ಧ್ಯೇಯಗಳಿಗನುಸಾರವಾಗಿ ಜೀವಿಸುವಿರೆಂದು ನಾನು ನಿರೀಕ್ಷಿಸುತ್ತೇನೆ. ಆಗ ನಿಮ್ಮಲ್ಲಿ ಪ್ರತಿಯೊಬ್ಬರೂ ಒಂದೊಂದು ಸಂಚರಿಸುವ ವಿದ್ಯಾಪೀಠದಂತಾಗಿ ಅದರ ಧ್ಯೇಯಗಳನ್ನು ನಿಮ್ಮ ಸ್ವಂತ ಜೀವನದಿಂದಲೇ ಬೋಧಿಸುವಂತಾಗುವಿರಿ. ಇಂತಹ ನೂರಾರು ಕೆಲಸಗಾರರು ವಿದ್ಯಾಪೀಠದ ನಿಯಮಗಳನ್ನು ಪಾಲಿಸುತ್ತ ಹಳ್ಳಿಯಲ್ಲಿ ಕೆಲವು ಕಾಲ ಜೀವಿಸಿದಮೇಲೆ, ಒಂದು ಹಳ್ಳಿಯಲ್ಲಿಯೇ ಆ ವಿದ್ಯಾಪೀಠದ ಮುಖ್ಯ ಸಂಸ್ಥೆಯನ್ನು ಸ್ಥಾಪಿಸಲು ಸಾಧ್ಯವಾಗ ಬಹುದು. ಆದರೆ ನಾವು ಇಂದು ಆ ಕೆಲಸವನ್ನು ಕೈಗೊಳ್ಳುವ ಸ್ಥಿತಿಯಲ್ಲಿಲ್ಲ. ಈ ಹೊಸ ಮಾದರಿಯ ವಿದ್ಯಾಪೀಠವನ್ನು ಸ್ಥಾಪಿಸಲು ಅವಶ್ಯಕವಾದ ಎಲ್ಲ ಪರಿಶ್ರಮವನ್ನೂ ನಾವು ಗಳಿಸಬೇಕಾಗಿದೆ.

ಗ್ರಾಮಸೇವಕನ ದಿನಚರಿಯ ಕೆಲಸಗಳಲ್ಲಿ ಚರಕಕ್ಕೆ ಮುಖ್ಯ ಸ್ಥಾನವು ದೊರೆಯಬೇಕು. ಚರಕ ಮತ್ತು ಅದರ ಫಲಗಳನ್ನು ಎಲ್ಲ ದೃಷ್ಟಿಯಿಂದಲೂ ಪೂರ್ಣವಾಗಿ ಯಾರಿಗಾದರೂ ತಿಳಿಸಬೇಕೆಂಬ ಪ್ರಯತ್ನದಲ್ಲಿ ನಾನಿನ್ನೂ ಜಯಶಾಲಿಯಾಗಿಲ್ಲವೆಂದು ತಿಳಿಯಲು ವಿಷಾದವಾಗುತ್ತದೆ. ನನ್ನ ಬೋಧನೆಗೆ ಅನುಸಾರವಾಗಿ, ಆ ಬೋಧನೆಯ ಪ್ರತಿಧ್ವನಿಯಂತೆ ನಾನು ಜೀವಿಸದಿರುವುದೇ ಇದಕ್ಕೆ ಕಾರಣ. ಒಂಬತ್ತು ತಿಂಗಳ ಕಾಲ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದಾಗ ಪದೇ ಪದೇ ಈ ವಿಷಯವು ನನ್ನ ಮನಸ್ಸಿಗೆ ಬಂದಿತು. ಕೈಯಲ್ಲಿ ನೂಲುವುದು, ಭಾರತದ

ಎಲ್ಲ ಕಡೆಗಳಲ್ಲಿಯೂ ಸಾಧ್ಯವಾದ ಉಪಕಸುಬು ಎಂಬುದನ್ನು ನಾವು ಇನ್ನೂ ಅರ್ಥಮಾಡಿಕೊಂಡಿಲ್ಲ. ಚರಕವಿಲ್ಲದಿದ್ದರೆ, ಹಳ್ಳಿಯ ನೇಯ್ಗೆಯವನು ಜೀವನವನ್ನು ಮಾಡಲಾರನು. ಯಂತ್ರದಿಂದ ತಯಾರಾದ ದಾರವನ್ನು ಅವನು ತರಿಸಿಕೊಳ್ಳಬಹುದು. ಎಂದೆಂದಿಗೂ ಯಂತ್ರಗಳ ಮೇಲೆಯೇ ಅವಲಂಬಿಸಿದರೆ, ಆಗ ಅವನು ಹಾಳಾಗುವುದು ಖಂಡಿತ. ಹತ್ತು ವರ್ಷಗಳಿಂದೀಚೆಗೆ ಖಾದಿ ತೊಡಲು ಪ್ರಾರಂಭಿಸಿರುವ ಜನಸಮುದಾಯಕ್ಕೆ ಮಾತ್ರ ಸಾಕಾಗುವಷ್ಟು ಖಾದಿಯನ್ನು ದೊರಕಿಸುವ ಮಟ್ಟಿಗೆ ಚರಕವು ನಮ್ಮ ಆರ್ಥಿಕ ಜೀವನದಲ್ಲಿ ಸೇರಿಕೊಂಡಿದೆ ಎನ್ನಬಹುದು. ಇದಿಷ್ಟು ಸಣ್ಣ ಕಾರ್ಯಕ್ರಮವನ್ನು ಮಾತ್ರ ನೆರವೇರಿಸಿಕೊಂಡು, ಅಖಿಲಭಾರತ ಚರಕ ಸಂಘದಂತಹ ದೊಡ್ಡ ಸಂಸ್ಥೆಯು, ತಾನು ಜೀವಿಸಿರಲು ಸರಿಯಾದ ಯೋಗ್ಯತೆಯನ್ನು ಪಡೆಯಲಾರದು. “ ಖಾದಿಯು ವ್ಯವಸಾಯದೊಂದಿಗೆ, ಅದರ ಜೊತೆಯಲ್ಲಿ ಇರಬೇಕಾದ ಒಂದು ಉಪಕಸುಬು. ಲಕ್ಷಾಂತರ ಹರಿಜನ ನೇಯ್ಗೆಯವರಿಗೆ ತಮ್ಮ ಜೀವನವನ್ನು ಸಾಗಿಸಲು ಖಾದಿಯೇ ಉಸಿರು.” ಇದಿಷ್ಟು ಖಾದಿಯ ಹಿಂದೆ ಅಡಗಿರುವ ಮುಖ್ಯ ತತ್ವ. ನಮ್ಮ ಹಳ್ಳಿಗಳ ಸೋಮಾರಿತನವನ್ನು ತೊಲಗಿಸಿ, ಪ್ರತಿಯೊಂದು ಮನೆಯನ್ನೂ ಚಟುವಟಿಕೆಯ ಜೇನುಗೂಡಿನಂತೆ ಮಾಡದಿದ್ದರೆ, ಚರಕವು ನಮ್ಮ ನಿತ್ಯಜೀವನದಲ್ಲಿ ಸರಿಯಾದ ಸ್ಥಾನವನ್ನು ಪಡೆಯಿತೆಂದು ಹೇಳುವುದಕ್ಕಾಗುವುದಿಲ್ಲ. ಅಸಂಖ್ಯಾತ ಜನರ ನಿರುದ್ಯೋಗ ಮತ್ತು ಸೋಮಾರಿತನವು ಮಾರಾಮಾರಿ ಜಗಳಕ್ಕೆ ಕಾರಣವಾಗುತ್ತದೆ. ಈ ಪರಿಸ್ಥಿತಿಯನ್ನು ತಪ್ಪಿಸಬೇಕಾದರೆ ಖಾದಿಯೇ ಗತಿ. ಇಲ್ಲಿ ಸಮತಾವಾದವು ನಮಗೆ ಸಹಾಯ ಮಾಡಲಾರದು. ಸಮತಾವಾದವು ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳ ಸ್ಥಾಪನೆಯಾಗಬೇಕೆಂದು ಹೇಳುತ್ತದೆ. ಇಂದು ಭಾರತವು ತನ್ನ ಜೀವನದಲ್ಲಿ ರಕ್ತಗತಮಾಡಿಕೊಳ್ಳುವ ಸಮತಾವಾದವೆಂದರೆ ಅದು ಚರಕವೆ. ಆದುದರಿಂದ ಪ್ರತಿಯೊಬ್ಬ ಗ್ರಾಮ

ಸೇವಕನೂ ಚರಕವನ್ನು ತನ್ನ ಕಾರ್ಯಕ್ರಮದ ಮುಖ್ಯ ಅಂಗವನ್ನಾಗಿ ಮಾಡಿಕೊಳ್ಳಲಿ.

ಹಳ್ಳಿಯಲ್ಲಿ ನೆಲಸುವ ಸೇವಕನು ಪ್ರತಿದಿನವೂ ನೂಲುವುದಲ್ಲದೆ, ತನ್ನ ಅನ್ನವನ್ನು ತಾನೇ ಸಂಪಾದಿಸಿಕೊಳ್ಳುವಂತೆ ನಿತ್ಯವೂ ಕೈಬಾಚಿ, ಕೊಡಲಿ ಅಥವಾ ಗುದ್ದಲಿಯಿಂದ ಆ ಹಳ್ಳಿಯಲ್ಲಿ ಅನುಕೂಲವಾದ ಕೆಲಸ ಮಾಡಬೇಕು. ಎಂಟು ಗಂಟೆಗಳ ನಿದ್ದೆ ವಿರಾಮಗಳನ್ನು ಬಿಟ್ಟು ಉಳಿದ ಕಾಲವನ್ನೆಲ್ಲಾ ಯಾವುದಾದರೂ ಕೆಲಸ ಮಾಡುವುದರಲ್ಲಿ ಕಳೆಯಬೇಕು. ಅವನಿಗೆ ವ್ಯರ್ಥಮಾಡುವುದಕ್ಕೆ ಹೊತ್ತೇ ಇರಕೂಡದು. ಹಾಗಿದ್ದರೆ ಅಂತಹವನು ತಾನು ಸೋಮಾರಿಯಾಗದೆ ಇತರರೂ ಸೋಮಾರಿಗಳಾಗ ದಂತೆ ನೋಡಿಕೊಳ್ಳುತ್ತಾನೆ. ಅವನ ಜೀವನವು ನೆರೆಹೊರೆಯವರಿಗೆ, ಸದಾ ಬಿಡುವಿಲ್ಲದ ಮತ್ತು ಸಂತೋಷವನ್ನು ಕೊಡುವ ಕೆಲಸ ಮಾಡುವುದರಲ್ಲಿ, ಆದರ್ಶವಾಗಬೇಕು. ದೇಹಕ್ಕೆ ಬೇಕಾದ ಆಹಾರವು ದೇಹಶ್ರಮದಿಂದಲೇ ಬರಬೇಕು. ಮನಸ್ಸಿನ ಬೆಳವಣಿಗೆಗೆ ಬುದ್ಧಿಯ ಕೆಲಸಗಳನ್ನು ಮಾಡು ವುದು ಅವಶ್ಯಕ. ಕೆಲಸ ಮಾಡುವುದಕ್ಕೆ ಆಯಾಯ ಕೆಲಸಕ್ಕೆ ಸಂಬಂಧ ಪಟ್ಟಂತೆ ಬೇರೆ ಬೇರೆ ಪಂಗಡಗಳಿದ್ದೇ ಇರಬೇಕು. ಆದರೆ ಪ್ರತಿಯೊಂದು ಗುಂಪಿನವರೂ ಒಂದೊಂದು ಬಗೆಯ ಶರೀರ ಶ್ರಮದ ಕೆಲಸವನ್ನು ಮಾಡುವಹಾಗೆ ಏರ್ಪಾಡಾಗಬೇಕು. ಬುದ್ಧಿಯ ಕೆಲಸಗಳನ್ನು ಒಂದು ಜಾತಿಯವರು ಮಾಡುವುದು, ಶರೀರಶ್ರಮದ ಕೆಲಸಗಳನ್ನು ಒಂದು ಜಾತಿಯವರು ಮಾಡುವುದು, ಈ ರೀತಿ ಮಾತ್ರ ಆಗಬಾರದು. ಪ್ರಯತ್ನ ಪಟ್ಟೊ, ಪ್ರಯತ್ನಪಡದೆಯೊ, ಅಭ್ಯಾಸಮಾಡಿರುವ ಸೋಮಾರಿತನವೆಲ್ಲ ಹೋಗಬೇಕು. ಈ ಸೋಮಾರಿತನವನ್ನು ನಾಶಮಾಡದಿದ್ದರೆ, ಯಾವ ಕಲ್ಪ ವೃಕ್ಷವೂ ನಮಗೆ ಸಹಾಯ ಮಾಡುವುದಿಲ್ಲ. ಈಗಿರುವಂತೆ ಅರ್ಧ ಹೊಟ್ಟೆ ಊಟದ ಬಡತನವು ಮುಂದೆ ಎಂದೆಂದೂ ಹಾಗೆಯೇ ಉಳಿಯುವುದು. ಒಂದು ರೊಟ್ಟಿ ತಿನ್ನುತ್ತಿರುವವನು ಎರಡು ರೊಟ್ಟಿಗೆ ಬೇಕಾಗುವಷ್ಟು

ಸಂಪಾದಿಸಬೇಕು. ಇದನ್ನು ಸರ್ವ ಸಾಧಾರಣವಾದ ತತ್ವವೆಂದು ನಾವು ತಿಳಿಯದಿದ್ದರೆ, ಜನಸಂಖ್ಯೆಯನ್ನು ಎಷ್ಟೇ ಕಡಿಮೆಮಾಡಿದರೂ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಈ ಮಾತನ್ನು ಒಪ್ಪಿ ಅದರಂತೆ ನಡೆದರೆ, ಈಗ ಇರುವುದಕ್ಕಿಂತ ಅನೇಕಲಕ್ಷ ಹೆಚ್ಚು ಜನರಿಗೆ ಜೀವನವಾಗುತ್ತದೆ.

ಗ್ರಾಮಸೇವಕನು, ಮೇಲೆ ಹೇಳಿದ ರೀತಿಯಲ್ಲಿ ನಡೆದುಕೊಂಡರೆ, ಉದ್ಯೋಗವೇ ರೂಪತಾಳಿತೋ ಎನ್ನುವ ಹಾಗೆ ಆಗುತ್ತಾನೆ. ಖಾದಿಯನ್ನು ತಯಾರಿಸಲು ಅವಶ್ಯಕವಾದ ಪ್ರತಿಯೊಂದು ಕೆಲಸದಲ್ಲೂ ಬೀಜ ಬಿತ್ತಿ ಆರಿಸುವುದರಿಂದ ನೇಯುವವರೆಗೆ ಎಲ್ಲವೂ ಸೇರಿ—ಆತನು ಪೂರ್ಣ ಪರಿಶ್ರಮ ಪಡೆಯುತ್ತಾನೆ. ಆ ಕೆಲಸಗಳನ್ನು ಉತ್ತಮವಾಗಿ ಮಾಡಲು ಅವನು ತನ್ನ ಬುದ್ಧಿಯನ್ನೆಲ್ಲ ಉಪಯೋಗಿಸುತ್ತಾನೆ. ಅದನ್ನೂ ಒಂದು ಶಾಸ್ತ್ರಸಮ್ಮತವಾದ ವಿದ್ಯೆಯೆಂದು ಅವನು ತಿಳಿದರೆ ಈ ಕೆಲಸವು ಅವನಿಗೆ ಬೇಸರ ಹುಟ್ಟಿಸುವುದಿಲ್ಲ. ಅದರ ಬದಲು ಖಾದಿಯಲ್ಲಿ ಸಾಧ್ಯವಾಗುವ ಕೆಲಸಗಳು ಹೆಚ್ಚಾಗಿ ತಿಳಿದಂತೆ ಪ್ರತಿದಿನವೂ ಅವನಿಗೆ ಹೆಚ್ಚು ಸಂತೋಷ ಉಂಟಾಗುತ್ತದೆ. ಆತನು ಉಪಾಧ್ಯಾಯನಾಗಿ ಹಳ್ಳಿಗೆ ಹೋದರೂ ಹೊಸ ವಿಷಯಗಳನ್ನು ಕಲಿಯುವುದರಲ್ಲಿ ವಿದ್ಯಾರ್ಥಿಯಂತೆ ಆಸಕ್ತಿ ತೋರುತ್ತಾನೆ. ಗ್ರಾಮಜೀವನದ ಪ್ರತಿಯೊಂದು ವಿಷಯದಲ್ಲೂ ಆತನು ಪರಿಶ್ರಮ ಹೊಂದಿ, ಆ ಹಳ್ಳಿಯ ಕಸುಬುಗಳನ್ನು ಕಂಡುಹಿಡಿದು, ಅವುಗಳ ಸ್ಥಿತಿಯನ್ನು ಉತ್ತಮ ಪಡಿಸುತ್ತಾನೆ. ಹಳ್ಳಿಯ ಕಸಬುಗಳ ಬೆಳವಣಿಗೆಗೆ ಅವಶ್ಯಕವಾದ ಎಲ್ಲ ಅಂಶಗಳನ್ನೂ ಆತನು ಶೋಧನೆ ಮಾಡುತ್ತಾನೆ. ಖಾದಿಯ ತತ್ವಕ್ಕೆ ಮನಸ್ಸನ್ನು ಕೊಡದೆ ಹಳ್ಳಿಯವರು ಪೂರ್ಣ ಉದಾಸೀನತೆಯನ್ನು ತೋರಬಹುದು. ಆದರೂ ಕೆಲಸಗಾರನು ಸೇವಾನಿರತವಾದ ತನ್ನ ಜೀವನದಿಂದ ಅವರಲ್ಲಿ ಉತ್ಸಾಹವನ್ನೂ ಆಸಕ್ತಿಯನ್ನೂ ಉಂಟುಮಾಡಬೇಕು. ತನ್ನ ಉದ್ದೇಶಕ್ಕೂ, ಶಕ್ತಿಗೂ ಮಿತಿ

ಯೇನೆಂಬುದನ್ನು ಅವನು ಮರೆಯಬಾರದು. ರೈತರ ಸಾಲವನ್ನು ನಿವಾರಣೆಮಾಡುವ ಪ್ರಯತ್ನದಲ್ಲಿ ಈ ಕೆಲಸಗಾರನು, ಕೈಹಾಕಕೂಡದು. ಅದು ಇವನ ಶಕ್ತಿಗೆ ಮಿಾರಿದ ವ್ಯರ್ಥ ಕೆಲಸವಾಗುವುದು

ಗ್ರಾಮದ ನೈರ್ಮಲ್ಯ ಆರೋಗ್ಯಗಳಿಗೆ ಗ್ರಾಮ ಸೇವಕನು ತನ್ನ ದಿನಚರಿಯಲ್ಲಿ ಹೆಚ್ಚು ಭಾಗವನ್ನು ಕೊಡಬೇಕು. ತಾನು ವಾಸಿಸುವ ಮನೆ ಮತ್ತು ಸುತ್ತಮುತ್ತಲು, ನೈರ್ಮಲ್ಯಕ್ಕೆ ಆದರ್ಶವಾಗಿರಬೇಕು; ಅಷ್ಟೇ ಅಲ್ಲ. ಹಳ್ಳಿಯ ನೈರ್ಮಲ್ಯವನ್ನು ಉತ್ತಮಪಡಿಸಲು ಪ್ರತಿದಿನವೂ ಅವನು ಪರಕೆ ಬುಟ್ಟಿಗಳನ್ನು ತೆಗೆದುಕೊಂಡು ಊರುಸುತ್ತ ಗುಡಿಸಬೇಕು.

ಹಳ್ಳಿಯಲ್ಲಿ ಆಸ್ಪತ್ರೆಯನ್ನು ಸ್ಥಾಪಿಸುವುದಕ್ಕಾಗಲೀ, ಅಥವಾ ತಾನು ಅಲ್ಲಿಯ ವೈದ್ಯನಾಗುವುದಕ್ಕಾಗಲೀ ಇಂಥ ಕೆಲಸಗಾರನು ಪ್ರಯತ್ನಿಸಕೂಡದು. ಇವೆಲ್ಲ ನಾವು ತಪ್ಪಿಸಿಕೊಳ್ಳಬೇಕಾದ ಬಲೆಗಳು. ಹರಿಜನರಿಗಾಗಿ ಕೈಗೊಂಡಿದ್ದ ಪ್ರವಾಸಕಾಲದಲ್ಲಿ ಒಂದು ಹಳ್ಳಿಯಲ್ಲಿ ನಾನು ನಮ್ಮ ಕೆಸಗಾರನೊಬ್ಬನನ್ನು ನೋಡಿದೆನು. ಆತನು ತನ್ನ ದೊಡ್ಡಸ್ತಿಕೆಯನ್ನು ಹೆಚ್ಚಿಸುವಂತಹ ಒಂದು ಕಟ್ಟಡವನ್ನು ಕಟ್ಟಿಸಿ, ಅದರಲ್ಲಿ ಔಷಧಗಳನ್ನಿಟ್ಟು, ಸುತ್ತ ಮುತ್ತಲ ಹಳ್ಳಿಯವರಿಗೆಲ್ಲ ಉಚಿತವಾಗಿ ಅದನ್ನು ಹಂಚುತ್ತಿದ್ದನು. ಸೇವಕರಿಂದ ಮನೆಮನೆಗೂ ಔಷಧಿ ಹಂಚಿಸುತ್ತಿದ್ದನು. ಪ್ರತಿ ತಿಂಗಳು 1200 ರೋಗಿಗಳು ಬರುವರೆಂದು ಅಲ್ಲಿಯ ಲೆಕ್ಕಪತ್ರಗಳಿಂದ ಕಂಡುಬಂದಿತು. ಈ ಬಗೆಯ ಕಾರ್ಯಕ್ರಮವನ್ನು ನಾನು ಸಹಜವಾಗಿಯೂ ಟೀಕಿಸಬೇಕಾಯಿತು. ಅವನ ತಿಳಿವಳಿಕೆ ತಪ್ಪಾಗಿದ್ದಿತು. ಗ್ರಾಮಸೇವೆ ನಡೆಯುವುದು ಈ ರೀತಿಯಲ್ಲಲ್ಲವೆಂದು ನಾನು ಅವನಿಗೆ ತಿಳಿಸಿದೆ. ಹಳ್ಳಿಯ ಜನರಿಗೆ ನೈರ್ಮಲ್ಯ ಆರೋಗ್ಯಗಳನ್ನು ಬೋಧನೆ ಮಾಡಿ, ಕಾಯಿಲೆ ಬರದಂತೆ ತಪ್ಪಿಸಿಕೊಳ್ಳುವ ವಿಧಾನವನ್ನು ತಿಳಿಸುವುದು ಈ ಕೆಲಸಗಾರನ ಕರ್ತವ್ಯವಾಗಿತ್ತು. ಇವನು ಅಲ್ಲಿ ನೆಲೆಸಿದ್ದುದರ ಉದ್ದೇಶ ಕಾಯಿಲೆ ಬಂದವರಿಗೆ ಔಷಧಿ ಹಂಚುವುದಲ್ಲ. ಅರಮನೆ

ಯುಂತಿದ್ದ ಆ ಕಟ್ಟಡವನ್ನು ಗ್ರಾಮಪಂಚಾಯಿತಿಗೆ ಬಾಡಿಗೆಗೆ ಕೊಟ್ಟು ಹುಲ್ಲು ಹೊದ್ದಿಸಿರುವ ಗುಡಿಸಲುಗಳಲ್ಲಿ ವಾಸಮಾಡುವಂತೆ ನಾನು ಆವನಿಗೆ ತಿಳಿಸಿದೆ. ಕ್ವಿನೀನ್, ಹರಳೆಣ್ಣೆ, ಅಯೋಡೀನ್ ಮುಂತಾದ ಅತಿ ಅವಶ್ಯಕವಾದವುಗಳನ್ನು ಮಾತ್ರ ಔಷಧಗಳಂತೆ ಇಟ್ಟುಕೊಂಡಿರಬೇಕೆಂದು ನಾನು ಹೇಳಿದೆ. ಹಳ್ಳಿಯವರಿಗೆ ಅವರ ದೇಹವನ್ನೂ ಮತ್ತು ಹಳ್ಳಿಯನ್ನೂ ಶುಚಿಯಾಗಿಡಲು ಸಹಾಯ ಮಾಡುವುದಕ್ಕೆ ಕೆಲಸಗಾರನು ತನ್ನ ಹೆಚ್ಚು ಕಾಲವನ್ನು ವಿನಿಯೋಗಿಸಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಗ್ರಾಮ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದನ್ನು ಈ ಕೆಲಸಗಾರನು ಹಳ್ಳಿಯವರಿಗೆ ಬೋಧಿಸಬೇಕು.

ಗ್ರಾಮಸೇವಕನು ಅಲ್ಲಿಯ ಹರಿಜನರ ಯೋಗಕ್ಷೇಮದಲ್ಲಿ ಆಸಕ್ತಿಯನ್ನು ತೋರಿಸಬೇಕು. ಅವರೆಲ್ಲ ಇವನ ಮನೆಗೆ ಸ್ವಾಭಾವಿಕವಾಗಿ ಬರಬೇಕು. ಕಷ್ಟನಿಷ್ಠೂರಗಳಲ್ಲಿ ಅವರು ಇವನ ಸಹಾಯವನ್ನು ಸಹಜವಾಗಿ ಅಪೇಕ್ಷಿಸುವಂತೆ ಆಗಬೇಕು. ತನ್ನ ಮನೆಗೆ ಹರಿಜನರು ಪ್ರವೇಶಿಸುವುದನ್ನು ನೆರೆಹೊರೆಯವರು ಸಹಿಸದಿದ್ದರೆ, ಈ ಸೇವಕನು ಹರಿಜನರ ಕೇರಿಯಲ್ಲೇ ತನಗೊಂದು ಮನೆಯನ್ನು ಕಟ್ಟಿಕೊಳ್ಳಬೇಕು.

ಅಕ್ಷರಾಭ್ಯಾಸದ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಕಾರ್ಯಕ್ರಮದಲ್ಲಿ ಅದಕ್ಕೊಂದು ಸ್ಥಾನವಿದೆ ನಿಜ. ಆದರೆ ಅದಕ್ಕೆ ಬಲುಹೆಚ್ಚಾದ ಪ್ರಾಮುಖ್ಯತೆ ಕೊಡಕೂಡದೆಂದು ನಿಮಗೆ ಎಚ್ಚರಿಕೆ ಕೊಡುತ್ತೇನೆ. ಹುಡುಗರಿಗಾಗಲಿ ದೊಡ್ಡವರಿಗಾಗಲಿ ಓದುಬರಹ ಕಲಿಸುವುದಕ್ಕೆ ಮುಂಚೆ ಯಾವ ವಿದ್ಯೆಯನ್ನು ಕಲಿಸುವುದಕ್ಕಾಗುವುದಿಲ್ಲ ಎಂಬ ನಂಬಿಕೆಯ ಮೇಲೆ ನಿಮ್ಮ ಕೆಲಸಗಳನ್ನು ಮಾಡಬೇಡಿ. ಚರಿತ್ರೆ, ಭೂಗೋಳ, ಸುಲಭಗಣಿತ ಮತ್ತು ಈಗಿನ ವಿದ್ಯಮಾನಗಳು ಇವುಗಳ ಮೇಲೆ ಎಷ್ಟೋ ಉಪಯುಕ್ತವಾದ ವಿಷಯಗಳನ್ನು ಅಕ್ಷರಾಭ್ಯಾಸಕ್ಕೆ ಕೈಹಾಕುವುದಕ್ಕೆ ಮುಂಚೆಯೇ, ಬಾಯಿಮಾತುಗಳಿಂದ ತಿಳಿಸಬಹುದು.

ನಾಲಿಗೆ, ಕಣ್ಣು ಕಿವಿಗಳು ಕೈಗಿಂತ ಮುಂಚೆ ಉಪಯೋಗಕ್ಕೆ ಬರುವುವು. ಬರೆಯುವುದಕ್ಕಿಂತ ಮುಂಚೆ ಓದುವುದೂ ಅಕ್ಷರ ಬರೆಯುವುದಕ್ಕಿಂತ ಮುಂಚೆ ಚಿತ್ರಿಸುವುದೂ ನಮಗೆ ಅಭ್ಯಾಸವಾಗುವುದು. ಈ ನೈಜವಾದ ಮಾರ್ಗವನ್ನು ಅಭ್ಯಾಸ ಮಾಡಿಸಿದರೆ, ಹುಡುಗರ ಬುದ್ಧಿಯ ಬೆಳೆವಣಿಗೆಗೆ ಅವಕಾಶವು ಹೆಚ್ಚಾಗಿ ಸಿಕ್ಕಿದಂತಾಗುವುದು. ಅಕ್ಷರಾಭ್ಯಾಸದಿಂದಲೇ ಮೊದಲು ಪ್ರಾರಂಭಮಾಡಿದರೆ, ಆ ಬೆಳೆವಣಿಗೆಗೆ ಒಂದು ವಿಧವಾದ ತಡೆಯಾಗುತ್ತದೆ.

ಗ್ರಾಮಸೇವಕನ ಜೀವನವು, ಹಳ್ಳಿಯ ಜನರ ಜೀವನಕ್ಕೆ ಹೊಂದಿಕೊಂಡಿರಬೇಕು. ಕೆಲಸಗಾರನು ವಿದ್ಯಾವಂತನಂತೆ ನಟಿಸುತ್ತಾ ಯಾವಾಗಲೂ ಪುಸ್ತಕ ಓದುವುದರಲ್ಲಿ ಮಗ್ನನಾಗಿದ್ದು, ಹಳ್ಳಿಯವರ ನೀರಸ ಜೀವನದ ವಿವರಣೆಯನ್ನು ಆಲಿಸುವುದರಲ್ಲಿ ಬೇಜಾರನ್ನು ತೋರಿಸಬಾರದು. ವಾಸ್ತವವಾಗಿ ನೋಡಿದರೆ, ಹಳ್ಳಿಯವರು ಈ ಕೆಲಸಗಾರನನ್ನು ನೋಡಿದಾಗಲೆಲ್ಲ, ಇವನು ಚರಕ, ಮಗ್ಗ, ಕೈಬಾಚಿ, ಗುದ್ದಲಿ ಮುಂತಾದ ಸಾಮಾನುಗಳಿಂದ ಏನಾದರೊಂದು ಕೆಲಸ ಮಾಡುತ್ತಿರಬೇಕು. ಅವರ ಅತ್ಯಲ್ಪವಾದ ಅವಶ್ಯಕತೆಗಳನ್ನು ಇವನು ಆಸಕ್ತಿಯಿಂದ ನೆರವೇರಿಸಿಕೊಡಬೇಕು. ತನ್ನ ಅನ್ನವನ್ನು ತಾನು ಮಾಡುವ ಕೆಲಸಗಳಿಂದ ಸಂಪಾದಿಸಿಕೊಳ್ಳುವಂತೆ ಅವನು ಪ್ರಯತ್ನಿಸಬೇಕು. ದೇವರು ಪ್ರತಿಯೊಬ್ಬ ಮನುಷ್ಯನಿಗೂ, ತನ್ನ ನಿತ್ಯದ ಅವಶ್ಯಕತೆಗಳಿಗಿಂತ ಹೆಚ್ಚಾಗಿ ಸಂಪಾದಿಸಿಕೊಳ್ಳುವ ಶಕ್ತಿಯನ್ನು ಕೊಟ್ಟಿದ್ದಾನೆ. ಪ್ರತಿಯೊಬ್ಬನೂ ತನ್ನ ಬುದ್ಧಿಶಕ್ತಿಯನ್ನು ಸರಿಯಾಗಿ ಉಪಯೋಗಿಸಿದರೆ ಅದು ಎಷ್ಟೇ ಕಮ್ಮಿಯಾಗಿರಲಿ, ಅದಕ್ಕೆ ಅನುಕೂಲವಾದ ಒಂದು ಉದ್ಯೋಗವನ್ನು ಕಂಡುಹಿಡಿದುಕೊಳ್ಳಬಹುದು. ನೂರಕ್ಕೆ ತೊಂಬತ್ತೊಂಬತ್ತು ಪಾಲು ಹಳ್ಳಿಯವರು ಈ ಸೇವಕನನ್ನು ಸಾಕುತ್ತಾರೆ. ಆದರೆ ಕೆಲವುಕಡೆ ಇವನಿಗೆ ಸರಿಯಾದ ಪುರಸ್ಕಾರ ಸಿಕ್ಕದೆ ಇರಬಹುದು. ಆದಾಗ್ಗೂ ಇವನು ನಿರು

ತಪ್ಪಿಹೆಪಡದೆ ತನ್ನ ಕೆಲಸದಲ್ಲಿ ಮುಂದುವರಿಯಬೇಕು. ಹರಿಜನರ ಪ್ರೀತಿಯನ್ನು ಸಂಪಾದಿಸುವ ಕೆಲಸಗಳನ್ನು ಮಾಡುವುದರಿಂದ, ಕೆಲವು ಹಳ್ಳಿಗಳಲ್ಲಿ ಇವನಿಗೆ ಬಹಿಷ್ಕಾರ ಹಾಕಬಹುದು. ಹೀಗಾದರೆ, ಅವನು ಹರಿಜನರ ಕೇರಿಯನ್ನೇ ಸೇರಿ ಅವರಿಂದಲೇ ಬೇಕಾದ ಅನ್ನವನ್ನು ಪಡೆಯಲಿ. ಕೆಲಸಗಾರನಿಗೆ ತಾನು ಮಾಡುವ, ಕೂಲಿಗೆ ತಕ್ಕ ಬೆಲೆ ಇದ್ದೇ ಇದೆ. ಇವನು ಮನಃಪೂರ್ತಿಯಾಗಿ ಅವರ ಸೇವೆ ಮಾಡಿದರೆ, ಅವರು ಕೊಡುವ ಅನ್ನವನ್ನು ನಿರಾಕರಿಸಬೇಕಾಗಿಲ್ಲ. ಆದರೆ ತಾನು ತೆಗೆದುಕೊಳ್ಳುವುದಕ್ಕಿಂತ ಹೆಚ್ಚಾದ ಬೆಲೆಯ ಕೆಲಸವನ್ನು ಮಾಡುವುದೇ ಇವನ ನಿಯಮವಾಗಿರಬೇಕು. ಹೀಗೆ ಸೇವೆ ಮಾಡುತ್ತಿರುವಾಗ, ಪ್ರಾರಂಭದಲ್ಲಿ ತನ್ನ ಸರಳ ಜೀವನಕ್ಕೆ ಬೇಕಾದಷ್ಟು ಹಣವನ್ನು ಗ್ರಾಮಸೇವೆಗೋಸ್ಕರ ಸ್ಥಾಪಿತವಾದ ಸಂಸ್ಥೆ ಯಾವುದಾದರು ಇದ್ದರೆ, ಅದರಿಂದ ತೆಗೆದುಕೊಳ್ಳಬಹುದು.

ಹಸುವಿನ ಯೋಗಕ್ಷೇಮಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ನಾನು ಬೇಕೆಂದೇ ಈಗ ಚರ್ಚೆಗೆ ತೆಗೆದುಕೊಳ್ಳುವುದಿಲ್ಲ. ಗ್ರಾಮಸೇವಕನು, ಇದು ಬಲು ಕಠಿಣವಾದ ಪ್ರಶ್ನೆಯೆಂದು ಕಂಡುಕೊಳ್ಳುತ್ತಾನೆ. ಜನರಿಗೆ ಅದರ ಮೂಲತತ್ವವನ್ನು ಹೇಳಿಕೊಡುವುದರ ಹೊರತು, ಹೆಚ್ಚಿನ ಗೋಜಿಗೆ ಅವನು ಪ್ರಯತ್ನಿಸಬಾರದು. ಹಸುವನ್ನು ಚೆನ್ನಾಗಿ ಪೋಷಿಸುವುದು, ಸತ್ತ ಹಸುವಿನ ಚರ್ಮವನ್ನು ಹದಮಾಡಿ ಬಣ್ಣ ಹಾಕುವುದು ಇವುಗಳಲ್ಲಿ ನಮಗೆ ಸರಿಯಾದ ಜ್ಞಾನವಿಲ್ಲ. ಗುಜರಾತಿನಲ್ಲಿ ಎಮ್ಮೆಗಳು ಹೆಚ್ಚಾಗಿರುವುದರಿಂದ ಈ ಪ್ರಶ್ನೆಯು ಅಲ್ಲಿ ಇನ್ನೂ ಹೆಚ್ಚು ಕಠಿಣವಾಗಿದೆ. ಎಮ್ಮೆಗಳು ಹೆಚ್ಚುವಂತೆ ನಾವು ಪ್ರೋತ್ಸಾಹಕೊಟ್ಟರೆ ಹಸುವು ಸಾಯುವುದಕ್ಕೆ ಅನುಕೂಲ ಮಾಡಿದ ಹಾಗಾಗುತ್ತದೆ ಎಂಬುದನ್ನು ಜನರಿಗೆ ನಾವು ತಿಳಿಸಬೇಕು. ಈ ವಿಷಯದಲ್ಲಿ ಇನ್ನು ಯಾವಾಗಲಾದರೂ ಹೆಚ್ಚಾಗಿ ಹೇಳುತ್ತೇನೆ. ನಾವು ಉಪಯೋಗಿಸುವ ಆಯುಧಗಳೆಲ್ಲ ನೈತಿಕ ಶಕ್ತಿಯುಳ್ಳವುಗಳು ಎಂಬುದನ್ನು ನೀವು ಜ್ಞಾಪಕದಲ್ಲಿಡಿ. ನಮ್ಮ ಕಣ್ಣಿಗೆ ಕಾಣಿಸ

ದಿದ್ದರೂ, ತಡೆ ಇಲ್ಲದೆ ಪ್ರವಹಿಸತಕ್ಕ ಶಕ್ತಿ ಅದು. ಅದರ ಗತಿಯು ಜೊಮಿಟ್ರಿಕಲ್ ರೀತಿ [Geometric progression 1, 2, 4, 8.... ರಂತೆ] ಯಂತೆ ಓಡುತ್ತದೆ; ಗಣಿತದ ಗತಿಯಂತೆ ನಿಧಾನವಲ್ಲ. [Arithmetic progression 1, 2, 3, 4........ರಂತೆ] ಅದನ್ನು ಮುಂದಕ್ಕೆ ನೂಕುವ ಯಾವುದಾದರೂ ಹುಟ್ಟಿ ಇರುವವರೆಗೂ ಅದು ನಿಲ್ಲುವುದಿಲ್ಲ. ಆದುದರಿಂದ ನಿಮ್ಮ ಎಲ್ಲ ಕಾರ್ಯಕ್ರಮಗಳ ಹಿಂದೆಯೂ, ಈ ನೈತಿಕ ಶಕ್ತಿಯ ಅವಲಂಬನೆ ಇರಬೇಕು. ನಿಮ್ಮ ನಡತೆ ಗುಣಗಳು ಅತಿ ಪರಿಶುದ್ಧ ವಾಗಿರಬೇಕೆಂಬ ಅವಶ್ಯಕತೆ ಇದಕ್ಕಾಗಿಯೆ.

ಈ ಕಾರ್ಯಕ್ರಮವನ್ನು ನಡೆಸುವುದಕ್ಕೆ ಅಸಾಧ್ಯವೆಂದೂ, ಇದಕ್ಕೆ ಬೇಕಾದ ಯೋಗ್ಯತೆ ನಿಮ್ಮಲ್ಲಿಲ್ಲವೆಂದೂ ನೀವು ನನಗೆ ಹೇಳಬೇಡಿ. ಇಲ್ಲಿ ಯವರೆಗೂ ಈ ಕೆಲಸಗಳನ್ನು ನೀವು ನಡೆಸಿಲ್ಲವೆಂಬುದು ನಿಮ್ಮ ಮುಂದಿನ ಧ್ಯೇಯಕ್ಕೆ ತಡೆಯಾಗಬಾರದು. ನಿಮ್ಮ ಬುದ್ಧಿ ಮತ್ತು ಹೃದಯಗಳಿಗೆ ಇದು ಸಮರ್ಪಕವಾಗಿ ಕಂಡಲ್ಲಿ ನೀವು ಹಿಂದು ಮುಂದು ನೋಡ ಬಾರದು. ಈ ಪರೀಕ್ಷೆಯನ್ನು ನಡೆಸುವುದಕ್ಕೆ ನೀವು ನಾಚಿಕೆಪಡಬೇಡಿ. ಈ ಪರೀಕ್ಷಾಪ್ರಯೋಗವೇ ನಿಮಗೆ ಮುಂದೆ ಹೆಚ್ಚು ಹೆಚ್ಚು ಉಮೇದನ್ನು [momentum ಬಲ] ದೊರಕಿಸಿಕೊಡುತ್ತದೆ. 31-8-1934.

---

೧೮. ನಿಗರ್ವಿಯಾದ ಬೀರ್‌ಭೂಮ್‌ನ ನಿವಾಸಿ

ಶಾಂತಿನಿಕೇತನದಲ್ಲಿ ವಾಸಿಸುತ್ತಿರುವ “ನಿಗರ್ವಿಯಾದ ಬೀರ್ ಭೂಮ್‌ನ ನಿವಾಸಿಯೊಬ್ಬನು” ದೀನಬಂಧು ಆಂಡ್ರೂಸ್‌ರ ಮೂಲಕ ಈ ಕೆಳಗಿನ ಪ್ರಶ್ನೆಗಳನ್ನು ನನಗೆ ಕಳುಹಿಸಿರುವನು.

1. ನಿಮ್ಮ ಘನವಾದ ಅಭಿಪ್ರಾಯದಲ್ಲಿ ಭಾರತದ ಆದರ್ಶವಾದ ಹಳ್ಳಿಯೆಂದರೆ ಯಾವುದು? ಭಾರತದ ಈಗಿನ ಸಾಮಾಜಿಕ ರಾಜಕೀಯ ಸ್ಥಿತಿಯಲ್ಲಿ ಆದರ್ಶವಾದ ಹಳ್ಳಿಗೆ ಅನುಸಾರವಾಗಿ ಒಂದು ಗ್ರಾಮವನ್ನು ರಚಿಸುವುದು ಎಷ್ಟರ ಮಟ್ಟಿಗೆ ಸಾಧ್ಯವಾಗಬಹುದು?

2. ಗ್ರಾಮಸೇವೆ ಮಾಡಬೇಕೆಂದಿರುವವನು ಹಳ್ಳಿಯ ಯಾವ ಪ್ರಶ್ನೆಗೆ ಮೊದಲು ಗಮನ ಕೊಡಬೇಕು. ಅದನ್ನು ಸಾಧಿಸಲು ಯಾವ ರೀತಿ ಮುಂದುವರಿಯಬೇಕು.

3. ಗ್ರಾಮಪ್ರದರ್ಶನಗಳನ್ನೂ ಮತ್ತು ವಸ್ತುಸಂಗ್ರಹಾಲಯಗಳನ್ನೂ ಸಣ್ಣಾರೀತಿಯಲ್ಲಿ ಏರ್ಪಡಿಸಬೇಕಾದರೆ, ಅವುಗಳ ಮುಖ್ಯ ಧ್ಯೇಯ ಏನಿರಬೇಕು? ಗ್ರಾಮಗಳ ಪುನರ್‌ರಚನೆಗೆ ಇಂತಹ ಪ್ರದರ್ಶನಗಳಿಂದ ಯಾವ ರೀತಿ ಹೆಚ್ಚು ಪ್ರಯೋಜನ ಪಡೆಯಬಹುದು?

ಉತ್ತರಗಳು

1. ಭಾರತದ ಉತ್ತಮವಾದ ಹಳ್ಳಿಯನ್ನು, ಸಂಪೂರ್ಣವಾಗಿ ನೈರ್ಮಲ್ಯದಿಂದ ಇರಲು ಸಾಧ್ಯವಾಗುವಹಾಗೆ ಕಟ್ಟಬೇಕು. ಆ ಹಳ್ಳಿಯ ಐದು ಮೈಲಿಗಳ ಸುತ್ತಳತೆಯಲ್ಲಿ ದೊರೆಯುವ ಸಾಮಾನುಗಳಿಂದ ಬೇಕಾದಷ್ಟು ಗಾಳಿ, ಬೆಳಕುಗಳು ಬರುವಂತೆ ಗುಡಿಸಲುಗಳನ್ನು ಕಟ್ಟಿಸಬೇಕು. ಗುಡಿಸಲಿಗೆ ಸೇರಿದಂತೆ ಒಂದು ಹಿತ್ತಲಿದ್ದು ಅದರಲ್ಲಿ ಮನೆಯ ಉಪಯೋಗಕ್ಕೆ ಬೇಕಾದ ತರಕಾರಿ ಬೆಳೆಯುವುದಕ್ಕೂ, ದನಕರುಗಳನ್ನು ಕಟ್ಟುವುದಕ್ಕೂ ಅನುಕೂಲವಿರಬೇಕು. ಹಳ್ಳಿಯ ರಸ್ತೆಗಳೂ ಓಣಿಗಳೂ ಸಾಧ್ಯವಾದಷ್ಟುಮಟ್ಟಿಗೂ ಧೂಳಿಲ್ಲದೆ ಇರಬೇಕು. ಹಳ್ಳಿಗೆ ಅನುಕೂಲವಾಗಿ ಎಲ್ಲರಿಗೂ ಪ್ರವೇಶವಿರುವಂತೆ ಬಾವಿಗಳಿರಬೇಕು. ಎಲ್ಲ ಜಾತಿಗಳಿಗೂ ಅನುಕೂಲವಾಗುವಂತೆ ದೇವಸ್ಥಾನಗಳೂ, ಒಟ್ಟಾಗಿ ಸಭೆಸೇರಲು ಒಂದು ವಿಶಾಲವಾದ ಸ್ಥಳವೂ, ದನಕರುಗಳು ಮೇಯುವುದಕ್ಕೆ ಹುಲ್ಲುಗಾವಲೂ, ಹಾಲು ಬೆಣ್ಣೆ ತುಪ್ಪಗಳನ್ನು ಕೂಡಿಡುವುದಕ್ಕೂ ಮತ್ತು ಮಾರುವು

ವಕ್ಕೂ ಅನುಕೂಲವಾದ ಒಂದು ಸಹಕಾರ ಸಂಸ್ಥೆಯೂ, ಕಸಬುಗಳ ಅಭ್ಯಾಸವನ್ನೇ ಮುಖ್ಯವಾಗಿ ಉಳ್ಳ ಪ್ರಾಥಮಿಕ ಮಾಧ್ಯಮಿಕ ಶಾಲೆಗಳೂ ಮತ್ತು ವ್ಯವಹಾರಗಳನ್ನು ತೀರ್ಮಾನಮಾಡಲು ಒಂದು ಗ್ರಾಮ ಪಂಚಾಯಿತಿಯೂ, ಆ ಹಳ್ಳಿಯಲ್ಲಿ ಇರಬೇಕು. ಹಳ್ಳಿಯವರು ತಮ್ಮ ಉಪಯೋಗಕ್ಕೆ ಬೇಕಾದ ಹಣ್ಣು ತರಕಾರಿ ದಿನಸಿಗಳನ್ನು ತಾವೇ ಬೆಳಯಬೇಕು. ತಮಗೆ ಬೇಕಾದ ಖಾದಿಯನ್ನು ಅಲ್ಲೇ ತಯಾರಿಸಿಕೊಳ್ಳಬೇಕು. ಉತ್ತಮವಾದ ಒಂದು ಹಳ್ಳಿಗೆ ಇದಿಷ್ಟು ಅವಶ್ಯಕವೆಂದು ನಾನು ತಿಳಿದಿದ್ದೇನೆ. ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿಯ ಮನೆಗಳು, ಸಣ್ಣಸಣ್ಣ ಕೆಲವು ಬದಲಾವಣೆಗಳೊಂದಿಗೆ, ಈಗಿರುವಂತೆಯೇ ಇರಬಹುದು. ಒಳ್ಳೆಯ ಜಮೀನುದಾರರೊಬ್ಬರ ಮುಂದಾಳುತನದಲ್ಲಿ ಅಥವಾ ಅವರಿಲ್ಲದಿದ್ದರೆ ಅಲ್ಲಿಯ ಜನರ ಒಗಟ್ಟು ಸಹಕಾರಗಳಿಂದ ಮೇಲೆ ಹೇಳಿದ ಎಲ್ಲ ಅನುಕೂಲಗಳನ್ನೂ,—ಹೊಸ ಮನೆಗಳನ್ನು ಕಟ್ಟುವುದನ್ನು ಬಿಟ್ಟು—ಹಳ್ಳಿಯವರು ತಮ್ಮ ಖರ್ಚಿನಿಂದಲೇ, ಸರಕಾರದವರ ಸಹಾಯವಿಲ್ಲದೆ ಮಾಡಿಕೊಳ್ಳಬಹುದು. ಇಂತಹ ಹಳ್ಳಿಗಳ ಪುನರ್ರಚನೆಯ ಕಾರ್ಯಕ್ಕೆ ಸರಕಾರದಿಂದ ಸಹಾಯ ಎಷ್ಟು ದೊರೆತರೂ ಸಾಲದು. ಹಳ್ಳಿಯವರು, ತಮ್ಮ ಇಷ್ಟದಿಂದ ಸಹಕರಿಸಿ ಕೆಲಸ ಮಾಡಿದರೆ, ತಮ್ಮ ಅನುಕೂಲಗಳನ್ನು ಹೇಗೆ ಹೆಚ್ಚಿಸಿಕೊಳ್ಳಬಹುದೆಂಬುದನ್ನು ಕಂಡುಹಿಡಿಯುವುದು ಮಾತ್ರ ನನ್ನ ಈಗಿನ ಉದ್ದೇಶವಾಗಿದೆ. ಸರಿಯಾದ ಬುದ್ಧಿವಂತಿಕೆಯ ಮಾರ್ಗವನ್ನು ಒಬ್ಬರು ತೋರಿಸುವವರಿದ್ದರೆ, ಹಳ್ಳಿಯವರು ತಮ್ಮ ಉತ್ಪತ್ತಿಯನ್ನು ಪ್ರತಿಯೊಬ್ಬರ ಉತ್ಪತ್ತಿಯು ಬೇರೆ ಬೇರೆ ಎಂದೆಣಿಸಿದರೂ—ಎರಡರಷ್ಟು ಹೆಚ್ಚಿಸಬಹುದು. ನಮ್ಮ ಹಳ್ಳಿಗಳಲ್ಲಿ ಉತ್ಪತ್ತಿಯ ಸಾಧನಗಳು ಬೇಕಾದಷ್ಟಿವೆ. ಅವುಗಳಲ್ಲಿ ಕೆಲವು ವ್ಯಾಪಾರದ ದೃಷ್ಟಿಯಿಂದ ಅನುಕೂಲವಾಗದೆ ಇರಬಹುದು. ಆದರೆ ಅಂತಹ ಪ್ರತಿಯೊಂದು ಸಾಧನವೂ ಹಳ್ಳಿಯವರಿಗೆ ಉಪಯೋಗಕ್ಕೆ ಬರುವುದರಲ್ಲಿ ಸಂಶಯವಿಲ್ಲ. ಹಳ್ಳಿಯವರಿಗೆ

ತಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬೇಕೆಂಬ ಅಪೇಕ್ಷೆಕೂಡ ಇಲ್ಲದಿರುವುದು ಬಹಳ ಶೋಚನೀಯವಾಗಿದೆ.

೨. ಗ್ರಾಮದಲ್ಲಿ ವಾಸಿಸಬೇಕೆಂದಿರುವ ಕೆಲಸಗಾರನ ಮೊದಲ ಕರ್ತವ್ಯ ಆ ಹಳ್ಳಿಯ ನೈರ್ಮಲ್ಯಕ್ಕೆ ಮನಸ್ಸು 'ಕೊಡುವುದು. ಈ ಪ್ರಶ್ನೆಯು ಪೂರ್ಣವಾಗಿ ಔದಾಸೀನ್ಯಕ್ಕೆ ಒಳಗಾಗಿ ಎಲ್ಲ ಕೆಲಸಗಾರರಿಗೂ ಗಾಬರಿಯನ್ನುಂಟುಮಾಡುತ್ತದೆ. ಆರೋಗ್ಯವು ಕೆಡುವುದಕ್ಕೂ ರೋಗ ಬರುವುದಕ್ಕೂ ಈ ವಿಷಯದಲ್ಲಿ ಅಸಡ್ಡೆಯಾಗಿರುವುದೇ ಕಾರಣ. ಕೆಲಸಗಾರನು ಸ್ವಂತ ಇಚ್ಛೆಯಿಂದ ತಾನೂ ಒಬ್ಬ ಭಂಗಿ ಎಂದು ತಿಳಿದರೆ ರಾತ್ರಿಯ ಮಲಮೂತ್ರಗಳನ್ನು ಸ್ವಂತ ಇಚ್ಛೆಯಿಂದಕೂಡಿಸಿ ಅದನ್ನು ಗೊಬ್ಬರ ಮಾಡಬಹುದು. ಹಳ್ಳಿಯ ರಸ್ತೆಗಳನ್ನು ಗುಡಿಸಲು ಪ್ರಾರಂಭಿಸಬಹುದು. ಮಲಮೂತ್ರವಿಸರ್ಜನೆಗಳನ್ನು ಎಲ್ಲಿ ಹೇಗೆ ಮಾಡಬೇಕೆಂಬುದನ್ನು ಅವನು ಜನರಿಗೆ ತಿಳಿಸುತ್ತಾನೆ. ನೈರ್ಮಲ್ಯದ ಅವಶ್ಯಕತೆಯನ್ನೂ, ಅದರಲ್ಲಿ ಉದಾಸೀನರಾಗಿದ್ದರೆ ಆಗುವ ಅಪಾಯವನ್ನು ಆತನು ಹಳ್ಳಿಯವರಿಗೆ ವಿವರಿಸುತ್ತಾನೆ. ಹಳ್ಳಿಯವರು ಇವನ ಮಾತಿಗೆ ಕಿವಿಗೊಡಲಿ, ಬಿಡಲಿ ಸೇವಕನೆನಿಸಿಕೊಂಡವನು ತನ್ನ ಕೆಲಸವನ್ನು ಅಷ್ಟಕ್ಕೇ ಬಿಡದೆ ಮುಂದುವರಿಸಬೇಕು.

3. ಗ್ರಾಮ ಪ್ರದರ್ಶನಗಳಲ್ಲಿ ಚರಕಕ್ಕೆ ಮುಖ್ಯಸ್ಥಾನ ದೊರಕಬೇಕು. ಆ ಗ್ರಾಮಕ್ಕೆ ಅನುಕೂಲವಾದ ಕಸಬುಗಳು ಈ ಚರಕದ ಅಂಗಗಳಾಗಿರಬೇಕು. ಈ ರೀತಿ ಏರ್ಪಟ್ಟ ಪ್ರದರ್ಶನವು ಹಳ್ಳಿಯವರಿಗೆ ತಮ್ಮ ಕರ್ತವ್ಯ ಏನೆಂಬುದನ್ನು ತಿಳಿಸಲು ಸಹಾಯವಾಗುತ್ತದೆ. ಈ ಪ್ರದರ್ಶನಗಳಲ್ಲಿ ಭಾಷಣಗಳು, ಪ್ರಚಾರ ಕೈಪಿಡಿಗಳು ಮತ್ತು ಸಣ್ಣ ಸಣ್ಣ ಹಸ್ತಪತ್ರಿಕೆಗಳೂ ಸೇರಿದ್ದರೆ ಹಳ್ಳಿಯವರಿಗೆ ವಿದ್ಯಾರ್ಜನೆಯ ಔತಣವೂ ಸಿಕ್ಕಿದಂತಾಗುವುದು. 9-1-1937.

೧೯. ನಮ್ಮ ಹಳ್ಳಿಗಳು

ಹಳ್ಳಿಯಲ್ಲಿ ವಾಸಮಾಡಿ ತನ್ನ ಜೀವನವನ್ನು ನಡೆಸಬೇಕೆಂದು ಪ್ರಯತ್ನಿಸುತ್ತಿರುವ ಒಬ್ಬ ಯುವಕನು ನನಗೆ ಒಂದು ದುಃಖವಾದ ಕಾಗದವನ್ನು ಬರೆದಿದ್ದಾನೆ. ಅವನಿಗೆ ಹೆಚ್ಚು ಇಂಗ್ಲೀಷ್ ಭಾಷೆ ಬರುವುದಿಲ್ಲ. ಆದುದರಿಂದ ಆ ಕಾಗದದ ಸಾರಾಂಶವನ್ನು ಮಾತ್ರ ಕೆಳಗೆ ಬರೆಯುತ್ತೇನೆ.

" ಹದಿನೈದು ವರ್ಷಗಳಕಾಲ ಪಟ್ಟಣದಲ್ಲಿ ವಾಸಮಾಡಿದಮೇಲೆ ಈಗ ಮೂರು ವರುಷಗಳ ಹಿಂದೆ, ನನಗೆ 20 ವರುಷವಾಗಿದ್ದಾಗ ನಾನು ಈ ಹಳ್ಳಿಗೆ ಬಂದು ನೆಲೆಸಿದೆ. ನನ್ನ ಗೃಹಕೃತ್ಯದ ಸ್ಥಿತಿಗತಿಗಳಿಂದ ಕಾಲೇಜಿನಲ್ಲಿ ವ್ಯಾಸಂಗಮಾಡಲು ನನಗೆ ಅವಕಾಶವಾಗಲಿಲ್ಲ. ಹಳ್ಳಿಗಳ ಉದ್ಧಾರಕ್ಕಾಗಿ ನೀವು ಹೂಡಿರುವ ಕಾರ್ಯಕ್ರಮವು ನನಗೆ ಹಳ್ಳಿಯಲ್ಲಿ ವಾಸಮಾಡಬೇಕೆಂಬ ಉತ್ತೇಜನವನ್ನುಂಟುಮಾಡಿದೆ. ನನಗೆ ಸ್ವಲ್ಪ ಜಮೀನಿದೆ. ಈ ಹಳ್ಳಿಯ ಜನಸಂಖ್ಯೆ ಸುಮಾರು 2500. ಇವರ ಮಧ್ಯೆ ನಾನು ಹೆಚ್ಚು ಕಾಲ ಜೀವಿಸಿದಮೇಲೆ, ಮುಕ್ಕಾಲು ಪಾಲು ಜನರಿಗಿಂತ ಜಾಸ್ತಿಯವರಲ್ಲಿ ಈ ಕೆಳಗಿನ ದೋಷಗಳು ಕಂಡುಬರುತ್ತವೆ.

1. ಇತರ ಪಂಗಡಗಳೊಂದಿಗೆ ದ್ವೇಷಭಾವನೆ ಮತ್ತು ಜಗಳಗಳು.
2. ಅಸೂಯೆ.
3. ನಿರಕ್ಷರತೆ.
4. ಕೇಡು ಮಾಡಬೇಕೆಂಬ ಸ್ವಭಾವ.
5. ಒಗ್ಗಟ್ಟಿಲ್ಲದಿರುವುದು.
6. ಅಜಾಗರೂಕತೆ.
7. ಒಳ್ಳೆಯ ನಡತೆಗಳಿಲ್ಲದಿರುವುದು.
8. ಹಿಂದಿನ ಕಾಲದ ಅರ್ಥವಿಲ್ಲದ ಪದ್ಧತಿಗಳಿಗೆ ಗಂಟುಬಿದ್ದಿರುವುದು.
9. ಕ್ರೂರ ಸ್ವಭಾವ.

ಈ ಹಳ್ಳಿಯು ರಸ್ತೆಗೆ ದೂರವಾಗಿದೆ. ಯಾವ ಪ್ರಸಿದ್ಧ ಪುರುಷರೂ ಇಂತಹ ದೂರವಾದ ಹಳ್ಳಿಗೆ ಬಂದಿಲ್ಲ. ನಾವು ಮುಂದುವರಿಯಬೇಕಾದರೆ ಮಹಾವ್ಯಕ್ತಿಗಳ ಸಹವಾಸ ಅವಶ್ಯಕ. ಆದುದರಿಂದ ಈ ಹಳ್ಳಿಯಲ್ಲಿ ವಾಸಮಾಡಲು ನನಗೆ ಭಯವಾಗುತ್ತದೆ. ಇಲ್ಲಿ ವಾಸಮಾಡುವುದನ್ನು ಬಿಟ್ಟು ಇನ್ನೆಲ್ಲಿಗಾದರೂ ಹೋಗಲೆ? ಇಲ್ಲದಿದ್ದರೆ, ನೀವು ನನಗೆ ಸರಿಯಾದ ದಾರಿಯನ್ನು ತೋರಿಸುವಿರಾ!

ಯುವಕನು ವಿವರಿಸಿರುವ ಚಿತ್ರದಲ್ಲಿ ಅತಿಶಯೋಕ್ತಿ ಇರುವುದಾದರೂ, ಆತನ ಮಾತುಗಳನ್ನು ಸಾಧಾರಣವಾಗಿ ನಿಜವೆಂದು ನಂಬಬಹುದು. ಈ ಬಗೆಯ ದುಃಖಕರವಾದ ಸ್ಥಿತಿಗೆ ಕಾರಣವನ್ನು ತಿಳಿಯಲು ದೂರ ಹೋಗಬೇಕಾದುದಿಲ್ಲ. ವಿದ್ಯಾವಂತರು ಹಿಂದಿನಿಂದಲೂ ಹಳ್ಳಿಯೆಂದರೆ ಅಸಡ್ಡೆ ಮಾಡಿದ್ದಾರೆ. ಅವರು ಪಟ್ಟಣವಾಸವನ್ನು ಆರಿಸಿಕೊಂಡಿದ್ದಾರೆ. ಸೇವೆ ಮಾಡಬೇಕೆಂಬ ಅತ್ಯಾಸೆಯಿರುವವರು ಹಳ್ಳಿಗಳ್ಳಿಗೆ ಹೋಗಿ ಅಲ್ಲಿಯ ಜನರೊಂದಿಗೆ ಬೆರೆತು ಅವರ ಮಧ್ಯೆ ವಾಸಮಾಡುವಂತೆ ಪ್ರೇರಿಸಲು ಗ್ರಾಮೋದ್ಯೋಗ ಸಂಘವು ಪ್ರಯತ್ನಿಸುತ್ತಿದೆ. ಕಾಗದ ಬರೆದ ಯುವಕನು ತಿಳಿಸಿರುವ ದೋಷಗಳು ಹಳ್ಳಿಯ ವಾಸದೊಂದಿಗೆ ಸಹಜವಾಗಿ ಅಂಟಿಕೊಂಡಿಲ್ಲ. ಸೇವೆ ಮಾಡಬೇಕೆಂಬ ಆಸೆಯಿಂದ ಹಳ್ಳಿಗಳಿಗೆ ಹೋಗಿ ನೆಲೆಸಿರುವವರಿಗೆ ಈ ಕಷ್ಟಗಳು ನಿರಾಶೆಯನ್ನುಂಟುಮಾಡಲಾರವು. ಹಳ್ಳಿಯವರ ಜೊತೆಯಲ್ಲಿ ಎಷ್ಟೋ ಕಷ್ಟಗಳನ್ನೂ, ಅವರ ದುರ್ಗುಣವನ್ನೂ ಎದುರಿಸಬೇಕಾಗುವುದೆಂದು ಅಲ್ಲಿಗೆ ಹೋಗುವುದಕ್ಕೆ ಮುಂಚೆಯೇ ಇವರು ಊಹಿಸಿದ್ದರು. ಯಾರಿಗೆ ತಮ್ಮಲ್ಲೂ ಮತ್ತು ತಾವು ಕೈಗೊಂಡಿರುವ ಕಾರ್ಯದಲ್ಲೂ ಪೂರ್ಣನಂಬಿಕೆಯಿದೆಯೋ ಅಂತಹವರು ಮಾತ್ರ ಹಳ್ಳಿಗಳನ್ನು ಉದ್ಧಾರಮಾಡಿ ಅಲ್ಲಿಯ ಜನರ ಜೀವನವನ್ನು ಉತ್ತಮಗೊಳಿಸಲು ಸಾಧ್ಯ. ಹಳ್ಳಿಯ ಜನರ ಮಧ್ಯೆ ಋಜುವಾದ ಮತ್ತು ಸರಳವಾದ ಸತ್ಯ ಜೀವನವನ್ನು ನಡೆಸಿದರೆ, ಅದರ ಪ್ರಭಾವವು ಸುತ್ತಮುತ್ತಲಿ

ಗೆಲ್ಲ ಹರಡಿ ಒಳ್ಳೆಯ ಪರಿಣಾಮವನ್ನುಂಟುಮಾಡುವುದು. ಸೇವೆ ಮಾಡ ಬೇಕೆಂಬ ಆಸೆಯಿಲ್ಲದೆ ಜೀವನ ನಡೆಸುವುದಕ್ಕೋಸ್ಕರ ಹಳ್ಳಿ ಸೇರಿರುವುದ ರಿಂದ, ಆ ಯುವಕನಿಗೆ ಕಷ್ಟವು ತೋರಿರಬಹುದು. ಹಣ ಸಂಪಾದಿಸ ಬೇಕೆಂಬ ಇಚ್ಛೆಯಿಂದ ಹಳ್ಳಿಗಳಲ್ಲಿ ವಾಸಮಾಡತೊಡಗಿದರೆ, ಆಗ ಅಂಥವರಿಗೆ ಹಳ್ಳಿಯ ಜೀವನ ಆಕರ್ಷಣೀಯವಾಗುವುದಿಲ್ಲವೆಂದು ನಾನು ಒಪ್ಪುತ್ತೇನೆ. ಸೇವೆ ಮಾಡಬೇಕೆಂಬ ಇಷ್ಟವಿಲ್ಲದವರಿಗೆ, ಹಳ್ಳಿಯ ಜೀವನವು, ಹೊಸಬೆಡಗಿನ ಮೊದಲ ದಿನಗಳು ಕಳೆದನಂತರ ಬೇಸರಿಕೆ ಯನ್ನುಂಟುಮಾಡುತ್ತದೆ. ಗ್ರಾಮಗಳಲ್ಲಿ ಜೀವಿಸಬೇಕೆಂದು ಹೋಗುವ ಯುವಕರು ಕಷ್ಟಗಳನ್ನು ಎದುರಿಸಬೇಕಾಗಿ ಬಂದಾಗ ತಮ್ಮ ಧ್ಯೇಯ ವನ್ನು ತ್ಯಜಿಸಕೂಡದು. ದೇಶದಲ್ಲಿರುವ ಮಹಾವ್ಯಕ್ತಿಗಳ ಸಂಪರ್ಕವು ಹಳ್ಳಿಯವರಿಗೆ ಸಿಕ್ಕುವುದಿಲ್ಲ ಎನ್ನುವುದು ನಿಜವಾದ ಮಾತು. ಗ್ರಾಮ ಗಳನ್ನು ಉತ್ತಮಪಡಿಸಲು ನಮ್ಮ ಕಾರ್ಯಕ್ರಮ ಆ ಕಡೆ ಹೆಚ್ಚಿದಂತೆಲ್ಲ ಪ್ರಸಿದ್ಧಪುರುಷರೆನಿಸಿರುವವರು ಹಳ್ಳಿಗಳಲ್ಲಿ ಪ್ರವಾಸಮಾಡಿ ಅಲ್ಲಿಯ ಜನ ರೊಂದಿಗೆ ನಿಕಟಸಂಬಂಧವನ್ನು ಬೆಳೆಸಬೇಕಾಗುವುದು. ಚೈತನ್ಯ, ರಾಮ ಕೃಷ್ಣ, ತುಲಸೀದಾಸ್, ಕಬೀರ್, ನಾನಕ್, ದಾದು, ತುಕಾರಾಂ, ತಿರುವಳ್ಳುವಾರ್ ಮುಂತಾದ ಸಾಧುವರ್ಯರ ಗ್ರಂಥಗಳಿಂದ ಯಾವುದು ಒಳ್ಳೆಯದೋ ಯಾವುದು ಹಿರಿಯದೋ ಅವುಗಳ ಪರಿಚಯವು ನಮಗೆ ಉಂಟಾಗುವದು. ಇವರಷ್ಟೇ ಹೆಸರುವಾಸಿಯಾದ ಮತ್ತು ಸಾತ್ವಿಕ ಜೀವನ ನಡೆಸಿದ ಇತರ ಮಹನೀಯರು ಅನೇಕರಿದ್ದಾರೆ. ಶಾಶ್ವತವಾದ ಫಲದ ಯೋಗ್ಯತೆಯುಳ್ಳವುಗಳ ಕಡೆಯೇ ಮನಸ್ಸು ಹರಿಯುವಂತೆ ನಾವು ಪ್ರಯತ್ನಮಾಡಬೇಕು. ಇದೇನೂ ಅಷ್ಟು ಸುಲಭವಾದುದಲ್ಲ. ರಾಜಕೀಯ, ಸಾಮಾಜಿಕ, ಆರ್ಥಿಕ ಅಥವಾ ವಿಜ್ಞಾನಭಾಗದಲ್ಲಿ ನಮಗೆ ಆಸಕ್ತಿಯಿದ್ದರೆ ಅದಕ್ಕೆ ಸಂಬಂಧಪಟ್ಟ ಪುಸ್ತಕಗಳಿಂದ ತಿಳಿದುಕೊಳ್ಳ ಬಹುದು. ಮತಗ್ರಂಥಗಳು ಸಿಗುವಷ್ಟು ಸುಲಭವಾಗಿ ಮೇಲಿನ ವಿಷಯ

ಗಳ ಮೇಲೆ ಸರಳಗ್ರಂಥಗಳು ಸಿಕ್ಕುತ್ತಿಲ್ಲ ಎಂದು ನಾನು ಒಪ್ಪುತ್ತೇನೆ. ಋಷಿಗಳು ಜನಸಮುದಾಯಕ್ಕೋಸ್ಕರ ಗ್ರಂಥಗಳನ್ನು ಬರೆದರು ಮತ್ತು ಬೋಧನೆಮಾಡಿದರು. ಆಧುನಿಕಕಾಲದ ನವೀನ ವಿಷಯಗಳು ಎಲ್ಲ ಜನರಿಗೂ ತಿಳಿಯುವಂತೆ ಬರೆಯುವ ಅಭ್ಯಾಸವು ಇನ್ನೂ ನಮ್ಮಲ್ಲಿ ಬಂದಿಲ್ಲ. ದಿನಕಳೆದಂತೆ ಮುಂದೆಯಾದರೂ ಅದು ಬರಬೇಕು. ನನಗೆ ಕಾಗದ ಬರೆದಿರುವವರಿಗೂ ಅವರಂಥ ಇತರ ಯುವಕರಿಗೂ ನಾನು ಹೇಳುವ ಮಾತು ಇದು “ನೀವು ಕೈಗೊಂಡಿರುವ ಕೆಲಸವನ್ನು ತ್ಯಜಿಸದೆ ಮುಂದುವರಿಯಿರಿ. ನಿಮ್ಮ ಇರುವಿಕೆಯಿಂದ ಹಳ್ಳಿಗಳಲ್ಲಿ ಜೀವನ ಹೆಚ್ಚು ಸುಖಕರವಾಗುವಂತೆಯೂ ಇತರರು ಅವುಗಳನ್ನು ಹೆಚ್ಚಾಗಿ ಪ್ರೀತಿಸುವಂತೆಯೂ ಪ್ರಯತ್ನಪಡಿ.” ಎಂದು ಹಳ್ಳಿಯವರ ಮನಸ್ಸಿಗೆ ಒಪ್ಪುವಂತೆ ನೀವು ನಿಮ್ಮ ಕಾರ್ಯವನ್ನು ನಡೆಸಿದರೆ ಹೀಗಾಗುವುದು ಸಾಧ್ಯ. ಹಳ್ಳಿಗಳು ಶುಚಿಯಾಗಿರುವಂತೆ ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಕೆಲಸ ಮಾಡಿ, ನಿರಕ್ಷರತೆಯನ್ನು ಎಷ್ಟು ಸಾಧ್ಯವೋ ಅಷ್ಟು ಕಡಿಮೆಮಾಡಬಹುದು. ತಮ್ಮ ಜೀವನವನ್ನು ಶುಚಿಯಾಗಿ ನಡೆಸುತ್ತಾ, ಗೊತ್ತಾದ ರೀತಿಯಲ್ಲಿ ತಮ್ಮ ಕೆಲಸಗಳನ್ನು ಮಾಡುತ್ತಿದ್ದರೆ, ಹಳ್ಳಿಯವರಲ್ಲೆಲ್ಲಾ ಇವರ ಗುಣಗಳು ಹರಡುವುದರಲ್ಲಿ ಸಂಶಯವಿಲ್ಲ. 20-2-1937.

---

೨೦. ದೊಡ್ಡ ಪ್ರಯೋಗ

ಅಹಮದಾಬಾದಿನ ಕೂಲಿಗಾರ ಸಂಘದವರು ಇತ್ತೀಚೆಗೆ ಒಂದು ದೊಡ್ಡ ಪ್ರಯೋಗವನ್ನು ಪ್ರಾರಂಭಿಸಿದ್ದಾರೆ. ಎಲ್ಲ ಕೂಲಿಗಾರ ಸಂಘಗಳಿಗೂ ಈ ಪ್ರಯೋಗವು ಮುಖ್ಯವೂ ಲಾಭದಾಯಕವೂ ಆಗುವ ಸಂಭವವಿದೆ. ಆ ಸಂಘದಲ್ಲಿರುವ ಕೂಲಿಗಳಿಗೆ ಗಿರಣಿಯಲ್ಲಿ ಮಾಡುವ ಮುಖ್ಯ ಕೆಲಸದೊಂದಿಗೆ ಇನ್ನೊಂದು ಉದ್ಯೋಗವನ್ನು ಕಲಿಸಿಕೊಡುವುದು ಈ

ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಕೆಲಸಗಾರರು ಮುಷ್ಕರ ಹಿಡಿಯುವುದು, ಆದರಿಂದ ಮಿಲ್ಲಿನ ಮಾಲೀಕರು ಅವರನ್ನು ಕೆಲಸಕ್ಕೆ ಸೇರಿಸದಿರುವುದು ಅಥವಾ ಇನ್ನಾವ ಕಾರಣದಿಂದಲಾದರೂ ಅವರಿಗೆ ಕೆಲಸ ಸಿಕ್ಕದಿದ್ದ ಸಮಯಗಳಲ್ಲಿ, ಈ ಉಪಕಸಬು ಅವರಿಗೆ ಹಸಿವಿನಿಂದಿರ ಬೇಕಾದ ಸ್ಥಿತಿಯನ್ನು ತಪ್ಪಿಸಿ, ಕಷ್ಟಕಾಲದಲ್ಲಿ ನಂಬಿಕೊಳ್ಳುವಂಥ ಒತ್ತಾಸೆಯಾಗಿರುತ್ತದೆ. ಮಿಲ್ಲಿನಲ್ಲಿ ಕೆಲಸಮಾಡುವ ಕೂಲಿಯವನ ಜೀವನವು ಯಾವ ದಿನವಾದರೂ ಬದಲಾವಣೆ ಹೊಂದಬಹುದು. ಮಿತವ್ಯಯ, ಸಂಪಾದಿಸಿದ ಕೂಲಿಯಲ್ಲೇ ಸ್ವಲ್ಪ ಕೂಡಿಹಾಕುವುದು, ಇವೇ ಮುಂತಾದುವು ಸ್ವಲ್ಪಮಟ್ಟಿಗೆ ಕೂಲಿಯನ್ನು ಕಷ್ಟದಿಂದ ಪಾರುಮಾಡಬಹುದು. ಮಿತವ್ಯಯ, ಹಣ ಕೂಡಿಹಾಕುವುದು. ಈ ವಿಷಯಗಳಲ್ಲಿ ಉದಾಸೀನವಾಗಿರುವುದು ಬಹಳ ದೊಡ್ಡ ತಪ್ಪು. ನಮ್ಮ ದೇಶದ ಕೂಲಿಗಾರರು ತಮ್ಮ ಕೈ ಬಾಯಿಗಳಿಗೆ ನೇರಮಾಡಿಕೊಳ್ಳುವುದೇ ಕಷ್ಟವಾಗಿರುವಾಗ ಹೀಗೆ ಗಳಿಸಿಟ್ಟಿರುವ ಸ್ವಲ್ಪ ಹಣವು ಅವರನ್ನು ಬಹಳ ದಿನಗಳು ಕಾಪಾಡುವುದಿಲ್ಲ. ಅದೂ ಅಲ್ಲದೆ ಕೆಲಸಮಾಡುವ ಅಭ್ಯಾಸವಿರುವ ಮನುಷ್ಯನು ಮುಷ್ಕರದ ಸಮಯದಲ್ಲಿ ಅಥವಾ ನಿರುದ್ಯೋಗಿಯಾಗಿರುವ ವೇಳೆಗಳಲ್ಲಿ ಕೆಲಸಮಾಡದೆ ಮನೆಯಲ್ಲಿ ಸೋಮಾರಿಯಾಗಿ ಕುಳಿತುಕೊಳ್ಳುವುದು ಸರಿಯಲ್ಲ. ಬಲವಂತದಿಂದ ಅವನು ಸೋಮಾರಿಯಾಗಿ ಕೂತರೆ, ಅವನ ಆತ್ಮಗೌರವಕ್ಕೂ ಮತ್ತು ನೀತಿಗೂ ಬಹಳ ಅಪಾಯವಾಗುವುದು. ವಿಪತ್ಕಾಲದಲ್ಲಿ, ತಮ್ಮ ಬಿಲ್ಲಿಗೆ ಕಟ್ಟಿರುವ ಎರಡನೆಯ ದಾರದಂತೆ ತಮ್ಮ ಜೀವನವನ್ನು ನಡೆಸಿಕೊಳ್ಳಲು, ಯಾವುದಾದರೂ ಒಂದು ಉಪಯೋಗಕ್ಕೆ ಬರುವ ಕಸಬನ್ನು ಕೂಲಿಗಾರರು ಕಲಿತೇ ಇರಬೇಕು. ಇಲ್ಲದಿದ್ದರೆ ಈ ಕೂಲಿಗಾರರ ಗುಂಪಿಗೆ, ತಾವು ಕಷ್ಟದಲ್ಲಿ ಪಾರಾಗಬಹುದೆಂಬ ನಂಬಿಕೆಯೂ, ಅದಕ್ಕೆ ಬೇಕಾದ ಶಕ್ತಿ ಮತ್ತು ಆತ್ಮಾಭಿಮಾನವೂ ಇಲ್ಲದೆ ಹೋಗುವುದು.

1918 ರಲ್ಲಿ ಅಹಮದಾಬಾದಿನ ಕೂಲಿಗಾರರು 23 ದಿನಗಳ ತನಕ, ಮಿಲ್ಲಿಗೆ ಹೋಗದೆ ಮುಷ್ಕರ ಹೂಡಿದರು. ಆ ಸಂದರ್ಭದಲ್ಲಿ, ಕೂಲಿಗಾರರು ಒಂದು ಸಹಾಯಕ ಉದ್ಯೋಗವನ್ನು ಕಲಿತಿರಬೇಕೆಂದು ನನಗೆ ತೋರಿತು. ಮುಷ್ಕರವು ಜಯಪ್ರದವಾಗಿ ನಡೆಯಬೇಕಾದರೆ ಕೂಲಿಗಾರರಿಗೆ, ತಮ್ಮ ಜೀವನವನ್ನು ಪೂರ್ತಿ ಅಥವಾ ಸ್ವಲ್ಪಭಾಗವಾದರೂ ನಡೆಸತಕ್ಕ ಉಪಕಸುಬು ಒಂದು ಇರಬೇಕೆಂದು ನನಗೆ ಆಗ ತೋರಿತು. ಇತರರು ಹಂಚಿ ಕೊಡುವ ಹಣದ ಮೇಲೆ ಅವರು ಅವಲಂಬಿಸಿರಬಾರದು. ಈ ಮುಷ್ಕರಕಾಲದಲ್ಲಿ ಅನೇಕರು ಕಷ್ಟ ಮತ್ತು ಶ್ರಮಕೆಲಸಗಳನ್ನು ಸಹಿಸಿ ಒರಟುತರದ ಕೂಲಿಯನ್ನು ಮಾಡಿ ಜೀವಿಸುತ್ತಿದ್ದರು. ಕೂಲಿಗಾರರಿಗೆ ಒಂದು ಉಪಕಸುಬನ್ನು ಕಲಿಸಬೇಕೆಂಬ ವಿಷಯ ನನಗೆ ಆಗ ಹೊಳೆಯಿತು. ಇನ್ನೊಂದು ಸಲ ಹೀಗೆ ಮುಷ್ಕರ ನಡೆಯುವ ಸಂದರ್ಭ ಬರುವವರಿಗೂ ನನ್ನ ಮಾತು ಗಾಳಿಯೊಂದಿಗೆ ಮಾತಾಡಿದಂತೆಯೇ ಉಳಿಯಿತು. ಎರಡನೆಯ ಬಾರಿ ಮುಷ್ಕರ ನಡೆದಾಗ ಕೆಲವರು ಈ ಸಲಹೆಯನ್ನು ಗಮನಿಸಲು ಪ್ರಾರಂಭಿಸಿದರು. ಆಕ್ಷಣದಲ್ಲಿಯೇ ಉಪಕಸುಬುಗಳನ್ನು ಕೂಲಿಗಾರರಿಗೆ ಹೇಳಿಕೊಡಲು ಒಂದು ತರಪೇತಾದ ಸಂಸ್ಥೆಯನ್ನು ಹೊಂದಿಸುವುದು ಕಷ್ಟವಾಯಿತು. ಮುಷ್ಕರವು ಮುಗಿಯುವ ವೇಳೆಗೆ ಹೊಸ ಕಸುಬುಗಳನ್ನು ಕಂಡುಹಿಡಿದು, ಅವನ್ನು ಕೂಲಿಗಳಿಗೆ ಕಲಿಸಬೇಕೆಂಬ ಪ್ರಯತ್ನವು ತಣ್ಣಗಾಯಿತು.

ಈಗ ಕೂಲಿಗಾರರ ಸಂಘದವರು ಆ ಮಾರ್ಗದಲ್ಲಿ ಕ್ರಮಬದ್ಧವಾದ ಸುವ್ಯವಸ್ಥಿತವಾದ ಒಂದು ಯೋಜನೆಯನ್ನು ಕೈಗೊಳ್ಳುವವರಿದ್ದಾರೆ. ಗಿರಣಿಯಲ್ಲಿ ಕೂಲಿಮಾಡತಕ್ಕವರು ಯಾವದಾದರೂ ಒಂದು ಕಸುಬನ್ನುಆರಿಸಿಕೊಂಡು ವಿರಾಮಕಾಲಗಳಲ್ಲಿ ತಮ್ಮ ಮನೆಯಲ್ಲಿ ಅಭ್ಯಾಸ ಮಾಡುತ್ತಾ ನಿರುದ್ಯೋಗದ ಘಟ್ಟಬಂದಾಗ ಇದರಿಂದ ಲಾಭ ಹೊಂದುವಂತೆ ಆ ಸಂಘದವರು ಏರ್ಪಡಿಸಿದ್ದಾರೆ. ಹತ್ತಿ ಆರಿಸುವುದು ಅದರ

ಬೀಜ ಸುಲಿಯುವುದು, ಎಕ್ಕುವುದು, ನೂಲು ತೆಗೆಯುವುದು, ನೇಯುವುದು, ಬಟ್ಟೆ ಹೊಲಿಯುವುದು, ಕಾಗದ, ಸಾಬೂನುಗಳನ್ನು ಮಾಡುವುದು, ಮೊಳೆಗಳನ್ನು ಜೋಡಿಸುವುದು, ಇವು ಅಂತಹ ಕಸುಬುಗಳಲ್ಲಿ ಕೆಲವು.

ಬಂಡವಾಳಗಾರನಿಗೆ ಲೋಹವು ಎಷ್ಟು ಪ್ರಯೋಜನವೋ ಕೂಲಿಯವನು ತರತರದ ಕಸಬುಗಳನ್ನು ಕಲಿಯುವುದು ಕೂಲಿಯವನಿಗೆ ಅಷ್ಟೇ ಪ್ರಯೋಜನ. ಕೂಲಿಗೆ, ತನ್ನ ಶಕ್ತಿಯೇ ಬಂಡವಾಳ. ಬಂಡವಾಳಗಾರನು ಕೂಲಿಗಳ ಸಹಕಾರವಿಲ್ಲದೆ ತನ್ನ ಹಣದಿಂದ ಏನೂ ಪ್ರಯೋಜನವನ್ನು ಹೊಂದಲಾರನು. ಹಾಗೆಯೇ ಕೂಲಿಮಾಡುವವನು ಬಂಡವಾಳದ ಸಹಾಯವಿಲ್ಲದೆ ತನ್ನ ಕೂಲಿಯ ಪ್ರಯೋಜನವನ್ನು ಹೊಂದಲಾರನು. ಬಂಡವಾಳಗಾರರೂ ಕೂಲಿಯವರೂ ಒಬ್ಬರಿಗೊಬ್ಬರು ಸಹಕರಿಸಿಕೊಳ್ಳುವ ಬುದ್ಧಿಯುಳ್ಳವರಾಗಿ ಇಬ್ಬರೂ ನ್ಯಾಯವಾದ ಪಾಲು ತಮಗೆ ದೊರಕುವುದೆಂಬ ನಂಬಿಕೆಯುಳ್ಳವರಾದರೆ ಕೈಗೊಂಡಿರುವ ಕೆಲಸದಲ್ಲಿ ಇಬ್ಬರೂ ಸಮನಾದ ಪಾಲುದಾರರೆಂದು ಒಬ್ಬರನ್ನೊಬ್ಬರು ಗೌರವದಿಂದಲೂ ಅಭಿಮಾನದಿಂದಲೂ ಕಾಣಬೇಕೆಂಬುದನ್ನು ಅರಿಯುತ್ತಾರೆ. ತಾವಿಬ್ಬರೂ ಒಪ್ಪಂದಕ್ಕೆ ಬರಲು ಸಾಧ್ಯವೇ ಇಲ್ಲದಂತಹ ವಿರೋಧಿಗಳೆಂದು ಅವರಿಬ್ಬರೂ ನಂಬಬೇಕಾಗಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಬಂಡವಾಳಗಾರನು ತನ್ನ ಬಂಡವಾಳಕ್ಕೆ ಸರಿಯಾದ ವ್ಯವಸ್ಥಿತವಾದ ರಕ್ಷಣೆಯನ್ನು ಪಡೆದಿರುವಂತೆ ಕಾಣುತ್ತಿದೆ. ಕೂಲಿಯವನಿಗಾದರೋ ಈ ರಕ್ಷಣೆ ದೊರೆತಿಲ್ಲ. ಕೂಲಿಯವನ ಬುದ್ಧಿಯು, ನಿರ್ಜೀವವಾದ ಬೇಸರವನ್ನು ಹಟ್ಟಿಸುವ ಒಂದೇ ವಿಧವಾದ ಕೆಲಸ ಮಾಡುವುದರಿಂದ, ಸಂಕುಚಿತವಾಗಿದೆ. ಈ ಸ್ಥಿತಿಯಲ್ಲಿ ಅವನ ಬುದ್ಧಿಗೆ ಬೆಳೆವಣಿಗೆಯನ್ನು ಕೊಡುವಂತಹ ಅವಕಾಶಗಳೇ ಇಲ್ಲ. ಇಂತಹ ಸಂದರ್ಭದಲ್ಲಿ ಅವನಿಗೆ ತನ್ನಲ್ಲಿರುವ ಶಕ್ತಿ, ತನ್ನ ದುಡಿಮೆಗೆ ದೊರಕಬೇಕಾದ ಗೌರವ ಇವುಗಳ

ಅರಿವೇ ಇರುವುದಿಲ್ಲ. ತನ್ನ ಕೆಲಸಕ್ಕೆ ಯೋಗ್ಯವಾದ ಬೆಲೆಯನ್ನು ತಾನು ಕೇಳುವುದರ ಬದಲು, ಬಂಡವಾಳಗಾರನು ಕೊಟ್ಟ ಕೂಲಿಯನ್ನು ಇವನು ತೆಗೆದುಕೊಳ್ಳಬೇಕಾಗಿದೆ. ಅದೇ ನ್ಯಾಯವೆಂದು ತೋರುವಂತೆ ಕೂಲಿಯವನಿಗೆ (ನಾವು) ಬೋಧೆ ಮಾಡಿದ್ದೇವೆ. ಕೂಲಿಗಳನ್ನು ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಹೋಗಿ ಸಂಘಟನೆ ಮಾಡಿದರೆ, ಅವನ ಬುದ್ಧಿ ಚುರುಕುಗೊಳ್ಳುವಂತೆ ಬಗೆಬಗೆಯ ಕಸಬುಗಳನ್ನು ಅವನಿಗೆ ಕಲಿಸಿದರೆ, ಅವನು ತಲೆಯೆತ್ತಿ ತಿರುಗುವಂತೆ ಆಗುತ್ತದೆ. ಹಸಿವಿನ ಭಯ ಅವನಿಗೆ ಉಂಟಾಗುವುದಿಲ್ಲ.

ನೌಕರದಾರರ ಮುಂದೆ ತಾನು ನಿಸ್ಸಹಾಯಕನಾದ ಬಡಪಾಯಿಯೆಂದು ಕೆಲಸಗಾರನು ತಿಳಿಯುವುದು ತಪ್ಪಾದ ಮೂಢನಂಬಿಕೆ. ಅಹಮದಾಬಾದಿನ ಕೂಲಿಗಾರರ ಸಂಘದವರು ಈ ಮೂಢನಂಬಿಕೆಯನ್ನು ಹೋಗಲಾಡಿಸಲು ಎಲ್ಲ ವಿಧದಿಂದಲೂ ಪ್ರಯತ್ನಿಸುತ್ತಿದ್ದಾರೆ. ಆದುದರಿಂದ ಆ ಸಂಘದ ಕಾರ್ಯಪ್ರಯೋಗವನ್ನು ಪ್ರತಿಯೊಬ್ಬರೂ ಸಂತೋಷದಿಂದ ನೋಡುತ್ತಿರಬೇಕು. ಈಗ ಮೊದಲು ಮಾಡಿರುವ ಶುಭಕಾರ್ಯಕ್ರಮವನ್ನು ತಾಳ್ಮೆಯಿಂದಲೂ, ಸ್ಥಿರವಾದ ಮನೋಭಾವದಿಂದಲೂ ಮುಂದುವರಿಸಿದರೆ ಈ ಸಂಘದ ಉದ್ದೇಶವು ಜಯಪ್ರದವಾಗುವುದರಲ್ಲಿ ಸಂಶಯವಿಲ್ಲ. ಕೆಲಸಗಾರರಿಗೆ ಕಸಬುಗಳನ್ನು ಕಲಿಸಲು ಉತ್ಸಾಹಕೊಡುವ ಬುದ್ಧಿವಂತರಾದ ಸರಿಯಾದ ಯೋಗ್ಯತೆಯುಳ್ಳ ಉಪಾಧ್ಯಾಯರುಗಳು ಸಿಕ್ಕಬೇಕು. ಬರಿಯ ಯಂತ್ರದಂತೆ ಯಾವುದಾದರೊಂದು ಕಸಬನ್ನು ನಡೆಸಿದರೆ, ನಮ್ಮ ಅಂತರಾತ್ಮವನ್ನೂ ಬುದ್ಧಿಯನ್ನೂ ತುಳಿದಂತಾಗುವುದು. ಸರಿಯಾಗಿ ಬುದ್ಧಿಯನ್ನು ಉಪಯೋಗಿಸದೆ ಯಾವ ಕೆಲಸಮಾಡಿದರೂ ಹೀಗೆಯೇ. ಬುದ್ಧಿಯಿಲ್ಲದೆ ಮಾಡಿದ ಕೆಲಸವು ಜೀವದ ಹಕ್ಕಿ ಹಾರಿಹೋದ ಹೆಣದಂತೆ. 3-7-1937.

೨೧. ಹೊಸಬಗೆಯ ಪ್ರದರ್ಶನ

[ಬೊಂಬಾಯಿ ಕಾಂಗ್ರೆಸ್ಸಿನಲ್ಲಿ ಮಾಡಿದ ನಿರ್ಣಯದಂತೆ, ಲಕ್ನೋ ಕಾಂಗ್ರೆಸ್ಸಿನ ಸ್ವಾಗತ ಸಮಿತಿಯವರು ಅಖಿಲಭಾರತ ಚರಕಸಂಘದ ಕಾರ್ಯದರ್ಶಿಗಳಾದ ಶ್ರೀಯುತ ಶಂಕರಲಾಲ್ ಬ್ಯಾಂಕರರ ಮತ್ತು ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿ ಜೆ. ಸಿ. ಕುಮಾರಪ್ಪನವರ ಸಹಾಯದಿಂದ ಒಂದು ಪ್ರದರ್ಶನವನ್ನು ಏರ್ಪಡಿಸಿದರು. ಮಾರ್ಚಿ 28 ನೇ ತಾರೀಖು ಸಾಯಂಕಾಲ ಗಾಂಧಿಜಿಯವರು ಪ್ರದರ್ಶನ ವನ್ನು ತೆರೆದರು. ಹೊಸ ಮಾದರಿಯ ದೃಷ್ಟಿಯಿಂದ ಈ ಪ್ರದರ್ಶನವನ್ನು ಏರ್ಪಡಿಸಲಾಗಿದ್ದಿತು. ಕೆಳಗೆ ಕೊಟ್ಟಿರುವುದು ಗಾಂಧಿಜಿಯವರ ಭಾಷಣದ ಸಂಗ್ರಹ ಮಾತ್ರ. ಮುಂದಿನ ಸಂಚಿಕೆಯಲ್ಲಿ ಪೂರ್ಣಭಾಷಣವನ್ನು ಕೊಡಲಾಗುವುದು. ಮ. ದೇ.]

ನಾನು ಲಕ್ನೋವಿಗೆ ಬಂದು ಇಲ್ಲಿಯ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನವನ್ನು ತೆರೆಯುವುದು ನನಗೆ ಸಂತೋಷವನ್ನುಂಟುಮಾಡಿದೆ. ಈ ಅವಕಾಶ ಕೊಟ್ಟದ್ದಕ್ಕೆ ನಿಮಗೆಲ್ಲ ವಂದನೆಗಳನ್ನು ತಿಳಿಸಬಯಸುತ್ತೇನೆ. ಈ ಪ್ರದರ್ಶನವನ್ನು ತೆರೆಯಲು ನಾನೇ ಆಸೆ ಪಡುತ್ತಿದ್ದೆನು. ಶ್ರೀಯುತ ಶಂಕರಲಾಲ್ ಬ್ಯಾಂಕರ್ ಮತ್ತು ಡಾಕ್ಟರ್ ಮುರಾರಿಲಾಲ್‌ರವರು ಈ ಪ್ರದರ್ಶನವನ್ನು ನಡೆಸಲು ತಮ್ಮ ಕಾಲವನ್ನೂ ಬುದ್ಧಿಯನ್ನೂ ಪೂರ್ತಾ ವಿನಿಯೋಗಿಸಿದ್ದಾರೆ. ಈ ಪ್ರದರ್ಶನವು ಯಾವರೀತಿ ಇರಬೇಕೆಂಬುದನ್ನು ನಾನೇ ಮನಸ್ಸಿನಲ್ಲಿ ಧೃಡಮಾಡಿಕೊಂಡಿದ್ದೆನು. ಎಷ್ಟೋ ವರ್ಷಗಳಿಂದ ನಾನು ಮನಸ್ಸಿನಲ್ಲೇ ಯೋಚನೆ ಮಾಡಿಕೊಂಡಿದ್ದ ನೈಜವಾದ ಗ್ರಾಮ ಪ್ರದರ್ಶನದ ರೂಪವನ್ನು ಈ ಪ್ರದರ್ಶನವು ತೋರಿಸುತ್ತದೆ. ಕಾಂಗ್ರೆಸ್ಸಿನ ಹೊಸ ಕಾರ್ಯಕ್ರಮದ ಮೊದಲನೆಯ ವರುಷ ಅಂದರೆ 1921 ರಲ್ಲಿ ನಾವು ಅಹಮದಾಬಾದಿನಲ್ಲಿ ಸೇರಿದಾಗ ಗ್ರಾಮಗಳ ಕಡೆ ನಮ್ಮ ಗಮನವನ್ನು ತಿರುಗಿಸಲು ಬೇಕಾದ

ಮೊದಲನೆಯ ಮೆಟ್ಟಲನ್ನು ಹತ್ತಿದೆವು. ಕಾಂಗ್ರೆಸ್ಸಿನ ಆಶ್ರಯದಲ್ಲಿ ನಡೆದ ಅಲ್ಲಿಯ ಪ್ರದರ್ಶನವು ಆ ಉದ್ದೇಶದ ಮೊದಲ ಹೆಜ್ಜೆಯಾಗಿದ್ದಿತು. ಈಗ ಅಂದರೆ 15 ವರುಷಗಳು ಕಳೆದನಂತರ ಇಲ್ಲಿಯ ಪ್ರದರ್ಶನವು ಆ ಉದ್ದೇಶವನ್ನು ಪೂರ್ಣವಾಗಿ ಸಫಲಗೊಳಿಸಿದೆ. ಭಾರತ ದೇಶವನ್ನು ತಿಳಿಯ ಬೇಕಾದರೆ ಆದರಲ್ಲಿರುವ ನಾಲ್ಕಾರು ಪಟ್ಟಣಗಳಿಂದ ಅಲ್ಲ. 700,000 ಹಳ್ಳಿಗಳಿಂದ ನಮ್ಮ ಭಾರತದೇಶವು ತುಂಬಿದೆ. ಈ ದೇಶದ ನಿಜವಾದ ಸ್ಥಿತಿಯನ್ನು ನಾವು ಹಳ್ಳಿಗಳಿಂದ ತಿಳಿಯಬೇಕೆಂದು ಪದೇ ಪದೇ ಹೇಳಿದ್ದೇನೆ. ಅದೇ ನಂಬಿಕೆ ಈಗಲೂ ನನಗಿದೆ. ಆದರೆ ಇಲ್ಲಿ ನೆರೆದಿರುವ ನೀವೆಲ್ಲರೂ ಹಳ್ಳಿಯವರಾಗಿರದೆ ಪಟ್ಟಣದವರಂತೆ ಇದ್ದೀರಿ. ಪಟ್ಟಣ ವಾಸಿಗಳಾದ ನಾವು ಭಾರತವು ಪಟ್ಟಣಗಳ ಸಮೂಹವೆಂದೂ ಹಳ್ಳಿಗಳು ನಮ್ಮ ಅವಶ್ಯಕತೆಗಳನ್ನು ದೊರಕಿಸಿಕೊಡುವ ಸಾಧನಗಳೆಂದೂ, ನಂಬಿದ್ದೇವೆ. ಹಳ್ಳಿಗಳ ಬಡ ಜನರಿಗೆ ಸಾಕಾದಷ್ಟು ಅನ್ನ ಬಟ್ಟೆಗಳು ಸಿಕ್ಕುತ್ತಿವೆಯೆ, ಮಳೆ ಬಿಸಿಲುಗಳಿಂದ ಮರೆಯಾಗಿರಲು ಅವರಿಗೊಂದು ಗುಡಿಸಲಿದೆಯೆ, ಏಂದು ನಾವು ಯೋಚನೆ ಕೂಡ ಮಾಡಿರುವುದಿಲ್ಲ. ಈ ಇಪ್ಪತ್ತು ವರ್ಷಗಳಲ್ಲಿ ಇಂಡಿಯದ ಮೇಲೆ ಮೂಲೆ ಮೂಲೆಗಳಲ್ಲಿಯೂ ನಾನು ತಿರುಗಿರುವಷ್ಟು ಯಾವ ಕಾಂಗ್ರೆಸ್ ಕೆಲಸಗಾರನೂ ತಿರುಗಿಲ್ಲ. ಆದಷ್ಟರಿಂದಲೇ ನಾನು ಹೆಮ್ಮೆಪಟ್ಟುಕೊಳ್ಳುವುದಿಲ್ಲ. ಈ ಪ್ರವಾಸಗಳಿಂದ ಭಾರತದ ಹಳ್ಳಿಗಳ ಸ್ಥಿತಿಯನ್ನು ನಾನು ತಿಳಿದಿರುವಷ್ಟು ಚೆನ್ನಾಗಿ ಯಾವ ಕಾಂಗ್ರೆಸ್ ಮುಖಂಡರಾಗಲೀ ಅಥವಾ ಕೆಲಸಗಾರರಾಗಲಿ ತಿಳಿದಿಲ್ಲ ಎಂದು ನಮ್ರತೆಯಿಂದ ಹೇಳುತ್ತೇನೆ. ಸಾಧಾರಣವಾಗಿ ಪಟ್ಟಣದಲ್ಲಿ ವಾಸಮಾಡುವವನು ಹಳ್ಳಿಯವನನ್ನು ಬಡವನನ್ನಾಗಿ ಮಾಡುತ್ತಾನೆ. ಆ ಬಡವನ ಹತ್ತಿರ ಇರುವುದನ್ನು ಇವನು ಕಸಿದುಕೊಳ್ಳುತ್ತಾನೆ. ಭಾರತದ ಜನರ ಸ್ಥಿತಿಯನ್ನು ಎಷ್ಟೋ ಜನ ಬ್ರಿಟಿಷರು ವರ್ಣಿಸಿದ್ದಾರೆ. ಪ್ರಾಣಹೋಗದಂತೆ ಕಾಪಾಡಿಕೊಳ್ಳಲು ಬೇಕಾದಷ್ಟು ಅನ್ನ ಇವರಿಗಿದೆ ಎಂದು ಅವರಲ್ಲಿ

ಯಾರೂ ನನಗೆ ತಿಳಿದ ಹಾಗೆ ಹೇಳಿದ್ದನ್ನು ಕಾಣೆ. ಅಷ್ಟೇ ಅಲ್ಲ. ಅವರೆಲ್ಲ ಭಾರತದ ಹೆಚ್ಚು ಜನ ಹಸಿವಿನಿಂದ ಇರುವರೆಂದೂ, ನೂರಕ್ಕೆ ಹತ್ತರಂತೆ ಅರ್ಧ ಹೊಟ್ಟೆಗೆ ಊಟಮಾಡುವರೆಂದೂ, ಉಳಿದವರು ಒಂದಿಷ್ಟು ಉಪ್ಪು ಖಾರದಿಂದ ಕೂಡಿದ ಗಿರಣಿಯ ಅಕ್ಕಿಯನ್ನೋ ಅಥವಾ ಹುರಿದ ಕಾಳನ್ನೋ ತಿಂದು ಜೀವಿಸುವರೆಂದೂ ಹೇಳಿದ್ದಾರೆ. ಅಂತಹ ಆಹಾರವನ್ನು ನಾವು ತಿಂದರೆ ಪ್ರಾಯಶಃ ಒಂದು ತಿಂಗಳಿಗಿಂತ ಹೆಚ್ಚಾಗಿ ಬದುಕಲಾರೆವು. ಅಥವಾ ನಮ್ಮ ಬುದ್ಧಿಯು ಕೆಟ್ಟು ಹುಚ್ಚರಾಗಬಹುದು. ಇಷ್ಟಾದರೂ ನಮ್ಮ ಹಳ್ಳಿಗಳ ಜನರಿಗೆ ಇದು ನಿತ್ಯದ ಪಾಡಾಗಿದೆ. ಗ್ರಾಮೋದ್ಯೋಗ ಸಂಘವು ಹೋದ ವರುಷ ಪ್ರಾರಂಭವಾಯಿತು. ಹಳ್ಳಿಯವರು ವಾಸಿಸುವ ಸ್ಥಿತಿ ಏನೆಂಬುದನ್ನು ತಿಳಿದು, ಅಲ್ಲಿನ ಕ್ಷೀಣವಾಗುತ್ತಿರುವ ಕೈಗಾರಿಕೆಗಳ ಸ್ಥಿತಿಯನ್ನು ತಿಳಿದು ಅವುಗಳಲ್ಲಿ ಯಾವುವು ಸಾಧ್ಯವೋ ಅವನ್ನು ಪುನಃ ಆಚರಣೆಗೆ ತರಬೇಕೆಂದು ಆ ಸಂಘವು ಕೆಲಸಮಾಡುತ್ತಿದೆ. ಈ ಗ್ರಾಮೋದ್ಯೋಗ ಸಂಘವು ಸ್ಥಾಪನೆಯಾದ ಕೂಡಲೇ ಮುಂದೆ ನಡೆಯುವ ಪ್ರದರ್ಶನಗಳೆಲ್ಲ ಈ ಸಂಘದ ಮತ್ತು ಅಖಿಲಭಾರತ ಚರಕ ಸಂಘದ ಆಡಳಿತದಲ್ಲಿ ನಡೆಯಬೇಕೆಂಬ ನಿರ್ಣಯವನ್ನು ಮಾಡಲಾಯಿತು. ಅಂಥ ಪ್ರದರ್ಶನಗಳಲ್ಲಿ ಈಗ ನಾನು ಪ್ರಾರಂಭಮಾಡುತ್ತಿರುವುದು ಮೊದಲನೆಯದು.

ಹಿಂದೆ ಹೇಳಿದಂತೆ, ಈ ಪ್ರದರ್ಶನದ ಮುಖ್ಯ ಉದ್ದೇಶವು ಏನಾಗಿರಬೇಕೆಂಬುದನ್ನು ನಾನೇ ತಿಳಿಸಿದೆ. ಈ ಪ್ರದರ್ಶನವು ಪೂರ್ಣವಾಗಿಲ್ಲವೆಂದೂ ಆ ಉದ್ದೇಶವನ್ನು ಸಾಧಿಸಲು ನಾವು ಇನ್ನೂ ದೂರದಲ್ಲಿದ್ದೇವೆಂದೂ ನಾನು ಒಪ್ಪಿಕೊಳ್ಳುತ್ತೇನೆ. ಪ್ರದರ್ಶನದ ಮೇಲ್ವಿಚಾರಣೆ ನೋಡುತ್ತಿದ್ದವರ ಕಾರ್ಯದಕ್ಷತೆಯನ್ನು ಇಲ್ಲಿ ಕಾಣಬಹುದು. ಆದರೆ ಈ ಜಾತಿಯ ಪ್ರದರ್ಶನಗಳಲ್ಲಿ ಇದು ಅತ್ಯುತ್ತಮವೆಂದು ಹೇಳಲಾಗುವುದಿಲ್ಲ. ಅವರ ಅವಕಾಶದಲ್ಲಿದ್ದ ಅಲ್ಪಕಾಲದಲ್ಲಿ ಆರೀತಿ ಸಾಧಿಸಲು ಅವರಿಗೆ ಖಂಡಿತ

ಸಾಧ್ಯವೇ ಇರಲಿಲ್ಲ. ಹಳ್ಳಿಗಳಿಂದ ಆಯಾಯ ಉದ್ಯೋಗಕ್ಕೆ ಸಂಬಂಧ ಪಟ್ಟ ಕಸಬುದಾರರನ್ನು ಕರೆದುಕೊಂಡು ಬರುವುದು ಸುಲಭದ ಕೆಲಸವಲ್ಲ. ದಕ್ಷಿಣ ಇಂಡಿಯಾದ ಹಳ್ಳಿಗಳಿಂದ ಜನರು ಬಂದಿರುವುದನ್ನು ನೀವು ನೋಡಬಹುದು. ಬಹುಶಃ ತಾವು ಎಲ್ಲಿಗೆ ಬಂದಿರುವೆವೆಂಬುದು ಅವರಿಗೆ ಗೊತ್ತಿಲ್ಲದಿರಬಹುದು. ಭಾರತದ ಹಸಿವಿನಿಂದ ತುಂಬಿರುವ ಹಳ್ಳಿಗಳಲ್ಲೂ ಉತ್ತಮ ಪದಾರ್ಥಗಳು ತಯಾರಾಗುವುವೆಂದೂ, ಅವನ್ನು ಪಟ್ಟಣದಲ್ಲಿರುವ ನಾವು ಕೊಂಡು, ಹಳ್ಳಿಯವರೂ ನಾವೂ ಪ್ರಯೋಜನವನ್ನು ಹೊಂದಬಹುದೆಂದೂ ತಿಳಿಸುವುದು ಈ ಪ್ರದರ್ಶನದ ಉದ್ದೇಶ.

ಹಿಂದಿನ ಪ್ರದರ್ಶನಗಳಂತೆ ಈ ಪ್ರದರ್ಶನವು ಕಣ್ಣಿಗೆ ಆನಂದವನ್ನುಂಟುಮಾಡುವ ನೋಟವಾಗಿಲ್ಲ. ಹಿಂದಿನ ಪ್ರದರ್ಶನಗಳು ಬಹಳ ದೊಡ್ಡವಾಗಿ ಇರಲೇಬೇಕಾಗಿದ್ದಿತು. ಅವುಗಳ ಉದ್ದೇಶಗಳೇ ಬೇರೆಯಾಗಿರುತ್ತಿದ್ದುವು. ಪ್ರದರ್ಶನದಲ್ಲಿ ಬಂದ ಹುಟ್ಟುವಳಿಯಿಂದ ಸಾಮಾನ್ಯವಾಗಿ ಕಾಂಗ್ರೆಸ್ಸಿನ ಖರ್ಚು ಕಳೆದುಹೋಗುತ್ತಿತ್ತು. ಹೋದ ವರುಷ ಪ್ರದರ್ಶನದ ಉದ್ದೇಶವೇ ಬೇರೆಯಾಯಿತು. ಕಣ್ಣಿಗೆ ಸುಖವನ್ನು ಕೊಡುತ್ತಿದ್ದ ಮಾತ್ರಕ್ಕೆ ಎಲ್ಲ ಸಾಮಾನುಗಳನ್ನು ಇರಿಸಕೂಡದೆಂದು ತೀರ್ಮಾನ ಮಾಡಿದೆವು. ಹಳ್ಳಿಯವರ ಸ್ಥಿತಿ ಮತ್ತು ಅಲ್ಲಿರುವ ಕೈಗಾರಿಕೆ ಕಸಬುಗಳು ಇವುಗಳ ತಿಳಿವಳಿಕೆಯನ್ನು ಪ್ರದರ್ಶನ ನೋಡುವವರಿಗೆ ಕೊಡಬೇಕೆಂಬುದು ನಮ್ಮ ಉದ್ದೇಶವಾಯಿತು. ಆದುದರಿಂದ ಈ ಪ್ರದರ್ಶನವು ವಿದ್ಯಾಪ್ರಚಾರಕ್ಕೆ ಸಂಬಂಧಪಟ್ಟ ಒಂದು ದೊಡ್ಡ ಯೋಜನೆಯಾಗಿದೆ. ಅಂದರೆ ಈ ಬಾರಿ ಪ್ರದರ್ಶನದಿಂದ ನಾವು ಹಣಸಂಪಾದಿಸುವುದಿಲ್ಲ ಎಂದು ತಿಳಿಯಬೇಡಿ. ಆದರೆ ಆ ಹಣವು ಸ್ವಾತಂತ್ರ್ಯವನ್ನು ಗಳಿಸಬೇಕೆಂದಿರುವವರಿಂದಲೂ ಮತ್ತು ಹಳ್ಳಿಗಳನ್ನು ಸಣ್ಣ ಸಣ್ಣ ಉದ್ಯೋಗದ ಕೇಂದ್ರಗಳನ್ನಾಗಿ ಮಾಡಬೇಕೆಂದಿರುವವರಿಂದಲೂ ಮಾತ್ರ ಬರಬೇಕಾಗಿದೆ. ಹಳ್ಳಿಗಳಿಗೂ ಪಟ್ಟಣಗಳಿಗೂ ನಡುವೆ ಸಂಬಂಧವನ್ನು ಬೆಳಸಬೇಕೆಂದಿದ್ದರೆ, ಅವರು

ಪ್ರದರ್ಶನವನ್ನು ನೋಡಲು ಗುಂಪುಗುಂಪಿನಲ್ಲಿ ಬರುತ್ತಾರೆ. ಪ್ರದರ್ಶನ ದಲ್ಲಿ ತೋರಿಸುತ್ತಿರುವ ವಿಧವಿಧವಾದ ಕಸಬುಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ನೋಡುವ ಉದ್ದೇಶದಿಂದ ನೀವೆಲ್ಲ ಅಲ್ಲಿಗೆ ಹೋಗಿ.

ಒಂದು ಬಾರಿ ಮಾತ್ರ ಪ್ರದರ್ಶನವನ್ನು ನೋಡುವುದರಿಂದ, ಪೂರ್ಣ ಪ್ರಯೋಜನ ಪಡೆಯಲು ಸಾಧ್ಯವಿಲ್ಲ. ಪ್ರತಿದಿನವೂ ನೀವು ಇಲ್ಲಿಗೆ ಬಂದು ಒಂದೊಂದು ಭಾಗವನ್ನು ಚೆನ್ನಾಗಿ ನೋಡಿ ಅವುಗಳಲ್ಲಿಯ ಗುಟ್ಟನ್ನು ಮುಂದಟ್ಟುಮಾಡಿಕೊಳ್ಳಬೇಕು. ಹೀಗೆ ಮಾಡಿದರೆ ಈ ಪ್ರದರ್ಶನವನ್ನು ನಡೆಸುವುದಕ್ಕೆ ವಿನಿಯೋಗಿಸಿರುವ ಶ್ರದ್ಧೆ ಕಾರ್ಯೋತ್ಸಾಹಗಳು ನಿಮಗೆ ಆಶ್ಚರ್ಯವನ್ನುಂಟುಮಾಡುವುವು. ಸೇವೆಮಾಡಬೇಕೆಂಬ ಮನಸ್ಸಿನಿಂದ ನೀವು ಪ್ರದರ್ಶನವನ್ನು ನೋಡಿದರೆ, ಅಭಿಮಾನ ಪಡುವ ಎಷ್ಟೋ ವಿಷಯುಗಳು ನಿಮ್ಮ ಕಣ್ಣಿಗೆ ಕಾಣುವುವು. ಕಾಶ್ಮೀರ್, ದಕ್ಷಿಣಇಂಡಿಯ, ಅಸ್ಸಾಮ್, ಸಿಂಧ್ ಮುಂತಾದ ಕಡೆಗಳಿಂದ ಕಸಬುದಾರರಾದ ಹೆಂಗಸರು ಮತ್ತು ಗಂಡಸರು ಇಲ್ಲಿಗೆ ಬಂದಿರುವರು. ಅವರು ತಮ್ಮ ಬಡತನದ ಜೀವನವನ್ನು ಹೇಗೆ ಸಾಗಿಸುವರೆಂಬುದನ್ನು ಇಲ್ಲಿ ನೀವು ನೋಡುವಿರಿ. ಅವರು ತಮ್ಮ ಜೀವನವನ್ನು ನಡೆಸಲು ಬೇಕಾದ ಅಲ್ಪ ಕೂಲಿಯನ್ನು ನೀವು ಇಲ್ಲಿ ಕಾಣುವ ಸಾಮಾನುಗಳಿಗೆ ಕೊಟ್ಟಲ್ಲಿ ಆ ಬಡವರಿಗೆ ಸ್ವಲ್ಪ ಉತ್ಪತ್ತಿಯನ್ನು ಹೆಚ್ಚಿಸಿ ಅವರಿಗೆ ಬೇಕಾದ ಅನ್ನವನ್ನು ದೊರಕಿಸಿಕೊಟ್ಟಂತಾಗುವುದು.

ಪ್ರದರ್ಶನವನ್ನೆಲ್ಲ ಅಥವಾ ಅದರಲ್ಲಿರುವ ಯಾವ ಒಂದು ಭಾಗದ ವಿಷಯವನ್ನಾಗಲೀ ನಾನು ವರ್ಣಿಸುವೆನೆಂದು ನೀವು ಊಹಿಸಿಲ್ಲವೆಂದು ನಂಬುತ್ತೇನೆ. ಹಾಗೆ ವರ್ಣಿಸುವುದು ನನಗೆ ಸಾಧ್ಯವಿಲ್ಲ. ನೀವು ಕುಳಿತಿರುವ ಈ ಜಾಗದಿಂದಲೇ ಒಳಗೆ ಏನೇನಿರಬಹುದೆಂದು ನೀವು ಊಹಿಸಬಹುದು. ನಿಮ್ಮ ಮುಂದೆ ಅದ್ಭುತವಾಗಿ, ಥಳಥಳಿಸುವ ಕಮಾನುಗಳು ಯಾವುವೂ ಇಲ್ಲ. ಶಾಂತಿನಿಕೇತನದ ಚಿತ್ರಕಾರ

ರಾದ ನಂದಾಲಾಲ್‌ಬೋಸರಿಂದ ಸರಳವಾಗಿ ಸುಂದರವಾಗಿ ಅಲಂಕೃತ ವಾದ ಗೋಡೆಗಳನ್ನು ಕಾಣಬಹುದು. ಅವರೂ ಮತ್ತು ಅವರ ಶಿಷ್ಯರೂ ಸಣ್ಣ ಸಣ್ಣ ಚಿತ್ರಗಳ ಸಹಾಯದಿಂದ ಹಳ್ಳಿಗಳ ಎಲ್ಲ ಉದ್ಯೋಗಗಳನ್ನು ಚಿತ್ರಗಳಲ್ಲಿ ತೋರಿಸಿದ್ದಾರೆ. ಅನಂತರ ನೀವು ಒಳಹೊಕ್ಕರೆ, ನಂದಬಾಬು ಗಳು ಅನೇಕ ವಾರಗಳವರೆಗೆ ಕಷ್ಟಪಟ್ಟು ಚಿತ್ರಿಸಿರುವ ಸುಂದರವಾದ ಕಲಾಶಾಲೆಯನ್ನು ನೋಡುವಿರಿ. ನನಗೆ ಎನಿಸಿದಂತೆ ನಿಮಗೂ, ಅಲ್ಲಿ ಅನೇಕ ಗಂಟೆಗಳವರೆಗೆ ಇರಬೇಕೆನಿಸುವುದು. ಪ್ರದರ್ಶನದ ಇತರ ಭಾಗಗಳೂ ನಿಮ್ಮ ಮನಸ್ಸನ್ನು ಸೆಳೆಯುವುವು. ಸಿನಿಮಾ ಮತ್ತು ಸಂಗೀತ ಗಳಂತೆ ನಿಮಗೆ ವಿನೋದವನ್ನುಂಟುಮಾಡುವ ಯಾವ ಕಾರ್ಯಭಾಗವೂ ಇಲ್ಲಿ ಇಲ್ಲದಿರಬಹುದು. ಆದರೆ ಕಲಿಯಬೇಕಾದ ವಿಷಯಗಳು ಇಲ್ಲಿ ಬೇಕಾದಷ್ಟಿವೆಯೆಂದು ನಾನು ಧೃಡವಾಗಿ ಹೇಳುತ್ತೇನೆ.

ಕೊನೆಯಲ್ಲಿ ನಾನು ಹೇಳುವ ಮಾತು ಇದು. ಹೆಚ್ಚು ಹೆಚ್ಚು ಜನ ಇಲ್ಲಿಗೆ ಬಂದು ಪ್ರದರ್ಶನವನ್ನು ನೋಡಬೇಕಾದರೆ, ನೀವೆಲ್ಲ ನಿಮ್ಮ ಸ್ವಂತ ಪ್ರೇರಣೆಯಿಂದ ಇತರರಿಗೆ ಪ್ರದರ್ಶನವನ್ನು ನೋಡುವಂತೆ ಪ್ರಚಾರಮಾಡಬೇಕೆಂದು ನನ್ನ ಇಷ್ಟ, ಹಳ್ಳಿಯವರಿಗೋಸ್ಕರ ಈ ಪ್ರದರ್ಶನವು ಏರ್ಪಟ್ಟಿಲ್ಲ. ಹಳ್ಳಿಯವರು ಜೀವನಮಾಡುವುದು ಹೇಗೆ, ಅವರ ಶಕ್ತಿಯೇನು ಎಂಬುದು ಪಟ್ಟಣದಲ್ಲಿ ವಾಸಿಸುವವರಿಗೆ ತಿಳಿಯ ಬೇಕೆಂಬ ಉದ್ದೇಶದಿಂದ ಈ ಪ್ರದರ್ಶನವನ್ನು ತೆರೆದಿದೆ. ಪ್ರದರ್ಶನವನ್ನು ಈ ಸ್ಥಿತಿಗೆ ತರಲು ಸ್ವಾಗತ ಸಮಿತಿಯವರು 35000 ರೂಪಾಯಿ ವೆಚ್ಚ ಮಾಡಿದ್ದಾರೆ. ಈ ವೆಚ್ಚವಾದರೂ ಪ್ರದರ್ಶನದಿಂದ ಹುಟ್ಟುವಂತೆ ಮಾಡುವುದು ನಿಮ್ಮ ಕರ್ತವ್ಯ. ಸ್ವಾಗತ ಸಮಿತಿಯವರಿಗಾಗಿ, ನೀವು ಪ್ರಚಾರಮಾಡಿದರೆ ನಿಮ್ಮಿಂದ ಈ ಕೆಲಸ ಸಾಧ್ಯವಾಗುವುದು. ಈ ಕೆಲಸಕ್ಕೆ ನಾನು ನಿಮಗೆ ದಳ್ಳಾಳಿ ಕೊಡಲಾರೆ. ಆದರೆ ಇಷ್ಟು ಹೇಳಬಲ್ಲೆ. ನೀವು ನಿಮ್ಮ ಕರ್ತವ್ಯವನ್ನು ಸರಿಯಾಗಿ ನಡೆಸಿದರೆ ಮುಂದೆ

ನೀವು ದೇವರ ಮುಂದೆ (Great white Throne) ನಿಂತಾಗ ನಿಮಗೆ ಸರಿಯಾದ ಬಹುಮಾನ ದೊರಕುವುದು. ನಾನು ಇನ್ನೂ ಕೆಲವು ದಿನ ಇಲ್ಲಿದ್ದು ಆದಷ್ಟು ಹೆಚ್ಚು ಬಾರಿ ಪ್ರದರ್ಶನವನ್ನು ನೋಡಬೇಕೆಂ ದಿದ್ದೇನೆ. ಆದುದರಿಂದ ನಿಮ್ಮ ಕರ್ತವ್ಯವನ್ನು ಹೇಗೆ ಪಾಲಿಸಿರುವಿ ರೆಂಬುದು ನನಗೆ ಗೊತ್ತಾಗುವುದು.

ಪ್ರದರ್ಶನದ ವೆಚ್ಚವೆಲ್ಲ ನಮ್ಮ ಕೈಸೇರಿದ ಮೇಲೆ ಹಳ್ಳಿಗಳ ಜನರಿಗೆ, ಪ್ರವೇಶಧನವಿಲ್ಲದೆ, ಪ್ರದರ್ಶನವನ್ನು ನೋಡಲು ಅವಕಾಶ ಕೊಡಬೇಕೆಂದು ನಮ್ಮ ಆಸೆ.

ಪ್ರದರ್ಶನದಲ್ಲಿ ಬೇಕಾದಷ್ಟು ಕುಂದುಕೊರತೆಗಳು ನಿಮ್ಮ ಕಣ್ಣಿಗೆ ಬೀಳಬಹುದು. ಅದಕ್ಕೆ ಕಾರಣ ನಾನು ನೀವೇ ಹೊರತು ಹಳ್ಳಿಯವರಲ್ಲ. ಪ್ರದರ್ಶನವು ಕುಂದುಗಳಿಲ್ಲದೆ ಸರಿಯಾಗಿರಬೇಕಾಗಿದ್ದರೆ ಕೆಲವು ತಿಂಗಳು ಗಳಾದರೂ ಅದಕ್ಕಾಗಿ ಕೆಲಸಮಾಡಬೇಕಾಗಿತ್ತು. ಇಂಥ ದೊಡ್ಡ ಕಾರ್ಯ ವನ್ನು ಪ್ರದರ್ಶನ ಏರ್ಪಡಿಸಿರುವವರು ಕೆಲವು ವಾರಗಳಲ್ಲಿಯೇ ಸಾಧಿಸಿ ದ್ದಾರೆ, ಆದ್ದರಿಂದ ನೀವು ನಮ್ಮಗಳೊಂದಿಗೆ ಸಹಕರಿಸಿ ಕಾಣಬಹುದಾದ ದೋಷಗಳನ್ನು ಕ್ಷಮಿಸುವಿರೆಂದು ನಂಬಿದ್ದೇನೆ. 4-4-1936

---

೨೨. ನಿಜವಾದ ದೇಶಪ್ರೇಮ

[1936 ನೇ ಇಸ್ವಿ ಏಪ್ರಿಲ್ ಹನ್ನೆರಡನೇ ತಾರೀಖಿನ ದಿನ ಬೆಳಿಗ್ಗೆ ಗಾಂಧಿಜಿಯವರು ಲಕ್ನೋ ಪ್ರದರ್ಶನದಲ್ಲಿ ಭಾಷಣ ಮಾಡಿದರು. ಭಾಷ ಣಕ್ಕೆ ಅರ್ಧ ಗಂಟೆ ಮುಂಚೆ ಅವರಿಗೆ ತಾವು ಮಾತಾಡುವುದು ಗೊತ್ತಿರಲಿಲ್ಲ. ಆ ಭಾಷಣವು ನಮ್ಮ ಯಂತ್ರಾನುಯಾಯಿಗಳ (Peter bells)

ಕಣ್ಣನ್ನು ತೆರೆಯುವುದಾಗಿದ್ದಿತು. ಒಂದು ಬಾರಿಯಲ್ಲ, ನಾಲ್ಕು ಬಾರಿ ಪ್ರದರ್ಶನವನ್ನು ನೋಡಬೇಕೆಂದು ಗಾಂಧಿಜಿಯವರು ಹೇಳಿದರು. ಕಣ್ಣು ಕಿವಿಗಳನ್ನು ತೆರೆದುಕೊಂಡು ಸಾಧ್ಯವಾದರೆ ಆತ್ಮಗಳನ್ನು ತೆರೆದುಕೊಂಡು ಪ್ರದರ್ಶನವನ್ನು ನೋಡಿದರೆ, ಆಗ ಅಲ್ಲಿ ಎಷ್ಟೋ ಅದ್ಭುತವಾದ ವಿಷಯ ಗಳು ತಿಳಿಯುವುವೆಂದು ಗಾಂಧಿಜಿಯವರು ಹೇಳಿದರು.]

ಆ ದಿನ, ಪ್ರದರ್ಶನವು ಸಿನಿಮಾ ಚಿತ್ರವಲ್ಲ ಎಂದು ನಾನು ಹೇಳಿದಾಗ, ನಾನು ಆಡಿದ ಮಾತಿನಲ್ಲಿ ತೋರಿದುದಕ್ಕಿಂತ ಹೆಚ್ಚು ಅರ್ಥವನ್ನು ಇಟ್ಟಿದ್ದೆ. ನೀವು ಒಂದು ಸಿನಿಮಾ ಚಿತ್ರವನ್ನು ನೋಡಲು ಹೋದರೆ ನಿಮ್ಮ ಕಣ್ಣು ಕಿವಿಗಳಿಗೆ ಮೋಹಕವಾಗಿ ಅಲ್ಲಿ ಮನಸ್ಸನ್ನು ಸೆಳೆಯುವಂತಹ ಎಷ್ಟೋ ಪದಾರ್ಥಗಳನ್ನು ನೋಡುವಿರಿ. ನಿಮ್ಮ ಬುದ್ಧಿಗೆ ಹೆಚ್ಚು ತಿಳಿವಳಿಕೆಯನ್ನು ಕೊಡದ ಯಾವ ವಸ್ತುವೂ ಈ ಪ್ರದರ್ಶನದಲ್ಲಿಲ್ಲ ಎಂದು ನಾನು ನಿಮಗೆ ಹೇಳಬಹುದು. ಈ ಪ್ರದರ್ಶನವನ್ನು ಒಂದು ಪವಿತ್ರವಾದ ಸ್ಥಳವಾಗಿ ಮಾಡಲು ನಾವು ಪ್ರಯತ್ನಿಸಿದ್ದೇವೆ. ನಿಮ್ಮ ಕಣ್ಣು ಕಿವಿಗಳಿಗೆ ಇದೊಂದು ಹಬ್ಬ. ಇಂದ್ರಿಯಗಳನ್ನು ಶುದ್ಧಿಮಾಡಿ ಆತ್ಮಕ್ಕೆ ನೆಮ್ಮದಿಯನ್ನು ಕೊಡುವ ಶಕ್ತಿ ಈ ಪ್ರದರ್ಶನದಲ್ಲಿದೆ. ಅದು ಹೇಗೆಂಬುದನ್ನು ನಿಮಗೆ ಹೇಳುತ್ತೇನೆ. ಒರಿಸ್ಸಾ ಮತ್ತು ಅದರ ಬಡತನ ನಿಮಗೆ ಗೊತ್ತೆ ? ಹಸಿವಿನ ಬಾಧೆ ಮತ್ತು ಬಡತನದಿಂದ ನರಳುತ್ತಿರುವ ಆ ದೇಶದಿಂದ ಮೂಳೆಗಳು, ಕೊಂಬು ಮತ್ತು ಬೆಳ್ಳಿಗಳಿಂದ ಅದ್ಭುತಗಳನ್ನು ತಯಾರುಮಾಡಿಕೊಂಡು ಅನೇಕರು ಇಲ್ಲಿಗೆ ಬಂದಿದ್ದಾರೆ. ಆ ಪದಾರ್ಥಗಳನ್ನೂ ಅವು ತಯಾರಾಗುವ ಬಗೆಯನ್ನೂ ನೀವು ಪ್ರದರ್ಶನದಲ್ಲಿ ನೋಡಿ ಅದರಿಂದ ಮನುಷ್ಯನ ಆತ್ಮವು ಎಷ್ಟೇ ಬಡದೇಹದಲ್ಲಿ ಅಡಕವಾಗಿದ್ದರೂ ನಿರ್ಜೀವವಾದ ಕೊಂಬು ಮತ್ತು ಲೋಹಗಳಿಗೆ ಆ ಆತ್ಮವು ಜೀವಕೊಡಬಲ್ಲದೆಂಬುದನ್ನು ಅರಿಯುವಿರಿ. ಒಬ್ಬ ಕುಂಬಾರನು ಮಣ್ಣಿನಿಂದ ಅದ್ಭುತವಾದ ಕೆಲಸಗಳನ್ನು ಮಾಡಿರುವನು.

ಎಷ್ಟೋ ಆಣೆಗಳ ಬೆಲೆಯಿರಬೇಕೆಂದು ನಾನು ತಿಳಿದ ಪದಾರ್ಥಗಳಿಗೆ ಕಾಲಾಣೆ ಅರ್ಧಾಣೆಗಳ ಬೆಲೆ ಇದೆ. ಆದಾಗ್ಯೂ ಇವೆಲ್ಲ ಸುಂದರವಾದ ಸಣ್ಣ ಸಣ್ಣ ಕಲಾಕೃತಿಗಳು. ಹಿಂದಿನ ದಿನ ಒಬ್ಬಳು ಸಹೋದರಿಯು ದಂತದಿಂದ ಮಾಡಿದ ಒಂದು ಸಣ್ಣ ಕೃಷ್ಣನನ್ನು ಕೊಂಡಳು. ಕೃಷ್ಣದೇವರನ್ನು ಅವಳು ಅಲ್ಲಿಯ ವರೆಗೆ ಪೂಜಿಸುತ್ತಿರಲಿಲ್ಲ. ಈಗ ಆ ಸುಂದರ ಮೂರ್ತಿಯನ್ನು ಪೂಜಿಸಲು ಮೊದಲು ಮಾಡಿರುವೆನೆಂದು ಆಕೆಯು ನನಗೆ ಹೇಳಿದ್ದಾಳೆ.

ಆದುದರಿಂದ ಈ ಪ್ರದರ್ಶನವು ಕಣ್ಣುಗಳಿಗೆ ಮಾತ್ರ ಒಂದು ನೋಟವಲ್ಲ. ಈ ಪ್ರದರ್ಶನವು ಒಂದು ಮಾಯಾಬಜಾರ್. ಆದರೇನು! ನಮ್ಮಲ್ಲಿರಬೇಕಾದ ಅಭಿರುಚಿಗಳೆಲ್ಲ ಕೀಳಾಗಿ ಕ್ಷೀಣವಾಗಿವೆ. ನಮ್ಮ ಕಣ್ಣು ಮುಂದೆ ಇರುವ ಸಜೀವವಾದ ಆಶ್ಚರ್ಯದ ಪದಾರ್ಥಗಳೆಲ್ಲ ಅಷ್ಟೂ ಮಣ್ಣು ಮತ್ತು ಧೂಳಿನಂತೆ ಕಾಣುತ್ತವೆ. ಹೊರಗಿನಿಂದ ಬರುವ ಕೆಲಸಕ್ಕೆ ಬಾರದ ಸಣ್ಣ ಸಾಮಾನುಗಳೆಲ್ಲ ಅತ್ಯಂತ ಶ್ರೇಷ್ಠವಾದ ಕಲಾ ಪ್ರತಿಮೆಗಳಂತೆ ನಮಗೆ ಕಾಣುತ್ತವೆ. ದೂರದೇಶವಾದ ಯೂರೋಪಿನ ಯಾವುದೋ ಒಂದು ಬುಗ್ಗೆಯ ನೀರು ನಮಗೆ ಅರ್ಥವಾಗದ ಒಂದು ಮೋಸದ ಹೆಸರಿನಿಂದ, ಆಶ್ಚರ್ಯ ಗುಣಗಳಿಂದ ಕೂಡಿರುವುದೆಂದು ಪ್ರಖ್ಯಾತವಾಗುವುದು. ಇಲ್ಲಿಯು ಪವಿತ್ರವಾದ ಗಂಗೆಯ ನೀರನ್ನಾದರೋ—ದೇಹವನ್ನು ಶುದ್ಧಿಮಾಡುವುದೆಂದೂ ಕ್ರಿಮಿನಾಶಕವೆಂದೂ ತಿಳಿದಾಗ್ಯೂ—ನಾವು ಅಶುದ್ಧವಾದ ಕೊಳದ ನೀರಿನಂತೆ ಕಾಣುವೆವು.

[ಗಾಂಧಿಜಿಯವರ ಭಾಷಣವು, ಅಲ್ಲಿ ನೆರೆದಿದ್ದವರ ನುಗ್ಗಾಟದಿಂದಲೂ, ಬಿಸಿಲಿನಲ್ಲಿ ಬೆವರು ಸುರಿಸುತ್ತಿದ್ದವರ ಗದ್ದಲದಿಂದಲೂ ಪದೇ ಪದೇ ಕೇಳಿಸದಂತಾಗುತ್ತಿತ್ತು. ಅಲ್ಲಿಯವರೆಗೂ ಸರಳವಾಗಿ ಸಣ್ಣ ದನಿಯಲ್ಲಿ ಮಾತನಾಡುತ್ತಿದ್ದ ಗಾಂಧಿಜಿಯವರು, ಪ್ರದರ್ಶನವನ್ನು ನೋಡಿ ಅದರಿಂದ ಉತ್ಸಾಹ ಸಂತೋಷಗಳನ್ನು ಪಡೆಯದಿದ್ದವರಿಗೆ ತಮ್ಮ ಮನಸ್ಸು ಬಿಚ್ಚಿ ಈರೀತಿ ಸ್ಪಷ್ಟವಾಗಿ ಹೇಳಿದರು.] ಮ. ದೇ.

"ನಾನು ವಿವರಿಸಿರುವಂತಹ ಈ ದೃಶ್ಯವು ನಿಮ್ಮ ಮನಸ್ಸನ್ನು ಕರಗಿಸಿ, ಅರ್ಧ ಊಟಮಾಡುತ್ತಿರುವ ಮತ್ತು ಹೊಟ್ಟೆಗೆ ಹಿಟ್ಟಿಲ್ಲದ ಬಡವರಿಗೋಸ್ಕರ ಸ್ವಲ್ಪವಾದರೂ ತ್ಯಾಗಮಾಡುವಂತೆ ನಿಮ್ಮನ್ನು ಪ್ರೇರಿಸದಿದ್ದರೆ, ಆಗ ದೇವರೇ ನಿಮ್ಮನ್ನು ಕಾಪಾಡಬೇಕು! ಇಕ್ಬಲ್ ಕವಿಯು ನಮ್ಮ ಮನಸ್ಸು ಕರಗುವಂತೆ 'ಹಿಂದೂಸ್ಥಾನ್ ಹಮಾರಾ' ಎಂಬ ಪದ್ಯದಲ್ಲಿ ಹಿಮಾಲಯವನ್ನು ಭಾರತದ ಶಾಶ್ವತವಾದ ಕಾವಲುಗಾರನೆಂದೂ, ಗಂಗಾನದಿಯನ್ನು ಹಿಂದಿನಿಂದ ನಮ್ಮ ನಾಗರೀಕತೆಗಳ ಬದಲಾವಣೆಯನ್ನು ನೋಡುತ್ತಿರುವ ಶಾಶ್ವತವಾದ ಸಾಕ್ಷಿಗಾರನೆಂದೂ ವರ್ಣಿಸಿದಾಗ ನಾನು ಮೇಲೆ ಹೇಳಿದಂಥ ಯಾವುದೋ ದರ್ಶನದ ಭಾವವು ಕವಿಯ ಮನಸ್ಸಿನಲ್ಲಿ ಮೂಡಿರಬೇಕು. ನಾವು ಭಾವುಟವನ್ನು ಏರಿಸುವ ಉತ್ಸವಗಳಲ್ಲಿ ಭಾಗವಹಿಸುತ್ತೇವೆ. ನಮ್ಮ ರಾಷ್ಟ್ರಗೀತೆಯಲ್ಲಿ ಹೆಮ್ಮೆಪಡುತ್ತೇವೆ. ಆದರೆ ನಾನು ಹೇಳುವುದಿಷ್ಟು. ನಾವು ಹೊರದೇಶದ ಸಾಮಾನುಗಳಿಗೆ ಹಲ್ಲುಕಿರಿಯುತ್ತ ಭಾರತದಲ್ಲಿ ಮಾಡಿದ ಪದಾರ್ಥಗಳಲ್ಲಿ ಅಭಿಮಾನವನ್ನಿಡದಿದ್ದರೆ, ನಮ್ಮ ಹೆಮ್ಮೆಯಿಂದ ಏನು ಪ್ರಯೋಜನ? ಈ ದೇಶದ ಬಡ ಕೆಲಸಗಾರರು ಮಾಡಿರುವ ಸಾಮಾನುಗಳನ್ನು ನೋಡಿ ಮನಸ್ಸು ಕರಗದವರೂ, ಆ ಬಡವರಿಗೋಸ್ಕರ ಸ್ವಲ್ಪ ತ್ಯಾಗಮಾಡಲು ಸಿದ್ಧವಾಗಿಲ್ಲದವರೂ, ಭಾರತದ ಸ್ವಾತಂತ್ರ್ಯವನ್ನು ಕುರಿತು ಮಾತನಾಡುವುದು ಬರಿಯ ವ್ಯರ್ಥವಾದ ಮಾತು. 18-4-36

---

೨೩. ಹಳ್ಳಿಯವರ ಪ್ರದರ್ಶನ

ಗಾಂಧಿಜಿಯವರು 1936 ನೆ ಇಸ್ವಿ ಡಿಸೆಂಬರ್ 25 ನೇ ತಾರೀಖಿನ ದಿನ ಫೈಸ್‌ಪುರದಲ್ಲಿ ತೆರೆದ ಖಾದಿ ಮತ್ತು ಗ್ರಾಮಕೈಗಾರಿಕೆಗಳ ಪ್ರದರ್ಶ

ನದಲ್ಲಿ ಮಾಡಿದ ಭಾಷಣವನ್ನು ಕೆಳಗೆ ಬರೆದಿದ್ದೇನೆ. ಈ ಭಾಷಣದ ವರದಿಗಳು ಬಗೆ ಬಗೆಯಾಗಿ ಪತ್ರಿಕೆಗಳಲ್ಲಿ ಅಚ್ಚಾಗಿವೆ. ಅವರು ಆಡಿದ ಮಾತುಗಳು ಹಾಗಿರಲಿ, ಆ ಭಾಷಣಕ್ಕೂ 27 ನೇ ತಾರೀಖಿನ ಭಾಷಣ ದಲ್ಲಿ ಅವರು ಕೈ ಬಾಯಿ ಆಡಿಸಿದುದಕ್ಕೂ ಬೇರೆ ಬೇರೆ ಅರ್ಥವನ್ನು ಜನರು ಕಲ್ಪಿಸಿಕೊಂಡಿದ್ದಾರೆ. ಆದಿನ ಅವರು ಸಣ್ಣ ದನಿಯಲ್ಲಿ ಮಾತ ನಾಡಿದರು ಮತ್ತು ಆ ಭಾಷಣದಲ್ಲಿ ಅನೇಕ ಸಣ್ಣ ಸಣ್ಣ ಹಾಸ್ಯದ ಮಾತುಗಳು ಸೇರಿಕೊಂಡಿದ್ದವು. ಭಾಷಣದ ಮಧ್ಯೆ ಒಂದು ಸಲ ಅವರು ಅಲ್ಲಿದ್ದ ಪದಾರ್ಥಗಳನ್ನು ಒಂದೊಂದಾಗಿ ಎತ್ತಿ ಸಭಿಕರಿಗೆ ತೋರಿ ಸಿದರು. ಗಾಂಧಿಜಿಯವರು ಎತ್ತಿ ಹಿಡಿದಿದ್ದ ನರಿಯ ಚರ್ಮವು ನೆರೆದಿದ್ದ ವರಲ್ಲಿ ಒಬ್ಬರಿಗೆ ಕಾಣಲಿಲ್ಲ. "ನಿಮ್ಮ ಕೈಯನ್ನು ಮೇಲಕ್ಕೆ ಎತ್ತಿ' ಎಂದು ಅವರು ಕೂಗಿದರು, ಗಾಂಧಿಜಿಯವರು 'ತಡೆಯಿರಿ, ಮುಂದೆ ಅದನ್ನು ನಾನು ಸರಿಯಾಗಿ ಎತ್ತಿಕೊಳ್ಳುವೆನು' ಎಂದು ಉತ್ತರ ಕೊಟ್ಟರು. ಚರ್ಮವನ್ನು ಮಾರಿ, ಒಳ್ಳೇ ಸರಿಯಾದ ಹೆಚ್ಚಾದ ಬೆಲೆಯನ್ನೇ ಗಿಟ್ಟಿಸುವೆನೆಂದು ಅವರು ಆಡಿದ ಮಾತಿನ ಅರ್ಥ. ಈ ಲಾಭದಾಯಕವಾದ ವಿನೋದಕ್ಕೆ ವಿರಾಮವಿಲ್ಲದಿದ್ದುದರಿಂದ ಅದನ್ನು ಬಿಟ್ಟುಬಿಡಬೇಕಾಯಿತು. ಆ ಮಾತಿಗೆ ಗಾಂಧಿಜಿಯವರು ಏನೋ ಗುಟ್ಟನ್ನು ಇಟ್ಟುಕೊಂಡಿರುವರೆಂದು ಕೆಲವರು ಅರ್ಥ ಮಾಡಿದರು. ಟೈಮ್ಸ್ ಆಫ್ ಇಂಡಿಯ ಬಾತ್ಮೀದಾರರು ಈ ರೀತಿ ಹೇಳಿದರು. "ಗಾಂಧಿಯವರ ದಿನ ಕಳೆಯಿತೆಂದು ಊಹಿಸಿರುವವರು ತಪ್ಪು ತಿಳಿದುಕೊಂಡಿದ್ದಾರೆ. ಗಾಂಧಿಜಿ ಯವರು ತಮ್ಮ ಅಂಗಿ ತೋಳಿನಲ್ಲಿ ಇನ್ನೂ ಏನೋ ಗುಟ್ಟಾಗಿ ಇಟ್ಟಿ ದ್ದಾರೆ. 'ನನ್ನ ಕೈಯನ್ನು ಇನ್ನೂ ತೋರಿಸಿಲ್ಲ. ಅದನ್ನು ತೋರಿಸುವವರೆಗೆ ತಾಳಿ' ಎಂದು ಅವರು ಹೇಳಿದಾಗ ಎಲ್ಲರೂ ಚಪ್ಪಾಳೆ ಹೊಡೆದರು" ಎಂದಿದ್ದಾರೆ. ಅವರ ಅಂಗಿಯ ತೋಳಿನಲ್ಲಿ ಏನೂ ಇರಲಿಲ್ಲ. ಯಾಕೆಂದರೆ ಅವರಿಗೆ ಅಂಗಿಯ ತೋಳೇ ಇಲ್ಲವಲ್ಲ! ಮ. ದೇ

ಈ ಬಾರಿಯ ಕಾಂಗ್ರೆಸ್ಸು ಹಳ್ಳಿಯಲ್ಲಿ ನಡೆಯುವಂತೆ ಏರ್ಪಾಡು ಮಾಡಲು ನಾನೇ ಕಾರಣನೆಂದು ಪತ್ರಿಕೆಗಳಿಂದ ನೀವೆಲ್ಲ ತಿಳಿದಿರ ಬಹುದು. ಆ ಪತ್ರಿಕೆಗಳು ನಾನು ಡಿಸೆಂಬರ್ ಮೊದಲಿನಲ್ಲಿ ಫೈಸ್ ಪುರಕ್ಕೆ ಹೋಗಿ ಅಲ್ಲಿಯ ಪ್ರದರ್ಶನದ ಕಾರ್ಯಕ್ರಮಗಳನ್ನು ನೋಡುವೆ ನೆಂದೂ ತಿಳಿಸಿದ್ದುವು. ನಾನು ಪ್ರದರ್ಶನದ ಉಸ್ತುವಾರಿ ನೋಡುತ್ತಿದ್ದು ದೇನೋ ನಿಜ. ಯಾವ ಕೃತ್ರಿಮವಾದ ನಮ್ರತೆಗೂ ವಶವಾಗದೆ ಹೇಳ ಬೇಕಾದರೆ, ಇಲ್ಲಿ ಕಾಣುವ ಎಲ್ಲ ಕುಂದುಕೊರತೆಗಳಿಗೂ ನಾನೇ ಪೂರ್ಣ ಜವಾಬ್ದಾರನಾಗಿದ್ದೇನೆ. ಕಾಂಗ್ರೆಸ್ಸನ್ನು ಮತ್ತು ಪ್ರದರ್ಶನವನ್ನು ಹಳ್ಳಿ ಯಲ್ಲಿ ನಡೆಸಬೇಕೆಂಬ ವಿಷಯ ನಾನು ತಿಳಿಸಿದುದರಿಂದ ಅದರಲ್ಲಿ ಕಾಣುವ ತಪ್ಪು ನ್ಯೂನತೆಗಳ ಜವಾಬ್ದಾರಿಯನ್ನೆಲ್ಲ ನಾನೇ ವಹಿಸಿಕೊಳ್ಳಬೇಕು. ಇಲ್ಲಿ ಕಾಣುವ ಒಳ್ಳೆಯದರ ಸಾಹಸವೆಲ್ಲಾ ಈ ಪ್ರದರ್ಶನದಲ್ಲಿ ಕೆಲಸ ಮಾಡಿದವರಿಗೆ ಸೇರಿದೆ. ಕಾಂಗ್ರೆಸ್ ಮತ್ತು ಪ್ರದರ್ಶನಗಳನ್ನು ಹಳ್ಳಿ ಯಲ್ಲಿ ನಡೆಸಬೇಕೆಂಬ ನನ್ನ ಅಭಿಪ್ರಾಯವನ್ನು ದಾಸ್ತಾನೆ ಮತ್ತು ಶಂಕರ ರಾವ್ ದೇವ್‌ರವರು ಒಪ್ಪಿದರು. ಮಹಾರಾಷ್ಟ್ರಿಗಳಿಗೆ ಸಹಜವಾಗಿರುವ ಧೃಡಸಂಕಲ್ಪ ಮತ್ತು ಕೆಲಸ ಮುಗಿಯುವವರಿಗೆ ಅವರಲ್ಲಿ ತೋರುವ ಉತ್ಸಾಹ ಮತ್ತು ಶಿಸ್ತಿನಿಂದ ಅವರಿಬ್ಬರೂ ತಮ್ಮ ಮಾತಿನಂತೆ ನಡೆದು ಕೊಂಡಿದ್ದಾರೆ. ಪ್ರದರ್ಶನವು ನನ್ನ ಇಷ್ಟಕ್ಕೆ ಅನುಸಾರವಾಗಿ ಇದ್ದೇ ತೀರಬೇಕಾಗಿತ್ತು. ಏಕೆಂದರೆ ಆ ಪ್ರದರ್ಶನವು ನಾನು ಅಧ್ಯಕ್ಷನಾಗಿರುವ ಅಖಿಲಭಾರತ ಚರಕ ಸಂಘದ ಮತ್ತು ನನ್ನ ನೇತೃತ್ವದಲ್ಲಿ ಕೆಲಸ ಮಾಡು ತ್ತಿರುವ ಅಖಿಲಭಾರತ ಗ್ರಾಮೋದ್ಯೋಗ ಸಂಘದ ಚಾಲಕರಿಂದ ಏರ್ಪಾ ಡಾಗಿದೆ. ಮಹಾರಾಷ್ಟ್ರದ ಹಳ್ಳಿಯಲ್ಲಿ ಒಂದು ಲಕ್ನೋ ಅಥವಾ ಡೆಲ್ಲಿ ಯಂತಹ ಪಟ್ಟಣವನ್ನು ನಿರ್ಮಿಸದಂತೆ ಅವರಿಗೆ ನಾನು ಎಚ್ಚರಿಸಿದೆ. ಆ ಪಕ್ಷದಲ್ಲಿ ಕಾಂಗ್ರೆಸ್ ಮತ್ತು ಪ್ರದರ್ಶನವನ್ನು ಪೂನಾದಲ್ಲಿ ಯಾಕೆ ನಡೆಸಬಾರದಾಗಿತ್ತು? ಈ ವರ್ಷ ಇವೆರಡೂ ಹಳ್ಳಿಯಲ್ಲಿ ನಡೆಯಬೇಕಾ

ದರೆ ಇಲ್ಲಿ ನಡೆಯುವುದೆಲ್ಲ ಭಾರತದ ಹಳ್ಳಿಗೆ ಯೋಗ್ಯವಾಗಿರಬೇಕು. ಆ ಕೆಲಸವನ್ನು ನನಗಿಂತ ಚೆನ್ನಾಗಿ ಯಾರೂ ಮಾಡುವುದಕ್ಕಾಗುತ್ತಿರಲಿಲ್ಲ. ಏಕೆಂದರೆ ಇತರ ಮುಖಂಡರೆಲ್ಲ ಎಲ್ಲೋ ಸ್ವಲ್ಪಕಾಲದ ಹಿಂದೆ ಹಳ್ಳಿಯವ ರಂತೆ ಜೀವಿಸಲು ಪ್ರಾರಂಭಿಸಿದ್ದರೆ, ಎಷ್ಟೋ ವರುಷಗಳಿಂದ ನನ್ನ ಇಷ್ಟದಿಂದಲೇ ನಾನು ಆರೀತಿ ನಡೆಯುತ್ತಿದ್ದೇನೆ. ಆದರೆ ಕೆಲವು ತಿಂಗಳ ಹಿಂದೆ ಮಾತ್ರ ನಾನು ಶೇಗಾಂವಿಗೆ ಬಂದು ನೆಲೆಸಿದೆ. ಪಟ್ಟಣದಲ್ಲೇ ಹುಟ್ಟಿ ಬೆಳೆದು ವ್ಯಾಸಂಗಮಾಡಿದ್ದರಿಂದ ಹಳ್ಳಿಯವರ ಜೀವನದೊಂದಿಗೆ ಸ್ವಾಭಾವಿಕವಾಗಿ ಹೊಂದಿಕೊಂಡಿರುವುದು ನನ್ನ ದೇಹಕ್ಕೆ ಕಷ್ಟವಾಯಿತು. ಆದುದರಿಂದ ನನಗೆ ಅಲ್ಲಿ ಮಲೇರಿಯಾವೂ ಬಂದಿತು. ಆದರೆ ನಿಮಗೆ ತಿಳಿದಂತೆ ನಾನು ಅದನ್ನೆಲ್ಲ ಹೋಗಲಾಡಿಸಿಕೊಂಡು ಈಗ ಚಟುವಟಿಕೆ ಯಿಂದ ಆರೋಗ್ಯವಾಗಿದ್ದೇನೆ. ಸರ್ದಾರರ ಮತ್ತು ಜವಾಹಿರಲಾಲರ ವಿಶಾಲವಾದ ಹೆಗಲುಗಳಿಗೆ ಎಲ್ಲ ಜವಾಬ್ದಾರಿಯನ್ನೂ ಸರಿಸಿ ನಾನು ನಿರ್ಯೋಚನೆಯಿಂದಿರುವುದು ಇದಕ್ಕೆ ಸ್ವಲ್ಪ ಕಾರಣವಾಗಿರಬಹುದು. ಆದರೆ ನನ್ನ ಮನಸ್ಸು ಎಲ್ಲಿರಬೇಕೆಂದು ಆಸೆಪಡುತ್ತಿತ್ತೋ ಆ ಜಾಗದಲ್ಲಿ ನಾನು ವಾಸಮಾಡುತ್ತಿದ್ದೇನೆ. ನಾನು ಆರೋಗ್ಯವಾಗಿರುವುದಕ್ಕೆ ಇದೇ ಗುಟ್ಟು; ನಿಮಗೂ ಹೇಳಿದ್ದೇನೆ.

ಇಲ್ಲಿಯ ಏರ್ಪಾಡುಗಳೆಲ್ಲ ಶಿಲ್ಪಿಗಳಾದ ಮ್ಹಾತ್ರೆಯವರಿಂದಲೂ ಕಲಾವಿದರಾದ ನಂದಾಲಾಲ್ ಬೋಸ್‌ರವರಿಂದಲೂ ನಡೆಸಲ್ಪಟ್ಟಿವೆ. ಎರಡು ಮೂರು ತಿಂಗಳ ಹಿಂದೆ ನಂದಬಾಬುರವರು ನಾನು ಹೇಳಿದ ಕೆಲಸಕ್ಕೆ ಒಪ್ಪಿದಾಗ ನನ್ನ ಮನಸ್ಸಿನಲ್ಲಿದ್ದುದನ್ನು ಅವರಿಗೆ ತಿಳಿಸಿದೆ. ಆರೀತಿ ಕಾರ್ಯದಲ್ಲಿ ಸಾಧಿಸಬೇಕಾದ ಜವಾಬ್ದಾರಿಯನ್ನು ಅವರ ಮೇಲೆ ಹೊರಿಸಿದೆ. ಅವರು ನಿರ್ಮಾಣಮಾಡತಕ್ಕ ಪ್ರತಿಭೆಯಿರುವ ಕಲಾವಿದರು. ನಾನಾದರೋ ಅಂಥವನಲ್ಲ. ದೇವರು ನನಗೆ ಕಲೆಯನ್ನು ಅನುಭವಿಸುವ ಬುದ್ಧಿಯನ್ನು ಕೊಟ್ಟಿದ್ದಾನೆಯೇ ಹೊರತು, ಅದಕ್ಕೆ ಆಕಾರಕೊಡುವ ಶಕ್ತಿ

ನನ್ನಲ್ಲಿಲ್ಲ. ನಂದಲಾಲರಿಗೆ ಈ ಎರಡು ಬಗೆಯ ಪ್ರತಿಭೆಗಳನ್ನೂ ದೇವರು ಕರುಣಿಸಿದ್ದಾನೆ. ಪ್ರದರ್ಶನದಲ್ಲಿ ಕಲೆಗೆ ಸಂಬಂಧಪಟ್ಟ ಕೆಲಸಗಳನ್ನೆಲ್ಲ ತಾವು ನಡೆಸಲು ಒಪ್ಪಿದ್ದಕ್ಕಾಗಿ ಅವರಿಗೆ ನಾನು ವಂದನೆಗಳನ್ನು ಸಲ್ಲಿಸುತ್ತೇನೆ. ಎಲ್ಲ ಏರ್ಪಾಡುಗಳಿಗೂ ಪೂರ್ಣಲಕ್ಷ್ಯವನ್ನು ಕೊಡುವುದಕ್ಕಾಗಿ ಕೆಲವು ವಾರಗಳಿಂದಲೂ ಅವರು ಇಲ್ಲೇ ನೆಲೆಸಿದ್ದಾರೆ. ಈ ಕಾರಣದಿಂದ ತಿಲಕ್‌ನಗರವೆಲ್ಲ ಒಂದು ಪ್ರದರ್ಶನದಂತೆ ಕಾಣುತ್ತಿದೆ. ಆದುದರಿಂದ ಪ್ರದರ್ಶನವು ಪ್ರಾರಂಭವಾಗುವುದು ನಾನು ತೆರೆಯುತ್ತಿರುವ ಈ ಜಾಗದಿಂದಲ್ಲ. ಹಳ್ಳಿಯ ಸೌಂದರ್ಯದಿಂದ ಕೂಡಿರುವ ಮೊದಲನೇ ಹೆಬ್ಬಾಗಿಲಿನಿಂದಲೇ. ಇದಿಷ್ಟನ್ನೂ ಈಗ ನಾವು ನೋಡುತ್ತಿರುವ ಸ್ಥಿತಿಗೆ ತರಲು ದುಡಿದಿರುವ ಶ್ರೀಯುತ ವ್ಯಾತ್ರೆಯವರಿಗೂ ನಮ್ಮೆಲ್ಲರ ವಂದನೆಗಳು. ಇಲ್ಲಿ ನಡೆದಿರುವ ಪ್ರತಿಯೊಂದು ಕೆಲಸದಲ್ಲೂ ನಂದಬಾಬುಗಳು ಇಲ್ಲಿಯ ಸುತ್ತಮುತ್ತಲ ಸಾಮಾನು, ಕೂಲಿಗಳನ್ನೇ ಉಪಯೋಗಿಸಿರುವರೆಂಬುದನ್ನು ನೀವು ಜ್ಞಾಪಕದಲ್ಲಿಡಬೇಕು.

ನಾನು ಯಾವ ದೃಷ್ಟಿಯಲ್ಲಿ ಈ ಪ್ರದರ್ಶನವನ್ನು ನೋಡುತ್ತೇನೋ ಅದೇ ರೀತಿ ನೀವೂ ನೋಡಬೇಕೆಂದು ಆಶಿಸುತ್ತೇನೆ. ಈ ಪ್ರದರ್ಶನವು ಅಖಿಲಭಾರತ ಚರಕಸಂಘ, ಮತ್ತು ಅಖಿಲಭಾರತ ಗ್ರಾಮೋದ್ಯೋಗ ಸಂಘಗಳ ನೇತೃತ್ವದಲ್ಲಿ ಏರ್ಪಾಡಾಗಿದೆ. ಈ ವಿಷಯವನ್ನು ತಿಳಿದಮೇಲೆ, ಇಲ್ಲಿ ಏನಿರಬಹುದೆಂದು ನೀವು ಸುಲಭವಾಗಿ ಊಹಿಸಬಹುದು. ಅಖಿಲ ಭಾರತ ಚರಕಸಂಘದ ಉದ್ದೇಶವು ಭಾರತದ ಎಲ್ಲ ಜನರಿಗೂ ಖಾದಿಯನ್ನೇ ತೊಡಿಸಬೇಕೆಂಬುದು. ಈ ಗುರಿಯನ್ನು ಸೇರಲು ನಾವು ಇನ್ನೂ ಬಹಳ ದೂರದಲ್ಲಿರುವುದು ವಿಷಾದವಾಗಿದೆ. ಅತಿ ಮುಖ್ಯವಾಗಿರುವ ಸಣ್ಣ ಕೈಗಾರಿಕೆಗಳನ್ನು ಹಳ್ಳಿಗಳಲ್ಲಿ ಪುನರುದ್ಧಾರಮಾಡಬೇಕೆಂಬುದು ಗ್ರಾಮೋದ್ಯೋಗಸಂಘದ ಗುರಿ. ಹಳ್ಳಿಯವರ ಆರ್ಥಿಕ ಉನ್ನತಿಗೆ ಖಾದಿಯೂ ಮತ್ತು ಇತರ ಗ್ರಾಮಕೈಗಾರಿಕೆಗಳೂ ಬಹಳ ಮುಖ್ಯವಾಗಿವೆ.

ಈ ಪ್ರದರ್ಶನವು ಬರಿಯ ಆಡಂಬರದ ನೋಟವಲ್ಲ. ಜನರಿಗೆ ಆಶ್ಚರ್ಯವನ್ನುಂಟುಮಾಡುವುದಾಗಲೀ ಅಥವಾ ಅವರ ಕಣ್ಣಿಗೆ ಮಂಕು ಕವಿಸುವುದಾಗಲೀ ಈ ಪ್ರದರ್ಶನದ ಉದ್ದೇಶವಲ್ಲ. ಇದು ಹಳ್ಳಿಯವರು ಮಾಡಿದ ಕೆಲಸದಿಂದ ಏರ್ಪಾಡಾಗಿರುವ ನೈಜವಾದ ಒಂದು ಹಳ್ಳಿಯ ಪ್ರದರ್ಶನ. ಇದರ ಉದ್ದೇಶ ಜನರಿಗೆ ತಿಳಿವಳಿಕೆ ಕೊಡುವುದಾಗಿದೆ. ಹಳ್ಳಿಯವರು ತಮ್ಮ ಕೈಕಾಲುಗಳ ಸಹಾಯದಿಂದ ಸುತ್ತಮುತ್ತಲ ಅನುಕೂಲಗಳನ್ನು ಉಪಯೋಗಿಸಿಕೊಂಡು ಈಗಿನ ಎರಡರಷ್ಟು ಉತ್ಪತ್ತಿ ಸಂಪಾದಿಸುವ ಮಾರ್ಗವನ್ನು ಈ ಪ್ರದರ್ಶನವು ತಿಳಿಸಿಕೊಡುತ್ತದೆ. ನಮ್ಮ ಅಧ್ಯಕ್ಷರು ಸಂಯುಕ್ತ ಪ್ರಾಂತದ ಒಂದು ಹಳ್ಳಿಗೆ ನನ್ನನ್ನು ಕರೆದುಕೊಂಡು ಹೋಗಲಿ. ನಾನು ಹೇಳಿದ ಹಾಗೆ ನಡೆಯುವಂತೆ ಅಲ್ಲಿಯ ಜನರನ್ನು ಇವರು ಹುರಿದುಂಬಿಸಲಿ. ನಾನು ಆ ಹಳ್ಳಿಯವರಿಂದ ಕೆಲಸಮಾಡಿಸಿ—ಜಮ್ನಾಲಾಲರ ಹಣವನ್ನು ಉಪಯೋಗಿಸಿ ಅಲ್ಲ—ಆ ಹಳ್ಳಿಯನ್ನು ಉತ್ತಮಪಡಿಸುತ್ತೇನೆ. ಹಳ್ಳಿಯವರು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಂಡರೆ, ಜಮ್ನಾಲಾಲರಂಥ ಜಮೀನ್‌ದಾರರು ಅವರ ಮೇಲೆ ತೆರಿಗೆಯನ್ನು ಹೆಚ್ಚಿಸಿ, ಮೊದಲಸ್ಥಿತಿಗೇ ಹಳ್ಳಿಯವರನ್ನು ತಳ್ಳುತ್ತಾರೆ ಎಂದು ಅಧ್ಯಕ್ಷರು ಹೇಳಬಹುದು. ಜಮೀನುದಾರರು ಈರೀತಿ ಮಾಡುವುದಕ್ಕೆ ನಾವು ಅವಕಾಶಕೊಡಬಾರದು. ನಮ್ಮ ದೇಶದಲ್ಲಿ ಉದ್ಯೋಗವಿಲ್ಲದ ಅನೇಕ ಲಕ್ಷ ಜನರಿದ್ದಾರೆ. ತಮ್ಮ ಕೈಕಾಲುಗಳ ಉಪಯೋಗದಿಂದ ಸ್ವಾಭಾವಿಕವಾದ ಜೀವನವನ್ನು ಇವರೆಲ್ಲ ನಡೆಯಿಸಬೇಕಾದರೆ ಯಾವುದಾದರೂ ಉದ್ಯೋಗದಿಂದ ಮಾತ್ರ ಸಾಧ್ಯ ಎನ್ನುವುದರಲ್ಲಿ ನನಗೆ ಪೂರ್ಣ ನಂಬಿಕೆಯುಂಟು. ಅಂಥಾ ಅನೇಕ ಲಕ್ಷ ಜನರಿಗೆ ಖಾದಿ ಮತ್ತು ಇತರ ಗ್ರಾಮಕೈಗಾರಿಕೆಗಳು ಅತ್ಯಾವಶ್ಯಕ. ಈಗಿನ ಪರಿಸ್ಥಿತಿಯಲ್ಲಿ ಅವು ಆವಶ್ಯಕವಾಗಿ ಬೇಕಾಗಿವೆ. ಮುಂದೆ ಈ ಕೈಗಾರಿಕೆಗಳಿಗೆ ಯಾವ ಗತಿ ಬರುತ್ತದೋ ನನಗೆ ಗೊತ್ತಿಲ್ಲ; ನಾನು ಅದನ್ನು ಗೊತ್ತುಮಾಡಿಕೊಳ್ಳುವುದೂ ಇಲ್ಲ.

[ಇಷ್ಟು ಹೇಳಿದ ಮೇಲೆ ಗಾಂಧಿಜಿಯವರು ತಮ್ಮ ಮುಂದಿದ್ದ ಪದಾರ್ಥಗಳನ್ನು ಒಂದೊಂದಾಗಿ ಎಲ್ಲರಿಗೂ ತೋರಿಸಿದರು. ಹಿಂದಿನ ರಾತ್ರಿ ತಯಾರಾದ ಕಮ್ಮಾರನ ಆಯುಧಗಳು, ಆಂಧ್ರದ ಕೆಲಸಗಾರರು ಮಾಡಿದ್ದ ಹುಲ್ಲಿನಿಂದ ತಯಾರಾದ ಪದಾರ್ಥಗಳು (ಕನ್ನಡಕ ಇಡುವ ಪೆಟ್ಟಿಗೆ, ಚೀಲ ಮುಂತಾದುವು) ವಾರ್ಧಾದಲ್ಲಿ ಹದಮಾಡಿ ಖಾದಿಬಟ್ಟೆ ಅಂಚಿಗೆ ಹೊಲಿದಿದ್ದ ನರಿಯ ಚರ್ಮ ಇವು ಅಲ್ಲಿದ್ದ ಸಾಮಾನುಗಳಲ್ಲಿ ಕೆಲವು]

ಈ ಸಣ್ಣ ಪದಾರ್ಥಗಳು ಹಳ್ಳಿಯ ಬಡವರಿಗೆ ಸ್ವಲ್ಪ ಹೆಚ್ಚು ಹಣವನ್ನು ಸಂಪಾದಿಸಿ ಕೊಡುತ್ತವೆ. ಈಗ ಅವರಿಗೆ ಸಿಕ್ಕುತ್ತಿರುವ ಮೂರು ದುಡ್ಡಿನ ಬದಲು ಮೂರು ಆಣೆಗಳನ್ನು ಅವರಿಗೆ ದೊರಕಿಸಿ ಕೊಟ್ಟರೆ ಸ್ವರಾಜ್ಯ ಬಂದಿತೆಂದು ಅವರು ತಿಳಿಯುವರು. ಖಾದಿಯು ನೂಲುವವರಿಗೆ ಆ ಸಂಪಾದನೆಯನ್ನು ದೊರಕಿಸಿಕೊಡುತ್ತದೆ.

ಒಟ್ಟಿನಲ್ಲಿ ಹೇಳಬೇಕಾದರೆ ನಾವು ಹಳ್ಳಿಯವರಿಗೆ ಕಸದಿಂದ ಹಣ ಸಂಪಾದಿಸುವುದು ಹೇಗೆಂಬುದನ್ನು ತಿಳಿಸಬೇಕು. ಪ್ರದರ್ಶನದ ಉದ್ದೇಶವೇ ಅದು. ಎರಡು ತಿಂಗಳ ಹಿಂದೆ ನಾನು ನಂದಬಾಬುಗಳನ್ನು ಕಂಡಾಗ ಬೆಲೆಬಾಳುವ ಬಣ್ಣದ ಚಿತ್ರಗಳನ್ನು ಶಾಂತಿನಿಕೇತನದಿಂದ ತರದಂತೆ ಹೇಳಿದ್ದೆ. ಆ ಕಾಲದಲ್ಲಿ ಮಳೆಯು ಬಂದರೆ ಆ ಚಿತ್ರಗಳೆಲ್ಲ ಹಾಳಾಗುವುವೆಂದು ತಿಳಿಸಿದೆ. ಅವರು ನಾನು ಹೇಳಿದಂತೆ ಇಲ್ಲಿಯ ಸುತ್ತಮುತ್ತಲ ಪದಾರ್ಥಗಳನ್ನು ಮಾತ್ರ ಶೇಖರಿಸಿದ್ದಾರೆ. ಕಲಾವಿದರಲ್ಲಿ ಇರಬೇಕಾದ ಪ್ರತಿಭೆಯಿಂದ ಇವರು ಹಳ್ಳಿಗಳಿಗೆ ಹೋಗಿ ರೈತರ ಮನೆಗಳಿಂದ ಉಪಯುಕ್ತವಾದ ಪದಾರ್ಥಗಳನ್ನು ತಂದಿರಿಸಿದ್ದಾರೆ. ಸಾಮಾನ್ಯರಾದವರಿಗೆ ಇವುಗಳಲ್ಲಿ ಏನಿದೆ ಎನ್ನಿಸಬಹುದು. ಆದರೆ ನಂದಬಾಬುಗಳು ತಮ್ಮ ಪ್ರತಿಭಾದೃಷ್ಟಿಯಿಂದ ಇವನ್ನೆಲ್ಲ ಆರಿಸಿಕೊಂಡು ಸರಿಯಾದ ರೀತಿಯಲ್ಲಿ ಜೋಡಿಸಿ ಒಂದು ಹೊಸ ಅರ್ಥ ಕೊಡುವಂತೆ ಮಾಡಿದ್ದಾರೆ.

ಹಿಂದೆ ನಡೆಯುತ್ತಿದ್ದ ಪ್ರದರ್ಶನಗಳೊಂದಿಗೆ ಹೋಲಿಸಿದರೆ ಈಗಿನದು ಸಣ್ಣದಾಗಿ ಕಾಣುವುದೆಂದು ಶ್ರೀ ವೈಕುಂಠಮೇಥರವರು ನಮ್ಮೆಲ್ಲರ ಕ್ಷಮೆಯನ್ನು ಬೇಡಿದ್ದಾರೆ. ಆದರೆ ಅವರು ಆ ರೀತಿ ಹೇಳುವ ಕಾರಣವಿರಲಿಲ್ಲ. ಅಪ್ರಯೋಜಕವಾದ ಒಂದು ಪದಾರ್ಥವೂ ಈ ಪ್ರದರ್ಶನದಲ್ಲಿ ಕಾಣುವುದಿಲ್ಲ. ಇಲ್ಲಿ ಪ್ರದರ್ಶಿಸಲ್ಪಟ್ಟಿರುವ ಪ್ರತಿಯೊಂದು ಉದ್ಯೋಗವೂ ಅಷ್ಟಷ್ಟು ಉತ್ಪತ್ತಿಯನ್ನು ಹೆಚ್ಚಿಸುವುದಾಗಿದೆ. ಉದಾಹರಣೆಗೆ ನೋಡಿ, ಮುಂಜಿ ಹುಲ್ಲು, ಬಿದಿರು ಮತ್ತು ಬಾಳೆಯ ನಾರಿನಿಂದ ತಯಾರಾದ ಕಾಗದವನ್ನು ನೋಡಿ, ಇಲ್ಲಿ ಕಟ್ಟಿರುವ ಎಲ್ಲದ್ದಕ್ಕೂ ಬಿದಿರು ಬಹಳವಾಗಿ ಉಪಯೋಗವಾಗಿದೆ. ಕಾಂಗ್ರೆಸ್ಸು ಮುಗಿದ ಬಳಿಕ ಈ ಬಿದಿರಿನಿಂದಲೂ ಸರಿಯಾದ ಉಪಯೋಗವನ್ನು ಪಡೆಯುತ್ತೇವೆ. ಅಧ್ಯಕ್ಷರ ಮೆರವಣಿಗೆಯು ಅದರಲ್ಲೂ ಆರು ಜೊತೆ ಎತ್ತುಗಳಿಂದ ಎಳೆಯಲ್ಪಟ್ಟ ಆ ಸುಂದರವಾದ ಚಿತ್ರರಥವು ಆಡಂಬರವಿಲ್ಲದೆ ಎಷ್ಟು ಸರಳವಾಗಿತ್ತೆಂಬುದನ್ನು ನೀವೆಲ್ಲ ನೋಡಿದ್ದೀರಿ. ಮುಂದೆ ನೀವು ಈ ಪ್ರದರ್ಶನದಲ್ಲಿ ಏನೇನು ಊಹಿಸಬಹುದೆಂಬುದನ್ನು ತಿಳಿಸಲು ಆರೀತಿ ಮಾಡಲಾಗಿದ್ದಿತು. ಪಟ್ಟಣದಲ್ಲಿ ಸಿಕ್ಕುವ ಅನುಕೂಲಗಳು ಇಲ್ಲಿ ಇಲ್ಲ. ಬಡವರಾದ ಹಳ್ಳಿಯವರು ಏನೇನು ಒದಗಿಸಬಹುದೋ ಅವಷ್ಟೂ ಇಲ್ಲಿವೆ. ಆದುದರಿಂದ ಈ ಜಾಗವು ಕಾಶಿ ಮೆಕ್ಕಗಳಂತೆ ಒಂದು ಯಾತ್ರಾಸ್ಥಳವಾಗಿದೆ. ಸ್ವಾತಂತ್ರ್ಯ ಸಾಧನೆಗಾಗಿ ಪ್ರಾರ್ಥನೆಮಾಡುವುದಕ್ಕೂ, ದೇಶಸೇವೆಗಾಗಿ ದೀಕ್ಷೆ ತೆಗೆದುಕೊಳ್ಳುವುದಕ್ಕೂ ನಾವೆಲ್ಲ ಇಲ್ಲಿಗೆ ಬಂದಿದ್ದೇವೆ. ನೀವು ಇಲ್ಲಿಯ ರೈತರ ಮುಂದೆ ನಿಮ್ಮ ದೊಡ್ಡಸ್ಥಿಕೆಯನ್ನು ತೋರಿಸಲು ಬಂದಿಲ್ಲ. ಕಸ ಗುಡಿಸುವುದು, ಬಟ್ಟೆ ಒಗೆದುಕೊಳ್ಳುವುದು, ನಿಮ್ಮ ಹಿಟ್ಟನ್ನು ನೀವೇ ಬೀಸಿಕೊಳುವುದು ಇವೇ ಮುಂತಾದ ಕೆಲಸಗಳನ್ನು ಮಾಡುತ್ತ ಹಳ್ಳಿಯವರ ದಿನಚರಿಯ ಕೆಲಸಗಳಲ್ಲಿ ನೀವೂ ಭಾಗವಹಿಸಿ ಅವರ ಹೊರೆಯನ್ನು ಕಡಿಮೆ ಮಾಡಬೇಕು. ಕಾಂಗ್ರೆಸ್ಸು ಹುಟ್ಟಿದಂದಿ

ನಿಂದ ಮೊದಲನೆಯಸಲ ಎಂದರೆ ಈ ವರುಷ ಹೊಟ್ಟು ತೆಗೆಯದಿರುವ ಸಾರವಾದ ಅಕ್ಕಿ, ಕೈಯಲ್ಲಿ ಬೀಸಿದ ಹಿಟ್ಟಿನಿಂದ ಮಾಡಿದ ಚಪಾತಿ, ಬೇಕಾದಷ್ಟು ಶುದ್ಧವಾದ ಗಾಳಿ, ನಿಮ್ಮ ದೇಹಗಳನ್ನು ಒರಗಿಸಲು ಚೊಕ್ಕಟವಾದ ಭೂಮಿತಾಯಿ ಇವೆಲ್ಲ ಸಿಕ್ಕುತ್ತವೆ. ಆದರೆ ನೀವು ವ್ಯವಸ್ಥಾಪಕರ ಎಷ್ಟೋ ಕುಂದುಕೊರತೆಗಳನ್ನು ದಯೆಯಿಟ್ಟು ಸರಿ ಮಾಡಿಕೊಂಡು ಹೋಗಬೇಕು. ಏಕೆಂದರೆ ನಾವೆಲ್ಲ ಖಾನ್‌ಸಾಹೇಬರ ಮಾತಿನಂತೆ ಖುದೈ ಖಿದ್‌ಮತ್‌ಗಾರರು ಅಂದರೆ ದೇಶಸೇವಕರು. ನಾವು ಇಲ್ಲಿಗೆ ಬಂದಿರುವುದು ಸೇವೆ ಮಾಡುವುದಕ್ಕೆ. ಸುಖಪಡುವುದಕ್ಕಲ್ಲ. ಸೇವೆಯನ್ನು ಸ್ವೀಕರಿಸುವುದಕ್ಕಲ್ಲ. 2-1-1937

---

೨೪. ನನ್ನ ತತ್ವದಲ್ಲಿ ನಂಬಿಕೆ.

[ಡಿಸೆಂಬರ್ 25 ನೇ ತಾರೀಖು ಗಾಂಧಿಜಿಯವರು ಪ್ರದರ್ಶನದ ಪ್ರಾರಂಭೋತ್ಸವದಲ್ಲಿ ಮಾಡಿದ ಭಾಷಣವು ಪತ್ರಿಕೆಗಳ ಬಾತ್ಮೀದಾರರಿಗೆ ಗಾಬರಿಯನ್ನುಂಟುಮಾಡಿತು. ಭಾಷಣವು ಅವರಿಗೆ ಕೇಳಿಸದಿದ್ದುದೇ ಇದಕ್ಕೆ ಕಾರಣವಾಗಿದ್ದಿರಬೇಕು. 27 ನೆಯ ತಾರೀಖಿನ ಭಾಷಣವು ಅವರ ಗಾಬರಿಯನ್ನು ಮತ್ತಷ್ಟು ಹೆಚ್ಚಿಸಿತು. ಇದಕ್ಕೆ ಕಾರಣ ಭಾಷಣವು ಅವರಿಗೆ ಕೇಳಿಸಲಿಲ್ಲವೆಂದಲ್ಲ. ಕೇಳಿಸಿತು. ಅವರು ಅಂತಹ ಭಾಷಣವನ್ನು ಕೇಳಿ ಎಷ್ಟೋ ದಿನವಾಗಿತ್ತು. ಭಾಷಣವು ಪೂರ್ಣವಾಗಿ ಸ್ಪಷ್ಟವಾಗಿ ನೇರವಾಗಿದ್ದು, ರಚನಾತ್ಮಕ ಕಾರ್ಯಕ್ರಮಗಳನ್ನು ಕುರಿತು ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಟ್ಟಿತು. ಅನೇಕರು ಹೊರಗೆ ಕಾಣಿಸುವುದಕ್ಕಿಂತ ಹೆಚ್ಚು ಗುಟ್ಟಿನ ವಿಷಯಗಳು ಅದರಲ್ಲಿ ಅಡಕವಾಗಿರುವು

ದೆಂದು ಊಹಿಸಿದರು. ಕೆಲವು ಕಡೆ ಅದನ್ನು ಪಿತೂರಿಯ ಭಾಷಣ ವೆಂದು ಕರೆದರು. ಆ ಭಾಷಣವನ್ನು ಬೇಡಿಕೆ, ಹುರುಡು, ಕ್ರಾಂತಿ ಕಾರಕ ಉದ್ದೇಶ ಮತ್ತು ಚುನಾವಣೆಯ ತಂತ್ರವೆಂದೂ ಅನೇಕರು ಹೇಳಿದ್ದಾರೆ. ಗಾಂಧಿಜಿಯವರು ಪುನಃ ರಾಜಕೀಯ ರಂಗಕ್ಕೆ ಇಳಿಯು ವರೆಂದು ಈ ಭಾಷಣ ಸ್ಪಷ್ಟಪಡಿಸುತ್ತದೆ ಎಂದು ಅಭಿಪ್ರಾಯ ಬರು ವಂತೆ ಒಂದು ಪತ್ರಿಕೆ ಬರೆಯಿತು. ಅದೇ ಅರ್ಥ ಕೊಡುವ 'ಗಾಂಧಿಜಿ ಯವರು ರಾಜಕೀಯಕ್ಕೆ ಇಳಿಯುವರು' 'ನನ್ನ ಶಕ್ತಿ ಎಂದಿನಂತೆ ಇದೆ ಸಮಯಬಂದಾಗ ಅದನ್ನು ತೋರಿಸುವೆನು, ಎಂಬ ಮಾತುಗಳು ದಪ್ಪಕ್ಷರ ದಲ್ಲಿ ಪತ್ರಿಕೆಗಳಲ್ಲೆಲ್ಲಾ ಅಚ್ಚಾದುವು.

ಈ ವಿಷಯದಲ್ಲಿ ನಾವು ಪತ್ರಿಕೆಗಳನ್ನು ದೂಷಿಸುವ ಹಾಗಿಲ್ಲ. ಭಾಷಣವು ಗಾಂಧಿಜಿಯವರ ಅದ್ವಿತೀಯವಾದ ಆತ್ಮಪ್ರಕಾಶದ ಪ್ರಯ ತ್ನವಾಗಿದ್ದಿತು. ಅಂತಹ ಭಾಷಣವನ್ನು ಸರಿಯಾಗಿ ಸಂಗ್ರಹಿಸಿ ಪ್ರಕಟಿಸು ವುದು ಸ್ವಲ್ಪ ಕಷ್ಟದ ಕೆಲಸ. 1920 ರಲ್ಲಿ ಕಾಂಗ್ರೆಸ್ಸು ಒಪ್ಪಿದ್ದ ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸಿದರೆ ಪೂರ್ಣ ಸ್ವರಾಜ್ಯವು ಲಭ್ಯವಾಗುವು ದೆಂದೂ, ಆ ಕಾರ್ಯಕ್ರಮವನ್ನು ಅನುಸರಿಸಿ ನಡೆಸಬೇಕೆಂದೂ ಗಾಂಧಿ ಜಿಯವರು ಹೇಳಿದರು. ಈ ಕಾರಣದಿಂದ ಆ ಭಾಷಣವನ್ನು ರಾಜಕೀಯಕ್ಕೆ ಸಂಬಂಧಪಟ್ಟ ಭಾಷಣವೆಂದು ಹೇಳಬಹುದು. ಆದರೆ ಆ ಭಾಷಣವು ಜಗಳವನ್ನು ಬಯಸುವ ಅಥವಾ ಚುನಾವಣೆಯಲ್ಲಿ ನಡೆ ಯುವ ಕೆಳದರ್ಜೆಯ ಭಾಷಣದಂತೆ ಇರಲಿಲ್ಲ. ಕಾಂಗ್ರೆಸ್ ರಚನಾಕ್ರಮ ಕಾರ್ಯದಲ್ಲಿ ತಮ್ಮೊಂದಿಗೆ ಕೆಲಸಮಾಡುತ್ತಿದ್ದ ಅನೇಕ ಸ್ನೇಹಿತರ ಭಯ, ಕಷ್ಟ, ಸಂಶಯಗಳನ್ನು ಕುರಿತು ಪೂರ್ಣ ವಿಶ್ವಾಸದೊಡನೆ ಹೃದ ಯದಿಂದ ಆಡಿದ ಮಾತುಗಳು ಅವು. ಆ ಭಾಷಣದಲ್ಲಿ ಗಾಂಧಿಜಿಯವರು ತಮ್ಮ ತತ್ವದಲ್ಲಿ ಪೂರ್ಣನಂಬಿಕೆಯನ್ನು ಇಟ್ಟಿರುವುದಾಗಿ ತಿಳಿಸಿ, ತಮ್ಮ ಜೊತೆಯಲ್ಲಿ ಕೆಲಸಮಾಡುತ್ತ ತಮ್ಮ ಜೀವವನ್ನು ಈ ರಚನಾಕ್ರಮವನ್ನು

ಸಾಧಿಸುವುದಕ್ಕಾಗಿ ಧಾರೆಯೆರೆದಿರುವ ತಮ್ಮ ಸ್ನೇಹಿತರ ಕಷ್ಟನಿಷ್ಠೂರಗಳನ್ನು ತಿಳಿದು ಅವರಿಗೆ ಧೈರ್ಯಕೊಟ್ಟು ಹುರಿದುಂಬಿಸಲು ಮಾಡಿದ ಭಾಷಣವು ಅದು. ಆ ಭಾಷಣವು ಅವರು ಜೀವನದಲ್ಲಿ ನಡೆಸಿದ ಅನೇಕ ಪ್ರಯೋಗಗಳ ಪುನರ್ವಿಮರ್ಶೆ. ಅದೊಂದು ಆಧ್ಯಾತ್ಮಿಕಭಾಷಣ.

ಆ ಭಾಷಣವನ್ನು ಸರಿಯಾಗಿ ವರದಿ ಮಾಡಬಲ್ಲೆನೆಂಬ ನಂಬಿಕೆ ನನಗೆ ಇರಲಿಲ್ಲ. ಗಾಂಧಿಜಿಯವರ ಮಾತಿನಲ್ಲಿಯೇ ಅವರು ಭಾಷಣ ಮಾಡುತ್ತಿರುವಾಗಲೇ ಬರೆದು ಅದನ್ನು ಸಂಗ್ರಹವಾಗಿ ಮಾಡಲೆಂದು ಗಾಂಧೀಜಿಯವರ ಮುಂದಿಟ್ಟೆ. ಈ ಕೆಳಗೆ ಕೊಟ್ಟಿರುವುದು ಅವರು ತಾವಾಗಿಯೇ ಸಂಗ್ರಹಿಸಿದ ಭಾಷಣದ ವರದಿ, ಮ. ದೇ

ನಾನು ಈದಿನ ಹೊಸದು ಏನನ್ನೂ ಹೇಳುವುದಿಲ್ಲ. ಚರಕದ ಕಲೆಯು ಹದಿನೆಂಟು ವರ್ಷದ್ದು. 1918 ರಲ್ಲಿ ಚರಕದಿಂದ ಸ್ವರಾಜ್ಯವನ್ನು ಸಂಪಾದಿಸಬಹುದೆಂದು ನಾನು ಹೇಳಿದೆ. ಚರಕದಲ್ಲಿ ಅಂದಿನ ನನ್ನ ನಂಬಿಕೆಯು ಈಗಲೂ ಅಚ್ಚಳಿಯದೆ ಉಳಿದಿದೆ. ಇಷ್ಟು ವರ್ಷಗಳೂ ನಾವು ಆ ವಿಷಯದಲ್ಲಿ ನಡೆಸಿರುವ ಪ್ರಯೋಗಗಳು ಮತ್ತು ಪಡೆದಿರುವ ಅನುಭವಗಳು ಆ ನಂಬಿಕೆಯನ್ನು ಬಲಪಡಿಸಿವೆ.

ಆದರೆ ಚರಕ ಅಥವಾ ಅದರಿಂದ ತಯಾರಾದ ಖಾದಿಯಲ್ಲಿ ಅಡಗಿರುವ ಅರ್ಥವೇನೆಂಬುದನ್ನು ನಾವು ತಿಳಿಯಬೇಕು. ಕೆಲವು ವಿಶೇಷ ಸಮಯಗಳಲ್ಲಿ ಮಾತ್ರ ನಾವು ಖಾದಿಯನ್ನು ಧರಿಸಿದರೆ ಸಾಲದು. ಇತರ ಬಟ್ಟೆಗಳನ್ನು ನಿರಾಕರಿಸಿ ಪೂರ್ಣ ಖಾದಿಯನ್ನೇ ತೊಟ್ಟು ತನ್ನ ಸುತ್ತಮುತ್ತಲೆಲ್ಲ ವಿದೇಶಿಯನ್ನು ಉಪಯೋಗಿಸಿದರೆ, ಅದೂ ಸಾಲದು. ಖಾದಿಯೆಂದರೆ ಪೂರ್ಣ ಸ್ವದೇಶೀ ಭಾವನೆ; ಖಾದಿಯೆಂದರೆ ಅನ್ನವಿಲ್ಲದವರೊಡನೆ ತಾನೂ ಒಬ್ಬನೆಂದು ತಿಳಿಯುವುದು.

ಸ್ವರಾಜ್ಯವನ್ನು ಕುರಿತ ನನ್ನ ಅಭಿಪ್ರಾಯದಲ್ಲಿ ನೀವು ಯಾವ ತಪ್ಪನ್ನೂ ಮಾಡಬೇಡಿ. ಸ್ವರಾಜ್ಯವೆಂದರೆ ಪರದೇಶದವರ ಹಿಡಿತದಿಂದ

ಬಿಡುಗಡೆ ಮತ್ತು ಪೂರ್ಣ ಆರ್ಥಿಕ ಸ್ವಾತಂತ್ರ್ಯ, ಒಂದುಕಡೆ ರಾಜಕೀಯ ಸ್ವಾತಂತ್ರ್ಯ ಮತ್ತೊಂದು ಕಡೆ ಆರ್ಥಿಕ ಸ್ವಾತಂತ್ರ್ಯ. ಸ್ವರಾಜ್ಯಕ್ಕೆ ಇನ್ನೆರಡು ತುದಿಗಳಿವೆ. ನೀತಿ ಮತ್ತು ಸಾಮಾಜಿಕ ಉನ್ನತಿ ಅವುಗಳಲ್ಲೊಂದು; ಮತ್ತೊಂದು ಧರ್ಮ, ಅಂದರೆ ನಮ್ಮ ಮತಗಳಲ್ಲಿ ಕಾಣುವ ಅತ್ಯುತ್ತಮವಾದ ತತ್ವಗಳು. ಹಿಂದೂ, ಮುಸಲ್ಮಾನ, ಕ್ರೈಸ್ತಮತಗಳೆಲ್ಲ ಸೇರಿವೆ ಈ ಧರ್ಮದಲ್ಲಿ. ಆದರೆ ಈ ಧರ್ಮವು ಇವೆಲ್ಲಕ್ಕಿಂತ ಮೇಲಾದುದು. 'ಸತ್ಯ' ಎಂಬ ಹೆಸರಿನಿಂದ ಬೇಕಾದರೂ ಅದನ್ನು ನೀವು ಗುರುತಿಸಿ. ಆದರೆ ಆ 'ಸತ್ಯವು' ಸಂದರ್ಭಕ್ಕೆ ಅನುಕೂಲವಾಗಿ ಬದಲಾವಣೆಯಾಗದೆ, ಎಲ್ಲವನ್ನೂ ಆವರಿಸಿಕೊಂಡು ವ್ಯತ್ಯಾಸವಾಗದೆ ಅಥವಾ ನಾಶ ಹೊಂದದೆ ಇರತಕ್ಕುದು. ನೀತಿ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ನಮಗೆ ಮುಂದಟ್ಟಾಗಿರುವ 'ಅಹಿಂಸೆ' ಎಂಬ ಮಾತಿನಿಂದ ಗುರ್ತಿಸಬಹುದು. ಅಂದಮೇಲೆ ನಾವು ಸ್ವರಾಜ್ಯವನ್ನು ಒಂದು ಚೌಕ ಎಂದು ಕರೆದರೆ, ಆ ಚೌಕದಲ್ಲಿ ಯಾವ ಮೂಲೆಯು ಸೊಟ್ಟಾದರೂ ಚೌಕವು ನೇರವಾಗುವುದಿಲ್ಲ. ಕಾಂಗ್ರೆಸ್ಸಿನ ಮಾತಿನಲ್ಲಿ ಹೇಳುವುದಾದರೆ ಸತ್ಯ, ಅಹಿಂಸೆಗಳಿಂದ ಹೊರತು ನಾವು ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಲಾಗುವುದಿಲ್ಲ. ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಹೇಳುವುದಾದರೆ, ನಮಗೆ ಸ್ವಾತಂತ್ರ್ಯವು ಸಾಧ್ಯವಾಗಬೇಕಾದರೆ ನಾವು ದೇವರಲ್ಲಿ ನಿಜವಾದ ಭಕ್ತಿಯನ್ನಿಡಬೇಕು. ನೈತಿಕ ಮತ್ತು ಸಾಮಾಜಿಕ ವ್ಯವಹಾರದಲ್ಲಿ ನಮ್ಮ ನೀತಿ ಬಹಳ ಮೇಲ್ಮಟ್ಟದಲ್ಲಿ ಇರಬೇಕು.

ಆಡಳಿತ ಸ್ವಾತಂತ್ರ್ಯವೆಂದರೆ ನನ್ನ ಮನಸ್ಸಿನಲ್ಲಿರುವುದು ಇಂಗ್ಲೀಷ್‌ರ ಕಾಮನ್ಸ್ ಸಭೆ ಅಥವಾ ರಷ್ಯದ ಸೋವಿಯಟ್ ಆಡಳಿತ ಅಥವಾ ಫಾಸಿಸ್ಟ್ ಇಟಲಿ ಅಥವಾ ನಾಜಿ ಜರ್ಮನಿ ಇವುಗಳ ಅನುಕರಣೆಯಲ್ಲ. ತಮ್ಮ ತಮ್ಮ ಬುದ್ಧಿ ಅಭ್ಯಾಸಗಳಿಗೆ ಸರಿಹೋಗುವಂಥ ಪದ್ಧತಿಗಳನ್ನು ಅವರೆಲ್ಲ ಅನುಸರಿಸುತ್ತಾರೆ. ನಮ್ಮ ಪದ್ಧತಿಗಳು ನಮಗೆಲ್ಲ ಸರಿಹೋಗ

ಬೇಕು. ಅದು ಎಂಥದಾಗಿರಬೇಕು ಎಂಬುದನ್ನು ನಾನು ತಿಳಿಸಲಾರೆ. ಅದನ್ನು ರಾಮರಾಜ್ಯ ಅಥವಾ ನೀತಿ ಶಕ್ತಿಯನ್ನು ಅವಲಂಬಿಸಿರುವ ಜನರ ಆಡಳಿತ ಎಂದು ನಾನು ಕರೆಯುತ್ತೇನೆ. ನನ್ನ ಮುಂದಾಳುತನದಲ್ಲಿ ನಿರ್ಮಿತವಾಗಿರುವ ನಾಗಪುರ ಮತ್ತು ಬೊಂಬಾಯಿನ ಕಾಂಗ್ರೆಸ್ ಸಂಸ್ಥೆಗಳು ಈ ಬಗೆಯ ಸ್ವರಾಜ್ಯವನ್ನು ಸಾಧಿಸಲು ಪ್ರಯತ್ನಿಸುತ್ತಿವೆ.

ಇನ್ನು ಆರ್ಥಿಕ ಸ್ವಾತಂತ್ರ್ಯದ ವಿಷಯ. ನಮ್ಮ ಆರ್ಥಿಕ ಸ್ವಾತಂತ್ರ್ಯವು ಪಾಶ್ಚಾತ್ಯ ರೀತಿಯನ್ನು ಅಥವಾ ಈಗಿನ ಕಾಲದ ಕೈಗಾರಿಕೋದ್ಯಮಗಳನ್ನು ಅವಲಂಬಿಸಿಲ್ಲ. ಭಾರತದ ಆರ್ಥಿಕ ಸ್ವಾತಂತ್ರ್ಯವೆಂದರೆ ನಾನು ತಿಳಿದಿರುವುದು ಪ್ರತಿಯೊಬ್ಬ ಗಂಡಸು ಅಥವಾ ಹೆಂಗಸು ತಾನೇ ಸ್ವತಃ ಮಾಡುವ ಕೆಲಸಗಳಿಂದ ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವುದು. ಈ ರೀತಿಯ ಆಡಳಿತದಲ್ಲಿ ಎಲ್ಲರಿಗೂ ಸಾಕಾದಷ್ಟು ಬಟ್ಟೆಯು ದೊರಕುವುದು. ಬಟ್ಟೆಯೆಂದರೆ ಬರಿಯ ಕೋಪೀನ ಮಾತ್ರವಲ್ಲ. ತೊಡವುದಕ್ಕೆ ಯಾವಯಾವದು ಅವಶ್ಯಕವೋ ಆ ಎಲ್ಲಾ ಉಡುಪುಗಳೂ ಪ್ರತಿಯೊಬ್ಬರಿಗೂ ಬೇಕಾಗುವಷ್ಟು ಆಹಾರವೂ ಅವರಿಗೆ ದೊರಕಬೇಕು. ಹಾಲು ಬೆಣ್ಣೆಗಳು ಈಗ ಅನೇಕ ಕೋಟಿ ಜನರಿಗೆ ಸಿಕ್ಕುತ್ತಿಲ್ಲ. ಅವೂ ಕೂಡ ಅವರಿಗೆ ಸಿಕ್ಕಬೇಕು.

ಈ ವಾದವು ನಮ್ಮನ್ನು ಸಮತಾವಾದಕ್ಕೆ ಕರೆದೊಯ್ಯುತ್ತದೆ. ನಿಜವಾದ ಸಮತಾವಾದವು ನಮ್ಮ ಪೂರ್ವಿಕರಿಂದ ನಮಗೆ ಬಂದಿದೆ. ಅವರು ಹೇಳಿದ್ದೇನು? ಎಲ್ಲ ಭೂಮಿಯೂ ಗೋಪಾಲನದೇ ಅದರಲ್ಲಿ ವಿಭಾಗ ಎಲ್ಲಿಬಂತು? ಮನುಷ್ಯನು ಅದರ ಮೇರೆಯ ಗೆರೆಯನ್ನು ನಿರ್ಮಿಸಿ ಭಾಗಿಸಿದ್ದಾನೆ. ಆದ್ದರಿಂದ ಅವನು ಅದನ್ನು ತೊಡೆದು ಹಾಕಲೂಬಹುದು.* ಗೋಪಾಲನೆಂದರೆ ಕುರುಬನೆಂದರ್ಥ. ಗೋಪಾಲನು

ಸಭಿ ಭೋಮಿ ಗೋಪಾಲಕೀ, ವಾಮೇ ಅಟಕ್ ಕಹಾ ?
ಜಾಕೆ ಮನ್‌ಮೇ ಖಟಕ್ ರಹೇ, ಸೋಹೀ ಅಟಕ್ ರಹಾ ||

ದೇವರೂ ಹೌದು. ಈಗಿನ ಅರ್ಥದಲ್ಲಿ ಹೇಳಬೇಕಾದರೆ ಅದನ್ನು ದೇಶ ಎನ್ನಬಹುದು. ದೇಶ ಎಂದರೆ ಅದರಲ್ಲಿರುವ ಜನ. ಈ ಕಾಲದಲ್ಲಿ ಭೂಮಿಯೂ ಎಲ್ಲ ಜನರಿಗೂ ಸೇರಿಲ್ಲ ಎನ್ನುವುದು ನಿಜವಾದ ಮಾತು. ಆದರೆ ಈ ತಪ್ಪು ನಮಗೆ ತಿಳಿದ ಬೋಧನೆಯಿಂದ ಬಂದುದಲ್ಲ. ಬೋಧನೆ ಯಂತೆ ನಡೆಯದಿರುವ ನಾವೇ ಅದಕ್ಕೆ ಜವಾಬ್ದಾರರು.

ಹಿಂಸಾಮಾರ್ಗವನ್ನು ಅನುಸರಿಸದೆ ನಾವು ಯಾವ ದೇಶವನ್ನೇ ಆಗಲಿ, ರಷ್ಯವೂ ಸೇರಿಕೊಂಡು, ಮೇಲೆ ಹೇಳಿರುವ ಧ್ಯೇಯದ ಗುರಿಗೆ ಸಾಧ್ಯವಾದಷ್ಟೂ ಹತ್ತಿರ ತೆಗೆದುಕೊಂಡುಹೋಗಿರಬಹುದೆಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಹಿಂಸಾಮಾರ್ಗವನ್ನು ಬಿಟ್ಟಮೇಲೆ ಅದಕ್ಕೆ ಸರಿಯಾದ ಬದಲು ಅಸ್ತ್ರವು ಚರಕ ಮತ್ತು ಅದರಲ್ಲಿರುವ ತತ್ವಗಳ ಅನು ಸರಣೆ. ಜಮೀನು ಆಸ್ತಿಗಳು ಅದರಲ್ಲಿ ಯಾರು ಕೆಲಸಮಾಡುತ್ತಾರೋ ಅವರದು. ಕೆಲಸಗಾರರು ಈ ಸುಲಭವಾದ ವಿಷಯಗಳನ್ನು ಅರಿತಿಲ್ಲ. ಈ ವಿಷಯವು ಅವರಿಗೆ ತಿಳಿಯದಂತೆ ಇತರರು ವಿಸ್ತರಿಸುತ್ತಿದಾರೆ.

ಇನ್ನು ಭಾರತವು ಯಾವರೀತಿ ಈ ಕಡುಬಡತನಕ್ಕೆ ಬಂದಿತೆಂಬು ದನ್ನು ವಿಚಾರಿಸೋಣ. ಈಸ್ಟ್ ಇಂಡಿಯಾ ಕಂಪೆನಿಯು ಈ ದೇಶದ ಬಟ್ಟೆಯ ಕೈಗಾರಿಕೆಯನ್ನು ಹಾಳುಮಾಡಿತು. ಆಮೇಲೆ, ಎಲ್ಲ ಉಪಾಯ ಗಳಿಂದಲೂ ನಾವು ಲಾಂಕಷೈರ್ ಬಟ್ಟೆಗಳನ್ನೇ ಕೊಂಡುಕೊಳ್ಳುವಂತೆ ಆ ಕಂಪೆನಿಯು ಬಲವಂತಮಾಡಿತು. ಮನುಷ್ಯನಿಗೆ ಆಹಾರವನ್ನು ಬಿಟ್ಟರೆ ಅತ್ಯವಶ್ಯಕವಾದುದು ಬಟ್ಟೆ. ಈಗಲೂ ಹೊರಗಿನಿಂದ ಬರುವ ಆಮದು ವಸ್ತುಗಳಲ್ಲಿ ಇದು ಎಲ್ಲಕ್ಕಿಂತ ಹೆಚ್ಚು ಬೆಲೆಯದು. ಇದಿಷ್ಟು ನಮಗೆ ಚರಿತ್ರೆಯಿಂದ ತಿಳಿಯುವ ವಿಷಯ. ಕೋಟ್ಯಾವಧಿ ಜನರು ಇದರಿಂದ ನಿರುದ್ಯೋಗಿಗಳಾದರು. ಬೇರೆ ಯಾವ ಕೆಲಸವೂ ಅವರಿಗೆ ದೊರಕಲಿಲ್ಲ. ಅರಳೆಯ ಬೀಜ ಬಿಡಿಸುವುದು, ಹತ್ತಿ ಎಕ್ಕುವುದು, ನೂಲುವುದು, ನೇಯುವುದು ಈ ಕಸಬುಗಳೂ ನಾಶವಾದಮೇಲೆ, ಭಾರತದ ಹಳ್ಳಿಗಳ

ಇತರ ಸಣ್ಣ ಕೈಗಾರಿಕೆಗಳೂ ಹಾಳಾದುವೆಂದು ಹೇಳಬಹುದು. ಹೀಗೆ ಅನೇಕ ವರುಷಗಳ ನಿರುದ್ಯೋಗವು ನಮ್ಮ ಜನರನ್ನು ಸೋಮಾರಿಗಳಾಗಿ ಮಾಡಿದೆ. ಇದರಿಂದ ನಿರಾಸೆ ಉಂಟಾಗುತ್ತದೆ. ಹೊರದೇಶದವರ ಆಡಳಿತವು ನಮ್ಮ ಈ ದಿವಾಳಿತನವನ್ನು ದಿನೇ ದಿನೇ ಹೆಚ್ಚಿಸುತ್ತಿದ್ದರೂ, ಇದಕ್ಕೆ ನಾವೇ ಹೆಚ್ಚಿನ ಜವಾಬ್ದಾರರೆಂದು ಹೇಳಬೇಕು. ಒಂದು ತುತ್ತು ಅನ್ನಕ್ಕೋಸ್ಕರ ಈ ದೇಶದ ಆರ್ಥಿಕ ಬೆಳೆವಳಿಗೆಯನ್ನು ನಾಶಮಾಡಿ, ಜನರು ತಮ್ಮಲ್ಲಿಟ್ಟ ನಂಬಿಕೆಯನ್ನೂ ಆರ್ಥಿಕ ಸ್ವಾತಂತ್ರ್ಯವನ್ನೂ ಹೊರಗಿನವರಿಗೆ ಬಲಿಕೊಟ್ಟು ದುರುಪಯೋಗಿಸಿದ ಮಧ್ಯವರ್ಗದ ಜನರು, ಈಗಲಾದರೂ ತಮ್ಮ ತಪ್ಪನ್ನು ನೆನೆದು ಚರಕದ ಸಂದೇಶವನ್ನು ಹಳ್ಳಿ ಹಳ್ಳಿಗೂ ತಿಳಿಸಲಿ. ಹಳ್ಳಿಯವರ ಸೋಮಾರಿತನವನ್ನು ಹೋಗಲಾಡಿಸಿ ಚರಕದಿಂದ ನೂಲು ತೆಗೆಯುವಂತೆ ಉಪದೇಶಮಾಡಿದರೆ ಆ ಬಡವರ ಕಷ್ಟಗಳನ್ನು ನಾವು ಬಹಳಮಟ್ಟಿಗೆ ನಿವಾರಿಸಿದಂತಾಗುವುದು. ಕೆಲಸ ಮಾಡುವ ಉತ್ಸಾಹಕ್ಕೆ ಬದಲು ಸೋಮಾರಿತನವೂ, ಆಸೆಯ ಬದಲು ನಿರಾಸೆಯೂ ನನಗೆ ಉಂಟಾದರೆ ಅದರಷ್ಟು ಭೀಕರವಾದುದು ಮತ್ತೆ ಯಾವುದೂ ಇಲ್ಲ.

ಕಾಂಗ್ರೆಸ್ಸು ಅಧಿಕಾರವನ್ನು ತೆಗೆದುಕೊಂಡು ಸುಧಾರಣೆಗಳನ್ನು ನಡೆಸಬೇಕೆಂಬ ಮಾತು ಎಲ್ಲೆಲ್ಲೂ ಹರಡಿದೆ. ಎಲ್ಲರ ಮನಸ್ಸಿನಲ್ಲಿಯೂ ಆ ಭಾವನೆ ಇದೆ. ಅದು ನ್ಯಾಯವಾಗಿರಬಹುದು. ಆದರೆ ಅದರಿಂದ ನಾವು ಸ್ವಾತಂತ್ರ್ಯವನ್ನು ಸಾಧಿಸುವುದಕ್ಕಾಗುವುದಿಲ್ಲ. ಆ ಕಾರ್ಯಕ್ರಮವನ್ನು ಜಾರಿಗೆ ತರುವುದು ಅವಶ್ಯಕವಾದರೂ ಅದರಿಂದ ನಾವು ಹೆಚ್ಚಿಗೆ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ, ಸರ್ಕಾರದವರು ನಮ್ಮ ದೇಶದ ಏಳಿಗೆಗೆ ಅಡ್ಡಬರುವ ಆರ್ಡಿನೆನ್ಸು ರಾಜ್ಯಕ್ಕೂ ಜನರ ಬೆಂಬಲವುಂಟೆಂದು ಹೇಳಲು, ಆಗ ಅವಕಾಶವಿರುವುದಿಲ್ಲ. ಅದಕ್ಕೋಸ್ಕರವೇ ಓಟರುಗಳು ತಮ್ಮ ಒಪ್ಪಿಗೆಯನ್ನು ಕಾಂಗ್ರೆಸ್ ಪ್ರತಿ

ನಿಧಿಗಳಿಗೇ ಕೊಡಬೇಕೆನ್ನುವುದು. ಆ ಪ್ರತಿನಿಧಿಗಳು ಜನರಿಗೆ ಹಿತವಲ್ಲದ ಯಾವ ಕಾರ್ಯಕ್ರಮಕ್ಕೂ ತಮ್ಮ ಸಮ್ಮತಿ ಕೊಡುವುದಿಲ್ಲ. ಹಾಗೆ ಕೊಟ್ಟರೆ ಕಾಂಗ್ರೆಸ್‌ನ ಶಿಸ್ತಿಗೆ ಅವರು ಒಳಗಾಗುವರು. ಈ ಅಧಿಕಾರ ಸೂತ್ರ ವಹಿಸುವುದರಿಂದ ಶ್ರೀ ಸುಭಾಷಬಾಬು ಅಥವಾ ರಾಜಕೀಯ ಖೈದಿಗಳ ಬಿಡುಗಡೆಯಾಗಬಹುದು. ಆದರೆ ಅದು ರಾಜಕೀಯ ಅಥವಾ ಆರ್ಥಿಕ ಸ್ವಾತಂತ್ರ್ಯವಾಗುವುದಿಲ್ಲ.

ಇನ್ನೊಂದು ರೀತಿಯಲ್ಲಿ ಈ ವಿಷಯವನ್ನು ನೋಡೋಣ. ಆರಿಸಿದ ಕೆಲವು ಜನ ಸುಮಾರು 1500 ಎನ್ನಿ, ಹೆಂಗಸರು ಮತ್ತು ಗಂಡಸರು ಮಾತ್ರ ಈ ಸಭೆಗಳಿಗೆ ಚುನಾಯಿತರಾಗಬಹುದು. ಇಲ್ಲಿ ನೆರೆದಿರುವವರಲ್ಲಿ ಎಷ್ಟು ಜನ ಆ ರೀತಿ ಆರಿಸಲ್ಪಡುವರು? ಸದ್ಯದಲ್ಲಿ ಎಲ್ಲೋ 3½ ಕೋಟಿ ಮಂದಿಗೆ ಮಾತ್ರ ಆ 1500 ಜನರನ್ನು ಚುನಾಯಿಸುವ ಹಕ್ಕುಂಟು. ಉಳಿದ 31½ ಕೋಟಿ ಜನರೋ? ನಾವು ಪಡೆಯಬೇಕಾದ ಸ್ವರಾಜ್ಯದಲ್ಲಿ ಈ 31½ ಕೋಟಿ ಜನರೇ ಯಜಮಾನರು. ಚುನಾಯಿಸಲು ಅಧಿಕಾರವುಳ್ಳ 3½ ಕೋಟಿ ಜನರು ಅವರ ಸೇವಕರು. ಈ 3½ ಕೋಟಿ ಜನರು ಚುನಾಯಿತರಾದ 1500 ಜನರ ಯಜಮಾನರು. ಅವರಲ್ಲಿ ಜನರು ಇಟ್ಟಿರುವ ನಂಬಿಕೆಗೆ ಸರಿಯಾಗಿ ಅವರು ನಡೆದುಕೊಳ್ಳಬೇಕಾದರೆ ಈ 1500 ಜನರು ಎಲ್ಲರ ನಿಜವಾದ ಸೇವಕರಾಗಬೇಕು.

ತಮ್ಮ ಸಲುವಾಗಿ ಮತ್ತು ತಮ್ಮ ದೇಶದ ಸಲುವಾಗಿ ಈ 31½ ಕೋಟಿ ಜನರು ಅವರವರ ಕೆಲಸಗಳನ್ನು ನಿರ್ವಹಿಸಬೇಕು. ಈ ಜನರಲ್ಲಿ ಒಬ್ಬೊಬ್ಬನೂ ದೇಶದ ಅಂಗದಂತಿದ್ದಾನೆ. ಇವರೆಲ್ಲ ಸೋಮಾರಿಗಳಾಗಿ ಸ್ವರಾಜ್ಯವೆಂದರೇನು, ಅದನ್ನು ಸಾಧಿಸುವುದು ಹೇಗೆ ಎಂಬ ವಿಷಯಗಳನ್ನು ತಿಳಿದುಕೊಳ್ಳದಿದ್ದರೆ ಇವರೇ ಬುದ್ಧಿವಂತರಾದ 1500 ಜನರ ಗುಲಾಮರಾಗುತ್ತಾರೆ. ಚುನಾಯಿಸುವ ಹಕ್ಕಿರುವ 3½ ಕೋಟಿ ಜನರೂ

ಮೇಲಿನ 31½ ಕೋಟಿ ಜನರ ಗುಂಪಿಗೆ ಸೇರಿರುವರೆಂದೇ ನನ್ನ ಅಭಿಪ್ರಾಯ. ಏಕೆಂದರೆ 3½ ಕೋಟಿ ಜನರು ಬುದ್ಧಿವಂತರೂ ಒಳ್ಳೆಯ ಕೆಲಸಗಾರರೂ ಆಗದಿದ್ದರೆ ಅಷ್ಟುಜನರೂ 1500 ಜನ ಆಟಗಾರರ ಕೈಗೊಂಬೆಗಳಾಗುತ್ತಾರೆ. ಮೇಲೆ ಹೇಳಿರುವ ಮಾತು ಕಾಂಗ್ರೆಸ್‌ನವರಿಗಾಗಲಿ ಅಥವಾ ಬೇರೆ ಪಂಗಡದವರಿಗಾಗಲಿ ಎಲ್ಲರಿಗೂ ಅನ್ವಯಿಸತಕ್ಕದ್ದೇ. ಚುನಾಯಿಸುವ ಹಕ್ಕಿರುವವರು ಪ್ರತಿ ಮೂರು ವರ್ಷಕ್ಕೋ ಅಥವಾ ಇನ್ನಾವಾಗಲೋ ವೋಟು ಕೊಡುವ ಸಮಯದಲ್ಲಿ ಎಚ್ಚರವಾಗಿದ್ದು ಮಿಕ್ಕ ಕಾಲವೆಲ್ಲ ನಿದ್ದೆಹೋದರೆ ಸೇವಕರಾಗಿದ್ದ ಜನರೆಲ್ಲ ಯಜಮಾನರಾಗುವರು.

ಇಂಥ ಅಪಾಯವು ಬರದಂತೆ ನೋಡಿಕೊಳ್ಳಬೇಕಾದರೆ ನನಗೆ ತೋರುವ ಉಪಾಯವು ಒಂದೇ. ಮೂವತ್ತೈದು ಕೋಟಿ ಜನರೂ ಬುದ್ಧಿವಂತರಾಗಿ ಒಳ್ಳೆಯ ಕೆಲಸಮಾಡುವ ಶಕ್ತಿಯುಳ್ಳವರಾದರೆ ಮಾತ್ರ ಆಗ ಅದು ಸಾಧ್ಯ. ಹೀಗಾಗುವುದು ಚರಕ ಮತ್ತು ಇತರ ಗ್ರಾಮೋದ್ಯೋಗ ಕೈಗಾರಿಕೆಗಳಿಂದಲೇ. ಇಂಥ ಕೈಗಾರಿಕೆಗಳನ್ನು ಅವಲಂಬಿಸಿಕೊಂಡು ಅವರು ಬುದ್ಧಿವಂತರಾಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ನನ್ನ ಅನುಭವದಿಂದ ಹೇಳುವ ಮಾತಿದು. ಈ ಬಗೆಯ ಕಾರ್ಯಕ್ರಮವು ವಯಸ್ಕರಿಗೆ ಆವಶ್ಯಕವಾದ ವಿದ್ಯಾಭ್ಯಾಸವನ್ನು ಕಲಿಸುತ್ತದೆ. ಕೆಲಸಗಾರನು ತಾನು ಆರಿಸಿರುವ ಹಳ್ಳಿಯಲ್ಲಿ ಒಂದು ಉದ್ಯೋಗವನ್ನು ಪ್ರಾರಂಭಿಸಬೇಕಾದರೆ ಅವನಲ್ಲಿ ಶಾಂತಿ, ನೀತಿಪೂರ್ಣವಾದ ಒಳ್ಳೆಯ ನಡತೆ, ತನ್ನ ಉದ್ಯೋಗಕ್ಕೆ ಸಂಬಂಧಪಟ್ಟ ಪೂರ್ಣವಾದ ತಿಳಿವಳಿಕೆ ಇವುಗಳೆಲ್ಲ ಆವಶ್ಯಕ.

ಇಂತಹ ಒಂದು ಕಾರ್ಯಕ್ರಮದಲ್ಲಿ ಚರಕವು ಮುಖ್ಯಸ್ಥಾನವನ್ನು ಪಡೆಯುತ್ತದೆ. ಈ ಗ್ರಾಮೋದ್ಯೋಗ ಕಾರ್ಯಕ್ರಮವನ್ನು ನಾವು ಒಂದು ಗ್ರಹಗಳ ಗುಂಪಿಗೆ ಹೋಲಿಸಿದರೆ ಚರಕವು ಆ ಗುಂಪಿನ ಸೂರ್ಯ

ನಂತೆ. ಇತರ ಕೈಗಾರಿಕೆಗಳೆಲ್ಲ ಒಂದು ಗೊತ್ತಾದ ರೀತಿಯಲ್ಲಿ ಆ ಸೂರ್ಯನ ಸುತ್ತ ತಿರುಗುತ್ತಿರುವ ಗ್ರಹಗಳಂತೆ. ಈಸ್ಟ್ ಇಂಡಿಯಾ ಕಂಪೆನಿಯಿಂದ ಈ ಸೂರ್ಯನು ಬೆಳಕುಕೊಡುವ ಶಕ್ತಿಯನ್ನು ಕಳೆದು ಕೊಂಡಿತು. ಗ್ರಹಗಳೂ ಕೂಡ ತಮ್ಮ ಶಕ್ತಿಯನ್ನೆಲ್ಲ ಕಳೆದುಕೊಂಡು ನಮ್ಮ ಕಣ್ಣಿಗೆ ಕಾಣದಂತಾದುವು. ಸೂರ್ಯನನ್ನು ಹಿಂದಿನ ಸ್ಥಿತಿಯಲ್ಲಿಯೆ ಇರಿಸಿದರೆ ಗ್ರಹಗಳೂ ಕೂಡ ಸೂರ್ಯನ ಶಕ್ತಿಗೆ ಅನುಸಾರವಾಗಿ ತಮ್ಮ ಚಲನೆಯ ಶಕ್ತಿಯನ್ನು ಹೊಂದುವುವು.

ಚರಕದ ತತ್ವ ಮತ್ತು ಅದು ಸಾರುವ ಸಂದೇಶವು ಈಗ ನಿಮಗೆಲ್ಲ ಅರ್ಥವಾಗಿರಬಹುದು. 1920 ರಲ್ಲಿ ನಿರ್ಧರಿಸಿದ ಕಾರ್ಯಕ್ರಮವನ್ನು ಕಾಂಗ್ರೆಸ್ಸು ನಿಜವಾಗಿ ಮನಸ್ಸಿಟ್ಟು ಆಚರಣೆಗೆ ತಂದರೆ ಸ್ವರಾಜ್ಯವು ಒಂದು ವರ್ಷದಲ್ಲಿ ಸಾಧ್ಯ ಎಂದು ನಾನು ಹೇಳಿದೆ. ಈ ಕಾರ್ಯಕ್ರಮ ದಲ್ಲಿ ಖಾದಿ, ಕೋಮುವಾರು ಒಗ್ಗಟ್ಟು ಮಧ್ಯಪಾನನಿರೋಧ ಮತ್ತು ಅಸ್ಪೃಶ್ಯತಾನಿವಾರಣೆ ಈ ನಾಲ್ಕೂ ಸೇರಿದ್ದುವು. ಆ ರೀತಿ ನಾನು ಹೇಳಿದುದಕ್ಕೆ ಪಶ್ಚಾತ್ತಾಪವಾಗಲಿ ಅಥವಾ ಅವಮಾನವಾಗಲಿ ನನಗೆ ಉಂಟಾಗಿಲ್ಲ. ಈ ದಿನವೂ ನಿಮ್ಮ ಮುಂದೆ ಅದೇ ಮಾತನ್ನೇ ನಾನು ಪುನಃ ಹೇಳುತ್ತೇನೆ. ಮೇಲೆ ಹೇಳಿದ ನಾಲ್ಕು ರಚನಾಕಾರ್ಯಕ್ರಮ ಗಳನ್ನೂ ಪೂರ್ಣವಾಗಿ ನಡೆಸಿದರೆ ಸ್ವರಾಜ್ಯವು ಕೇಳಿದ ಕೂಡಲೆ ನಿಮ್ಮ ಕೈಸೇರುವುದು. ಯಾಕೆಂದರೆ ಆಗ ನೀವು ಸ್ವರಾಜ್ಯವನ್ನು ಅನುಭವಿಸುವ ಶಕ್ತಿಯನ್ನು ಪಡೆಯುತ್ತೀರಿ. ನಿಮ್ಮ ಮನಸ್ಸಿನಲ್ಲಿ ಅಥವಾ ನಿಮ್ಮ ಕೆಲಸ ಗಳಲ್ಲಿ ಈ ದಿನ ಚರಕಕ್ಕೆ ಯಾವ ಸ್ಥಾನವನ್ನು ಕೊಟ್ಟಿರುವಿರಿ ಎಂಬು ದನ್ನು ಸ್ವಲ್ಪ ಯೋಚಿಸಿ. ಬೊಂಬಾಯಿಯಲ್ಲಿ ನಡೆದ ಹಿಂದೂ ಮುಸ ಲ್ಮಾನರ ಕೊಲೆಗಳು ಕೋಮುವಾರು ಒಗ್ಗಟ್ಟಿನ ಗುರುತೇ ? ಪಾನನಿರೋ ಧವು ಪೂರ್ಣವಾಗಿ ನಡೆದಿದೆಯೆ? ಹಿಂದುಗಳು ಬೇರುಸಹಿತ ಅಸ್ಪೃಶ್ಯತೆ ಯನ್ನು ನಿವಾರಿಸಿರುವರೆ? ಒಂದು ಬಾನಕ್ಕಿಯು ಬೇಸಿಗೆಯ ಗುರುತಲ್ಲ.

ಟ್ರಾವನ್‌ಕೂರಿನ ರಾಜಾಜ್ಞೆಯು ಅಸ್ಪೃಶ್ಯತಾ ನಿವಾರಣೆಯ ಮೊದಲನೆಯ ಮೆಟ್ಟಿಲಾಗಿರಬಹುದು. ಆದರೆ ಅದೇ ಕೊನೆಯಲ್ಲ. ಹರಿಜನರ ಅಸ್ಪೃಶ್ಯತೆಯನ್ನು ನಿವಾರಿಸಿ ಮುಸಲ್ಮಾನರು ಅಥವಾ ಇತರರನ್ನು ಹರಿಜನರಂತೆ ಕಂಡರೆ ನಾವು ಅಸ್ಪೃಶ್ಯತೆಯನ್ನು ನಿವಾರಿಸಿದಂತಾಗುವುದಿಲ್ಲ. 'ಎಲ್ಲ ಭೂಮಿಯೂ ದೇವರಿಗೆ ಸೇರಿದ್ದು' ಎಂಬ ಮಾತಿಗೆ ಬಹಳ ಗೂಢವಾದ ಅರ್ಥವಿದೆ. ಭೂಮಿಯಂತೆ ಅದರಲ್ಲಿರುವ ನಾವೂ ದೇವರಿಗೆ ಸೇರಿದವರೆ. ಆದ್ದರಿಂದ ನಾವು ಎಲ್ಲರನ್ನೂ ಸಮನಾಗಿ ಕಾಣಬೇಕು. ನಮ್ಮನಮ್ಮಲ್ಲಿ ಪ್ರತಿಬಂಧಕದ ಗೋಡೆಗಳನ್ನು ಏಳಿಸಬಾರದು.

ನಮ್ಮ ದಿನಚರಿಯಲ್ಲಿ ಅಹಿಂಸೆಯನ್ನು ಆಚರಿಸುವುದೆಂದರೆ ಈ ಮಾರ್ಗದಿಂದ; ಈ ಕಾರ್ಯಕ್ರಮವನ್ನು ನಾವು ನಡೆಸಿದರೆ ಕಾನೂನು ಭಂಗ ಚಳುವಳಿಯನ್ನು ಪ್ರಾರಂಭಿಸುವ ಅಗತ್ಯವಿಲ್ಲ. ಹಿಂಸೆಗಂತೂ ಇಲ್ಲಿ ಅವಕಾಶವೇ ಇರುವುದಿಲ್ಲ. ಮುವತ್ತೈದು ಕೋಟಿ ಜನರು ಒಬ್ಬ ಮನುಷ್ಯನಂತೆ ಒಗ್ಗಟ್ಟಾಗಿ ತಮ್ಮ ಶಕ್ತಿಯನ್ನರಿತ ಮೇಲೆ ಈ ದೇಶದಲ್ಲಿರುವ 70,000 ಇಂಗ್ಲೀಷರನ್ನು ಹಿಂಸಿಸುವುದೆಂದರೆ ನಾವೇ ಅವಮಾನದಿಂದ ನಾಚಿಕೊಳ್ಳಬೇಕಾಗುತ್ತದೆ. ಇಂಗ್ಲೀಷರು ನಾಶಮಾಡುವುದರಲ್ಲಿ ಎಷ್ಟೇ ಶಕ್ತರಾಗಿರಲಿ; ವಿಷವಾಯುವನ್ನು ಉಪಯೋಗಿಸಿ ಅನೇಕ ಲಕ್ಷ ಜನರನ್ನು ಕ್ಷಣದಲ್ಲಿ ಕೊಲ್ಲುವ ಶಕ್ತಿ ಅವರಿಗೆ ಇರಲಿ. ಮೇಲೆ ಹೇಳಿದ ಮಾತಿನ ಸತ್ಯತೆಯಲ್ಲಿ ಅದು ಮುಖ್ಯವಾಗುವುದಿಲ್ಲ. ಚರಕದ ನಿಜವಾದ ಶಕ್ತಿಯನ್ನು ನಾವು ತಿಳಿದರೆ ಅದು ನಮ್ಮನ್ನು ಈಗಿನ ದಾರಿದ್ರ್ಯದ ಕಷ್ಟದಿಂದ ಪಾರುಮಾಡುವುದು. ಅಷ್ಟೇಅಲ್ಲ. ಸ್ವರಾಜ್ಯವನ್ನು ಸಂಪಾದಿಸಲು ಅಹಿಂಸಾಮಾರ್ಗದಷ್ಟು ಸುಲಭವಾದ ಮತ್ತು ಅಪಾಯವಿಲ್ಲದ ಮಾರ್ಗವು ಬೇರೆ ಯಾವುದೂ ಇಲ್ಲ ಎಂಬುದನ್ನು ಅದು ನಮಗೆ ತೋರಿಸುವುದು. ಈ ಮಾರ್ಗದಿಂದ ಜಯವು ತಡವಾಗಿ ಕಂಡರೂ ದಿನ ಕಳೆ

ದಂತೆ ಇದರಷ್ಟು ಹತ್ತಿರದ ದಾರಿ ಬೇರೆ ಯಾವುದೂ ಇಲ್ಲ ಎಂದು ನಮಗೆ ಗೋಚರವಾಗುವುದು.

ಜವಹರಲಾಲರು ಈದಿನ ಕಾರಾಗೃಹದ ಹೊರಗಡೆ ಇರುವುದು ಸೆರೆಮನೆಯ ಹೆದರಿಕೆಗಾಗಿ ಅಲ್ಲ. ನಗುನಗುತ್ತಾ ಸೆರೆಮನೆ ಹೋಗುವುದಕ್ಕಾಗಲೀ ಗಲ್ಲನ್ನೇರುವುದಕ್ಕಾಗಲೀ ಅವರು ಸಿದ್ಧರಿದ್ದಾರೆ. ಇಂತಹ ಕಷ್ಟಗಳನ್ನು ಅನುಭವಿಸುವುದರ ಫಲವಲ್ಲಿ ನನಗಿರುವ ಶಕ್ತಿ ಅಥವಾ ನಂಬಿಕೆಯು ಕಮ್ಮಿಯಾಗಿಲ್ಲ. ಆದರೆ ನನಗೆ ತೋರುವ ಹಾಗೆ ಅಂತಹ ಕೆಲಸಗಳಿಗೆ ಈಗ ಯಾವ ಕಾರಣವೂ ಇಲ್ಲ. ಕಾಂಗ್ರೆಸ್ಸಿನ ರಚನಾಕ್ರಮವನ್ನು ಪೂರ್ಣ ಮನಸ್ಸಿನಿಂದ ನಂಬಿಕೆಯಿಟ್ಟು ನಡೆಸಿದರೆ ಇಂಥ ಕಷ್ಟಗಳನ್ನೆಲ್ಲ ನಾವು ತಪ್ಪಿಸಬಹುದೆಂದು ನನ್ನ ಅಭಿಪ್ರಾಯ. ನೀವು ಶಕ್ತರಾಗಿದ್ದರೆ ಇಂಗ್ಲೀಷಿನವರೊಂದಿಗೆ ಹೋರಾಟವನ್ನು ಪ್ರಾರಂಭಿಸಬೇಕಾಗಿಲ್ಲ. ಆಗ ಲಾರ್ಡ್ ಲಿನ್‌ಲಿತ್‌ಗೋರವರೇ ನಮ್ಮ ಹತ್ತಿರ ಬಂದು ನಾವು ಆಚರಿಸುತ್ತಿರುವ ಸತ್ಯ ಅಹಿಂಸೆಗಳಲ್ಲಿ ಶಕ್ತಿಯಿಲ್ಲ ಎಂದು ತಾವು ತಿಳಿದುದು ತಪ್ಪೆಂದು ಒಪ್ಪಿಕೊಳ್ಳುತ್ತಾರೆ. ಅಷ್ಟೇ ಅಲ್ಲ ತಮ್ಮ ದೇಶವನ್ನು ನಮ್ಮ ಇಷ್ಟದಂತೆ ಒಪ್ಪಿಸುವ ಭಾರವನ್ನು ಅವರು ವಹಿಸಿಕೊಳ್ಳುತ್ತಾರೆ. ಅವರು ಆ ರೀತಿ ಮಾಡಲಿ, ಬಿಡಲಿ, ನಾನಂತೂ ಆ ಧ್ಯೇಯಕ್ಕಾಗಿಯೇ ಕೆಲಸ ಮಾಡುತ್ತಿದ್ದೇನೆ. ಬೇರೆ ಯಾವ ಉದ್ದೇಶವೂ ನನಗೆ ಇಲ್ಲ. 'ಎಲ್ಲ ದೇವರಿಗೆ ಸೇರಿದೆ' 'ಸಭಿ ಭೋಮ್ ಗೋಪಾಲಕಿ' 2-1-37.

೨೫. ವಾರ್ಷಿಕ ಶಿಕ್ಷಣಶಾಲೆ

(10–2–1938 ರಲ್ಲಿ ಹರಿಪುರ ಪ್ರದರ್ಶನದಲ್ಲಿ ಮಾಡಿದ ಭಾಷಣ.)

ಲಕ್ನೋದಲ್ಲಿ ಪ್ರಾರಂಭವಾದ ಈ ಬಗೆಯ ಮೊದಲನೆಯ ಪ್ರದರ್ಶನದಲ್ಲಿ, ಪ್ರದರ್ಶನಗಳೆಲ್ಲ ಹೊಸ ಹೊಸ ವಿಷಯಗಳನ್ನು ಕಲಿಸಿ ಕೊಡುವ ಪಾಠಶಾಲೆಗಳಂತಿರಬೇಕೆಂದು ನಾನು ಹೇಳಿದೆ. ಅಂದಿನಿಂದಲೂ ಆ ಗುರಿಯನ್ನು ಸೇರಲು ಪ್ರಯತ್ನಿಸಿ ನಾವು ಎಷ್ಟೋ ಮುಂದುವರಿದಿದ್ದೇವೆ. ಒಳಗಡೆ ಎಲ್ಲವನ್ನೂ ನೋಡಿ ಬಂದು ಈಗ ನಾನು ತೆರೆಯುತ್ತಿರುವ ಈ ಪ್ರದರ್ಶನವು ಅಂತಹ ವಾರ್ಷಿಕ ಶಿಕ್ಷಣಶಾಲೆಯಾಗಿದೆ. ಹಿಂದಿನ ಕಾಲದ ಪ್ರದರ್ಶನಗಳಂತೆ ಇಲ್ಲಿಯದು ವಿರಾಮುಕ್ಕೋಸ್ಕರ ಮಾತ್ರ ಏರ್ಪಡಿಸಿದುದಲ್ಲ. ಈ ಒಂದೆರಡು ವಾರಗಳಲ್ಲಿ ಇಲ್ಲಿಗೆ ಬರುವ ಲಕ್ಷಗಟ್ಟಲೆ ಜನರಿಗೆಲ್ಲ ಈ ಪ್ರದರ್ಶನವು ಹೊಸ ವಿಷಯಗಳನ್ನು ತಿಳಿಸುವ ಕೇಂದ್ರವಾಗಿದೆ. ಪ್ರದರ್ಶನವನ್ನು ನೋಡಲು ಬರುವ ಬಡವನಿಗೆ ಇಲ್ಲಿ ಮುಂದಿನ ವರ್ಷದ ಒಂದು ರೀತಿಯ ಆಹಾರ ದೊರಕಿದಂತೆ ಆಗುತ್ತದೆ. ದಿನಕ್ಕೆ ಎಂಟುಗಂಟೆಯಂತೆ ಕೆಲಸಮಾಡಿದರೆ ಮುಂದಿನ ವರ್ಷ ತನ್ನ ಮತ್ತು ತನ್ನ ಸಂಸಾರದ ಜೀವನವನ್ನು ಸಾಗಿಸಬಲ್ಲ ಒಂದು ಉದ್ಯೋಗವನ್ನು ಈ ಪ್ರದರ್ಶನವು ಅವನಿಗೆ ಒದಗಿಸುತ್ತದೆ. ಎಷ್ಟೇ ಅವಿದ್ಯಾವಂತರಾದ ಹೆಂಗಸರಾಗಲಿ ಅಥವಾ ಗಂಡಸರಾಗಲೀ ತಮ್ಮ ಕೈಕಾಲುಗಳ ಸಹಾಯದಿಂದ ಜೀವನವನ್ನು ಸಂಪಾದಿಸಬಲ್ಲ ಶಿಕ್ಷಣವನ್ನು ಈ ಪ್ರದರ್ಶನವು ಒದಗಿಸುತ್ತದೆ.

ಈದಿನ ಬೆಳಿಗ್ಗೆ, ನಾನು ಒಂದುಗಂಟೆ ಪ್ರದರ್ಶನವನ್ನೆಲ್ಲ ನೋಡಿದೆನು. ಅಖಿಲಭಾರತ ಚರಕಸಂಘದ ಅಧ್ಯಕ್ಷನೂ ಅಖಿಲ ಗ್ರಾಮೋದ್ಯೋಗಸಂಘದ ಮಾರ್ಗದರ್ಶಿಯೂ ಆದ ನನಗೆ ಇಲ್ಲಿ ತಿಳಿಯಲು ಏನೂ ಹೊಸದು ಇಲ್ಲವೆಂದು ಒಂದು ಕ್ಷಣವೂ ನೀವು ಯೋಚಿಸಬೇಡಿ. ನೀವು

ಹಾಗೆ ಯೋಚಿಸಿದರೂ ನಾನು ಅದನ್ನು ನಂಬುವಷ್ಟು ದಡ್ಡನಲ್ಲ. ಒಂದು ಗಂಟೆಯೇಕೆ? ಅನೇಕ ಗಂಟೆಗಳಾದರೂ ಇಲ್ಲಿ ಇದ್ದು ಪ್ರತಿಕ್ಷಣ ಏನಾದರೂ ಹೊಸದನ್ನು ಕಲಿಯಬೇಕೆಂಬ ಅಪೇಕ್ಷೆ ನನಗೆ ಇದೆ. ಇಲ್ಲಿರುವ ಯಾವುದಾದರೊಂದು ಉದ್ಯೋಗವನ್ನು ಆರಿಸಿ ನನ್ನ ಜೀವನ ನಡೆಸಲಾರೆನೆಂದು ನಾನು ಒಪ್ಪುತ್ತೇನೆ. ನನ್ನ ಅನ್ನವನ್ನು ಈಗ ನಾನು ಬೇಡುತ್ತಿದ್ದೇನೆ. ಬಹುಶಃ ಇದು ನನ್ನಂಥವನಿಗೆ ತಪ್ಪಿದ್ದಲ್ಲ. ಆದರೆ ಆರೋಗ್ಯವಂತನಾದ ಹೆಂಗಸಾಗಲಿ ಗಂಡಸಾಗಲಿ ಇಲ್ಲಿರುವ ಉದ್ಯೋಗಗಳಲ್ಲಿ ಒಂದನ್ನು ಆರಿಸಿ ಅದರಿಂದ ತಮ್ಮ ಜೀವನ ಸಾಗಿಸಬಹುದೆಂದು ನಾನು ಪೂರ್ಣವಾಗಿ ನಂಬಿದ್ದೇನೆ.

ನಾನು ಎಷ್ಟೋಸಾರಿ ಹೇಳಿದ್ದೇನೆ; ಭಾರತದ ಏಳುಲಕ್ಷಹಳ್ಳಿಗಳು ಜೀವಿಸುವುದೂ, ನಾಗರೀಕತೆಯ ತಳಹದಿಯಾದ ಶಾಂತಿಯು ಅಲ್ಲಿ ನಮಗೆ ದೊರಕುವುದೂ, ಚರಕವನ್ನು ಎಲ್ಲಾ ಉದ್ಯೋಗಗಳ ಮುಖ್ಯಾಂಗವಾಗಿ ಮಾಡುವುದರಿಂದಲೇ ಸಾಧ್ಯ ಎಂದು. ಆದುದರಿಂದಲೇ ಚರಕದಲ್ಲಿ ನನ್ನ ನಂಬಿಕೆಯು ದಿನೇ ದಿನೇ ಹೆಚ್ಚುತ್ತಿದೆ. ಪ್ರತಿಯೊಂದು ಉದ್ಯೋಗವೂ ಒಂದೊಂದು ಗ್ರಹವಾದರೆ, ಅವಕ್ಕೆಲ್ಲ ಬೆಳಕನ್ನು ಕೊಡುವ ಸೂರ್ಯನು ಚರಕವೆಂದು ನನಗೆ ಸ್ಪಷ್ಟವಾಗಿದೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ವಿಶಾಲವಾದ ಸೂರ್ಯಮಾಲೆಯಲ್ಲಿ ನಾವು ಹೊಸ ಹೊಸ ಗ್ರಹಗಳನ್ನು ಕಂಡುಹಿಡಿಯುತ್ತಿರುವಂತೆಯೇ ಹೊಸ ಹೊಸ ಉದ್ಯೋಗಗಳನ್ನೂ ದಿನ ಕಳೆದಂತೆ ನಾವು ಕಂಡುಹಿಡಿಯಬೇಕು. ಹೀಗಾಗಬೇಕಾದರೆ ನಿಜವಾಗಿಯೂ ನಾವು ಚರಕವನ್ನು ಜೀವಕೊಡುವ ಸೂರ್ಯನಂತೆ ಮಾಡಬೇಕು. 1921 ರಲ್ಲಿ ಬರ್ಡೋಲಿಯಲ್ಲಿ ಸತ್ಯಾಗ್ರಹ ಪ್ರಾರಂಭಿಸುವಾಗ ಪ್ರತಿಯೊಂದು ಮನೆಯಲ್ಲೂ ಒಂದೊಂದು ಚರಕವಿರಬೇಕೆಂದು ನಾನು ಕಟ್ಟುಮಾಡಿದೆ. ಆರೀತಿ ನಡೆಯಲಿಲ್ಲ ಎಂಬುದು ನನಗೆ ಗೊತ್ತಿದ್ದರೂ, ಗತಿಸಿದ ವಿಠಲಭಾಯಿ ಪಟೇಲರ ಆಗ್ರಹಕ್ಕೆ

ಒಳಗಾಗಿ ಸತ್ಯಾಗ್ರಹವನ್ನು ಪ್ರಾರಂಭಿಸಿದೆ. ಮುಂದೆ ಏನಾಯಿತೆಂಬುದು ನಿಮಗೆಲ್ಲ ಚೆನ್ನಾಗಿ ಗೊತ್ತು. ಈಗಲೂ ಬರ್ಡೋಲಿಯ ಜನರಿಗೆ ನಾನು ಹೇಳುತ್ತೇನೆ. ಪ್ರತಿಯೊಂದು ಮನೆಯಲ್ಲೂ ಒಂದೊಂದು ಚರಕವಿಡಿರೆಂದು. ಚರಕವು ನಿಮ್ಮ ಉತ್ಪತ್ತಿಯನ್ನು ಹೆಚ್ಚಿಸಿ ನಿಮ್ಮನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತದೆ.

---

೨೬. ಖಾದಿಯ ಗುಟ್ಟು (ತಿರುಳು)

[ಫೆಬ್ರವರಿ 16 ನೇ ತಾರೀಖು ಬೆಳಿಗ್ಗೆ ಗಾಂಧಿಜಿಯವರು ಪ್ರದರ್ಶನದಲ್ಲಿ ತಮ್ಮ ಅಂತರಂಗ ಶೋಧನೆಯ ಒಳನೋಟದ ಮನೋಭಾವದಿಂದ ಭಾಷಣ ಮಾಡಿದರು. ಫೈಸ್‌ಪುರದಲ್ಲಿ ಡಿಸೆಂಬರ್ 25 ನೇ ತಾರೀಖಿನ ದಿನ ಆತ್ಮಸಾಧನೆಯ ಮಟ್ಟದಲ್ಲಿ ಮಾಡಿದ ಭಾಷಣದ ಕಾವು ಈ ಭಾಷಣ ಮಾಡಿದಾಗ ಇರಲಿಲ್ಲ. ಆದರೆ ಇದರಲ್ಲಿ ಅದೇ ಗಾಂಭೀರ್ಯ, ಅದೇ ಆತ್ಮದ ಬೆಳಕು, ಎಂ. ಡಿ.]

ಸಂಯುಕ್ತ ಪ್ರಾಂತಗಳ ಮತ್ತು ಬೀಹಾರಿನ ಮಂತ್ರಿಗಳು ತಮ್ಮ ಪದವಿಗಳಿಗೆ ರಾಜೀನಾಮೆಯಿತ್ತು ಇಲ್ಲಿಗೆ ಬಂದಿದ್ದಾರೆ. ಅದರಲ್ಲಿ ವಿಶೇಷವೇನೂ ಇಲ್ಲ. ಸುಧಾರಣೆಗಳು ಬರಿಯ ಮೋಸದ ಥಳುಕೆಂಬುದನ್ನು ಚೆನ್ನಾಗಿ ಅರಿತೇ ಅವರು ಅಧಿಕಾರವನ್ನು ಸ್ವೀಕರಿಸಿದರು. ಇಂದು ಬೀಹಾರು ಮತ್ತು ಸಂಯುಕ್ತ ಪ್ರಾಂತಗಳಲ್ಲಿ ನಡೆದ ಘಟನೆ ನಾಳೆ ಬೊಂಬಾಯಿಯಲ್ಲಿ ನಡೆಯಬಹುದು. ಮಾರನೆಯ ದಿನ ಮದ್ರಾಸಿನಲ್ಲಿ ಆಗಬಹುದು. ಆದರೆ ಈ ದಿವಸ ಆ ಎರಡು ಪ್ರಾಂತಗಳಲ್ಲಿ ಯಾಕೆ ಹಾಗಾಯಿತೆಂಬುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಮಂತ್ರಿಯಾದರೆ ಖೈದಿಗಳನ್ನು—ಅವರ ಸಂಖ್ಯೆ ಮೂರಲ್ಲ ಮೂವತ್ತಿರಲಿ—

ಬಿಡುಗಡೆ ಮಾಡುವ ಅಧಿಕಾರ ನನಗುಂಟು. ಈ ವಿಚಾರದಲ್ಲಿ ಮಧ್ಯೆ ಪ್ರವೇಶಮಾಡಲು ಗವರ್ನರಿಗೆ ಏನು ಅಧಿಕಾರ? ಹೆಚ್ಚು ಜನರ ಬೆಂಬಲ ನನಗಿರುವುದರಿಂದ ನಾನು ಮಂತ್ರಿಯಾಗಿದ್ದೇನೆ. ನಾನು ಆ ಅಧಿಕಾರ ದಲ್ಲಿರುವವರೆಗೂ ಖೈದಿಗಳನ್ನು ಬಿಡುಗಡೆಮಾಡುವ ವಿಷಯದಲ್ಲಿ ನನ್ನನ್ನು ಯಾರೂ ಪ್ರಶ್ನೆಮಾಡುವಹಾಗಿಲ್ಲ. ಆದರೆ ಎರಡು ಪ್ರಾಂತಗಳ ಗವರ್ನರು ಗಳು ಮಧ್ಯೆ ಬಾಯಿ ಹಾಕಿದ್ದಾರೆ. ಅದು ಯಾಕೆಂಬುದನ್ನು ನಿಮಗೆ ಹೇಳುತ್ತೇನೆ. ಸಮತಾವಾದಿಗಳಾದ ನನ್ನ ಸ್ನೇಹಿತರು ಏನೇ ಹೇಳಲಿ ನನ್ನ ನಂಬಿಕೆ ಇದು; ನಾವು ಖಾದಿಯ ತತ್ವವನ್ನು ಚೆನ್ನಾಗಿ ಗ್ರಹಿಸದಿರು ವುದರಿಂದ, ಗವರ್ನರುಗಳು ಮಧ್ಯೆ ಬಾಯಿಹಾಕುವ ಧೈರ್ಯಮಾಡಿದರು.

ಖಾದಿಯು ಅಹಿಂಸೆಯ ತಳಹದಿ ಮತ್ತು ಪ್ರತಿಬಿಂಬ. ನಿಜವಾಗಿ ಖಾದಿಯನ್ನು ಧರಿಸುವವನು ಒಂದು ಸುಳ್ಳನ್ನು ಕೂಡ ಹೇಳುವುದಿಲ್ಲ. ನಿಜವಾಗಿ ಖಾದಿಯನ್ನು ಧರಿಸುವವನು ಹಿಂಸೆ, ಮೋಸ, ಕೊಳೆ ಇವು ಗಳಿಗೆ ತನ್ನಲ್ಲಿ ಎಡೆಗೊಡುವುದಿಲ್ಲ. 'ಖಾದಿ ಇದೊ? ಹಾಗಾದರೆ ಅದನ್ನು ನಾವು ತೊಡುವುದಿಲ್ಲ' ಎನ್ನುವವರಿಗೆ ನಾನು ಹೇಳುವುದಿಷ್ಟೆ? ನಿನ್ನ ಇಷ್ಟದಂತೆ ಅಗತ್ಯವಾಗಿ ನಡೆ. ಆದರೆ ಆಗ ನೀನು ಸತ್ಯ ಅಹಿಂಸೆಗಳಿಂದ ಸ್ವರಾಜ್ಯ ಬರುವುದೆಂಬುದನ್ನು ಮರೆತುಬಿಡು. ಸತ್ಯ ಅಹಿಂಸೆಗಳನ್ನು ಆಚರಿಸೆಂದು ನಿನಗೆ ಬಲವಂತಮಾಡುವುದೂ ಇಲ್ಲ. ನನ್ನ ದಾರಿಯಲ್ಲಿ ಸ್ವರಾಜ್ಯ ಗಳಿಸೆಂದು ನಿನಗೆ ಒತ್ತಾಯ ಮಾಡುವುದೂ ಇಲ್ಲ.

ವಿಠಲ ನಗರ ನಿರ್ಮಾಣಕ್ಕೆ ಏಳೂವರೆ ಲಕ್ಷ ರೂಪಾಯಿಗಳು ಖರ್ಚಾಗಿವೆ. ಇಲ್ಲಿಯ ಎಷ್ಟೋ ವಿಷಯಗಳು ನನಗೆ ಸಮರ್ಪಕವಾಗಿವೆ. ಆದರೆ ಖಾದಿಯ ಜೀವಾಳ ಇಲ್ಲಿಲ್ಲ. ಸರ್ದಾರರೂ ನಾನೂ ಬಹಳ ಹತ್ತಿರ ದವರು. ನಮ್ಮಿಬ್ಬರ ಮನಸ್ಸೂ ಒಂದೇ! ನಾವು ಯೋಚಿಸುವುದೂ ಕೆಲಸಮಾಡುವುದೂ ಒಂದೇ ರೀತಿ. ಆದರೂ ಸರ್ದಾರರು ಕೂಡ

ಖಾದಿಯ ತಿರುಳನ್ನು ಪೂರ್ತಿಯಾಗಿ ಗ್ರಹಿಸದಿರಬಹುದು. ಎಲ್ಲಿ ಖಾದಿಯ ತತ್ವವನ್ನು ಅನುಸರಿಸಬೇಕೆಂಬ ಪೂರ್ಣ ಅಪೇಕ್ಷೆಯಿದೆಯೋ ಅಲ್ಲಿ ಏಳೂವರೆ ಲಕ್ಷ ರೂಪಾಯಿಗಳ ಖರ್ಚಿಗೆ ಅವಕಾಶವಿಲ್ಲ. ಐದುಸಾವಿರ ರೂಪಾಯಿನೊಳಗೆ ಹಳ್ಳಿಯಲ್ಲಿ ಕಾಂಗ್ರೆಸ್ ಅಧಿವೇಶನವನ್ನು ನಡೆಸಬೇಕೆಂದು ನಾನು ಹೇಳಿದೆ. ಐದು ಸಾವಿರ ರೂಪಾಯಿನೊಳಗೆ ಅಧಿವೇಶನವನ್ನು ನಡೆಸದಿದ್ದರೆ ನಾನು ಅವರನ್ನು ತಿಳಿದಿರುವ ಮಟ್ಟಕ್ಕೆ ಬರಲಾರರೆಂದು ಫೈಸ್‌ಪುರ್ ಕಾಂಗ್ರೆಸ್ಸಿಗೆ ಮುಂಚೆ ಶಂಕರರಾವ್ ದೇವರಿಗೆ ತಿಳಿಸಿದೆ. ಈ ಆಲೋಚನೆಯು ಇನ್ನೂ ನನ್ನ ಮನಸ್ಸನ್ನು ಬಿಟ್ಟಿಲ್ಲ. ಇದನ್ನು ಸಾಧಿಸದಿದ್ದರೆ, ನಾವು ಸ್ವರಾಜ್ಯದ ನಿಜವಾದ ಸೇವಕರಲ್ಲ; ನಾವು ಹಳ್ಳಿಯ ರೈತರಾಗುವುದಿಲ್ಲ. ಹಳ್ಳಿಯ ಮನೋಭಾವನೆಯೂ ಎಲೆಕ್ಟ್ರಿಕ್ (ವಿದ್ಯುದ್ವೀಪಗಳ) ದೀಪಗಳ ಉತ್ಸವವೂ ಒಟ್ಟಿಗಿರಲಾರವು. ಮೋಟಾರು ಕಾರು ಮತ್ತು ಲಾರಿಗಳಿಗೆ ಅಲ್ಲಿ ಸ್ಥಾನವಿಲ್ಲ. ಫೈಸ್‌ಪುರ ಮತ್ತು ಹರಿಪುರಗಳಿಗೆ ಹೋಗುವಾಗಲೂ ಅವರು ನನ್ನನ್ನು ಕಾರಿನಲ್ಲೇ ಕರೆದುಕೊಂಡುಹೋದರು. ಕಾರಿನಿಂದ ಕೆಳಗೆ ಕಾಲಿಡಲು ಕೂಡ ನನಗೆ ಅವಕಾಶಕೊಡಲಿಲ್ಲ. ಅವರು ಎತ್ತಿನ ಗಾಡಿಯಲ್ಲಿ ನನ್ನನ್ನು ಕರೆದುಕೊಂಡು ಹೋಗಲಿಲ್ಲ. ಅದು ಸುಭಾಸಬಾಬುಗಳಿಗೆ ಮೀಸಲಾಗಿತ್ತು. ಎತ್ತಿನ ಗಾಡಿಯಲ್ಲಿ ನಾನು ಬಂದಿದ್ದರೆ, ಸ್ವಲ್ಪ ಕಾಲವಿಳಂಬವಾಗುತ್ತಿತ್ತು. ಆದರೆ ತಾನೆ ಏನು? ನಾವೆಲ್ಲ ರಾಜರಾಗಿದ್ದೇವೆ. ನಡೆದುಕೊಂಡು ಹೋಗುತ್ತಿದ್ದ ಕೆಲವರು ಮೋಟಾರು ಕಾರುಗಳಿಗೆ ಅಡ್ಡಿಮಾಡಿ, ತಮ್ಮ ಉಪಯೋಗಕ್ಕೆ ಕೊಡದಿದ್ದರೆ ಸತ್ಯಾಗ್ರಹ ಹೂಡುವುದಾಗಿ ಹೆದರಿಸಿದರೆಂದು ನನಗೆ ತಿಳಿಯಿತು. ಖಾದಿ ತತ್ವಕ್ಕೆ ಅನುಸಾರವಾಗಿ ನಾವು ನಡೆದಿದ್ದರೆ ಇಲ್ಲಿ ಏಳುಲಕ್ಷರೂಪಾಯಿಗಳು ಖರ್ಚಾಗುತ್ತಿರಲಿಲ್ಲ. ಪೆಟ್ರೋಲ್, ಎಣ್ಣೆಯ ಯಂತ್ರ, ನೀರಿನ ಕೊಳಾಯಿ ಎಲ್ಲ ಇಲ್ಲಿವೆ. ಸ್ಟೌ, ವಿದ್ಯುದ್ದೀಪ, ಪಟ್ಟಣವಾಸದ ಎಲ್ಲ ಅನುಕೂಲಗಳು, ಹಲ್ಲುಜ್ಜುವ ಬ್ರಷ್ಷು ಮತ್ತು

ಪೇಸ್ಟ್, ಕೂದಲಿಗೆ ಹಚ್ಚುವ ಸುವಾಸನೆಯ ಎಣ್ಣೆಗಳು ಇವೆಲ್ಲ ಇಲ್ಲಿಗೆ ಬಂದಿವೆ. ಈ ಪದಾರ್ಥಗಳ ಉಪಯೋಗದಿಂದ ಹಳ್ಳಿಯವರು ಹಾಳಾಗುತ್ತಾರೆ. ಬೇವಿನ ಕಡ್ಡಿಯೇ ಅವರ ಹಲ್ಲುಜ್ಜುವ ಬ್ರಷ್ಷು. ಉಪ್ಪು ಮತ್ತು ಬೆರಣಿಯಿಂದ ಸುಟ್ಟ ಇದ್ದಿಲು (ಕರಿ) ಅವರ ಹಲ್ಲುಪುಡಿ. ನೀವು ಖಾದಿಯನ್ನು ಹಾಕುತ್ತೀರಿ. ಆದರೆ ಖಾದಿಗೆ ವಿರೋಧವಾದ ನಿಮ್ಮ ಸುತ್ತ ಇರುವ ಇತರ ವಸ್ತುಗಳೋ?

ನಾವು 'ಖಾದಿಮಂತ್ರ' ವನ್ನು ರಕ್ತಗತಮಾಡಿಕೊಂಡಿಲ್ಲದಿರುವುದರಿಂದ ಸಮತವಾದಿಗಳು ನಮ್ಮಲ್ಲಿ ನಿರಾಶರಾಗಿದ್ದಾರೆ. ಗಾಂಧಿಯುಗವು ಮುಗಿಯಿತು, ಹೊಸಮಾರ್ಗವು ನಮ್ಮದು, ಎಂದು ಅವರು ಹೇಳುತ್ತಾರೆ. ಅದನ್ನು ನಾನು ಗಮನಿಸುವುದಿಲ್ಲ. ಮುಚ್ಚುಮರೆಯಿಲ್ಲದೆ ತಮ್ಮ ಅಭಿಪ್ರಾಯ ತಿಳಿಸಬೇಕೆಂಬುದೇ ನನ್ನ ಇಷ್ಟ. ನಾನು ಹೇಳುವ ಮಾತು ನಿರಾಕರಣೆಗೆ ಯೋಗ್ಯವಾದರೆ ಖಂಡಿತ ಅದಕ್ಕೆ ಲಕ್ಷ್ಯವನ್ನು ಕೊಡಬೇಡಿ. ನೀವು ಏನುಮಾಡಬೇಕೆಂದಿರುವಿರೋ ಅದನ್ನು ಭಾರತಕ್ಕೋಸ್ಕರ ಮಾಡಿ. ನನಗೋಸ್ಕರ ಬೇಡ. ನಾನು ಎಂದಾದರೊಂದು ದಿನ ಬೂದಿಯಾಗುವ ಒಂದು ಮಣ್ಣಿನ ಗೊಂಬೆ ಮಾತ್ರ. ನನಗೋಸ್ಕರ ನೀವು ಖಾದಿಯನ್ನುಟ್ಟರೆ ನನ್ನ ಶವವನ್ನು ಸುಡುವ ದಿನ ಖಾದಿಯನ್ನೂ ಸುಡುತ್ತೀರಿ. ಖಾದಿಯ ತತ್ವವನ್ನು ನೀವು ಪೂರ್ಣವಾಗಿ ಅರ್ಥಮಾಡಿಕೊಂಡಿದ್ದರೆ, ಅದು ನಿಮ್ಮ ರಕ್ತಗತವಾಗಿದ್ದರೆ, ಆಗ ಖಾದಿಯು ನಾನು ಹೋದಮೇಲೂ ಎಷ್ಟೋದಿನ ಬದುಕಿರುವುದು. ಖಾದಿಯು ಬಹಿರಂಗವಾಗಿ ಪೂಜಿಸಲ್ಪಡುವ ನಿರ್ಜೀವವಾದ ಗೊಂಬೆಯಲ್ಲ. ವಿಗ್ರಹವನ್ನು ಮಾತ್ರ ಪೂಜಿಸಿದರೆ ಅದು ಸರಿಯಾದ ಪೂಜೆಯಲ್ಲ. ಸರಿಯಾದ ಪೂಜೆಯೆಂದರೆ ವಿಗ್ರಹದಲ್ಲಿರುವ ದೇವರ ಪೂಜೆ. ಖಾದಿಯಲ್ಲಡಗಿರುವ ಜೀವವನ್ನು ಅರ್ಥಮಾಡಿಕೊಳ್ಳದೆ ಬರಿಯ ಆಡಂಬರವನ್ನು ತೋರಿಸಿದರೆ ನಾವೂ ಭಕ್ತಿಯಿಲ್ಲದ ವಿಗ್ರಹಾರಾಧಕರಂತೆ ಆಗುತ್ತೇವೆ.

ಇಪ್ಪತ್ತು ವರ್ಷಗಳಿಂದಲೂ ನನ್ನ ದೇಶಬಾಂಧವರಿಗೆ ಖಾದಿ ತತ್ವವನ್ನು ನಾನು ಬೋಧಿಸಿದ್ದೇನೆ. ಸಾವಿನ ಹೊಸಲಿನಲ್ಲಿರುವ ಈ ದಿನವೂ ನಾನು ಆ ತತ್ವವನ್ನೇ ಪುನಃ ಹೇಳಲಪೇಕ್ಷಿಸುತ್ತೇನೆ. ಖಾದಿಯು, ಮೊದಲು ಹುಟ್ಟಿದಾಗ ಜೀರ್ಣವಾದ ಹಳೆಯ ಚಿಂದಿಯಂತೆ ಕಂಡರೂ ಈಗ ಅದು ಹಾಗಿಲ್ಲ. ಈಗ ಅದು ಸೌಂದರ್ಯ, ಆರೋಗ್ಯ, ಯೌವ್ವನ ಗಳಿಂದ ಕೂಡಿ ಸುಪುಷ್ಟವಾಗಿದೆ. ಆದುದರಿಂದಲೇ ನಾನು ಅದೇ ತತ್ವ ವನ್ನು ಇಮ್ಮಡಿಯಾದ ಉತ್ಸಾಹ ಮತ್ತು ನಂಬಿಕೆಯಿಂದ ಸಾರುತ್ತೇನೆ. ನನ್ನೊಳಗಿನ ಯಾವುದೋ ಶಕ್ತಿ ನಾನು ಈ ವಿಷಯದಲ್ಲಿ ತಪ್ಪು ತಿಳಿದಿಲ್ಲ ಎಂದು ಹೇಳುತ್ತದೆ. ಸ್ವರಾಜ್ಯ ಮತ್ತು ಸ್ವಾತಂತ್ರ್ಯಗಳು ಅಡಕವಾಗಿ ರುವುದು ಖಾದಿಯಲ್ಲಿಯೇ. 26-2-38.

---

೨೭. ನಿಜವಾದ ಸ್ವದೇಶೀ

ಸ್ವದೇಶೀ ಎಂಬ ಮಾತಿನ ಹಿಂದೆ ನಿಜವಾದ ಎಂದು ನಾನು ಉಪಯೋಗಿಸುವುದಾದರೆ, ವಿಮರ್ಶಕರು ಹಾಗಾದಮೇಲೆ ಸುಳ್ಳು ಸ್ವದೇಶಿ ಬೇರೆ ಒಂದು ಇದೆಯೇ ಎಂಬುದಾಗಿ ಕೇಳಬಹುದು. ಹೌದು ಎಂದು ನಾನು ದುಃಖದಿಂದ ಹೇಳಬೇಕಾಗಿದೆ. ಖಾದಿ ಪ್ರಾರಂಭವಾದಂದಿನಿಂದ ನಾನು ಸ್ವದೇಶಿಯಲ್ಲಿ ನಿಪುಣನೆಂದು ತಿಳಿದು ಜನರು ನನ್ನ ಮುಂದೆ ಸ್ವದೇಶಿ ಎಂದರೇನು ಎಂದು ಅನೇಕ ಒಗಟೆಗಳನ್ನು ಇಡುತ್ತಿದ್ದಾರೆ. ನಿಜವಾದ ಮತ್ತು ಸುಳ್ಳಾದ ಸ್ವದೇಶಿಗಳು ಬೇರೆ ಬೇರೆ ಎಂದು ನಾನು ವಿಭಾಗಮಾಡುವುದು ಅನಿವಾರ್ಯವಾಗಿದೆ. ನಮ್ಮ ದೇಶದ ಭಂಡವಾಳ ಜೊಂದಿಗೆ ಪರದೇಶದವರು ಸೇರಿದ್ದರೆ, ನಮ್ಮ ದೇಶದವರ ಬುದ್ಧಿಯೊಡನೆ ಪರದೇಶದವರ ಬುದ್ಧಿಯೂ ಸೇರಿದ್ದರೆ ಆ ಕೈಗಾರಿಕೆಯ ಉದ್ಯಮವು

ಸ್ವದೇಶಿಯೆ ? ಇವುಗಳಲ್ಲದೆ ಇತರ ಪ್ರಶ್ನೆಗಳೂ ಇವೆ. ಆದರೆ ನಾನು ಒಬ್ಬರು ಮಂತ್ರಿಗಳಿಗೆ ಸ್ವಲ್ಪ ದಿನಗಳ ಹಿಂದೆ ಹೇಳಿದ ಸೂತ್ರವನ್ನು ಮತ್ತೆ ಇಲ್ಲಿ ಕೊಡುವುದು ಒಳ್ಳೆಯದು. "ನಮ್ಮ ಜನರ ಜೀವನೋಪಾಯಗಳನ್ನು ಕಲ್ಪಿಸುವ ಸಾಮಾನುಗಳೆಲ್ಲಾ ಸ್ವದೇಶಿ; ಅದರ ಭಂಡವಾಳವು ಹೊರದೇಶದುದಾದರೂ ಚಿಂತೆಯಿಲ್ಲ. ಆದರೆ ಅದರ ಮೇಲ್ವಿಚಾರಣೆಯು ಪೂರ್ಣವಾಗಿ ನಮ್ಮವರ ಕೈಯ್ಯಲ್ಲೇ ಇರಬೇಕು." ಆದುದರಿಂದ ಚರಕಾ ಸಂಘಕ್ಕೆ ಅನುಸಾರವಾದ ಖಾದಿಯು ಅದರಲ್ಲಿ ಹೊರದೇಶದ ಭಂಡವಾಳವಿದ್ದರೂ, ನಮ್ಮವರು ಪರದೇಶದ ನಿಪುಣರನ್ನೂ ನಿಯಮಿಸಿಕೊಂಡಿದ್ದರೂ ಸ್ವದೇಶಿಯೇ. ಹಾಗೆಯೇ ವಿರೋಧವಾಗಿ, ಭಂಡವಾಳವೂ ಕೂಲಿಯೂ ಇಂಡಿಯಾ ದೇಶದ್ದೇ ಆದರೂ ಬ್ಯಾಟಾ ಚಪ್ಪಲಿ ಮತ್ತು ರಬ್ಬರ್ ಕಾರ್ಖಾನೆಗಳು ಸ್ವದೇಶಿಗಳಲ್ಲ. ಅವುಗಳ ಸಾಮಾನುಗಳು ಪೂರ್ಣ ಪರದೇಶಿ· ಯಾಕೆಂದರೆ ಅವುಗಳು ಪರದೇಶದವರ ಅಧೀನದಲ್ಲಿವೆ. ಮತ್ತು ಅವು ಎಷ್ಟೇ ಅಗ್ಗವಾಗಿದ್ದರೂ ಹಳ್ಳಿಯ ಚರ್ಮವನ್ನು ಹದ ಮಾಡುವವನನ್ನೂ ಮೋಚಿಯನ್ನೂ ನಿರುದ್ಯೋಗಿಗಳನ್ನಾಗಿ ಮಾಡುತ್ತವೆ. ಬೀಹಾರಿನ ಮೋಚಿಗಳು ಆಗಲೇ ಈ ಪೈಪೋಟಿಯಿಂದ ಸಣ್ಣಾಗುತ್ತಿದ್ದಾರೆ. ಬ್ಯಾಟಾ ಚಪ್ಪಲಿ ಬೂಟ್ಸುಗಳು ಯೂರೋಪನ್ನು ಸಂರಕ್ಷಿಸಬಹುದು. ಆದರೆ ಅದೇ ನಮ್ಮ ಹಳ್ಳಿಯ ಮೋಚಿಯ ಮತ್ತು ಚರ್ಮ ಹದಮಾಡುವವನ ಸಾವು. ನಾನು ಎರಡು ಅರ್ಥ ಸೂಚನೆಯ ಉದಾಹರಣೆಗಳನ್ನು ಕೊಟ್ಟಿದ್ದೇನೆ. ಯಾಕೆಂದರೆ ಅಖಿಲಭಾರತ ಚರಕ ಸಂಘದಲ್ಲಿ ಭಂಡವಾಳವೆಲ್ಲಾ ಹಿಂದೂದೇಶದವರದು. ಬುದ್ಧಿಯೂ ನಮ್ಮವರದೆ. ಆದರೆ ಪಾಶ್ಚಾತ್ಯ ಪ್ರವೀಣರು ಈಗಿರುವ ರಾಟೆಗಳಿಗಿಂತ ಅತ್ಯುತ್ತಮವಾದ ಒಂದು ರಾಟೆಯನು ಕಂಡುಹಿಡಿದುಕೊಟ್ಟರೆ ನಾನು ಸಂತೋಷಪಡುವೆನು. ಆದರೂ ನಮ್ಮವರು ರಾಟೆಯಲ್ಲಿ ಮಾಡಿರುವ ಸುಧಾರಣೆಗಳು ಕಡಿಮೆಯಾದುವೆಂದು ನಾನು ಹೇಳುವುದಿಲ್ಲ. ಆದರೆ

ಇದು ಅಡ್ಡದಾರಿಯ ಮಾತಾಯಿತು. ಪ್ರಜೆಗಳ ಆಡಳಿತವನ್ನು ನಡೆಸುವ ಮಂತ್ರಿಗಳೂ ಮತ್ತು ಇತರರೂ ನಿಜವಾದ ಮತ್ತು ಸುಳ್ಳಾದ ಸ್ವದೇಶಿಗಳಿಗೆ ಇರುವ ವ್ಯತ್ಯಾಸವನ್ನು ಕಂಡುಹಿಡಿಯುವ ಅಭ್ಯಾಸವನ್ನು ಬೆಳೆಸಿಕೊಳ್ಳುವರೆಂದು ನಂಬಿದ್ದೇನೆ.

ಸೇವಾಗ್ರಾಮ 20-2-39

---

೨೮. ಗುಜ್ಜಾರಿ ಮತ್ತು ದೈತ್ಯ

ಇವತ್ತಿನ ಸ್ಥಿತಿ ಹೀಗಿದೆ. ನಮ್ಮ ಹಿಂದೂದೇಶದಲ್ಲಿ ಇಂಗ್ಲಿಷಿನವನೇ ಯಜಮಾನ. ಹಿಂದುವೇ ಗುಲಾಮ. ಈ ದೇಶದ ಆಡಳಿತದ ಅಂಗದಲ್ಲಿ ಸಾಮಾನ್ಯವಾಗಿ ಹಿಂದುವು ಬರಿಯ ಗುಮಾಸ್ತ. ವ್ಯಾಪಾರದಲ್ಲಿ ಅವನ ಕೊನೆ ಗುರಿ ಶೇಕಡ ಐದನ್ನು ತೆಗೆದುಕೊಳ್ಳುವ ದಳ್ಳಾಳಿ. ಇಂಗ್ಲಿಷ್ ವ್ಯಾಪಾರಿಗೆ ಉಳಿದ 95 ಹೋಗುತ್ತದೆ. ಎಲ್ಲಾ ಬಾಬಿನಲ್ಲಿಯೂ, ಆಳುವವರ ಜಾತಿಗೆ ಸೇರಿದ ಕಾರಣದಿಂದ ಇಂಗ್ಲಿಷಿನವನಿಗೆ ದೊಡ್ಡಸ್ತಿಕೆ, ವಿಶೇಷವಾದ ಹಕ್ಕು. ಎದುರಾಳಿಯ ಭಯವಿಲ್ಲದೆ ಮತ್ತು ಅತಿಶಯೋಕ್ತಿಯಿಲ್ಲದೆ, ಇಂಡಿಯಾದ ವ್ಯಾಪಾರ ಕೈಗಾರಿಕೆಗಳ ನಾಶದಮೇಲೆಯೇ ಇಂಗ್ಲಿಷಿನವನು ಬೆಳೆದಿದ್ದಾನೆಂದು ಹೇಳಬಹುದು. ಲ್ಯಾಂಕಷೈರ್ ಅಭಿವೃದ್ಧಿಹೊಂದುವುದಕ್ಕಾಗಿಯೇ, ಹಿಂದೂದೇಶದ ಕೈಗಾರಿಕೆಯು ಸತ್ತಿತು. ಇಂಗ್ಲಿಷ್ ಹಡಗುವ್ಯಾಪಾರ ಬೆಳೆಯಲೆಂದು ಹಿಂದೀಯರ ಹಡಗುಗಳಲ್ಲಿಯ ವ್ಯಾಪಾರವು ನಾಶವಾಯಿತು. ಒಂದು ಮಾತಿನಲ್ಲಿ ಬ್ರಿಟಿಷರು ಸಿವ್ನ್ನಾದ ತುದಿಯಲ್ಲಿ ವಾಸಿಸಲು ಅನುಕೂಲವಾಗುವುದಕ್ಕಾಗಿ ನಮ್ಮನ್ನು ಅಮುಕಿದುದಾಯಿತು. ಗೋಖಲೆಯವರು ನಮ್ಮ ಬೆಳವಣಿಗೆ ಕಟರು ಬಿದ್ದಿದೆ (ಅಮುಕಿಗೆ) ಎಂದು ಹೇಳಿದುದು ಬರಿಯ ಶಬ್ದಾಲಂಕಾರ

ಮಾತ್ರವಲ್ಲ. ಆದುದರಿಂದ ಕೈಗಾರಿಕೆ ವ್ಯಾಪಾರಗಳಲ್ಲಿ ಹಿಂದೂದೇಶದ ಕೈಗಾರಿಕೆಗಳಿಗೂ ಪರದೇಶದ ಕೈಗಾರಿಕೆಗಳಿಗೂ ಏನೂ ವ್ಯತ್ಯಾಸವಿಲ್ಲ ವೆಂದು ಹೇಳುವುದು ಹಿಂದೂ ದೇಶದ ಗುಲಾಮಗಿರಿಯನ್ನು ಹೆಚ್ಚಿಸಿದಂತೆ. ದೈತ್ಯನಿಗೂ ಗುಜ್ಜಾರಿಗೂ ಸಮಾನವಾದ ಹಕ್ಕುಬಾಧ್ಯತೆ ಎಂದರೇನು? ಅಸಮಾನರಾದ ಇಬ್ಬರ ಸಮಾನ ಹಕ್ಕುಗಳನ್ನು ಕುರಿತು ಮಾತನಾಡು ವುದಕ್ಕೆ ಮುಂಚೆ ಗುಜ್ಜಾರಿ (ಕುಳ್ಳ)ಯನ್ನು ದೈತ್ಯನ ಮಟ್ಟಕ್ಕೆ ಏರಿಸ ಬೇಕು. ಬಯಲಿನಲ್ಲಿರುವ ಅನೇಕ ಕೋಟಿ ಸಂಖ್ಯೆಯ ಜನರು ಸಿಮ್ಲಾದ ತುದಿಗೆ ಹೋಗಲಾರರಾದುದರಿಂದ ಮೇಲಿನವರೇ ಕೆಳಕ್ಕೆ ಬರಬೇಕಾಗು ವುದು ಅನಿವಾರ್ಯ, ಈ ಮಾರ್ಗ ಕಠಿಣವಾಗಿ ತೋರಬಹುದು. ಆದರೆ ಬಯಲಿನಲ್ಲಿರುವವರು ಮೇಲೆ ಇರುವವರಿಗೆ ಸಮಾನವಾಗಬೇಕಾದರೆ ಬೇರೆದಾರಿ ಇಲ್ಲ.

ಆದುದರಿಂದ, ನಾವು ಸಮಾನತೆಯ ಮಟ್ಟಕ್ಕೆ ಬರುವುದಕ್ಕೆ ಮುಂಚೆ ಎಲ್ಲರನ್ನು ಒಂದೇ ಸಮನಾಗಿ ಮಾಡಬೇಕಾಗುವುದು. ಇದೇ ನ್ಯಾಯ. ಇದು ಮತ್ತೊಂದು ಜನಾಂಗದವರಿಗೆ ವಿರೋಧವೆಂದು ಪರಿ ಗಣಿಸುವುದು ಶುದ್ಧ ತಪ್ಪು. ಇಲ್ಲಿ ಆ ಪ್ರಶ್ನೆಯೇ ಇಲ್ಲ. ಪ್ರತಿ ಒಬ್ಬ ಪುರುಷ ಸ್ತ್ರೀ ಮಕ್ಕಳಿಗೂ, ಅವರು ತಮ್ಮ ವಿಶೇಷ ಹಕ್ಕುಗಳನ್ನು ಬಿಟ್ಟು ಕೊಡುವುದಾದರೆ ಈ ದೇಶದಲ್ಲಿ ಸ್ಥಳವಿದೆ. ಅನಂತರ ಅವರು ತಮ್ಮ ಸೈನ್ಯವನ್ನೂ ಪಟ್ಟಣಗಳಲ್ಲಿರುವ ಬಲಗಳನ್ನೂ ಬದಲಾಯಿಸಿ ಈ ರಾಷ್ಟ್ರದ ಸ್ನೇಹದ ಮೇಲೆ ಅವಲಂಬಿಸಬೇಕು. ಆ ಸ್ನೇಹವು ಅವರು ಕೇಳಿದ ಕೂಡಲೆ ದೊರೆಯುವುದು. ನಮ್ಮ ಸ್ನೇಹವೇ ನಾವು ಅವರಿಗೆ ಕೊಡಬ ಹುದಾದ ಅತ್ಯಂತ ಹೆಚ್ಚಾದ ಸಂರಕ್ಷಣೆ. ಅದು ನಮಗೂ ಅವರಿಗೂ ಗೌರವಯುಕ್ತವಾದುದೂ ಒಳ್ಳೆಯದೂ ಆಗಿರುವುದೆಂದು ನಾನು ಧೈರ್ಯ ದಿಂದ ಹೇಳುತ್ತೇನೆ. ಹೀಗಾಗುವಾಗ ಮಧ್ಯೆ ಮಧ್ಯೆ ಇಂಗ್ಲಿಷಿನವರಿಗೆ ವಿರೋಧವಾಗುವುದು ಅನಿವಾರ್ಯ. ಆದರೆ ಈಗಿನಸ್ಥಿತಿ ಅಸ್ವಾಭಾವಿಕ

ವೆಂದು ತಿಳಿದವರು ಆ ವ್ಯತ್ಯಾಸವನ್ನು ಸುಲಭವಾಗಿ ಸಹಿಸಿಕೊಳ್ಳುತ್ತಾರೆ. ಇದರಲ್ಲಿ ಯಾವ ಜಾತಿದ್ವೇಷವೂ ಇಲ್ಲವೆಂಬುದನ್ನು ತೋರಿಸಲು, ಮೇಲು ದರ್ಜೆಯಲ್ಲಿರುವ ಹಿಂದೀಯರೂ ಬಯಲಿನಲ್ಲಿರುವ ತಮ್ಮ ದೇಶೀಯರ ಮಟ್ಟಕ್ಕೆ ಬರಬೇಕೆಂಬುದನ್ನು ಹೇಳಿದರೆ ಸಾಕು. ಆದುದರಿಂದ ಸರಿ ಯಾದ ದಾರಿ ಇದು. ಆಳುವವರೂ ಅವರ ಜತೆಯವರೂ ಅನುಭವಿಸು ತ್ತಿರುವ ಸ್ವಾಭಾವಿಕವಾದ ಹಕ್ಕುಗಳೂ ಅಧಿಕಾರಗಳೂ ಹೋಗಬೇಕಾ ದರೆ, ಎಲ್ಲಾ ಜನರೂ ಎಲ್ಲಾ ಜಾತಿಗಳೂ ಪಂಗಡಗಳೂ ಒಂದೇ ಮಟ್ಟಕ್ಕೆ ಇಳಿಸಲ್ಪಡಬೇಕು.

ನಮ್ಮ (ಹಿಂದಿಯರ) ಕಡೆಯಿಂದ, ಪ್ರತಿಯೊಬ್ಬ ಬ್ರಿಟಿಷ್‌ನವರ ಪ್ರಾಣವನ್ನೂ ಪವಿತ್ರವಾಗಿ ನಾವು ಎಣಿಸಿ ಸಂರಕ್ಷಿಸಬೇಕು. ಇದರಿಂದ ಬ್ರಿಟಿಷ್ ವ್ಯಾಪಾರ, ಬ್ರಿಟಿಷ್ ಉದ್ಯಮಗಳಿಗೆ ನಾಶವಿಲ್ಲ. ನಾಶವಾಗ ಬೇಕಾದುದಿಲ್ಲ. ಇಲ್ಲಿಯೇ ವಾಸಕ್ಕೆ ನಿಲ್ಲುವ ಇಂಗ್ಲಿಷಿನವರು ತಮ್ಮ ಸ್ವಾಭಾವಿಕವಾದ ಶಿಸ್ತು, ಬುದ್ಧಿ, ಕಾರ್ಯದಕ್ಷತೆ, ಸಂವಿಧಾನ ಶಕ್ತಿ ಇವುಗಳ ಮೇಲೆ ಅವಲಂಬಿಸಿ, ಪ್ರಸಿದ್ಧರಾಗಿ, ತಮ್ಮ ಮಾತೃಭೂಮಿ ಯನ್ನು ಸೇವಿಸಿದಂತೆಯೇ, ಅಷ್ಟೇ ಪ್ರೇಮದಿಂದ ಈ ದೇಶವನ್ನು ಸೇವಿಸ ಬಹುದು.

ಇಂಡಿಯಾವಿಗೂ ಇಂಗ್ಲೆಂಡಿಗೂ ಗೌರವಯುತವಾದ ಸಮಾನತೆ ಯುಂಟಾದಾಗ, ಇಂಡಿಯಾಕ್ಕೆ ಅಪಾಯವಿಲ್ಲದಿರುವಲ್ಲೆಲ್ಲಾ ಬ್ರಿಟಿಷ್ ವ್ಯಾಪಾರಕ್ಕೆ ವಿಶೇಷ ರಿಯಾಯ್ತಿಯನ್ನು ತೋರಿಸಬಹುದು. ಒಳಗೂ ಹೊರಗೂ ಲೂಟಿಗಾರರು ಇಲ್ಲದಿರುವ ಇಂಡಿಯಾದೇಶವು ಬಹು ಬೇಗ ಅಭಿವೃದ್ಧಿಗೆ ಬರುವುದರಲ್ಲಿ ಆಶ್ಚರ್ಯವಿಲ್ಲ. ಅಭಿವೃದ್ಧಿಯೊಂದಿಗೆ, ನಮ್ಮವರ ಆವಶ್ಯಕತೆಗಳೂ ಹೆಚ್ಚುತ್ತಾ ಹೋಗುತ್ತವೆ. ಆವಶ್ಯಕತೆಗಳು ಹೆಚ್ಚಿದಂತೆ ಹೊರದೇಶಗಳಿಂದ ಸಾಮಾನುಗಳನ್ನು ತರಿಸುವುದೂ ಹೆಚ್ಚುತ್ತದೆ. ಅಂತಹ ಕಾಲದಲ್ಲಿ ಬ್ರಿಟನ್ನು ಇಂಡಿಯಾದ ಸ್ನೇಹಿತನೂ ಹಿತೈಷಿಯೂ ಆಗಿದ್ದರೆ

ಆದರಿಂದಲೇ ನಮ್ಮ ಹೆಚ್ಚಾದ ಆವಶ್ಯಕತೆಗಳನ್ನು ನಾವು ಪೂರೈಸಿ ಕೊಳ್ಳಬಹುದು.

ಈ ಕನಸು ನಿಜವಾಗಬೇಕೆಂಬುದು ನನ್ನ ಆಸೆ. ಅದಕ್ಕಾಗಿಯೇ ನಾನು ದುಡಿಯುತ್ತಿದ್ದೇನೆ. ಹಿಂದೂದೇಶವು ಈ ಉದ್ದೇಶವನ್ನು ಸಾಧಿಸಲು ನಾನು ಪ್ರತಿಯೊಬ್ಬ ಆಂಗ್ಲೇಯನ ಸಹಾಯವನ್ನೂ ಕೋರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಪೂರ್ಣ ಸ್ವರಾಜ್ಯವೆಂದರೆ ಯಾರೊಂದಿಗೂ ಸಂಬಂಧವಿಲ್ಲದೆ ಒಂಟಿಯಾಗಿರುವುದಲ್ಲ. ಆದರೆ ಆರೋಗ್ಯಕರವೂ ಗಂಭೀರವೂ ಆದ ಸ್ವಾತಂತ್ರ್ಯ. ನನ್ನ ರಾಷ್ಟ್ರಾಭಿಮಾನವು ತೀಕ್ಷ್ಣವಾಗಿದ್ದರೂ ಇತರರಿಗೆ ವಿರೋಧವಾದುದಲ್ಲ. ಈ ರಾಷ್ಟ್ರಾಭಿಮಾನವು ಯಾವ ಇತರ ರಾಷ್ಟ್ರಗಳಿಗೂ, ವ್ಯಕ್ತಿಗಳಿಗೂ ತೊಂದರೆ ಮಾಡತಕ್ಕುದಲ್ಲ. Sic ute re two ut aliernum non laedas "ನಿನ್ನ ನೆರೆಯವನ ಆಸ್ತಿಪಾಸ್ತಿಗಳಿಗೆ ಅಪಾಯವಾಗದಂತೆ ನಿನ್ನ ಆಸ್ತಿಗಳನ್ನು ಉಪಯೋಗಿಸು" ಎಂಬ ಸತ್ಯವನ್ನೇ ನಾನು ನಂಬುತ್ತೇನೆ. ಗಾಂಧಿಜಿ.

26-3-1931.

---

೨೯. ಕೆಲವು ಪ್ರಶ್ನೆಗಳು

ಒಬ್ಬ ಕೆಲಸಗಾರರು ಕೆಲವು ಪ್ರಶ್ನೆಗಳನ್ನು ಹಾಕಲು ಬಂದರು. ಆ ಪ್ರಶ್ನೆಗಳನ್ನು ಅನೇಕ ಸಲ ಚರ್ಚೆಮಾಡಿದ್ದರೂ ಅವು ಆ ಕೆಲಸಗಾನಿಗೆ ಇನ್ನೂ ಸಮಾಧಾನವನ್ನುಂಟುಮಾಡಿರಲಿಲ್ಲ. ಅವನ ಮೊದಲನೆ ಪ್ರಶ್ನೆಯು ಇದು ಆಗಿತ್ತು "ಇಂಗ್ಲೀಷರು ಇಲ್ಲಿಗೆ ಬರುವುದಕ್ಕೆ ಮುಂಚೆ ಇಲ್ಲಿ ಖಾದಿಯೂ ಒಳ್ಳೇ ಆಹಾರ ಪದಾರ್ಥಗಳೂ ಇದ್ದರೂ ನಾವು ಉತ್ತಮವಾಗಿರಲಿಲ್ಲವಲ್ಲ? ಹೀಗಿರುವಾಗ ಖಾದಿ ಮತ್ತು ಉತ್ತಮವಾದ

ಆಹಾರ ವಸ್ತುಗಳ ಮೇಲೆ ನಾವು ಇಷ್ಟು ಒತ್ತಿ ಒತ್ತಿ ಹೇಳುತ್ತಿರುವುದರ ಕಾರಣವೇನು ?

ಗಾಂಧೀಜಿಯವರು ಹೀಗೆ ಪ್ರತ್ಯುತ್ತರವಿತ್ತರು. "ಈ ಪ್ರಶ್ನೆಯನ್ನು ನವಜೀವನ ಮತ್ತು ಯಂಗ್ ಇಂಡಿಯಾದಲ್ಲಿ ಬೇಕಾದಂತೆ ಚರ್ಚಿಸಿದೆ. ಓದಿದರೆ ತಿಳಿಯುತ್ತೆ. ಆದರೆ ನಿಮಗಾಗಿ ಆ ಉತ್ತರವನ್ನು ಸಂಕ್ಷೇಪವಾಗಿ ಹೇಳುತ್ತೇನೆ. ಖಾದಿ ಹಿಂದೆಯೂ ಇತ್ತು. ಆದರೆ ಅದರ ಅರ್ಥ ನಮಗೆ ತಿಳಿದಿರಲಿಲ್ಲ. ನಮ್ಮ ಸಾಮಾನುಗಳನ್ನು ನಾವು ತಯಾರಿಸಿಕೊಳ್ಳುತ್ತಿದ್ದೆವು. ಆದರೆ ಅದನ್ನು ತಿಳಿದೇ ಇರಲಿಲ್ಲ. ಖಾದಿಯಲ್ಲೂ ಗ್ರಾಮಕೈಗಾರಿಕೆಗಳಲ್ಲೂ ಬುದ್ಧಿ ವಿನಿಯೋಗವಾಗುತ್ತಿರಲಿಲ್ಲ. ಆದುದರಿಂದ ಆ ಕೈಗಾರಿಕೆಗಳು ನಾಶವಾದಾಗ ನಮಗೆ ಅದರಿಂದ ನಷ್ಟ ತೋರಲೇ ಇಲ್ಲ. ಈಗ ಆ ಕೈಗಾರಿಕೆಗಳನ್ನು ಮತ್ತೆ ಸ್ಥಾಪಿಸಲು ಪ್ರಯತ್ನ ನಡೆಯುತ್ತಿರುವಾಗ ನಮ್ಮಲ್ಲಿ ಅನೇಕರಿಗೆ ಅವುಗಳ ಪುನುರುದ್ಧಾರದಿಂದ ಪ್ರಯೋಜನವೇನೆಂದು ಆಶ್ಚರ್ಯವಾಗುತ್ತಿದೆ.

"ಹಾಗಂದರೆ ರಾಜಕೀಯ ಚಳವಳಿಯೂ ವಿದ್ಯೆಯೂ ಜನರಿಗೆ ಆವಶ್ಯಕವೆಂದಾಯಿತು. ಆದರೆ ನೀವು ಅವೆರಡನ್ನೂ ಬಹಿಷ್ಕರಿಸಿದ್ದೀರಿ."

"ಜನರಿಗೆ ಆತ್ಮಾವಲಂಬನೆ, ಆಹಾರದಲ್ಲಿ ಸುಧಾರಣೆ, ಚಟುವಟಿಕೆ, ಸೋಮಾರಿತನ ಬಹಿಷ್ಕಾರ ಇವುಗಳನ್ನು ಕಲಿಸಲು ರಾಜಕೀಯ ಪ್ರಚಾರವು ಆವಶ್ಯಕವಿಲ್ಲ"

ಕೆಲಸಗಾರರು ಹೇಳಿದರು "ನನ್ನ ಕಷ್ಟವಿದು. ನಮ್ಮ ಜನರು ಹಳ್ಳಿಗಳಲ್ಲಿ ಬೆಳಗ್ಗಿನಿಂದ ರಾತ್ರಿವರೆಗೆ ಕತ್ತೆಗಳ ಹಾಗೆ ಒಂದು ಗಂಟೆಯೂ ಬಿಡುವಿಲ್ಲದೆ ಕೆಲಸಮಾಡುತ್ತಿದ್ದರೂ ಅವರಿಗೆ ಹೊಟ್ಟೆತುಂಬ ಹಿಟ್ಟು ದೊರಕುವುದಿಲ್ಲ. ನೀವು ಅವರು ಇನ್ನೂ ಹೆಚ್ಚು ಕೆಲಸಮಾಡಬೇಕೆಂದು ಹೇಳುತ್ತಿದ್ದೀರಿ.

“ ನೀವು ಹೇಳುವುದು ನನಗೆ ಆಶ್ಚರ್ಯವಾಗಿದೆ. ನನಗೆ ತಿಳಿದಿರುವಂತೆ ಹಳ್ಳಿಗಳಲ್ಲಿ ಬಹಳ ಕಾಲ ವ್ಯರ್ಥವಾಗುತ್ತಿದೆ. ಆದರೆ ಅಲ್ಲಿಯ ಜನರಿಗೆ ಕೆಲಸ ಹೆಚ್ಚೆಂದು ನೀವು ಹೇಳುವುದಾದರೆ ಅಂಥವರು ಎಂಟು ಗಂಟೆಯ ಕೆಲಸಕ್ಕೆ ಜೀವನಕ್ಕೆ ಸಾಕಾಗುವುದಕ್ಕಿಂತ ಕಡಿಮೆ ಕೂಲಿಯನ್ನು ತೆಗೆದುಕೊಳ್ಳಕೂಡದೆಂದು ನಾನು ಹೇಳುತ್ತೇನೆ

“ ಆದರೆ ಯಂತ್ರದಲ್ಲಿರುವ ಕೆಡಕನ್ನೆಲ್ಲಾ ಹೋಗಲಾಡಿಸಿ ಅದರ ಒಳ್ಳೆಯದನ್ನೆಲ್ಲಾ ಒಳಗೊಂಡಂತೆ ಯಾಕೆ ಸ್ವೀಕರಿಸಬಾರದು.

“ ನಮ್ಮ ಮನುಷ್ಯ ಯಂತ್ರಗಳನ್ನು ಸೋಮಾರಿಗಳಾಗಿಡುವುದು ನನ್ನಿಂದ ಸಾಧ್ಯವಿಲ್ಲ. ನಮ್ಮಲ್ಲಿ ಸೋಮಾರಿಯಾಗಿರುವ ಮನುಷ್ಯ ಶಕ್ತಿ ಅಪಾರವಾಗಿದೆ. ಆದುದರಿಂದ ಇತರ ಯಂತ್ರಶಕ್ತಿಗಳಿಗೆ ನಮ್ಮಲ್ಲಿ ಅವಕಾಶವಿಲ್ಲ.

“ ಯಂತ್ರಗಳನ್ನು ಪ್ರಚಾರಮಾಡಿ ಅವುಗಳಿಂದ ನಿಮಗೆ ಎಷ್ಟು ಹೊತ್ತು ಕೆಲಸಮಾಡಬೇಕೊ ಅಷ್ಟುಹೊತ್ತು ಮಾತ್ರ ಕೆಲಸಮಾಡಿಸಿಕೊಳ್ಳಿ.

“ ನಿಮ್ಮ ಅಭಿಪ್ರಾಯವೇನು? ಹೀಗೆಯೆ? ಒಬ್ಬ ಮನುಷ್ಯ ನಮಗೆ ಬೇಕಾದ ಬಟ್ಟೆಗಳನ್ನೆಲ್ಲಾ ಸ್ಪೆಷಲ್ ಆಗಿ ಮಾಡಿದ ಯಂತ್ರಗಳಲ್ಲಿ ತಯಾರಿಸಿ ಸುಮಾರು 30 ಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸಿ ಬಂದ ಲಾಭವನ್ನೆಲ್ಲಾ ಆ ಮೂವ್ವತ್ತುಲಕ್ಷ ಜನರಿಗೆ ಹಂಚುತ್ತಾನೆ. ಹೌದೋ. ಅಂದರೆ ಈಗ 100 ವರುಷಕ್ಕೆ ಮುಂಚೆ 30 ಕೋಟಿ ಜನರಲ್ಲಿ ಹಂಚಿಕೆಯಾಗುತ್ತಿದ್ದ ಹಣ 30 ಲಕ್ಷ ಜನರಿಗೆ ಮಾತ್ರ ಸೇರುತ್ತದೆ.

“ ಇಲ್ಲ ಸಾರ್. ಎಷ್ಟು ಅವಶ್ಯಕವೋ ಅಷ್ಟಕ್ಕಿಂತ ಹೆಚ್ಚಾಗಿ ಜನರು ಕೆಲಸಮಾಡಕೂಡದೆಂಬುದು ನನ್ನ ಅಭಿಪ್ರಾಯ. ನಾವೆಲ್ಲಾ ಸ್ವಲ್ಪ ಕೆಲಸಮಾಡುವುದು ಅವಶ್ಯಕ. ಆದರೆ ನಾವು ಪ್ರತಿದಿನವೂ 2 ಗಂಟೆ

ಗಳಿಗಿಂತ ಯಾಕೆ ಹೆಚ್ಚು ಕಾಲ ಕೆಲಸಮಾಡಬೇಕು. ಉಳಿದ ಕಾಲ ವನ್ನೆಲ್ಲಾ ವಿನೋದವಾಗಿ ಕಳೆಯಬಹುದಲ್ಲಾ.

"ಹಾಗಾದರೆ ನಮ್ಮ ಜನರು ದಿವಸಕ್ಕೆ ಒಂದು ಗಂಟೆ ಮಾತ್ರ ಕೆಲಸಮಾಡಿದರೆ ನಿಮಗೆ ಸಾಕಾಗುತ್ತದೆ."

"ಅದನ್ನು ಲೆಕ್ಕಾಚಾರಹಾಕಿ ನೋಡಬೇಕು. ನಿಜವಾಗಿಯೂ ನನಗೆ ಸಮಾಧಾನವಾಗುತ್ತದೆ."

ಗಾಂಧಿಜಿ—"ಸರಿ. ಅಲ್ಲೆ ಇರುವ ಕಷ್ಟ. ಎಲ್ಲರೂ 8 ಗಂಟೆ ಕಾಲ ಲಾಭಕರವಾದ ಕೆಲಸಮಾಡುವವರೆ ನನಗೆ ಸಮಾಧಾನವಾಗುವುದಿಲ್ಲ."

"ಎಂಟು ಗಂಟೆ ಕೆಲಸ ಮಾಡಲೇಬೇಕೆಂದು ನೀವು ಯಾಕೆ ಬಲಾತ್ಕರಿಸುತ್ತೀರಿ ಎಂದು ನನಗೆ ಆಶ್ಚರ್ಯವಾಗುತ್ತದೆ.

ಗಾಂಧಿಜಿ—"ಕೋಟಿ ಸಂಖೆಯಲ್ಲಿ ಜನರು, ಕೆಲಸದಲ್ಲಿರುವ ಆಸೆಯಿಂದಲೇ ಕೆಲಸಮಾಡುವುದಿಲ್ಲ. ಜೀವನಕ್ಕಾಗಿ ಕೆಲಸಮಾಡದಮೇಲೆ ಆ ಕೆಲಸಕ್ಕೆ ಬೇಕಾದ ಉತ್ಸಾಹವು ಮರೆಯಾಗುತ್ತದೆ. ಅಮೆರಿಕಾದಿಂದ ಕೆಲವು ಕೋಟ್ಯಾಧೀಶ್ವರರು ಬಂದು, "ನಿಮಗೆ ಬೇಕಾದ ಎಲ್ಲಾ ಆಹಾರಗಳನ್ನು ನಾವು ಅಲ್ಲಿಂದಲೇ ಒದಗಿಸುತ್ತೇವೆ. ನೀವು ದಯವಿಟ್ಟು ಕೆಲಸ ಮಾಡಬೇಡಿ. ನಮ್ಮ ಧರ್ಮಬುದ್ಧಿಯ ಪ್ರಚಾರಕ್ಕೆ ಈ ರೀತಿ ಅವಕಾಶ ಕೊಡಿ" ಎಂಬುದಾಗಿ ನಮ್ಮನ್ನು ಬಂದು ಪ್ರಾರ್ಥಿಸಿದರೆ ನಾನು ಖಂಡಿತ ಅವರ ಸೂಚನೆಯನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುತ್ತೇನೆ."

ಅದು ಸರಿ. ಯಾಕೆಂದರೆ ಅದರಿಂದ ನಿಮ್ಮ ಆತ್ಮಗೌರವಕ್ಕೆ ಹಾನಿಯಾಗುತ್ತದೆ.

ಗಾಂಧಿಜಿ—"ಆ ಕಾರಣ ಮಾತ್ರವೇ ಅಲ್ಲ. ಹಾಗೆ ಮಾಡಿದರೆ ನಮ್ಮ ಜೀವಿತದ ಮೂಲತತ್ವಕ್ಕೇ ವಿರೋಧವಾಗುತ್ತದೆ. 'ನಾವು ನಮ್ಮ

ಆಹಾರಕ್ಕಾಗಿ ಕೆಲಸಮಾಡಬೇಕು. ನಮ್ಮ ಜೀವರು ಹರಿಸಿ ನಮ್ಮ ಆಹಾರ ವನ್ನು ತಿನ್ನಬೇಕು' ಎಂಬ ತತ್ವಕ್ಕೆ ವಿರೋಧವಾಗುತ್ತದೆ.

"ಇದು ನಿಮ್ಮ ಸ್ವಂತ ಅಭಿಪ್ರಾಯವಾಯಿತು. ಸಮಾಜದ ವ್ಯವಸ್ಥೆ ಯನ್ನು ತನ್ನ ಇಷ್ಟದಂತೆ ನಡೆಸಿಕೊಳ್ಳಲು ನೀವು ಸಮಾಜಕ್ಕೆ ಬಿಡುತ್ತೀರೋ ಅಥವಾ ಕೆಲವು ಆರಿಸಿದ ಒಳ್ಳೆಯ ಮುಖಂಡರಿಗೆ ಬಿಡುತ್ತೀರೊ?

ಗಾಂಧಿಜಿ—ಕೆಲವು ಒಳ್ಳೆಯ ಮುಖಂಡರಿಗೆ ಬಿಡುತ್ತೇನೆ.

ಪ್ರಶ್ನೆ—"ಅಂದರೆ ನೀವು ಡಿಕ್ಟೇಟರ್ ಬೇಕು ಎನ್ನುವವರು.

ಗಾಂಧಿಜಿ—ಅಲ್ಲ. ನನ್ನ ಮುಖ್ಯ ತತ್ವವೇ ಅಹಿಂಸೆ. ಯಾವ ವ್ಯಕ್ತಿಯನ್ನೂ ಸಂಸ್ಥೆಯನ್ನೂ ಬಲಾತ್ಕರಿಸುವುದು ನನ್ನ ಉದ್ದೇಶವಲ್ಲ. ದಾರಿ ತೋರಿಸುವುದು ಡಿಕ್ಟೇಟರ್ ಷಿಪ್ ಅಲ್ಲ."

ಬೇಜಾರಾಗುವವರೆಗೆ ವಾದವು ಮುಂದುವರಿಯುವುದರಲ್ಲಿ ಸಂದೇ ಹವಿರಲಿಲ್ಲ. ಆದರೆ ಗಾಂಧಿಜಿಯವರಿಗೆ ಹೊತ್ತು ಇರಲಿಲ್ಲ. ಆದುದರಿಂದ ಬಂದ ಸ್ನೇಹಿತರು ತೃಪ್ತರಾಗಬೇಕಾಯಿತು.

* * * *

ಈ ಸಂದರ್ಭದಲ್ಲಿ ಮ|| ರಾ|| ಎಲ್. ಪಿ. ಜಾಕ್ಸ್ ಎಂಬವರು ಬರೆದ ವಿರಾಮದ ಕಲೆ ಮತ್ತು ವಿಜ್ಞಾನ ಎಂಬುದರ ಕಡೆ ತಿರುಗಬಹುದು. ಈ ಪ್ರಬಂಧದಲ್ಲಿ ಮ|| ರಾ|| ಜಾಕ್ಸ್‌ರವರು ಕೆಲಸದ ಕಲೆ ಮತ್ತು ವಿಜ್ಞಾನವನ್ನು ಚೆನ್ನಾಗಿ ತಿಳಿದ ಹೊರತು ವಿರಾಮದ ಕಲೆ ಮತ್ತು ವಿಜ್ಞಾನವನ್ನು ತಿಳಿಯುವುದು ಸಾಧ್ಯವಿಲ್ಲವೆಂದು ತೋರಿಸಿದ್ದಾರೆ. ಸಮಾಜ ಜೀವನದಲ್ಲಿ ಅನೇಕ ಗಂಟೆಗಳ ವಿರಾಮವು ಮನುಷ್ಯನಿಗೆ ಅವಶ್ಯಕವೆಂದು ಹೇಳುವ ಬರ್‌ಟ್ರೆಂಡ್ ರೆಸ್ಸೆಲ್‌ರವರು ಮನುಷ್ಯನು ದಿವಸಕ್ಕೆ 4 ಗಂಟೆ ಕೆಲಸಮಾಡಿದರೆ ಸಾಕೆಂದು ಹೇಳುತ್ತಾರೆ. ದೇವರ

ದಯದಿಂದ ಹಿಂದಲ ಸಂಭಾಷಣೆಯು ನಮ್ಮ ಮಿತ್ರರಂತೆ ಅವರು ಒಂದು ಗಂಟೆಮಾಡಿದರೇ ಸಾಕು—ಎನ್ನಲಿಲ್ಲ. ಆದರೆ ಮ|| ರಾ|| ಜಾಕ್ಸ್‌ರವರು ಈ ವಿರಾಮದ ಸಮಸ್ಯೆ, ಬರ್ಟ್ರ್ಯಾಂಡ್ ರಸೆಲ್‌ರವರು ಯೋಚಿಸಿದಷ್ಟು ಸುಲಭವಲ್ಲವೆನ್ನುತ್ತಾರೆ. ಯಾಕೆಂದರೆ "ಮೊದಲನೆಯದಾಗಿ ಮನುಷ್ಯನ ವಿರಾಮವು ಇತರರ ಕೆಲಸದಿಂದ ಹಾಳಾಗುತ್ತದೆ. ನಮ್ಮ ವಿರಾಮದ ಬಹುಭಾಗವು ಪರಸ್ಪರ ಕಿರುಕುಳದಲ್ಲಿ ಕಳೆದುಹೋಗುತ್ತದೆ. ಮತ್ತು ವಿರಾಮ ಕಾಲವೇ ಬೀಲಜಬಬ್ ಚಟುವಟಿಕೆಯ ಕಾಲವೆಂಬುದನ್ನೂ (ದುರಾಲೋಚನೆಗಳಕಾಲ) ಜ್ಞಾಪಕದಲ್ಲಿ ಇಡಬೇಕು. ಜಾಕ್ಸ್‌ರವರು ಮನುಷ್ಯನ ವಿರಾಮಕಾಲವೇ ಅವನ ಸಾತ್ವಿಕ ಮತ್ತು ತಾಮಸ ಪ್ರಕೃತಿಗಳ ತೀಕ್ಷ್ಣವಾದ ಕಾದಾಟದ ಕಾಲವೆಂದು ಹೇಳಿ, ಮನುಷ್ಯನು ವಿರಾಮವನ್ನು ತನ್ನ ಆತ್ಮದ ಉನ್ನತಿಗಾಗಿ ಉಪಯೋಗಿಸುತ್ತಾನೆಯೇ, ಇಲ್ಲವೇ ಬೇರೆ ಯಾವುದಾದರೂ ಉನ್ನತಿಗೆ ಉಪಯೋಗಿಸುತ್ತಾನೆಯೇ ಎಂಬುದನ್ನು ತೋರಿಸಲು ಕೆಲವು ಉದಾಹರಣೆಗಳನ್ನು ಕೊಡುತ್ತಾರೆ. ಈ ಉದಾಹರಣೆಗಳನ್ನು ಆಲ್-ಎಲ್-ಡಫ್ಸ್‌ರವರ ಪುಸ್ತಕಗಳು ಎಂಬ ಸಣ್ಣ ಪುಸ್ತಕದಿಂದ ಅವರು ತೆಗೆದುಕೊಳ್ಳುತ್ತಾರೆ.

ಅಮೆರಿಕಾದಲ್ಲಿ ಪ್ರತಿವಾರವೂ 11 ಕೋಟಿ 50 ಲಕ್ಷ ಜನರು ಸಿನಿಮಾಗಳನ್ನು ನೋಡುತ್ತಾರೆ. ಈ ರೀತಿ ಅವರು ಒಂದು ವರುಷದಲ್ಲಿ ಪೂರ್ತಾ ದೇಶವೆಲ್ಲಾ ಪುಸ್ತಕಗಳಿಗಾಗಿ ಖರ್ಚುಮಾಡುವಷ್ಟು ಹಣವನ್ನು ಸಿನಿಮಾಕ್ಕೆ ಮೂರೇ ವಾರದಲ್ಲಿ ಖರ್ಚುಮಾಡುತ್ತಾರೆ. ಒಂದು ವರುಷಕ್ಕೆ ಪುಸ್ತಕಗಳಿಗಾಗಿ ಅಮೆರಿಕಾದವರು ಖರ್ಚುಮಾಡುವುದು ಇಪ್ಪತ್ತು ಕೋಟಿ ಡಾಲರು. ಮೋಟಾರುಗಳಲ್ಲಿ ಖುಷಿಯಿಂದ ತಿರುಗಾಡಲು ವೆಚ್ಚವಾಗುವುದು 300 ಕೋಟಿ ಡಾಲರುಗಳು. ಅಮೆರಿಕಾದವರು ತಮ್ಮ ಉತ್ಪತ್ತಿಯಲ್ಲಿ ನೂರು ಡಾಲರಿಗೆ, ಅರ್ಧ ಡಾಲರಂತೆ ಪುಸ್ತಕಗಳಿಗಾಗಿ ವರುಷಕ್ಕೆ ಖರ್ಚುಮಾಡುವರು. ಪ್ರತಿಯೊಬ್ಬ ಅಮೆರಿಕಾದವನೂ ವರುಷಕ್ಕೆ ಮೂರು

ಪುಸ್ತಕಗಳನ್ನು ಕೊಳ್ಳುತ್ತಾನೆ. ಎರಡು ಪುಸ್ತಕಗಳನ್ನು ವಾಚನಾಲಯ ದಿಂದ ಎರವಲಾಗಿ ತೆಗೆದುಕೊಳ್ಳುತ್ತಾನೆ. ಅಮೆರಿಕಾ ಸರಕಾರದವರು ಪ್ರಕಟಿಸಿರುವ ವರದಿಯಿಂದ ಈ ಕೆಳಗಿನ ಅಂಶಗಳನ್ನು ತೆಗೆದುಕೊಳ್ಳಲಾಗಿದೆ. “ ಪುಸ್ತಕಗಳಿಗೆ ಕೊಡುವುದಕ್ಕಿಂತ ಸಕ್ಕರೆಗೆ ವರುಷಕ್ಕೆ 27 ರಷ್ಟು ಹಣ ಹೆಚ್ಚಾಗಿ ಖರ್ಚಾಗುತ್ತದೆ. ಸಿನಿಮಾಗಳಿಗೆ 22ರಷ್ಟು, ವೈರ್‌ಲೆಸ್‌ಗೆ 12½ ಯಷ್ಟು ಪಾನೀಯಗಳಿಗೆ 11 ರಷ್ಟು ಹೆಚ್ಚಾಗಿ ಖರ್ಚಾಗುತ್ತದೆ. ಈ ಸಂಖ್ಯೆಗಳನ್ನೆಲ್ಲಾ ಬಹಳ ಎಚ್ಚರಿಕೆಯಿಂದ ಅನ್ವಯಿಸಿಕೊಳ್ಳಬೇಕು. ಕೊಂಡುಕೊಳ್ಳುವ ಮತ್ತು ಸಾಲವಾಗಿ ತರುವ ಪುಸ್ತಕಗಳೆಲ್ಲಾ ಮನಸ್ಸಿನ ಉನ್ನತಿಗೆ ಸಾಧಕವಾಗುವುದೆಂದು ಹೇಳಲಾಗುವುದಿಲ್ಲ. ಆದರೆ ಇತರ ಬಾಬುಗಳೆಲ್ಲಾ ವ್ಯರ್ಥವಾದ ಖರ್ಚು ಎಂದು ಹೇಳಲಾಗುವುದಿಲ್ಲ. ಸಕ್ಕರೆಗೆ ಪುಸ್ತಕಗಳಿಗಿಂತ 27ರಷ್ಟು ಹೆಚ್ಚಾಗಿ ಕೊಡುವುದೇನೂ ಸಂಸ್ಕೃತಿಯ ಕುರುಹಲ್ಲ. ಇದನ್ನೆಲ್ಲಾ ಪರಿಗಣಿಸಿದ ಮೇಲೂ ಮೇಲೆ ಕೊಟ್ಟ ಸಂಖ್ಯೆಗಳಿಂದ ನಮ್ಮ ನಾಗರೀಕತೆಯಲ್ಲಿ ವಿರಾಮವಿರುವೆಡೆಗಳಲ್ಲೆಲ್ಲಾ ಕಲಿಪುರುಷನು ಬಹಳ ಚಟುವಟಿಕೆಯಿಂದಿರುವನೆಂಬುದು ಗೊತ್ತಾಗುವುದು ”

ಇವು ಅಮೆರಿಕದ ವಿಚಾರಗಳು. ಇಂಗ್ಲೆಂಡನ್ನು ಕುರಿತು ಜಾಕ್ಸರವರು ಲ್ಯಾಂಕಷೈರಿಗೆ ಸಂಬಂಧಪಟ್ಟ ಈ ಕೆಳಗಿನ ಉದಾಹರಣೆಯನ್ನು ಹೇಳುತ್ತಾರೆ.

“ ಹೊಸದಾಗಿ ಕಟ್ಟಿದ ನಾಯಿಗಳ ದ್ಯೂತಶಾಲೆಯ ಹೊರಗಡೆ ಬಾಗಿಲು ತೆರೆಯುವುದನ್ನು ನಿರೀಕ್ಷಿಸುತ್ತಾ ಸಹಸ್ರಾರು ಜನರು ನೆರೆದಿದ್ದರು. ವಿಚಾರಿಸಿದ್ದರಲ್ಲಿ ಅವರಲ್ಲಿ ಹೆಚ್ಚು ಜನರು ನಿರುದ್ಯೋಗಿಗಳಾಗಿದ್ದರೆಂಬುದು ನನಗೆ ತಿಳಿಯಿತು. ಸುತ್ತಲಿನ ಅನೇಕ ‘ಮಿಲ್’ ಯಂತ್ರಗಳನ್ನು ಮುಚ್ಚಿ ಜನರು ನಿರುದ್ಯೋಗಿಗಳಾಗಿದ್ದರೂ, ನಾಯಿಗಳ ಬೇಟೆಯೇನೋ ಚೆನ್ನಾಗಿಯೇ ನಡೆಯುತ್ತಿದ್ದಿತು. ಕೆಲವು ದಿವಸಗಳನಂತರ ಕೆಲಸಗಾರರಿಗೆ ಉಪನ್ಯಾಸ ಮಾಡುತ್ತಿದ್ದ ಮಹನೀಯರನ್ನು ಕಂಡಾಗ

ನಾನು "ನಿಮ್ಮ ಉಪನ್ಯಾಸಗಳಿಗೆ ಜನ ಹೆಚ್ಚಾಗಿ ಬರುತ್ತಾರೆಯೇ ? ಅವರಿಗೆ ಈಗ ವಿರಾಮ ಹೆಚ್ಚಾಗಿದೆಯಲ್ಲಾ" ಎಂದು ಕೇಳಿದೆ. ಅವರು ಇಲ್ಲ ಜನರನ್ನು ಎಳೆಯತಕ್ಕ ಇತರ ವಿನೋದಗಳು ಹೆಚ್ಚಾಗಿವೆ. ಅವುಗಳಲ್ಲಿ ನಾಯಿಗಳ ಬೇಟೆಯೂ ಒಂದು" ಎಂದರು.

ಇಂಡಿಯಾದಲ್ಲಿ ನಡೆಯುತ್ತಿರುವ ಅನೇಕ ಹಾನಿಕರವಾದ ಚಟುವಟಿಕೆಗಳಿಗೆ ಇಲ್ಲಿಯ ನಿರುದ್ಯೋಗಗಳೇ ಕಾರಣ. ವಿರಾಮಕ್ಕೂ ದುಷ್ಕೃತ್ಯ ಅಪರಾಧಗಳಿಗೂ ಇರುವ ಸಂಬಂಧವನ್ನು ಕಂಡುಹಿಡಿಯುವುದು ಬಹಳ ಉಪಕಾರಕರವಾದ ಕೆಲಸವಾಗುವುದು. ಅಂತೂ "ಕೆಲಸವಿಲ್ಲದವನಲ್ಲಿ ಸೈತಾನ (ಇಂಗ್ಲಿಷ್ ಸೇರ್ಟ. ಕನ್ನಡ ಕಲಿ) ನಿಗೆ ಕೆಲಸ" ವೆಂಬ ಗಾದೆಯನ್ನು ತಪ್ಪು ಎಂದು ಇದುವರೆಗೆ ಯಾರೂ ಸಕಾರಣವಾಗಿ ತೋರಿಸಿಲ್ಲ. ಮ. ದೇ. 7-12-1935.

---

೩೧. ವಿರಾಮದ ಮೋಹ

ನಾನು ಕೆಲವು ದಿನಗಳ ಹಿಂದೆ ಮಿ. ಎಲ್. ಪಿ. ಜಾಕ್ಸ್‌ರವರ ವಿರಾಮದ ಸೂತ್ರವನ್ನು ಹೇಳಿದೆ "ಮನುಷ್ಯನ ಮನಸ್ಸನ್ನೂ ಆತ್ಮವನ್ನೂ, ಸಾತ್ವಿಕ ಮತ್ತು ತಾಮಸಿಕವೃತ್ತಿಗಳು ಆಕ್ರಮಿಸಬೇಕೆಂದು ಹೊಡೆದಾಡುವ ಕಾಲವೇ ವಿರಾಮ." ವಿರಾಮದ ಕಲೆಯೂ ವಿಜ್ಞಾನವೂ ಎಷ್ಟು ಕಷ್ಟವಾದುದೆಂಬುದನ್ನು ಹೇಳಿದೆ. ಎಲ್ಲಾ ಪ್ರಜೆಗಳಿಗೂ ಸಾಧ್ಯವಾದಷ್ಟು ಹೆಚ್ಚು ವಿರಾಮವನ್ನು ಒದಗಿಸಬೇಕೆಂದು ತವಕಪಡುತ್ತಿರುವ ಬರ್‌ಟ್ರೆಂಡ್ ರಸ್ಸೆಲ್‌ರವರು ಕೆಲಸದ ಕಾಲವನ್ನು 4 ಗಂಟೆಗಳಿಗೆ ಇಳಿಸಬೇಕೆಂದು ಹೇಳುತ್ತಾರೆ. ಆದರೆ ಆ ದಿನ ಗಾಂಧಿಜಿಯವರೊಂದಿಗೆ ಸಂಭಾಷಣೆ ನಡೆಸಿದ ಅವರ ಆಪ್ತಮಿತ್ರರೊಬ್ಬರು "ವಿರಾಮದ ಸಮಸ್ಯೆ ನಿಜವಾಗಿಯೂ

ಅಷ್ಟು ಕಷ್ಟವಾದುದೇ” ಎಂದು ಆಶ್ಚರ್ಯಪಟ್ಟರು. ಅವರು “ನೀವು ಯಾಕೆ 8 ಗಂಟೆಯೇ ಕೆಲಸಮಾಡಬೇಕೆಂದು ಬಲಾತ್ಕರಿಸುತ್ತೀರಿ. ವ್ಯವಸ್ಥಿತವಾದ ಸಮಾಜದಲ್ಲಿ ಎರಡು ಗಂಟೆ ಮಾತ್ರ ಕೆಲಸಮಾಡಿ ಉಳಿದ ಕಾಲವನ್ನೆಲ್ಲಾ ಬುದ್ಧಿ ಮತ್ತು ಕಲೆಗಳ ಬೆಳವಣಿಗೆಗೆ ಉಪಯೋಗಿಸಲು ಸಾಧ್ಯವಿಲ್ಲವೇ?” ಎಂದು ಕೇಳಿದರು.

“ವಿರಾಮವನ್ನು ಹೊಂದಿರುವ, ದೇಹದ ಕೆಲಸಗಾರರೂ, ಬುದ್ಧಿಯ ಕೆಲಸಗಾರರೂ ವಿರಾಮದ ಸರಿಯಾದ ಉಪಯೋಗವನ್ನು ಮಾಡಿಕೊಳ್ಳುತ್ತಿಲ್ಲ ಎಂಬುದು ನಮಗೆ ಗೊತ್ತಿದೆ. ಅನೇಕವೇಳೆ ವಿರಾಮವು ದೌಷ್ಟ್ಯದ ತವರುಮನೆಯಾಗುವುದು ನಮಗೆ ಗೊತ್ತಾಗುತ್ತಿದೆ.”

“ಯಾಕೆ ಸೋಮಾರಿಯಾಗಿ ಕಳೆಯಬೇಕು. ನಿತ್ಯಾ 2 ಗಂಟೆ ದೇಹಶ್ರಮ, 6 ಗಂಟೆ ಬುದ್ಧಿಯ ಶ್ರಮ ಎಂದು ನಾವು ವಿಭಾಗಿಸಿವರೆ ಆದರಿಂದ ರಾಷ್ಟ್ರಕ್ಕೆ ಒಳ್ಳೆಯದಾಗುವುದಿಲ್ಲವೇ?”

“ಅದು ಸಾಧ್ಯವೆಂದು ನನಗೆ ತೋರುವುದಿಲ್ಲ. ನಾನು ಸರಿಯಾಗಿ ಲೆಕ್ಕಾಚಾರಹಾಕಿಲ್ಲ. ಆದರೆ ಮನುಷ್ಯನು ದೇಶಕ್ಕಾಗಿ ಅಲ್ಲದೆ ತನ್ನ ಸ್ವಂತ ಉಪಯೋಗಕ್ಕಾಗಿ ಬುದ್ಧಿಯ ಕೆಲಸಗಳನ್ನು ಮಾಡಿದರೆ ಈ ಏರ್ಪಾಡು ನಡೆಯುವುದಿಲ್ಲ. ಸರ್ಕಾರವು ಅವನ ಎರಡು ಗಂಟೆಯ ದೇಹಶ್ರಮಕ್ಕೆ ಒಳ್ಳೆಯ ಪ್ರತಿಫಲವನ್ನು ಕೊಟ್ಟು ಉಳಿದ ಕೆಲಸವನ್ನು ಏನನ್ನೂ ಕೊಡದೆ ಬಲಾತ್ಕಾರವಾಗಿ ಮಾಡಿಸಿಕೊಂಡರೆ ಪರವಾಯಿಲ್ಲ. ಹಾಗೆ ಮಾಡಿದರೆ ಬಹಳ ಒಳ್ಳೆಯದಾಗುವುದು. ಆದರೆ ಸರ್ಕಾರದ ಬಲಾತ್ಕಾರವಿಲ್ಲದೆ ಇದು ಸಾಧ್ಯವಿಲ್ಲ.”

“ಆದರೆ ನಿಮ್ಮ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ನೀವು ಸ್ವಾಭಾವಿಕವಾಗಿ 8 ಗಂಟೆ ದೇಹಶ್ರಮದ ಕೆಲಸವನ್ನು ಮಾಡಲು ಸಾಧ್ಯವಿಲ್ಲ. ಆದರೆ ಎಂಟುಗಂಟೆಗಳಿಗಿಂತ ಹೆಚ್ಚಾಗಿ ಬುದ್ಧಿಯ ಕೆಲಸವನ್ನು

ಮಾಡಬೇಕಾಗಿದೆ. ನಿಮ್ಮ ವಿರಾಮವನ್ನು ನೀವು ದುರುಪಯೋಗ ಪಡಿಸುತ್ತಿಲ್ಲ."

"ಇದು ಬಲಾತ್ಕಾರದ ಕೆಲಸ. ಇದರಲ್ಲಿ ವಿರಾಮವೇ ಇಲ್ಲ. ಆದರೆ ನಾನು ಟೆನಿಸ್ ಆಡಲು ಹೊರಟರೆ ಅದರಲ್ಲಿ ವಿರಾಮದೊರೆಯುತ್ತದೆ. ಆದರೆ ನನ್ನ ಮಾತನ್ನೇ ತೆಗೆದುಕೊಂಡರೂ, ನಾವೆಲ್ಲಾ 8 ಘಂಟೆ ದೇಹಶ್ರಮಪಟ್ಟರೆ ನಮ್ಮ ಮನಸ್ಸು ಇನ್ನೂ ಹೆಚ್ಚು ಉತ್ತಮವಾಗುವುದೆಂದು ನಾನು ನಿಮಗೆ ಖಂಡಿತ ಹೇಳುತ್ತೇನೆ. ನಮ್ಮಲ್ಲಿ ಒಂದು ಸೋಮಾರಿತನದ ಆಲೋಚನೆಗಳೂ ಉಂಟಾಗುವುದಿಲ್ಲ. ನನ್ನ ಮನಸ್ಸು ಅಂತಹ ಆಲೋಚನೆಗಳಿಂದ ಪೂರ್ಣವಾಗಿ ಬಿಡುಗಡೆಯನ್ನು ಹೊಂದಿಲ್ಲವೆಂದು ನಿಮಗೆ ಹೇಳಬಹುದು. ಈಗಲೂ ನಾನು ಈರೀತಿ ಇರುವುದಕ್ಕೆ ಕಾರಣ ದೇಹಶ್ರಮದ ಬೆಲೆಯನ್ನು ನಾನು ನನ್ನ ಬಾಲ್ಯದಲ್ಲಿಯೇ ಕಂಡುಕೊಂಡುದೇ ಆಗಿದೆ."

"ದೇಹಶ್ರಮದಲ್ಲಿ ಅಂತಹ ಸ್ವಾಭಾವಿಕವಾದ ಗುಣವಿರುವುದಾದರೆ ನಮ್ಮ ಜನರು 8 ಗಂಟೆಗಳಿಗಿಂತ ಹೆಚ್ಚು ಕೆಲಸಗಳನ್ನೇ ಮಾಡುತ್ತಿದ್ದರೂ ಅವರ ಮನಸ್ಸು ಹೆಚ್ಚು ಶುದ್ಧವೂ ಚೈತನ್ಯವುಳ್ಳದುದೂ ಆಗಿರುವುದು ಕಾಣುವುದೇ ಇಲ್ಲವಲ್ಲ."

"ಬುದ್ಧಿಯ ಕೆಲಸ ಹೇಗೆ ಜ್ಞಾನದಾಯಕವಲ್ಲವೋ ಹಾಗೆಯೇ ಬರಿಯ ದೇಹಶ್ರಮವೂ ಜ್ಞಾನದಾಯಕವಲ್ಲ. ನಮ್ಮ ಜನರಿಗೆ ತಮಗೆ ತಿಳಿಯದಂತೆಯೇ ಇದು ನಿತ್ಯದ ಬೇಜಾರಿನ ಕೆಲಸವಾಗಿದೆ. ಈ ಕೂಲಿ ಯಾರ ಮನಸ್ಸನ್ನಾದರೂ ಕಲ್ಲು ಮಾಡುತ್ತದೆ. ಸವರ್ಣ ಹಿಂದುಗಳ ಮೇಲೆ ಈ ಭಾಗದಲ್ಲಿ ನನ್ನ ಆಕ್ಷೇಪಣೆ ಬಲವಾಗಿದೆ. ಅವರು ಕೂಲಿಗಳಿಗೆ ಕೆಲಸವು ಜೀತವಾಗುವಂತೆ ಮಾಡಿಬಿಟ್ಟಿದ್ದಾರೆ. ಆ ಕೆಲಸಗಾರರಿಗೆ ತಮ್ಮ ಕೆಲಸದಲ್ಲಿ ಉತ್ಸಾಹವೂ ಆನಂದವೂ ಇಲ್ಲ. ಕೂಲಿಗಳೂ ಇತರರಂತೆ ಸಮಾಜದಲ್ಲಿ ಗೌರವಕ್ಕೆ ಒಳಗಾಗಿದ್ದರೆ ಅವರ ಸ್ಥಿತಿಯು ಹೆಮ್ಮೆಯ

ಸ್ಥಿತಿಯಾಗಿರುತ್ತಿದ್ದಿತು. ಇದು ಕಲಿಯುಗ, ಸತ್ಯಯುಗದಲ್ಲಿ ಸಮಾಜವು ಇದಕ್ಕಿಂತ ಉತ್ತಮವಾಗಿ ವ್ಯವಸ್ಥಿತವಾಗಿದ್ದಿತು. ನಮ್ಮದು ಹಳೇದೇಶ. ಇಲ್ಲಿ ಅನೇಕ ನಾಗರೀಕತೆಗಳು ಬಂದುಹೋಗಿವೆ. ಯಾವ ಕಾಲದಲ್ಲಿ ಹೇಗೆ ಇದ್ದಿತೆಂದು ಹೇಳುವುದು ಕಷ್ಟ. ಆದರೆ ನಮ್ಮ ಇಂದಿನ ಸ್ಥಿತಿಗೆ ಕಾರಣ ನಾವು ಬಹು ಕಾಲದಿಂದ ಶೂದ್ರರನ್ನು ಉದಾಸೀನಮಾಡಿದುದೇ. ಇಂದಿನ ಹಳ್ಳಿಯ ಸಂಸ್ಕೃತಿ (ಅದನ್ನು ಸಂಸ್ಕೃತಿ ಎಂದು ಕರೆಯಬಹುದಾದರೆ) ಘೋರವಾದ ಸಂಸ್ಕೃತಿ. ಹಳ್ಳಿಯವರು ದನಗಳಿಗಿಂತ ಕಡೆಯಾಗಿ ಜೀವಿಸುತ್ತಾರೆ. ನಮ್ಮ ಕೆಲಸಗಾರರನ್ನು ನಾವು, ಅವರು ಸ್ವಾಭಾವಿಕವಾಗಿ ಜೀವಿಸಿ ಕೆಲಸಮಾಡಲು ಸಾಧ್ಯವಿಲ್ಲದ ಮಟ್ಟಿಗೆ ಅವನತಿಗೆ ತಂದಿದ್ದೇವೆ. ನಮ್ಮ ಜನರು ಬುದ್ಧಿಯಿಂದಲೂ ಸಂತೋಷದಿಂದಲೂ ಕೆಲಸಮಾಡಿದ್ದರೆ ನಮ್ಮ ಸ್ಥಿತಿಯು ಇಂದು ಬೇರೆ ರೀತಿಯಾಗಿರುತ್ತಿದ್ದಿತು.

"ಅಂದರೆ ಕೆಲಸವನ್ನೂ ಸಂಸ್ಕೃತಿಯನ್ನೂ ಬೇರೆಬೇರೆ ಮಾಡಲು ಸಾಧ್ಯವಿಲ್ಲ?"

"ಇಲ್ಲ. ಹಿಂದೆ ರೋಮ್‌ನಲ್ಲಿ ಹಾಗೆ ಮಾಡಲು ಪ್ರಯತ್ನಿಸಿದರು. ಸಾಧ್ಯವಾಗಲಿಲ್ಲ. ಕೆಲಸವಿಲ್ಲದ ಸಂಸ್ಕೃತಿಯು ಅಥವ ಕೆಲಸದ ಫಲವಲ್ಲದ ಸಂಸ್ಕೃತಿಯು, ಒಬ್ಬ ರೋಮನ್ ಕ್ಯಾಥೋಲಿಕ್ ಬರಹಗಾರನು ಹೇಳುವಂತೆ ವಾಮಿಟೋರಿಯಾ (vomitoria) ಆಗುವುದು. ರೋಮನರು ಸೋಮಾರಿತನದ ಸುಖವನ್ನೇ ಒಂದು ಅಭ್ಯಾಸವಾಗಿ ಮಾಡಿಕೊಂಡರು. ಆದರಿಂದ ಅವರು ನಾಶವಾದರು. ಮನುಷ್ಯನು ದಿನವೆಲ್ಲಾ ಓದುವುದರಿಂದಲೂ ಬರೆಯುವುದರಿಂದಲೂ ಉಪನ್ಯಾಸಗಳನ್ನು ಮಾಡುವುದರಿಂದಲೂ ತನ್ನ ಮನಸ್ಸನ್ನು ಬೆಳಸಿಕೊಳ್ಳಲಾರನು. ನನ್ನ ವ್ಯಾಸಂಗವೆಲ್ಲಾ ಬಂದೀಕಾನೆಯಲ್ಲಿ ನನಗೆ ವಿರಾಮ ದೊರೆತಾಗ ಮಾಡಿದುದು. ಆ ವ್ಯಾಸಂಗವನ್ನೆಲ್ಲಾ ನಾನು ಒಂದು ಉದ್ದೇಶಕ್ಕಾಗಿಯೇ ಮಾಡಿದುದರಿಂದ ನನಗೆ ಅದರಿಂದ ಪ್ರಯೋಜನವಾಗಿದೆಯೆಂದು ಹೇಳ

ಬಹುದು. ಅನೇಕ ದಿನ ನಾನು 8 ಗಂಟೆ ದೇಹಶ್ರಮದ ಕೆಲಸಗಳನ್ನು ಮಾಡಿದ್ದರೂ ನನ್ನ ಮನಸ್ಸು ಯಾವಾಗಲೂ ಮಂಕಾಗಿಯೂ ಬೇಜಾರಾಗಿಯೂ ಇರಲಿಲ್ಲ. ನಾನು ಕೆಲವು ದಿನ 40 ಮೈಲಿ ನಡೆದಿದ್ದೇನೆ. ಆದರೂ ನನಗೆ ಬೇಸರಿಕೆಯಾಗಲಿಲ್ಲ."

"ಹೌದು ನಿಮ್ಮ ಮನಸ್ಸು ಒಳ್ಳೆ ಪರಿಪಕ್ವವಾಗಿದ್ದಿತು."

"ಇಲ್ಲ. ಸ್ಕೂಲಿನಲ್ಲಿಯೂ ಇಂಗ್ಲೆಂಡಿನಲ್ಲಿಯೂ ಇದ್ದಾಗ ನಾನು ಎಷ್ಟು ಸಾಮಾನ್ಯನಾಗಿದ್ದೆನೆಂಬುದು ನಿಮಗೆ ತಿಳಿಯದು. ಚರ್ಚಾ ಕೂಟಗಳಲ್ಲಿಯೂ ಸಸ್ಯಾಹಾರಿಗಳ ಕೂಟಗಳಲ್ಲಿಯೂ ನಿಂತುಕೊಂಡು ಮಾತನಾಡುವುದಕ್ಕೆ ಕೂಡ ನನಗೆ ಧೈರ್ಯವಿರಲಿಲ್ಲ. ನನಗೆ ಹೆಚ್ಚಾದ ಅದ್ಭುತವಾದ ಶಕ್ತಿಗಳಿದ್ದುವೆಂಬ ಅಭಿಪ್ರಾಯವನ್ನು ಇಟ್ಟುಕೊಳ್ಳಬೇಡಿ. ದೇವರು ಇಷ್ಟಪಟ್ಟೇ ಆಗ ನನಗೆ ಮಾತನಾಡುವ ಶಕ್ತಿಯನ್ನು ಕೊಡಲಿಲ್ಲ. ನಮ್ಮ ಪೈಕಿ ನಾನೇ ಅತ್ಯಂತ ಕಡಿಮೆಯಾಗಿ ಓದಿರುವೆನೆಂಬುದು ನಿಮ್ಮ ಜ್ಞಾಪಕದಲ್ಲಿರಲಿ. ಮ.ದೇ. 1-8-1936

೩೨ ರಬ್ಬರ್ ಗಾಲಿಗಳು

ಈಗ್ಗೆ ಸುಮಾರು ಹತ್ತು ವರ್ಷಗಳಿಂದಲೂ ಇಂಗ್ಲೆಂಡ್ ದೇಶದಲ್ಲಿ ನಡೆಯುತ್ತಿರುವ ಗ್ರಾಮಕೈಗಾರಿಕೆಯ ಪುನರುಜ್ಜೀವನ ಚಳುವಳಿಯನ್ನು ಕುರಿತು ಸ್ವಲ್ಪ ದಿನಗಳ ಹಿಂದೆ ಈ ಪತ್ರಿಕೆಯಲ್ಲಿ ಕೆಲವು ವಿವರಗಳು ಬಂದದ್ದು ವಾಚಕರಿಗೆ ಜ್ಞಾಪಕವಿರಬಹುದು. ಲಂಡನ್ನಿನ ಗ್ರಾಮಕೈಗಾರಿಕಾ ಸಂಸ್ಥೆಯ ಮುಖ್ಯಾಧಿಕಾರಿಗಳಿಗೆ ನಾನು ಕೆಲವು ಪ್ರಶ್ನೆಗಳನ್ನು ಹಾಕಿದ್ದೆ. ಗಾಡಿಗಳಿಗೆ ರಬ್ಬರು ಗಾಲಿಗಳನ್ನು ಹಾಕುವ ಭಾಗಕ್ಕೆ ಸಂಬಂಧಪಟ್ಟ ಅವರ ಉತ್ತರ ಈ ಕೆಳಗಿನಂತೆ ಇದೆ—

“ ರಬ್ಬರು ಗಾಲಿಗಳನ್ನು ಉಪಯೋಗಿಸುವುದರಿಂದ ಹಳ್ಳಿಯ ಕೆಲಸಗಾರನು ಮರೆಯಾಗುತ್ತಾನೆಂಬುವದನ್ನು ನಾನೂ ಒಪ್ಪುತ್ತೇನೆ. ಆದರೆ ಅದು ಅನಿವಾರ್ಯವೆಂದು ತೋರುವ ಮಟ್ಟಿಗೆ ರಬ್ಬರು ಗಾಲಿಗಳು ಉಪಯೋಗಕರವಾಗಿವೆ. ಇಲ್ಲಿ ಬದಲಾಯಿಸುವ ಕಾಲದಲ್ಲಿ ಹಳ್ಳಿಯ ಕೆಲಸಗಾರನಿಗೆ ಕೆಲಸವು ಹೆಚ್ಚಾಗಿಯೇ ಸಿಕ್ಕಿತು. ಯಾಕೆಂದರೆ ಇರುವ ಗಾಡಿಗಳನ್ನು ತಗ್ಗಾದ ಚಕ್ರಗಳಿಗಾಗಿ ತಿರುಗಿಸುವುದರಲ್ಲಿ ಅವನಿಗೆ ಕೆಲಸ ಹೆಚ್ಚಾಗಿಯೇ ಸಿಕ್ಕಿತು. ನನ್ನ ಮಟ್ಟಿಗೆ ಹಳೇಕಾಲದ ಕೈಗಾರಿಕೆಯು ನಾಶವಾಗುವುದು ಇಷ್ಟವಿಲ್ಲ. ಆದರೆ ಈ ಬದಲಾವಣೆಯನ್ನು ಎದುರಿಸುವುದು ಬುದ್ಧಿವಂತಿಕೆಯಲ್ಲ. ನಿಮ್ಮ ದೇಶಕ್ಕೂ ಇದೇ ವಾದವು ಅನ್ವಯಿಸುವುದೋ ಇಲ್ಲವೋ ನಾನು ಹೇಳಲಾರೆ. ನಮ್ಮ ದೇಶದಲ್ಲಿ ರಬ್ಬರು ಚಕ್ರದಿಂದ ಹಳ್ಳಿಯ ಕಮ್ಮಾರನ ಕೆಲಸ ಎಲ್ಲೋ ಸ್ವಲ್ಪ ಮಾತ್ರ ಕಡಿಮೆಯಾಗಿದೆ. ಈ ಹೊಸ ಬದಲಾವಣೆಯಿಂದ ಅವನಿಗೆ ಕೆಲಸ ಹೆಚ್ಚಿದರೂ ಹೆಚ್ಚಬಹುದು.”

ನಮ್ಮ ದೇಶದಲ್ಲಿಯೂ ಇಂತಹ ಅಭಿಪ್ರಾಯಗಳನ್ನು ಅನೇಕರು ಪ್ರಕಟಿಸುತ್ತಿರುವುದರಿಂದ ಇಲ್ಲಿ ಅವುಗಳನ್ನು ಪರೀಕ್ಷಿಸುವುದು ಒಳ್ಳೆಯದು. ಮೊದಲನೆಯದಾಗಿ ಇಂಗ್ಲೆಂಡಿನಲ್ಲಿ ಇರುವ ಸ್ಥಿತಿ ಇಂಡಿಯಾದಲ್ಲಿ ಇಲ್ಲ. ಪೂರ್ಣವಾಗಿ ಯಂತ್ರಗಳ ಪ್ರಾಬಲ್ಯವೇ ಬಲವಾಗಿರುವ ಪ್ರಪಂಚದ ದೇಶಗಳಲ್ಲಿ ಬ್ರಿಟನ್ನು ಒಂದು. “ ಬಂಡವಾಳದಿಂದ ಪದಾರ್ಥಗಳನ್ನು ತಯಾರಿಸುವ ಕ್ರಮಕ್ಕೇ ಅಲ್ಲಿ ಅತಿ ಪ್ರಾಮುಖ್ಯತೆ. ಕೂಲಿಗಾಗಿ ಕೆಲಸ ಮಾಡುವುದೇ ಅಲ್ಲಿಯ ಬಹುಭಾಗದ ಜನರ ಮುಖ್ಯ ಕಸಬು.” 1931ನೇ ಜನಗಣತಿಯ ಪ್ರಕಾರ “ ಇಂಗ್ಲೆಂಡಿನಲ್ಲಿ ಕೆಲಸಮಾಡುತ್ತಿರುವ 21326600 ಜನರ ಪೈಕಿ 18872000 ಅಥವಾ ಸೇಕಡಾ 88.4 ರಷ್ಟು ಜನರು ಕೂಲಿಗಳಾಗಿಯೇ ಇದ್ದರು. ಉಳಿದ 1273000 ಅಥವಾ ಸೇಕಡ 6 ರಷ್ಟು ಜನರು ಸ್ವತಂತ್ರರಾಗಿ ಕೆಲಸಮಾಡುತ್ತಿದ್ದರು.” ಅಂದರೆ ತಾವೇ ತಮ್ಮ

ಸ್ವಂತ ಜೀವನೋಪಾಯಗಳಲ್ಲಿ ಕೆಲಸಮಾಡುತ್ತಿದ್ದರೆಂದು ಅರ್ಥ. ಸೇಕಡ 6 ಎಂಬ ಸಂಖ್ಯೆಯಿಂದ ಇಂಗ್ಲೆಂಡಿನಲ್ಲಿ ಹಿಂದಲ ತಯಾರಿ ಕ್ರಮವು ಎಷ್ಟರಮಟ್ಟಿಗೆ ಮಾತ್ರ ಉಳಿದುಕೊಂಡಿದೆ ಎಂಬುದು ಗೊತ್ತಾಗುತ್ತದೆ. ಉಳಿದ 1180000 ಅಥವಾ ಸೇಕಡ 5.5 ಜನರು ಈ ದೊಡ್ಡ ಕೈಗಾರಿಕಾ ಕ್ಷೇತ್ರಗಳನ್ನು ಅದರ ಕೂಲಿಗಳನ್ನೂ ಅಧೀನದಲ್ಲಿ ಇಟ್ಟುಕೊಂಡ ಒಡೆಯರಾಗಿದ್ದಾರೆ. ಇಂಗ್ಲೆಂಡಿನಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು "ತಮ್ಮ ಕಾಲ ಮೇಲೆ ತಾವು ನಿಂತಿವೆ" ಎಂಬುದು ನಿಜ. "ಆದರೆ ಕೈಗಾರಿಕೆ ಮತ್ತು ವ್ಯಾಪಾರದ ಕಾರ್ಯಕ್ರಮಗಳಲ್ಲಿ ಅವುಗಳ ಪ್ರಭಾವ ಏನೇನೂ ಇಲ್ಲ. ಬಂಡವಾಳದ ಅಧಿಕಾರಿಗಳು ಮರೆತು ಬಿಟ್ಟುಹೋದ ಸ್ಥಳಗಳಲ್ಲಿ ಅಲ್ಪಸ್ವಲ್ಪ ಕೆಲಸಮಾಡಿಕೊಂಡು ಜೀವಿಸುವುದರ ಹೊತ್ತಿಗೆ ಅವಕ್ಕೆ ಸಾಕಾಗಿ ಹೋಗುತ್ತದೆ. ದೊಡ್ಡ ಪ್ರಮಾಣದಲ್ಲಿ ತಯಾರಿಸುವುದೇ ಈಗ ಬಂಡವಾಳವು ಅನುಸರಿಸುತ್ತಿರುವ ದಾರಿ. ಅದು ಪ್ರತಿಯೊಂದು ಉದ್ಯೋಗದಲ್ಲಿಯೂ ಸಣ್ಣಕೈಗಾರಿಕೆಗಳನ್ನು ತುಳಿದಿದೆ. ಕೈಗಾರಿಕೆಗಳು ಬಂಡವಾಳದ ಸಂದಿಯಲ್ಲಿ ಎಲ್ಲೋ ಕಾಲಹಾಕುತ್ತಿವೆ." ಆದರೆ ಇಂಡಿಯಾದಲ್ಲಿ ಸಣ್ಣ ಕೈಗಾರಿಕೆಗಳ ಪದ್ಧತಿ ಇನ್ನೂ ಪ್ರಬಲವಾಗಿಯೇ ಇದೆ. ಸೇಕಡ 10.40 (3½ ಕೋಟಿ) ಉಳ್ಳ ಕೈಗಾರಿಕೆಗಳಲ್ಲಿ ತೊಡಗಿರುವ ಜನದ ಪೈಕಿ ಸೇಕಡ 0.4 ಮಾತ್ರ ದೊಡ್ಡಪ್ರಮಾಣದ ಕೈಗಾರಿಕೆಯಲ್ಲಿ ತೊಡಗಿದೆ. ಉಳಿದ ಸೇಕಡ 10 ಕೈಕಸಬುಗಳನ್ನು ಅವಲಂಬಿಸಿವೆ. ಆದ್ದರಿಂದ ಕೈಕಸಬುದಾರರ ಸಮಸ್ಯೆ ಅಲ್ಲಿ ಇರುವುದಕ್ಕಿಂತ ಇಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿದೆ. ಇಲ್ಲಿ ಯಾವುದಾದರೂ ಒಂದು ಸಣ್ಣ ಕೈಗಾರಿಕೆಯು ನಿಂತುಹೋದರೆ ಇಂಗ್ಲೆಂಡಿನಲ್ಲಿ ಒಂದು ಕೈಗಾರಿಕೆ ನಿಂತರೆ ಎಷ್ಟು ಜನರಿಗೆ ಕಷ್ಟವಾಗುವುದೋ ಅದಕ್ಕಿಂತ ಇಲ್ಲಿ ಹೆಚ್ಚು ಜನರಿಗೆ ಕಷ್ಟವಾಗುವುದು.

ರಬ್ಬರು ಗಾಲಿಗಳ ಉತ್ಸಾಹಶಾಲಿಗಳು ಪ್ರಚಾರ ಮಾಡುತ್ತಿರುವ ಆ ಗಾಲಿಗಳು ಇಂಡಿಯಾದಲ್ಲಿ ತಯಾರಾದುವುಗಳಾದಾಗಲೂ ಪೂರ್ಣ

ವಾಗಿ ಸ್ವದೇಶಿಗಳಲ್ಲ. ಯಾಕೆಂದರೆ ಅವುಗಳ ಸ್ವಾಧೀನವು ಇಂಡಿಯಾ ದವರ ಕೈಯ್ಯಲ್ಲಿ ಇಲ್ಲ. ಹಳ್ಳಿಯ ಗಾಡಿಗಳಿಗೆ ರಬ್ಬರುಗಾಲಿಗಳನ್ನು ಬಹಿಷ್ಕರಿಸಲು, ಇದೇ ನಮಗೆ ಅತ್ಯಂತ ಮುಖ್ಯವಾದ ಕಾರಣ. ಇಂಡಿಯಾದೇಶದ ರೈತರ ಹಸಿವಿನಿಂದ ಪರದೇಶದ ಬಂಡವಾಳಗಾರರು ಕೊಬ್ಬುತ್ತಿರುವುದಕ್ಕೆ ಇದು ಇನ್ನೊಂದು ಉದಾಹರಣೆಯಾಗಬಹುದು.

ಸ್ವದೇಶೀ ಅಲ್ಲವೆಂಬ ಈ ಕಾರಣವನ್ನು ಸದ್ಯಕ್ಕೆ ಬಿಟ್ಟು ಹಿಂದಲ ಕಾಗದದಲ್ಲಿ ಬರೆದಿರುವ ಈ ಹೊಸ ಗಾಲಿಗಳಿಂದ ಹಳ್ಳಿಯ ಕಮ್ಮಾರನಿಗೆ ಹೆಚ್ಚು ಕೆಲಸ ಸಿಕ್ಕುವುದೆಂಬ ಸಂಗತಿಯಕಡೆಗೆ ತಿರುಗೋಣ. ಬದಲಾವಣೆಯಕಾಲದಲ್ಲಿ ಮಾತ್ರ ಕೆಲಸ ಹೆಚ್ಚಬಹುದೆಂದು ಒಪ್ಪೋಣ. "ಕೆಲವು ದೊಡ್ಡ ಕೈಗಾರಿಕೆಗಳ ಪ್ರಾರಂಭವು ಅನೇಕವೇಳೆ ಸಣ್ಣ ಕೈಗಾರಿಕೆಗಳ ಉದ್ಯಮದವರಿಗೆ ಹೊಸ ಪ್ರೋತ್ಸಾಹವನ್ನು ಕೊಡುವುದು. ಕಳೆದ ಇಪ್ಪತ್ತು ವರುಷಗಳಿಂದ ವ್ಯಾಪಾರದ ಶಾಸ್ತ್ರವೂ ಜೀವನದ ಕ್ರಮದಲ್ಲಿ ಏರಿದ ಮಟ್ಟವೂ ಹೊಸ ಹೊಸದಾದ ಕೈಗಾರಿಕೆಗಳನ್ನು ಸೃಷ್ಟಿ ಮಾಡಿವೆ. ಸ್ವತಂತ್ರವಾಗಿ ತಯಾರುಮಾಡಬೇಕೆಂದು ಹೊರಡುವ ಸಣ್ಣ ಸಣ್ಣ ಉದ್ಯಮಗಾರರಿಗೆ ಅಲ್ಲಿ ಅವಕಾಶವಿದೆ" ಎಂಬುದೂ ನಿಶ್ಚಯ. ಆದರೆ ಇದು ಸ್ವಲ್ಪದಿನಗಳ ಮಟ್ಟಿಗೆ ಮಾತ್ರ. ಯಾಕೆಂದರೆ ಉದ್ಯೋಗವು ಹೆಚ್ಚು ಹೆಚ್ಚು ಪ್ರಚಾರವಾಗಿ ಸ್ಥಿಮಿತಕ್ಕೆ ಬಂದಕೂಡಲೆ ಅವು ದೊಡ್ಡ ಪ್ರಮಾಣದ ಕೈಗಾರಿಕೆಗಳಾಗುವಂತೆ ಅನುಕೂಲಿಸಿಕೊಳ್ಳುತ್ತವೆ. ಆಗ ಪದಾರ್ಥಗಳನ್ನು ತಯಾರಿಸುವ ಮತ್ತು ಮಾರುವ ಎರಡು ಕಡೆಯೂ ಸಣ್ಣ ಕೈಗಾರಿಕೆಯವನಿಗೆ ದೊಡ್ಡ ಕೈಗಾರಿಕೆಯ ಪೈಪೋಟಿ ಜಾಸ್ತಿಯಾಗುತ್ತದೆ. ಆಗ ಸಣ್ಣ ಕೈಗಾರಿಕೆಯವನು ಬದುಕಬೇಕಾದರೆ ಅವನು ಮತ್ತೆ ಹೊಸ ಉದ್ಯಮಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಮೋಟಾರುಗಳನ್ನು ಸರಿಮಾಡುವ ಕೈಗಾರಿಕೆಯು (Garage Industry) ಇಂಗ್ಲೆಂಡು ಮತ್ತು ಅಮೆರಿಕಾವಲ್ಲಿ ಹೊಸಬಗೆಯ

ಉದ್ಯೋಗವನ್ನು ಕಲ್ಪಿಸಿದ ಕೈಗಾರಿಕೆ ಎಂದು ಹೇಳುತ್ತಾರೆ. ಇಂಗ್ಲೆಂಡು ಮತ್ತು ಅಮೆರಿಕಾದಲ್ಲೆಲ್ಲ ಅಸಂಖ್ಯಾತವಾಗಿ ಹರಡಿರುವ ಮೋಟಾರು ಸರಿಮಾಡುವ ಅಂಗಡಿಗಳು, ದೊಡ್ಡ ಕೈಗಾರಿಕೆಯು ಹೇಗೆ ಒಂದುಕಡೆ ಇರುವ ಸಣ್ಣ ಕೈಗಾರಿಕೆಯವರನ್ನೆಲ್ಲ ನಾಶಮಾಡಿದರೂ ಮತ್ತೊಂದು ಕಡೆಯಲ್ಲಿ ಅವರನ್ನೆಲ್ಲ ಬೇರೆ ರೂಪದಲ್ಲಿ ಸೃಷ್ಟಿಸುತ್ತದೆ ಎಂಬುದಕ್ಕೆ ಉದಾಹರಣೆ. ಕಳೆದ ಕೆಲವು ವರ್ಷಗಳಿಂದ ಬೆಳೆಯುತ್ತಿರುವ ಅನೇಕ ಮೋಟಾರುಗಳ ಮೇಲೆ ಅವಲಂಬಿಸಿ ತನ್ನ ಉನ್ನತಿಯನ್ನು ಒಬ್ಬ ಕೈಗಾರಿಕೆಯವನು ಹೊಂದುತ್ತಿರುವುದಕ್ಕೆ ಈ ಮೋಟಾರು ಅಂಗಡಿಗಳೇ ಸಾಕ್ಷಿ.'' ಆದರೆ ಮೋಟಾರು ಸರಿಮಾಡುವ ಅಂಗಡಿಯವನ ಉನ್ನತಿಯು ಬಹಳ ಕ್ಷಣಿಕವಾದುದು. ಯಾಕೆಂದರೆ ಅನುಕೂಲವಾಗಿ ಇದ್ದರೆಂದು ತೋರಿದ ಕಾಲದಲ್ಲೂ ಕೂಡ ಈ ಮೋಟಾರು ಅಂಗಡಿಗಳ ಮಾಲಿಕರು "ಹಣವನ್ನು ಸಾಲಮಾಡಬೇಕಾಯಿತು. ಮತ್ತು ಅವರು ದೊಡ್ಡ ದೊಡ್ಡ ಮೋಟಾರು ಕಾರ್ಖಾನೆಗಳ ಹಿಡಿತದಲ್ಲಿ ಸಿಕ್ಕಿ ಅವರ ದಳ್ಳಾಳಿಗಳಾಗಿ ಕೆಲಸಮಾಡಬೇಕಾಯಿತು.''

ಇದು ಈ ಕತೆಗೆ ಕೊನೆಯಲ್ಲ. "ಈಗ ದೊಡ್ಡ ಕೈಗಾರಿಕೆಗಳ ಹೊರಗಿದ್ದ ಈ ಸಣ್ಣ ಕೈಗಾರಿಕೆಗಳನ್ನು ನುಂಗಿ ನಿದಾನವಾಗಿ ಅವರನ್ನೆಲ್ಲ ಓಡಿಸುವುದು ಪ್ರಾರಂಭವಾಗಿದೆ. ಮೋಟಾರು ಅಂಗಡಿ ಮಾಲಿಕನು (Garrage proprietor) ಯಾವ ರೀತಿ ತನ್ನ ಉದ್ಯೋಗವನ್ನು ಬಿಟ್ಟು ಓಡುತ್ತಿದ್ದಾನೆ ಮತ್ತು ಹೇಗೆ ಕೊನೆಯಲ್ಲಿ ನಿರ್ನಾಮವಾಗುತ್ತಾನೆ" ಎಂಬುದು ಈ ಕೆಳಗಿನ ಮಾತುಗಳಿಂದ ಗೊತ್ತಾಗುವುದು.

"ಮೋಟಾರು ರಿಪೇರಿಯ ಕೈಗಾರಿಕೆಯ ಮಾತು ಈ ಸಂದರ್ಭಕ್ಕೆ ಸರಿಹೋಗುತ್ತದೆ. ಬಂಡವಾಳದಿಂದ ಜಾಯಿಂಟ್ ಸ್ಟಾಕ್ ಕಂಪೆನಿಗಳಾಗಿ ತಮ್ಮ ಷೇರು ಹೋಲ್ಡರುಗಳಿಗೆ ಸ್ವಲ್ಪವೂ ಅವಕಾಶವನ್ನು ಕೊಡದೆ

ಇರುವ ಗ್ಯಾರೇಜುಗಳ ಸಂಖ್ಯೆಯು ಹೆಚ್ಚುತ್ತಿದೆ. ಇಷ್ಟೇ ಅಲ್ಲದೆ ಒಂದು ವಿಧವಾದ ಗ್ಯಾರೇಜುಗಳ ಸರಪಣಿಯು (ಉದಾಹರಣೆಗೆ ಬ್ರಿಟನ್ನಿನ ಲೆಕ್ಸ್ ಗ್ಯಾರೇಜು) ಹುಟ್ಟಿವೆ. ಈ ಗ್ಯಾರೇಜುಗಳ ಸರಪಳಿಗಳ ಯಜಮಾನರು ದೊಡ್ಡ ದೊಡ್ಡ ಬಂಡವಾಳದ ಕಂಪೆನಿಗಳೇ ಆಗಿದ್ದಾರೆ. ಅವರು ಸಾವಿರಾರು ಕೆಲಸಗಾರರನ್ನು ನೇಮಿಸಿಕೊಂಡಿದ್ದಾರೆ. ಆ ಕೆಲಸಗಾರರಿಗೆ ಸಾಧಾರಣವಾದ ಕೂಲಿಗಳಿಗಿಂತ ಯಾವ ಹೆಚ್ಚಿನ ಹಕ್ಕೂ ಇಲ್ಲ. ಸಣ್ಣ ಸಣ್ಣ ಗ್ಯಾರೇಜುಗಳಿಗೂ ಈ ದೊಡ್ಡ ಗ್ಯಾರೇಜುಗಳಿಗೂ ಉಂಟಾಗಿರುವ ಈ ಪೈಪೋಟಿಯಲ್ಲಿ ಯಾವುದು ನಾಶವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಸಣ್ಣ ಸಣ್ಣ ಗ್ಯಾರೇಜುಗಳು ಪಟ್ಟಣಗಳನ್ನೂ ದೊಡ್ಡ ದೊಡ್ಡ ರಸ್ತೆಗಳನ್ನೂ ಬಿಟ್ಟು ಹಳ್ಳಿಗಳಿಗೂ ಅಡ್ಡರಸ್ತೆಗಳಿಗೂ ಹೋಗಿ ಸೇರಿಕೊಳ್ಳುತ್ತವೆ. ಯಾಕೆಂದರೆ ಸ್ವತಃ ಗ್ಯಾರೇಜಿನ ಯಜಮಾನನೂ ಕೆಲಸಗಾರನೂ ಆದ ಸಣ್ಣ ಕೈಗಾರಿಕೆಯವನಿಗೆ ಚೆನ್ನಾಗಿ ವ್ಯವಸ್ಥಿತವಾದ ಧನಬಲವುಳ್ಳ ಕಂಪೆನಿಗಳನ್ನು ಎದುರಿಸಲು ಶಕ್ತಿಯಿಲ್ಲ.'' ಈ ಓಟದಲ್ಲಿ ಎಲ್ಲೆಲ್ಲೂ ಸಣ್ಣ ಕೈಗಾರಿಕೆಯವನು ನಾಶವಾಗುತ್ತಿದ್ದಾನೆ.

" ಹೀಗೆ ಹೆಚ್ಚು ಹಣವುಳ್ಳ ಸಂಸ್ಥೆಯು ತಲೆಹಾಕಿದ ಕೂಡಲೆ ಸಣ್ಣ ಸಣ್ಣ ಉದ್ಯಮಗಾರರು ಸ್ವಲ್ಪಕಾಲ ಹಿಂದುಗಡೆ ನಿಂತುಕೊಂಡು ಅದನ್ನು ಎದುರಿಸಿದಂತೆ ಮಾತ್ರ ನಟಿಸಲು ಶಕ್ತರಾಗಿರುತ್ತಾರೆ. ಎಲ್ಲೆಲ್ಲೂ ಹೀಗೆಯೇ. ಅನೇಕ ಕಾಲಗಳಿಂದಲೂ ಒಬ್ಬ ವ್ಯಕ್ತಿಯ ಉದ್ಯೋಗಗಳೆಂದು ಗಣಿಸಲ್ಪಟ್ಟಿದ್ದ ಕೆಲಸಗಳನ್ನೆಲ್ಲ—ಉದಾಹರಣೆಗಾಗಿ ಮನೆಗಳನ್ನು ಸರಿಮಾಡುವುದು-ದೊಡ್ಡದೊಡ್ಡ ಬಂಡವಾಳದ ಕಂಟ್ರಾಕ್ಟರುಗಳು ನಿರ್ದಯದಿಂದ ಆಕ್ರಮಿಸಿಕೊಳ್ಳುತ್ತಿದ್ದಾರೆ."

ರಬ್ಬರು ಗಾಲಿಗಳು ಬಂದರೆ ನಮ್ಮ ಹಳ್ಳಿಯ ಬಡಗಿಗಳಿಗೂ ಕಮ್ಮಾರರಿಗೂ ತಮ್ಮ ಹಳೆಯ ಕಸುಬಿನ ಬದಲು ಮತ್ತೊಂದು ಹೊಸ ಕಸುಬು ಸಿಕ್ಕುವದೆಂದು ಹೇಳುವುದರಿಂದ ಸಮಾಧಾನವಾಗುವುದಿಲ್ಲ.

ಬವಲಾವಣೆಯ ಅಲ್ಪಕಾಲದ ಉದ್ಯೋಗವು ಮುಗಿದಮೇಲೆ ಅವರ ಗತಿ ಏನು? ಅವರಿಗೆ ಬೇರೆ ದಾರಿ ಇದೆಯೊ! ಅಥವಾ ಅವರು ಹಸಿವಿನಿಂದಲೇ ಸಾಯಬೇಕೆ?

ಈ ಸಂಗತಿಯ ಕಡೆ ಈಗ ತಿರುಗೋಣ. ಒಬ್ಬ ಇಂಗ್ಲೀಷ್ ಗ್ರಂಥಕಾರನು ಇಂಗ್ಲೆಂಡಿನಲ್ಲಿ ಕೈಗಾರಿಕೆಯ ಕ್ರಾಂತಿಯು ಬಂದಕೂಡಲೇ ಅನೇಕ ಇಂಗ್ಲೀಷ್ ಜನರು ತಮ್ಮ ಮೈಯಿನ ಕಷ್ಟದಿಂದ ತಾವು ಸ್ವತಂತ್ರರಾಗಿ ದುಡಿಯುವ ಅವಕಾಶವನ್ನು ಹೊಂದಲು ಅಮೆರಿಕಾವಿಗೆ ಹೊರಟು ಹೋದರು ಎಂಬುದಾಗಿ ಹೇಳಿದ್ದಾನೆ. ಆವಿಯ ಬಲದಿಂದ ಓಡುತ್ತಿದ್ದ ಹೊಸದಾದ ಕಾರ್ಖಾನೆಗಳಲ್ಲಿ ಅಸ್ವತಂತ್ರರಾಗಿ ತಮ್ಮ ಸಮಸ್ತ ಶಕ್ತಿಗಳನ್ನೂ ಬಲಿಕೊಡುವುದನ್ನು ತಪ್ಪಿಸಿಕೊಳ್ಳುವುದೇ ಅವರ ಉದ್ದೇಶವಾಗಿತ್ತು. ಸಾಮ್ರಾಜ್ಯದ ದಾಹದಿಂದ ಇಂಗ್ಲೆಂಡು ದೇಶವು ಜಯಿಸಿ ಇಟ್ಟುಕೊಂಡಿದ್ದ ದೇಶಗಳಲ್ಲೆಲ್ಲ ಇಂಗ್ಲೆಂಡಿನ ಹೆಚ್ಚಾದ ಜನಸಂಖ್ಯೆಯು ಹೋಗಿ ನೆಲಸಿತು. ಯುದ್ಧಕ್ಕೆ ಮುಂಚೆ ಪ್ರತಿವರ್ಷವೂ ಎರಡೂವರೆಲಕ್ಷ ಜನಕ್ಕೆ ಕಮ್ಮಿಯಿಲ್ಲವಂತೆ ಇಂಗ್ಲೆಂಡನ್ನು ಬಿಟ್ಟು ಹೊರದೇಶಗಳಲ್ಲಿ ಆಂಗ್ಲೇಯರು ಹೋಗಿ ನೆಲೆಸಿದರು. ಅನಾಗರಿಕವಾದ ಪಾಶ್ಚಾತ್ಯರಾಷ್ಟ್ರಗಳಲ್ಲಿ ಅಮೆರಿಕಾದವರು ತಮ್ಮ ಹಣವನ್ನು ಹರಡಿದಂತೆ ಆಂಗ್ಲೇಯರು ಹೊರದೇಶದಲ್ಲಿಯೂ ಹರಡಲು ಅವಕಾಶವಾಯಿತು. ಆದರೆ ಹೀಗೆ ದೇಶ ಬಿಟ್ಟು ಹೋಗುವ ದಾರಿಗಳೆಲ್ಲ ಈಗ ನಿಂತಿವೆ. ನಿರುದ್ಯೋಗಿಗಳ ಸಂಖ್ಯೆ ಏರುತ್ತಿದೆ. ಅನೇಕ ಲಕ್ಷ ಜನರು ರಾಷ್ಟ್ರದ ಸರ್ಕಾರದಿಂದ ಜೀವನಾಂಶ ಭತ್ಯವನ್ನು ತೆಗೆದುಕೊಂಡು ಜೀವಿಸುತ್ತಿದ್ದಾರೆ.

ನೆನ್ನೆ ಮೊನ್ನೆಯವರೆಗೆ ಈರೀತಿ ನಿರುದ್ಯೋಗದಿಂದ ತಪ್ಪಿಸಿಕೊಳ್ಳಲು ಆಂಗ್ಲೇಯನಿಗೆ ಇದ್ದ ಅವಕಾಶ ಇಂದು ರಬ್ಬರುಗಾಲಿಯಿಂದ ನಿರುದ್ಯೋಗಿಯಾಗುವ ಹಿಂದೂದೇಶೀಯನಿಗೆ ಇದೆಯೆ? ಇಲ್ಲ. ನಮಗೆ

ಹೊರಗಡೆಯಲ್ಲಿ ಅಧೀನರಾಷ್ಟ್ರಗಳಿಲ್ಲ. ಬಿಳಿಯವರು ತುಂಬಿರುವ ದೇಶಗಳಲ್ಲಿ ನಮಗೆ ಅವಕಾಶವಿಲ್ಲ. ನಮ್ಮ ವಿಷಯದಲ್ಲಿ ಅವರಿಗೆ ನಾಗರಿಕವಾದ ನಡೆವಳಿಕೆ ಕೂಡ ಇಲ್ಲ. ಆ ದಾರಿಯಲ್ಲಿಯೂ ನಮ್ಮ ಕಣ್ಣಿಗೆ ಕತ್ತಲೆಯೇ ಕವಿಯುತ್ತಿದೆ. ಕೆಲವು ಕಾಲದ ಹಿಂದೆ ಪೂರ್ವ ಆಫ್ರಿಕಾಕ್ಕೆ ಅನೇಕ ಹಿಂದೀಯರು ಹೋಗಬಹುದೆಂದು ತೋರಿದ್ದಿತು. ಆದರೆ ಆ ನಿರೀಕ್ಷಣೆಯು ಎಂದೆಂದೂ ಫಲಿಸುವಂತೆ ತೋರುವುದಿಲ್ಲ. ಹತ್ತಿರದಲ್ಲಿರುವ ಅಸ್ಸಾಂ, ಬರ್ಮಾ, ಮಲಯ, ಸಿಲೋನು ಮುಂತಾದುವುಗಳಲ್ಲಿ ಈಗಾಗಲೇ ಇನ್ನು ಹಿಡಿಸದಷ್ಟು ತುಂಬಿದೆ. ಇನ್ನು ಆಚೆಗೆ ನೋಡಿದರೆ ಅಲ್ಲಿ ಧೈರ್ಯವನ್ನು ಕೊಡುವ ಸಂಗತಿಗಳಿಲ್ಲ. ಡಚ್ ಪೂರ್ವ ಇಂಡಿಯಾ ದ್ವೀಪಗಳಲ್ಲಿ ಜಾವಾದ ಜನಸಂಖ್ಯೆಯೇ ಹೆಚ್ಚುತ್ತಾ ಇದೆ. ಬೋರ್ನಿಯೋ ಮತ್ತು ನ್ಯೂಗಿನಿಯ ಇವುಗಳಲ್ಲಿ ಮೇಲೆ ಮೇಲೆ ನೋಡಿದರೆ ಇಲ್ಲಿಂದ ಹೋಗಿ ನೆಲಸುವುದಕ್ಕೆ ಬೇಕಾದಂತೆ ಅವಕಾಶವಿರುವಂತೆ ತೋರುತ್ತದೆ. ಆದರೆ ಈ ಪ್ರಶ್ನೆಯನ್ನು ಆಳವಾಗಿ ನೋಡಿರುವವರು ಆ ದ್ವೀಪಗಳಲ್ಲಿ ಅವಕಾಶವಿಲ್ಲವೆಂದು ಹೇಳುತ್ತಾರೆ. ಆಸ್ಟ್ರೇಲಿಯಾದ ಸಂದರ್ಭದಲ್ಲೂ ಬಿಳಿಯವರ ಪ್ರಾಬಲ್ಯವನ್ನು ಅಲ್ಲಿ ತಪ್ಪಿಸಿದರೂ— ಇದೇ ಮಾತು ಅನ್ವಯಿಸುತ್ತದೆ. ಅಲ್ಲದೆ ಆಸ್ಟ್ರೇಲಿಯಾದ ಕೆಲವು ಭಾಗಗಳಲ್ಲಿ ವಾಯುಗುಣವು ಅಲ್ಲಿ ಶಾಶ್ವತವಾಗಿ ವಾಸಿಸಲು ಅನುಕೂಲವಾಗಿಲ್ಲ.

ಹೀಗೆ ರಬ್ಬರು ಗಾಲಿಯಿಂದ ನಿರುದ್ಯೋಗಿಗಳಾಗುವ ಹಳ್ಳಿಯ ಕೆಲಸಗಾರರು ತಮ್ಮ ಮೇಲೆಯೇ ತಾವು ಅವಲಂಬಿಸಬೇಕಾಗುತ್ತದೆ. ಅವರಿಗೆ ದೊರಕುವ ಕೈಗಾರಿಕೆಗಳು ಯಾವುವೂ ಇಲ್ಲ. ಗಾಡಿಗಳಿಗೆ ರಬ್ಬರು ಗಾಲಿಗಳನ್ನು ಹೊಂದಿಸುವ ಸ್ವಲ್ಪಕಾಲದ ಕೆಲಸಕೂಡ ಅವರಿಗೆ ದೊರಕಲಾರದು. ಯಾಕೆಂದರೆ ಅದಕ್ಕೆ ಬೇಕಾದ ಬುದ್ಧಿವಂತಿಕೆಯು ಅವರಲ್ಲಿ ಇಲ್ಲ. ವ್ಯವಸಾಯದಲ್ಲಿ ಅವರಿಗೆ ಜಾಗವಿಲ್ಲ. ಯಾಕೆಂದರೆ

ಈಗಲೇ ವ್ಯವಸಾಯದಲ್ಲಿ ಅವಲಂಬಿಸಿರುವವರ ಸಂಖ್ಯೆ ಅಧಿಕವಾಗಿದೆ. ಸರ್ಕಾರದಿಂದ ಅವರಿಗೆ ನಿರುದ್ಯೋಗದ ಭತ್ಯವು ದೊರೆಯುವುದಿಲ್ಲ. ಏಕೆಂದರೆ ಇಲ್ಲಿಯ ನಿರುದ್ಯೋಗದ ಪ್ರಮಾಣವು ಅಸಾಧ್ಯವಾದುದಾಗಿದೆ. ಯಾವ ಸರ್ಕಾರವೂ ನಿರುದ್ಯೋಗ ಭತ್ಯ ಕೊಟ್ಟು ಪೂರೈಸಲಾರದು. ಈ ಕೆಲಸಗಾರರಿಗೆ ಪರದೇಶಗಳಲ್ಲಿ ಅವಕಾಶವಿಲ್ಲ. ಆದುದರಿಂದ ಅವರು ಮಾಡಬೇಕಾದುದೇನು ? ಈಗಾಗಲೇ ಹಸಿವಿನಿಂದ ಸಾಯುತ್ತಿರುವ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸುವುದೇ ಅಲ್ಲವೆ? ಅವರ ಕೈಲಿ ಈಗ ಇರುವ ಈ ಒಂದು ತುತ್ತು ಅನ್ನವನ್ನು ಕಿತ್ತುಕೊಳ್ಳಬೇಕೇ? ಕಷ್ಟಪಟ್ಟು ದುಡಿಯುವ ಅವರ ಹಕ್ಕನ್ನು ಕಸಿದುಕೊಳ್ಳಬೇಕೇ ? ರಬ್ಬರು ಗಾಲಿಗಳಲ್ಲಿ ಅನೇಕ ಕಣ್ಣಿಗೆ ಕಾಣುವ ಪ್ರಯೋಜನಗಳಿರುತ್ತವೆಯೆಂದು ಹೇಳುತ್ತಾರೆ. ಈ ಮಾತಿನ ಸತ್ಯತೆಯು ಇನ್ನೂ ಧೃಡಪಟ್ಟಿಲ್ಲ. ಈ ಗಾಲಿಗಳಲ್ಲಿ ಪ್ರಯೋಜನಗಳು ಇವೆ ಎಂದೇ ಒಪ್ಪಿಕೊಳ್ಳೋಣ. ಆದರೆ ಅವುಗಳ ಬೆಲೆ ಎಷ್ಟರಮಟ್ಟಿನ ಮನುಷ್ಯ ಪ್ರಾಣಿಗಳ ದುಃಖ ಮತ್ತು ನಿಟ್ಟುಸಿರು ! ಈ ಕ್ರೂರವಾದ ದುಃಖ ನಾಟಕವನ್ನು ನಾಶವಾಗಿರುವ ನಮ್ಮ ಅನೇಕ ಕೈಗಾರಿಕೆಗಳಲ್ಲಿ ಆಡಿದುದಾಗಿದೆ. ' ಮತ್ತೆ ನಮ್ಮ ಬಂಡಿಯ ಗಾಲಿಗಳಲ್ಲೂ ಈ ನಾಟಕವನ್ನೇ ಆಡಬೇಕೆ? ನಮ್ಮ ದೇಶದವರ ನಾಶದಲ್ಲಿ ನಾವೂ ಇಷ್ಟಪಟ್ಟು ಭಾಗಿಗಳಾಗಬಹುದೆ? ಹಾಗಿಲ್ಲದಿದ್ದರೆ ನಮ್ಮಲ್ಲಿರುವ ಸಮಸ್ತ ಶಕ್ತಿಗಳನ್ನೂ ಒಟ್ಟುಗೂಡಿಸಿ ಎತ್ತಿನ ಗಾಡಿಗಳಿಗೆ ಈ ರಬ್ಬರು ಗಾಲಿಗಳನ್ನು ಹಾಕುವುದನ್ನು ತಪ್ಪಿಸುವುದು ನಮ್ಮ ಮುಖ್ಯವಾದ ಮತ್ತು ಅವಶ್ಯಕವಾದ ಕರ್ತವ್ಯವಾಗಿದೆ.

(ಚಂದ್ರಶೇಖರ ಶುಕ್ಲ)

೩೩. ಪ್ರಚಾರ ಕೈಪಿಡಿ

ನೈರ್ಮಲ್ಯ—

ನಮ್ಮ ಮೈ, ಬಟ್ಟೆ, ಮನೆ ಎಲ್ಲಾ ನಿರ್ಮಲವಾಗಿರಬೇಕು. ಹಾಗೆಯೇ ನಮ್ಮ ಸುತ್ತು ಮುತ್ತಲೂ ನಮ್ಮ ಗ್ರಾಮಗಳ ಸುತ್ತು ಮುತ್ತಲೂ ಶುದ್ಧವಾಗಿರಬೇಕು. ಶುಧ್ಧವಾಗಿರುವುದರಲ್ಲಿ ನಾವು ಮುಖ್ಯ ವಾಗಿ ಗಮನಿಸಬೇಕಾಗುವುದು ಪಾಯಖಾನೆಯ ವಿಚಾರ. ಹಳ್ಳಿಗಳಲ್ಲಿ ಬೆಳಗಾದ ಕೂಡಲೇ ಹೊರಗಡೆ ತಲೆ ಹಾಕುವುದೇ ಅಸಾಧ್ಯವಾಗಿರುತ್ತವೆ. ಯಾವ ಕೆರೆ, ನದಿ ದೇವಸ್ಥಾನದ ಹಿಂದುಗಡೆ, ಅಂದವಾದ ಪ್ರಕೃತಿ ಇರುವ ಕಡೆ ನೋಡಲಿ, ಮನುಷ್ಯನ ಅವಿವೇಕ ಕಣ್ಣಿಗೆ ಬೀಳುತ್ತದೆ. ಬೀದಿಗಳಲ್ಲಿ ಎದರು ಮನೆಬಾಗಿಲಿನಲ್ಲಿ ತಮ್ಮ ಮಕ್ಕಳನ್ನು ಪಾಯಖಾನೆಗೆ ಕೂರಿಸುತ್ತಾರೆ. ಇದರಿಂದ ಗ್ರಾಮದ ಒಟ್ಟು ಆರೋಗ್ಯ ಕೆಟ್ಟು ಪ್ಲೇಗು ಕಾಲರಾ ಜ್ವರಗಳಿಗೆ ಗ್ರಾಮವು ಫಲವತ್ತಾಗುತ್ತದೆ. ಒಂದು ಸಲ ಖಾಯಿಲೆ ಬಂದರೆ ಆಮೇಲೆ ದಂಡ ತೆರಿಸದೆ ಹೋಗುವುದಿಲ್ಲ. ಈ ಕಾರಣ ದಿಂದಲಾದರೂ ನಾವು ಪಾಯಖಾನೆಯ ವಿಷದ ವಿಷಯದಲ್ಲಿ ಎಚ್ಚರಿಕೆ ಯಿಂದ ಇರಬೇಕು.

ಅಲ್ಲದೆ ಪಾಯಖಾನೆಯನ್ನು ಹೀಗೆ ವ್ಯರ್ಥಮಾಡುವುದರಿಂದ ರೈತರು ಬಹಳ ಉತ್ತಮವಾದ ಗೊಬ್ಬರವನ್ನು ಕಳೆದುಕೊಳ್ಳುತ್ತಿದ್ದಾರೆ. ಆಳವಾದ ಗುಂಡಿಯನ್ನು ಮಾಡಿ ಅದರಲ್ಲಿ ಪಾಯಖಾನೆಮಾಡಿ ಆಗಾಗ್ಗೆ ಅದರ ಮೇಲೆ 2 ಅಂಗುಲ 4 ಅಂಗುಲ ಮಣ್ಣು ಹಾಕಿ ಚೆನ್ನಾಗಿ ಮುಚ್ಚುತ್ತಾ ಬಂದರೆ ನಾಲ್ಕಾರು ತಿಂಗಳಲ್ಲಿ ಅದು ವಾಸನೆಯಿಲ್ಲದ ಉತ್ತಮವಾದ ಗೊಬ್ಬರವಾಗುತ್ತದೆ. ರೈತರಿಗೆ ಗೊಬ್ಬರಕ್ಕಿಂತ ಹೆಚ್ಚು ಬೆಲೆಯಾದುದು ಯಾವುದೂ ಇಲ್ಲ. ಇವನ್ನು ಅನ್ಯಾಯವಾಗಿ ಕಳೆದುಕೊಳ್ಳುವುದು ದೊಡ್ಡನಷ್ಟ. ಮಹಾತ್ಮಾ ಗಾಂಧಿಯವರು ಇರುವ ಸೇಗಾನ್ ಎಂಬ

ಹಳ್ಳಿಯಲ್ಲಿ, ಪ್ರತಿಯೊಬ್ಬರೂ ಪಾಯಖಾನೆಗೆ ಹೋಗುವಾಗ ಕೈಯಲ್ಲೊಂದು ಗುದ್ದಲಿಯನ್ನು ತೆಗೆದುಕೊಂಡು ಹೋಗಿ ಒಂದೂವರೆ ಗೇಣು ಆಳ ಅಗೆದು ಆ ಗುಂಡಿಯಲ್ಲಿ ಪಾಯಖಾನೆಮಾಡಿ ಮತ್ತೆ ಮುಚ್ಚಿ ಬರುತ್ತಾರೆ. ಈ ಏರ್ಪಾಡನ್ನು ಎಲ್ಲಾ ಹಳ್ಳಿಯವರೂ ಅನುಸರಿಸಬಹುದು. ದೂರ ಹೋಗಲು ಶಕ್ತಿಯಿಲ್ಲದವರಿಗಾಗಿ ಹಿತ್ತಲಿನಲ್ಲಿ ಆಳವಾದ ಗುಂಡಿಯನ್ನು ಮಾಡಿ ಅದರ ಮೇಲೆ ಆಗಾಗ್ಗೆ ಮಣ್ಣುಮುಚ್ಚುತ್ತಾ ಬರಬೇಕು.

ದನಗಳು—

ನಮ್ಮ ಆಹಾರವನ್ನು ಒದಗಿಸಿಕೊಳ್ಳುವಂತೆ ದನಗಳ ಮೇವನ್ನೂ ಒದಗಿಸಿಕೊಳ್ಳಬೇಕು. ವ್ಯವಸಾಯದ ಇಲಾಖೆಯವರು ಹೊಸದಾಗಿ ನೇಪಿಯರ್ ಹುಲ್ಲು ಎಂಬ ಒಂದು ಬಗೆಯ ಹುಲ್ಲನ್ನು ಕಂಡುಹಿಡಿದಿದ್ದಾರೆ. ಇದನ್ನು ಕುಯುತ್ತಾಹೋದಂತೆ ಅದು ಬೆಳೆಯುತ್ತಾ ಹೋಗುತ್ತದೆ. ಇದನ್ನು ಅರ್ಧಎಕರೆಗೆ ಹಾಕಿದರೆ ಇದರಿಂದ ದನಗಳಿಗೆ ಬಹಳ ಒಳ್ಳೆ ಮೇವು ಸಿಕ್ಕುತ್ತದೆ. ನಮ್ಮ ಸಂಘದಲ್ಲಿ ಇದನ್ನು ಬೆಳೆಸಿರುವುದನ್ನು ಬೇಕಾದವರು ಬಂದು ನೋಡಬಹುದು.

ಆಹಾರ—

ಈಗ ಎಲ್ಲೆಲ್ಲೂ ಕಾಫೀ, ಟೀ ಹೆಚ್ಚಾಗಿದೆ. ಇವುಗಳು ದೇಹದ ಬೆಳವಣಿಗೆಗೆ ಸಹಕಾರಿಗಳಲ್ಲ. ಅವುಗಳ ಬದಲು ಹಾಲನ್ನೇ ಹೆಚ್ಚಾಗಿ ಸೇವಿಸಬೇಕು. ಹಾಲು ದೊರಕದಿದ್ದರೆ ಮಜ್ಜಿಗೆ ಉತ್ತಮ, ತರಕಾರಿಗಳನ್ನೂ ಹೆಚ್ಚಾಗಿ ತೆಗೆದುಕೊಳ್ಳಬೇಕು. ಮಿಲ್ಲಿನಲ್ಲಿ ಮಾಡಿದ ಅಕ್ಕಿಯಲ್ಲಿ ಸಾರವಿರುವುದಿಲ್ಲ. ಆದುದರಿಂದ ಕೈಯ್ಯಲ್ಲಿ ಕುಟ್ಟಿದ ಅಕ್ಕಿಯನ್ನೇ ಉಪಯೋಗಿಸಬೇಕು. ಇದರಿಂದ ಹಳ್ಳಿಯವರಿಗೆ ಕೂಲಿಯೂ ದೊರೆಯುತ್ತದೆ. ಸಕ್ಕರೆಯ ಬದಲು ಬೆಲ್ಲವನ್ನು ಉಪಯೋಗಿಸುವುದು ಉತ್ತಮ.

ಸಂಸ್ಕೃತಿ —

ನಮ್ಮ ಪೂರ್ವಿಕರಲ್ಲಿ ರಂಗೋಲೆ ಒಂದು ವಿದ್ಯೆ-ಕಲೆ ಆಗಿತ್ತು. ಈಗಿನ ನಮ್ಮ ಮಹಿಳೆಯರಿಗೆ ಅದು ಮರೆಯುತ್ತಾಬಂದಿದೆ. ಅವರು ರಂಗೋಲೆ ಯಿಕ್ಕುವುದೇ ಇಲ್ಲ. ತಗಡಿನಲ್ಲಿ ಮಾಡಿದ ಕೊಳವೆಗಳಲ್ಲಿ ರಂಗೋಲೆಯನ್ನು ಹಾಕಿ ಬುಡ-ಬುಡಕೆ ದಾಸಯ್ಯಗಳಂತೆ ತಟ-ಪಟನೆ ನೆಲದ ಮೇಲೆ ಎಳೆದು ಬಿಡುತ್ತಾರೆ. ಅನೇಕ ಮನೆಗಳಲ್ಲಿ ಈ ಕೆಲಸವನ್ನು ಗಂಡು ಹುಡುಗರೇ ಮಾಡುತ್ತಾರೆ. ಇನ್ನು ಸ್ವಲ್ಪ ಕಾಲದದಲ್ಲೇ ನಮ್ಮ ಸ್ತ್ರೀಯರಿಗೆ ರಂಗೋಲೆಯ ಬಣ್ಣಾಸಹ ಮರೆತುಹೋಗಬಹುದು. ನಮ್ಮ ಪೂರ್ವೀಕರು ವಿಧ-ವಿಧವಾಗಿ ತೇರಿನಂತೆ, ಮಹಡಿಮನೆಯಂತೆ, ಕಮಲದಂತೆ, ಆನೆಯಂತೆ, ರಂಗೋಲೆ ಇಕ್ಕುತ್ತಿದ್ದರು. ಈ ಕಲೆಯನ್ನು ನಾವು ಮತ್ತೆ ಅಭ್ಯಾಸ ಮಾಡಬೇಕು. ಇದರಿಂದ ನಮ್ಮ ಬಾಳು ಉತ್ತಮವಾಗುವುದು.

ಖಾದಿ—

ಪ್ರತಿಯೊಬ್ಬ ಮನುಷ್ಯನಿಗೂ, ನಮ್ಮ ದೇಶದಲ್ಲಿ ವರುಷಕ್ಕೆ ಸುಮಾರು 15 ಗಜ ಬಟ್ಟೆ ಬೇಕಾಗುವುದು. ನಿತ್ಯಾ, ಒಬ್ಬನು ಒಂದು ಗಂಟೆ ನೂಲುವುದರಿಂದ ಈ ಬಟ್ಟೆಗೆ ಬೇಕಾದ ನೂಲನ್ನು ತೆಗೆಯಬಹುದು. ಸಂಸಾರದಲ್ಲಿ ಪ್ರತಿಯೊಬ್ಬರೂ ಒಂದು ಗಂಟೆ ನಿತ್ಯ ನೂತರೆ, ಒಂದೊಂದು ಮನೆಗೆ ಬಟ್ಟೆಗೆ ಆಗುವ ಸುಮಾರು 50—೦—೦ ರೂಪಾಯಿ ಉಳಿತಾಯವಾಗುವುದು. ಇದು ಅತ್ಯಂತ ಅವಶ್ಯಕವಾಗಿ ಮಾಡಬೇಕಾದ ಕೆಲಸವಲ್ಲವೆ? ಯೋಚಿಸಿ!

ಒಟ್ಟಿನಲ್ಲಿ—

ನಮ್ಮ ಅನೂಚಾನವಾದ ಪದ್ಧತಿಗಳೇ ಒಳ್ಳೆಯವು. ಗಾಳಿಬಂದರೆ ತೂರಿಹೋಗುವ ಛತ್ರಿಗಳ ಬದಲು ಬಲವಾದ ಗೊರಗಗಳನ್ನೇ ಉಪಯೋಗಿಸಿ; ಸಕ್ಕರೆಯಬದಲು ಬೆಲ್ಲವನ್ನೇ ಉಪಯೋಗಿಸಿ; ಫೌಂಟೆನ್

ಪೇನಾದ ಬದಲು ಶಾಯಿ ಕಡ್ಡಿ ಉಪಯೋಗಿಸಿ; ಹಿಂದೆ ಮಾಡುತ್ತಿದ್ದಂತೆ ಈಗಲೂ 10-15 ಮೈಲಿ ಹೋಗಬೇಕಾದರೆ, ಕೈಕಾಲು ಗಟ್ಟಿ-ಮುಟ್ಟಾಗಿರುವಾಗ ನಡೆದುಕೊಂಡೇ ಹೋಗಿ; ಸಂತೆಗೆ ವ್ಯಾಪಾರಕ್ಕೆ ಬಂದಾಗ ಬಂದ 3 ಆಣೆ 4 ಆಣೆ ಲಾಭವನ್ನು ಹೋಟಲು ಕಾಫಿ ತಿಂಡಿಗೆ ಹಾಕದೆ ಮನೆಗೇ ತೆಗೆದುಕೊಂಡುಹೋಗಿ; ಖರ್ಚಿನಲ್ಲಿ ಒಂದು ರೂಪಾಯಿ ಉಳಿಸಿದರೆ, ಒಂದು ರೂಪಾಯಿ ಸಂಪಾದನೆ ಮಾಡಿದಂತೆ ಎಂಬ ಮಾತು, ಯಾವಾಗಲೂ ನಿಮ್ಮ ಜ್ಞಾಪಕದಲ್ಲಿರಲಿ.

ನಿಮಗೆ ಇಂಗ್ಲೀಷ್ ಬಂದಿದ್ದರೂ, ನಮ್ಮ ಜನಗಳೊಂದಿಗೆ ನಿಮ್ಮ ಮಾತು, ಆಚಾರ, ವ್ಯವಹಾರಗಳೂ, ಬರವಣಿಗೆಯೂ ಕನ್ನಡದಲ್ಲಿಯೇ ನಡೆಯಲಿ.*

---

*ಮೈಸೂರು ಗ್ರಾಮಸೇವಾಸಂಘದವರು ಪ್ರಕಟಿಸಿದ ಹಸ್ತ ಪತ್ರಿಕೆಯಿಂದ.

೩೪. " ಇಂಡಿಯಾ ಲಿಮಿಟೆಡ್ " ಕಂಪನಿಗಳಿಂದ ಉಂಟಾಗಿರುವ ಅಪಾಯ

ಹಿಂದೂದೇಶವನ್ನು ಪರದೇಶದ ಮೂಲಧನವು ಮುತ್ತಿ ಇಲ್ಲಿಯ ಕೈಗಾರಿಕೆಗಳು ಅವರ ಸ್ವಾಧೀನಕ್ಕೆ ಹೋಗುತ್ತಿರುವುದಕ್ಕೂ, ಇದುವರೆಗೆ ಇಲ್ಲಿ ಬಹು ಕಷ್ಟದಿಂದ ಜೀವಿಸುತ್ತಿರುವ ಕೈಗಾರಿಕೆಗಳೆಲ್ಲಾ ಪರದೇಶದವರ ಪಾಲಾಗುತ್ತಿರುವುದಕ್ಕೂ, ಎದುರಾಗಿ ಅನೇಕ ಪ್ರತಿಭಟನೆಗಳು ಎದ್ದಿವೆ. ಸ್ವದೇಶಿಗಳಲ್ಲದ ಆ ಸಂಸ್ಥೆಗಳಿಗೆ ಬಂಡವಾಳದ ಬಲವು ಬಹಳವಾಗಿದೆ. ಅವು ನಿಷ್ಕರುಣೆಯಿಂದ ಸ್ವದೇಶಿ ಸಂಸ್ಥೆಗಳೊಂದಿಗೆ ಹೋರಾಡಿ ಇಲ್ಲಿಯ ಸಂಸ್ಥೆಗಳನ್ನು ಸಾಯಿಸುವುದರಲ್ಲಿವೆ. ತಮ್ಮ ಹೆಸರಿನ ಮಗ್ಗುಲಿಗೆ ಇಂಡಿಯಾ ಲಿಮಿಟೆಡ್ ಎಂದು ಸೇರಿಸಿಕೊಂಡು, ದೇಶದಲ್ಲಿ ಹೊಸದಾಗಿ ಎದ್ದಿರುವ ಸ್ವದೇಶಿ ಚಳುವಳಿಯ ಪ್ರಯೋಜನವನ್ನೂ ಆ ಸಂಸ್ಥೆಗಳು ಪೂರ್ಣವಾಗಿ ಹೊಂದುತ್ತಿವೆ. ಕಣ್ಣುಕೋರೈಸುವಂತಹ ಜಾಹಿರಾತುಗಳನ್ನು ಪ್ರಕಟಿಸಿ ಆ ಸಂಸ್ಥೆಗಳು, ಸ್ವದೇಶಿ ಸಂಸ್ಥೆಗಳಿಗೆ ಸರ್ಕಾರದಿಂದ ದೊರಕುವ ರಕ್ಷಣೆಗಳನ್ನೇ ತಾವೂ ಬಯಸುತ್ತವೆ. ತಮ್ಮ ಮನೆ ಬಾಗಿಲಿನಲ್ಲಿಯೇ ನಡೆಯುತ್ತಿರುವ ಈ ಪೈಪೋಟಿಯಲ್ಲಿ ಜಯಶಾಲಿಯಾಗುವುದು ಹಿಂದೂದೇಶದ ಸಂಸ್ಥೆಗಳಿಗೆ ಎಂದಿಗೂ ಸಾಧ್ಯವಿಲ್ಲಾ. ಅವು ಈಗಲೇ ಸತ್ತಿವೆ ಅಥವಾ ಇನ್ನೇನು ಸಾಯುತ್ತವೆ. ಈ ಕ್ರೂರವಾದ ಮತ್ತು ಹೊಸ ಮುತ್ತಿಗೆಯನ್ನು ಕಂಡು ಹಿಂದೂದೇಶದ ವ್ಯಾಪಾರಿಗಳಲ್ಲೂ ಕೈಗಾರಿಕಾಸಂಸ್ಥೆಗಳ ಯಜಮಾನರಲ್ಲೂ ಉಂಟಾಗಿರುವ ಭಯವನ್ನು, ಬೊಂಬಾಯಿನ ಛೇಂಬರ್ ಆಫ್ ಕಾಮರ್ಸ್ ಸಂಸ್ಥೆಯ ವ್ಯವಸ್ಥಾಪಕರು ಈ ರೀತಿ ವ್ಯಕ್ತಪಡಿಸಿದ್ದಾರೆ.

" ಈಗತಾನೆ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಯ ವಿಚಾರವಲ್ಲಿ ನನ್ನ ಸಮಿತಿಯು ಪ್ರಸ್ತಾಪಿಸಿದ್ದಿತು.

ಪರದೇಶದ ಸಂಸ್ಥೆಗಳು ಬೆಂಕಿಪೊಟ್ಟಣ, ಸಿಗರೇಟು, ಸಾಬೂನು, ಬೂಟ್ಸು, ಪಾದರಕ್ಷೆ, ರಸಾಯನಿಕ ವಸ್ತುಗಳು ರಬ್ಬರ್ ಈ ಎಲ್ಲಾ ಕೈಗಾರಿಕೆಗಳಲ್ಲೂ ಹಿಂದೂದೇಶದಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿವೆ. ಈ ಕೈಗಾರಿಕೆಗಳನ್ನು ಪರದೇಶದ ಕಂಪೆನಿಗಳು ಅಗಾಧವಾದ ಬಂಡವಾಲದಿಂದ ಸ್ಥಾಪಿಸಿವೆ. ಅವುಗಳೊಂದಿಗೆ ಸಣ್ಣ ಸಣ್ಣ ನಮ್ಮ ದೇಶದ ಕೈಗಾರಿಕೆಗಳು ಸ್ಪರ್ಧಿಸುವುದು ಸಾಧ್ಯವೇ ಇಲ್ಲ. ಇದರಿಂದ ಉಂಟಾಗುವ ಫಲ ಇಷ್ಟೆ. ಸಣ್ಣದಾಗಿರುವ ಹಿಂದೂದೇಶದ ಕೈಗಾರಿಕೆಗಳೆಲ್ಲಾ ಪೂರ್ಣವಾಗಿ ನಾಶವಾಗಿಬಿಡುತ್ತವೆ.

ಸುಂಕದ ರಿಯಾಯ್ತಿಯನ್ನೂ ಅದಕ್ಕೆ ಸಂಬಂಧಪಟ್ಟ ಸರ್ಕಾರಿ ಕಾನೂನುಗಳನ್ನೂ ಉಪಯೋಗಿಸಿಕೊಂಡು, ಹಿಂದೂದೇಶದಲ್ಲಿ ಪರದೇಶದ ಕಂಪೆನಿಗಳು ಅತಿ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸುತ್ತಿವೆ. ರಾಕ್ಷಸನಿಗೂ ಕ್ರಿಮಿಗೂ ಹೊಡೆದಾಟವಾದರೆ ಕ್ರಿಮಿಯು ಸಾಯುವುದು ಖಂಡಿತ. ತತ್‌ಕ್ಷಣ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಕೊಂಡು, ಹಿಂದೂದೇಶದ ಸಣ್ಣಕೈಗಾರಿಕೆಗಳನ್ನು ಸಂರಕ್ಷಿಸದಿದ್ದರೆ, ಈ ಕೈಗಾರಿಕೆಗಳು ನಾಶವಾಗುವುದು ನಿಶ್ಚಯ.”

ಜಗತ್ತಿನಲ್ಲಿ, ಧನಿಕವಾಗಿರುವ ಮತ್ತು ಶರೀರಬಲದಿಂದ ಅಧಿಕವಾಗಿರುವ ರಾಷ್ಟ್ರಗಳು ತಮಗಿಂತ ದುರ್ಬಲವಾಗಿರುವ ರಾಷ್ಟ್ರಗಳನ್ನು ಲೂಟಿ ಮಾಡಲು ಹುಡುಕಿರುವುದು ಇದೊಂದು ಹೊಸದಾರಿ. ಸೋತರಾಜ್ಯಗಳಿಗೆ ತಮ್ಮ ಮಾಲುಗಳನ್ನು ಬಲಾತ್ಕಾರದಿಂದಲೂ ಮೋಸದಿಂದಲೂ ತಳ್ಳುವುದು ಮೊದಲನೆಯ ದಾರಿಯಾಗಿದ್ದಿತು. ಇಂಗ್ಲೆಂಡ್ ದೇಶವು ಯಂತ್ರಗಳಿಂದ ಸಾಮಾನುಗಳನ್ನು ವಿಶೇಷವಾಗಿ ತಯಾರಿಸಿದುದರಿಂದ ಅದಕ್ಕೆ ಮೊದಲು ಜಗತ್ತಿನಲ್ಲಿ ಗಿರಾಕಿ ಬೇಕಾಯಿತು. ಆಗ ಫ್ರೀಟ್ರೇಡ್ ತತ್ವವನ್ನು ಅದು ಅನುಸರಿಸಿತು. ಇಂಡಿಯಾದೊಂದಿಗೆ ನಡೆಸಿದ ಈ ಫ್ರೀಟ್ರೇಡ್ ವ್ಯಾಪಾರವು (Free Trade) ಒಬ್ಬ ಆಂಗ್ಲೇಯನು

1840 ರಲ್ಲಿ ಹೇಳಿದಂತೆ " ಇಂಗ್ಲೆಂಡಿಗೆ ಫ್ರೀಟ್ರೇಡ್ ಆಯಿತೇ ಹೊರತು ಹಿಂದೂ ದೇಶಕ್ಕೂ ಇಂಗ್ಲೆಂಡಿಗೂ ಫ್ರೀಟ್ರೇಡ್ ಆಗಲಿಲ್ಲ " ಈ ಒಮ್ಮುಖವಾದ " ಫ್ರೀಟ್ರೇಡ್ " ನಿಂದ ಹಿಂದೂದೇಶದ ಅನೇಕ ಕೈಗಾರಿಕೆಗಳು ಪೂರ್ಣವಾಗಿ ನಾಶವಾಗಿ ಇಲ್ಲಿಯ ಅನೇಕ ಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆ. ಹೆಚ್. ಎನ್. ಬ್ರಾಲಿಸ್ ಫರ್ಡ್ ಎಂಬವರು ಬರೆದಿರುವಂತೆ.

" ಈ ಫ್ರೀಟ್ರೇಡ್ ತತ್ವವೇ ಶಾಪವಾಯಿತು. ನಮ್ಮ ಆಳ್ವಿಕೆಯ ಆರ್ಥಿಕ ಪ್ರಯೋಜನವೆಂದರೆ ಹಿಂದೂ ದೇಶವನ್ನು, ಅಗ್ಗವಾದ ಯಂತ್ರದ ಸಾಮಾನುಗಳಿಂದ ತುಂಬಿದುದಾಯಿತು. ಯಂತ್ರಗಳಲ್ಲಿ ಅನುಭವವಿಲ್ಲದ ಭಾರತೀಯರಿಗೆ ನಮ್ಮ ನೈಪುಣ್ಯದೊಂದಿಗೆ ಸ್ಪರ್ಧಿಸಲು ಸಾಧ್ಯವಾಗಲಿಲ್ಲ ....ಈ " ಫ್ರೀಟ್ರೇಡ್ " ನ ಅತ್ಯಂತ ಬಲವಾದ ಹೊಡೆತವು ಹಿಂದೂ ದೇಶದ ಭಂಡವಾಳಗಾರರಿಗೆ ಬೀಳಲಿಲ್ಲ. ಗ್ರಾಮ ಉದ್ಯೋಗಿಗಳಿಗೆ ಬಿದ್ದಿತು. ನಿಧಾನವಾಗಿ ಆದರೆ ಖಂಡಿತವಾಗಿ, ಬ್ರಿಟಿಷ್‌ರ ಸ್ಪರ್ಧೆಯಿಂದ ಭಾರತದ ನೆಯ್ಗೆಯವರೂ ಕುಂಬಾರರೂ ಕಮ್ಮಾರರೂ ಅನಿವಾರ್ಯವಾಗಿ ನಿರ್ನಾಮವಾದರು. ಮೊದಮೊದಲು ಪ್ರಯಾಣದ ಸೌಕರ್ಯಗಳಿಲ್ಲ ಆದುದರಿಂದ, ಆ ಕೈಗಾರಿಕೆಗಳ ಸಾವು ಸ್ವಲ್ಪ ನಿಧಾನವಾಯಿತು. ಆದರೆ ಈಚೆಗೆ ಮೋಟರು ಬಸ್ಸುಗಳು ಹಳ್ಳಿಯ ಹೆಂಗಸರನ್ನೆಲ್ಲಾ ವ್ಯಾಪಾರಕ್ಕೆ ಪಟ್ಟಣಗಳಿಗೆ ಕರೆದುಕೊಂಡು ಹೋಗುತ್ತಿರುವುದರಿಂದ ಗ್ರಾಮಕೈಗಾರಿಕೆಗಳ ನಾಶವು ಇನ್ನೇನು ಪೂರ್ಣವಾದಂತೆಯೇ. ಹೀಗೆ ಇಂಗ್ಲೆಂಡ್ ದೇಶವನ್ನು ಅತಿಯಾಗಿ ಕೈಗಾರಿಕೆಗಳಿಗೆ ದಬ್ಬಿದ 'ಫ್ರೀಟ್ರೇಡ್' ಇಂಡಿಯಾ ದೇಶವನ್ನು ಪೂರ್ಣವಾಗಿ ವ್ಯವಸಾಯಕ್ಕೆ ದಬ್ಬಿತು.

ವಾಸ್ತವವಾಗಿ ಇಂಡಿಯಾದಲ್ಲಿ ಎಲ್ಲೆಲ್ಲೂ ಈ ಬಡ ಕೈಗಾರಿಕೆಯ ಕೆಲಸಗಾರರು ಹಳೆಯ ಮಣ್ಣಿನ ಗುಡಿಸಲುಗಳಲ್ಲಿ ಹೇಗೂ ಪ್ರಾಣವನ್ನು

H. N. Brailsford: Property or Peace p 217-219

ಉಳಿಸಿಕೊಂಡು ಕಾಲಹಾಕುತ್ತಾರೆ. ಅವರ ಆಸ್ತಿಯೆಲ್ಲಾ ಕೆಲವು ಚಾಪೆಗಳು ಮತ್ತು ಮಡಕೆಗಳು; ಅವರು ಉಟ್ಟಿರುವುದರ ಹೊರತು ಬೇರೆ ಅವರಿಗೆ ಬಟ್ಟೆಗಳೇ ಇರುವುದಿಲ್ಲ. ಅವರ ಆಹಾರ ಅವರ ಸೋತ ದೇಹಕ್ಕೆ ಪುಷ್ಟಿಯನ್ನೂ ಶಕ್ತಿಯನ್ನೂ ಕೊಡದ ಅಕ್ಕಿ ಬೇಳೆ. ಈ ದಾರಿದ್ರ್ಯಕ್ಕೆ ಈ ಸಾಮ್ರಾಜ್ಯವೇ ಕಾವಲು. ಅನಂತರ ಎರಡನೆಯ ಮೆಟ್ಟಲು ಬಂದಿತು.

“ಕೈಗಾರಿಕೆಗಳನ್ನು ಪೂರ್ಣವಾಗಿ ಸ್ವಾಧೀನಪಡಿಸಿಕೊಂಡುದರಿಂದ, ಯಜಮಾನರಿಗೆ ಅನಿರೀಕ್ಷಿತವಾದ (ಸೂಪರ್ ಪ್ರಾಫಿಟ್) ಲಾಭ ಬಂದಿತು. ಯಜಮಾನರಿಗೆ ಏನುಮಾಡಬೇಕೆಂದು ತೋರದಷ್ಟು ಲಾಭ ಬಂದಿತು. ಇದು ನಂಬುವುದಕ್ಕೆ ಕಷ್ಟ. ಆದರೆ ಕಂಪನಿಗಳವರಿಗೆ ಹೇಗೆ ವೆಚ್ಚಮಾಡಬೇಕೆಂದು ತೋರದಷ್ಟು ಲಾಭ ಬಂದಿತು. ಅವರು ವೆಚ್ಚಮಾಡುವುದಕ್ಕೂ ಹೋಗಲಿಲ್ಲ. ಅವರು ಹಣವನ್ನೆಲ್ಲಾ ಶೇಖರಿಸಿದರು. ಈ ಹೆಚ್ಚಿಗೆ ಹಣಕ್ಕೆ ವಸಾಹತುಗಳಲ್ಲಿ ದಾರಿಯಾಯಿತು. ರೈಲುಗಳು, ವಿದ್ಯುಚ್ಛಕ್ತಿ, ಗ್ಯಾಸ್ ರಸ್ತೆಗಳು, ಬೇಕಾದ ಮತ್ತು ಪ್ರಕೃತಿಯ ಐಶ್ವರ್ಯದಲ್ಲಿ ಅನುಕೂಲಗಳಿರುವ ದೇಶಗಳು; ಅಲ್ಲೆಲ್ಲಾ “ರಿಯಾಯ್ತಿ” ಗಳು ದೊರೆತು ಗಣಿಗಳು ತೋಟಗಳು ಆದವು. ಈ ವಸಾಹತುಗಳಲ್ಲಿ ಬಂಡವಾಳಕ್ಕೆ ಒಳ್ಳೆಯ ಲಾಭ ಬರುವಂತೆ ವಿಲೆಯಿದ್ದಿತು. I “ಈ ಹಿಂದುಳಿದ ದೇಶಗಳಲ್ಲಿ ಲಾಭ ವಿಶೇಷವಾಗಿ ಬರುತ್ತದೆ. ಯಾಕೆಂದರೆ ಅಲ್ಲಿ ಮೂಲಧನ ಬಹು ಕಡಿಮೆ. ಜಮೀನು ಬೆಲೆ ಬಹಳ ಕಡಿಮೆ. ಕೂಲಿ ಕಡಿಮೆ. ಕಚ್ಚಾ ಮಾಲುಅಗ್ಗ.” II

ಅಧೀನ ರಾಷ್ಟ್ರಗಳಿಗೆ ಇಷ್ಟವಿರಲಿ ಇಲ್ಲದಿರಲಿ ಅವುಗಳ ಮೇಲೆ ಭಂಡವಾಳವನ್ನು ಹೇರುವುದು ಈ ಬಿಳಿ ಮನುಷ್ಯನ ಜವಾಬ್ದಾರಿಯು

I Leo Huberman—Man's Worldly Goods II Lenin.

(white man's burden) ಲ್ಲಿ ಎರಡನೆಯ ಮೆಟ್ಟಲಾಯಿತು. ಒಬ್ಬ ಆಂಗ್ಲೇಯ ಅರ್ಥಶಾಸ್ತ್ರಜ್ಞನು ಈ ಕ್ರಮವನ್ನು ಹೀಗೆ ವಿವರಿಸಿದ್ದಾನೆ.

"ಹಿಂದುಳಿದ ರಾಷ್ಟ್ರಗಳಲ್ಲಿ ಪ್ರಾರಂಭವಾಗುವ ಕೈಗಾರಿಕೆಗಳಿಗೆ, ಹೊರದೇಶದ, ಭಂಡವಾಳ ಮಾತ್ರವೇ ಸಹಾಯವಲ್ಲ. ಹೊರದೇಶದ ರಿಜಿಸ್ಟರ್ ಆದ ಕಂಪನಿಗಳೇ ಆ ಕೈಗಾರಿಕೆಗಳ ಆಡಳಿತವನ್ನೂ ನಡೆಸುತ್ತವೆ. ಬರುವ ಲಾಭವೆಲ್ಲಾ ಪೂರ್ಣವಾಗಿ ಹೊರದೇಶದ ಯಜಮಾನರಿಗೇ ಸಲ್ಲಿಕೆಯಾಗುತ್ತದೆ. ಯಾವ ದೇಶದಲ್ಲಿ ಈ ರೀತಿ ಇತರ ದೇಶದ ಕೈಗಾರಿಕೆಗಳು ನಡೆಯುತ್ತಿವೆಯೋ ಆ ದೇಶಗಳು—ಪೂರ್ಣವಾಗಿ ನಾಗರಿಕವಾಗಿದ್ದರೆ ಸರಿ. ಇಲ್ಲದಿದ್ದರೆ—ಭಂಡವಾಳವನ್ನು ಹಾಕಿರುವ ದೇಶದ ಸಂರಕ್ಷಣೆಯಲ್ಲೇ ಇರಬೇಕಾಗುತ್ತದೆ. ಕೆಲವು ವೇಳೆ "ಸಂರಕ್ಷಣೆ" ಎಂಬ ನೆಪದಿಂದ ಭಂಡವಾಳವನ್ನು ಹಾಕಿರುವ ದೇಶಗಳು, ಸಣ್ಣ ರಾಷ್ಟ್ರಗಳನ್ನು ತಮ್ಮ ರಾಜ್ಯಕ್ಕೇ ಸೇರಿಸಿಕೊಂಡುಬಿಡುತ್ತವೆ. ಆ ರಾಷ್ಟ್ರಗಳ ಜನರಿಗೆ ಇಷ್ಟವಿರಲಿ ಅಥವ ಇಲ್ಲದೆ ಇರಲಿ ಅವರು ಭಂಡವಾಳಗಾರರಿಗಾಗಿ ಬಲಾತ್ಕಾರದಿಂದಲಾದರೂ ದುಡಿಯಬೇಕಾಗುತ್ತದೆ. ಕೆಲವು ವೇಳೆ ಆ ಅಧೀನರಾಷ್ಟ್ರದ ಹುಟ್ಟುವಳಿಯ ಹೆಚ್ಚು ಭಾಗವು ಭಂಡವಾಳದ ಬಡ್ಡಿಗಾಗಿಯೇ ವಿನಾಸಲಾಗುತ್ತದೆ. ಯೂರೋಪು ಖಂಡವು ತನ್ನ ಎಲ್ಲೆಯೊಳಗೆ ರಾಷ್ಟ್ರೀಯತೆ ಮತ್ತು ಪ್ರಜಾಪ್ರಭುತ್ವಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾಗಲೇ, ಇತರ ದೇಶಗಳು ತಮ್ಮ ರಾಷ್ಟ್ರಗಳ ಐಶ್ವರ್ಯವನ್ನು ಪೂರ್ಣವಾಗಿ ಅಭಿವೃದ್ಧಿಮಾಡಿಕೊಳ್ಳಲು ತಡೆಗಟ್ಟುತ್ತಿದ್ದಿತು. ಮತ್ತು ಅಧೀನ ರಾಷ್ಟ್ರಗಳು ತಮ್ಮ ಹಣವನ್ನೂ ಜನರನ್ನೂ ಉಪಯೋಗಿಸಿಕೊಂಡು ನಾಗರೀಕರಾಗಲು ಪ್ರಯತ್ನಿಸಿದರೂ ಅವಕಾಶಕೊಡದೆ ಅವರನ್ನು ನಾಗರೀಕರನ್ನಾಗಿ ಮಾಡುವುದು ಬಿಳಿಯುವರ ಜವಾಬ್ದಾರಿಯೆಂದು ಸ್ಥಾಪಿಸಿತು. ಈ ಜವಾಬ್ದಾರಿಯು—ಜಗತ್ತನ್ನು ನಾಗರಿಕವಾಗಿ ಮಾಡಿ

ತಾನು ಧನಿಕನಾಗುವ ಈ ಜವಾಬ್ದಾರಿಯು—ಭಂಡವಾಳದ ಕೈಗಾರಿಕೆಗಳ ಬೆಳವಣಿಗೆಗೆ ಅವಶ್ಯಕವಾಯಿತು." 5

ಹಿಂದೂ ದೇಶದಲ್ಲಿ ನಮ್ಮ ಸ್ವಂತ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಿಕೊಳ್ಳುವ ಅವಕಾಶವು ನಮಗೆ ಯುದ್ಧದ ನಂತರ ದೊರೆಯಿತು. ಆಗ ಅನೇಕ ಕೈಗಾರಿಕೆಗಳು ಬೇಗ ಬೇಗ ಬೆಳೆದವು. ಅನಂತರ 1919 ರಲ್ಲಿ ಫಿಸ್ಕಲ್ ಆಟಾನಮಿ ಕನ್‌ವೆನೆಶನ್ ಎಂಬುದರಮೂಲಕ, ಇಂಡಿಯವು ಹೊರದೇಶಗಳ ಸಾಮಾನುಗಳಮೆಲೆ ಸ್ವಲ್ಪ ಸುಂಕವನ್ನು ಹೇರಲು ಸಾಧ್ಯವಾಯಿತು. ಅನಂತರ ಬಂದ ಸ್ವದೇಶಿ ಚಳುವಳಿಯಲ್ಲಿ ಈ ಕೈಗಾರಿಕೆಗಳು ಇನ್ನೂ ಹೆಚ್ಚಾಗಿ ಪ್ರೋತ್ಸಾಹಗೊಂಡವು. ಹೊರಗಡೆಯಿಂದ ಬರುವ ಸಾಮಾನುಗಳ ಸಂಖ್ಯೆ ಕಡಿಮೆಯಾಯಿತು. ಇಂಗ್ಲೆಂಡ್ ಕೂಲಿಗಾರರು ತಮಗೆ ಹೆಚ್ಚು ಕೂಲಿ ಬೇಕೆಂದು ಚಳುವಳಿ ನಡೆಸಿದರು. ಇದರಿಂದ ಈ ದೇಶದಲ್ಲಿ ಇಂಗ್ಲೀಷ್ ಸಾಮಾನುಗಳ ಬೆಲೆ ಹೆಚ್ಚಾಯಿತು. ಇಂಗ್ಲೀಷ್ ಭಂಡವಾಳಗಾರರಿಗೆ ಲಾಭ ಕಡಿಮೆಯಾಯಿತು. ಈ ಎಲ್ಲಾ ತೊಂದರೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಪರದೇಶದ ಭಂಡವಾಳದ ಕೈಗಾರಿಕಾ ಸಂಸ್ಥೆಗಳವರು—ಮುಖ್ಯವಾಗಿ ಇಂಗ್ಲೀಷರು—ಹಿಂದೂ ದೇಶದಲ್ಲೇ ಕಾರ್ಖಾನೆಗಳನ್ನು ತುಂಬುತ್ತಿದ್ದಾರೆ. " ಇಂಗ್ಲೀಷ್ ಭಂಡವಾಳವು ಪೂರ್ಣವಾದ ಅನ್ಯಾಯದಿಂದ ತನಗೆ ದೊರೆತ ಒಂದೇ ಒಂದು ಆಸರೆಯನ್ನು ಅಂದರೆ ಅಗ್ಗವಾದ ಮತ್ತು ವ್ಯವಸ್ಥೆ ಹೊಂದದ ಕೂಲಿಯನ್ನು ಉಪಯೋಗಿಸಿಕೊಂಡಿತು." 6

ಈ ಕಾರ್ಖಾನೆಗಳು ಹಿಂದೂದೇಶದ ಕೂಲಿಗಳನ್ನು ನೇಮಿಸಿ ಇಲ್ಲಿಯ ಕಚ್ಚಾ ಮಾಲುಗಳನ್ನೇ ಉಪಯೋಗಿಸುತ್ತವೆಂದೂ, ಅಷ್ಟರ ಮಟ್ಟಿಗೆ ಇವು ಸ್ವದೇಶಿಗಳೇ ಎಂದು ಕೆಲವರು ವಾದಿಸುತ್ತಾರೆ. ಆದರೆ

5. G. D. H. Cole World Chaos 124-25
6. H. N. Brailsford

ಹಿಂದೂದೇಶದವರಿಗೆ ಕೊಡುವ ಕೂಲಿಯನ್ನೂ, ಭಂಡವಾಳಗಾರರಿಗೆ ಬರುವ ಲಾಭವನ್ನು ಹೋಲಿಸಿ ನೋಡಿದರೆ ಈ ವಾದದಲ್ಲಿ ಹೇಗೆ ಏನೂ ಹುರುಳಿಲ್ಲವೆಂದು ಗೊತ್ತಾಗುವುದು.

"ಸಾಮಾನ್ಯವಾಗಿ ಹಿಂದೂದೇಶದಲ್ಲಿ 600 ಅಥವ 700 ಮಿಲಿಯನ್ ಪೌಂಡು ಬಂಡವಾಳವು ಹಾಕಲ್ಪಟ್ಟಿದೆ. ಈ ಹಣದ ಸ್ವಲ್ಪ ಭಾಗ, ಅತ್ಯಂತ ಹೆಚ್ಚು ಲಾಭ ಬರುವ ಕೈಗಾರಿಕೆಗಳಿಗೆ ವಿನಿಯೋಗವಾಗಿವೆ. ಕಲ್ಲಿದ್ದಲು ಕೈಗಾರಿಕೆಯಲ್ಲಿ ನಿತ್ಯಾ 8 ಪೆನ್ಸಿ ಕೂಲಿ ಕೊಡುತ್ತಾರೆ. ಆದರೆ ಅವರಲ್ಲಿ ಶೇಕಡ 100 ಅಥವಾ 120 ಲಾಭ ಬರುತ್ತದೆ. 51 ಶಣಬಿನ ಕಾರ್ಖಾನೆಗಳ ಪೈಕಿ 32 ಕಾರ್ಖಾನೆಗಳು 1918 ರಿಂದ 1927 ರ ವರೆಗೆ ಶೇಕಡ ನೂರಕ್ಕಿಂತ ಹೆಚ್ಚು ಲಾಭವನ್ನು ಕೊಟ್ಟವು. 29 ಕಾರ್ಖಾನೆಗಳಲ್ಲಿ ಯಾವಾಗಲೂ ಶೇಕಡ 20 ಕ್ಕಿಂತ ಲಾಭ ಕಡಿಮೆಯಾಗಲಿಲ್ಲ. 10 ಕಾರ್ಖಾನೆಗಳಲ್ಲಿ ಯಾವಾಗಲೂ ಶೇಕಡ 40 ಕ್ಕಿಂತ ಲಾಭ ಕಡಿಮೆಯಾಗಲಿಲ್ಲ. ಕಳೆದ ಯುದ್ಧದ ಪ್ರಾರಂಭದಲ್ಲಿ, ಈ ಕಾರ್ಖಾನೆಗಳ ಲಾಭ, ಅವು ಕೊಟ್ಟ ಕೂಲಿಯ ಆರರಷ್ಟು ಏಳರಷ್ಟು ಏರಿತು. ಇಂಡಿಯಾದಲ್ಲಿ ಭಂಡವಾಳಗಾರರು ಕೊಟ್ಟ ಪ್ರತಿ 12 ಪೌಂಡಿಗೂ, ಸ್ಕಾಟ್ಲೆಂಡಿಗೆ 100 ಪೌಂಡು ಲಾಭಗಳನ್ನು ಅವರು ರವಾನಿಸಿದರು. ಇಂಗ್ಲಿಷ್ ಭಂಡವಾಳಗಾರರಿಗೆ—ಹಿಂದೂ ದೇಶದವರಲ್ಲಿ ಅಲ್ಲ—ಹಿಂದೂ ದೇಶದಲ್ಲಿ ಇರುವ ಮಮತೆಗೆ ಈ ಲಾಭವೇ ಕಾರಣ" 7

"ಹಿಂದೂ ದೇಶವನ್ನು ತೆಗೆದುಕೊಂಡರೆ, ಅಲ್ಲಿ ಸ್ಥಾಪಿತವಾಗಿರುವ ಭಂಡವಾಳದ ಬಹುಭಾಗದಿಂದ ಹಿಂದೂ ದೇಶದವರಿಗೆ ಏನೂ ಪ್ರಯೋಜನವಾಗಿಲ್ಲವೆಂಬುದು ಯೋಚಿಸುವವರಿಗೆಲ್ಲಾ ಗೊತ್ತಾಗುವುದು. ಆದರೆ ಈ ಭಂಡವಾಳದಿಂದ ನಿಸ್ಸಂದೇಹವಾಗಿ ಇಂಡಿಯಾದೇಶಕ್ಕೆ ಎರಡು ಸಂಕೋಲೆ ಬಿಗಿಯಾಗಿದೆ—ಮೊದಲನೆ ಸಂಕೋಲೆ ಆಂಗ್ಲೋ ಇಂಡಿಯನ್

---

7. Brailsford

ಮತ್ತು ಹಿಂದೂ ಧನಿಕರು ಹಿಂದೂದೇಶದ ಬಡವರಿಗೆ ಹಾಕಿರುವುದು, ಎರಡನೆಯ ಸಂಕೋಲೆ ಬ್ರಿಟನ್ನು ಇಂಡಿಯಾವಿಗೆ ಹಾಕಿರುವುದು" 8

ಈ ಎರಡನೆಯ ಸಂಕೋಲೆಯನ್ನು ಬಿಗಿ ಪಡಿಸುವುದಕ್ಕಾಗಿಯೇ, ಹೊಸ ಸುಧಾರಣೆಗಳಲ್ಲಿ "ವ್ಯಾಪಾರದ ರಕ್ಷಣೆ"ಗಳು ಇರುವುದು ಎಂಬುದರಲ್ಲಿ ಏನಾದರೂ ಸಂದೇಹವಿದೆಯೆ? ಹೀಗೆ ಪ್ರಪಂಚದಲ್ಲಿ ಮತ್ತೆಲ್ಲೂ ಇಲ್ಲ. ಈ ಪರದೇಶದ ಭಂಡವಾಳ ಸಂಸ್ಥೆಗಳು, ಸ್ವದೇಶಿ ಅಲ್ಲವೆಂದು ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ವರ್ಕಿಂಗ್ ಸಮಿತಿಯವರು ನಿರ್ಣಯಿಸಿ ಇವುಗಳಿಗೆ ಯಾವ ಪ್ರೋತ್ಸಾಹವನ್ನೂ ಕೊಡಕೂಡದೆಂದು ತೀರ್ಮಾನಿಸಿದ್ದಾರೆ. "ಯಾವ ಸಂಸ್ಥೆಯ ಪೂರ್ಣ ವ್ಯವಸ್ಥೆ ನಮ್ಮವರ ಕೈಯಲ್ಲಿ ಇಲ್ಲವೋ ಅದು ಸ್ವದೇಶಿಯೇ ಅಲ್ಲ. ಪರದೇಶದ ಮೂಲಧನ ಇಲ್ಲಿ ಬಂದು, ಇಲ್ಲಿಯ ಪ್ರಕೃತಿ ಸೌಭಾಗ್ಯವನ್ನು ಸೂರೆಮಾಡುವುದಾದರೆ, ನಮ್ಮ ಕೈಗಾರಿಕೆ ಬೆಳೆಯಲು ಸ್ವಲ್ಪ ತಡವಾದರೂ ಚಿಂತೆಯಿಲ್ಲ. ಆ ಭಂಡವಾಳ ನಮಗೆ ಬೇಡ" ಎಂದು ವರ್ಕಿಂಗ್ ಕಮಿಟಿಯವರು ತೀರ್ಮಾನಿಸಿದರು. ವರ್ಕಿಂಗ್ ಕಮಿಟಿಯು ಸಕಾಲದಲ್ಲಿ ಎಚ್ಚರಿಕೆ ತೆಗೆದುಕೊಂಡಿದೆ. ಈಗಲೇ ಅರ್ಧ ಜೀವದಲ್ಲಿ ನರಳುತ್ತಿರುವ ಸ್ವದೇಶಿ ಕೈಗಾರಿಕೆಗಳು, ಪರದೇಶದ ಮಾಲು ಮತ್ತು ಭಂಡವಾಳ ಎರಡರ ಹಿಡಿತದಲ್ಲಿ ಸಿಕ್ಕಿ ನಿರ್ನಾಮವಾದರೆ, ಮತ್ತೆ ಇವುಗಳ ಪುನರುಜ್ಜೀವನವು ಭಗೀರಥ ಪ್ರಯತ್ನವಾಗುವುದು. ಹೊಸ ಸುಧಾರಣೆಗಳಿಗೆ ಅನುಸಾರವಾಗಿ ಬರುವ ಸರ್ಕಾರ ವ್ಯವಸ್ಥೆಯಲ್ಲಿ ಪರದೇಶದ ಸಂಸ್ಥೆಗಳನ್ನು ಬಹಿಷ್ಕರಿಸಲು ಅವಕಾಶವಿಲ್ಲದೆ ಇರಬಹುದು. ಆದರೆ ರಾಷ್ಟ್ರದ ಒಮ್ಮನಸ್ಸಿನ ಇಚ್ಛೆಯನ್ನು ಯಾರೂ ಪ್ರತಿಭಟಿಸಲಾರರು. ಇಷ್ಟವಿಲ್ಲದವರನ್ನು ಜಗತ್ತಿನಲ್ಲಿ ಯಾವ ಶಕ್ತಿಯೂ ಬೇಡವಾದುದನ್ನು ಕೊಳ್ಳುವಂತೆ ಬಲಾತ್ಕರಿಸಲಾರದು. ಆದುದರಿಂದ ನಮ್ಮ ದೇಶದ ಕೈಗಾರಿಕೆಗಳನ್ನು ಆ ಕೈಗಾ

---

8. Leonard Barnes

ರಿಕೆಗಳ ಮೊರೆಯು ವ್ಯರ್ಥವಾಗುವುದಿಲ್ಲವೆಂದು ನಂಬುತ್ತೇವೆ. ವರ್ಕಿಂಗ್ ಕಮಿಟಿಯವರು, ತಮ್ಮ ನಿರ್ಣಯವನ್ನು ಕಾರ್ಯದಿಂದ ಬಲಗೊಳಿಸಬೇಕು. ಅಖಿಲಭಾರತ ರಾಷ್ಟ್ರೀಯ ಮಹಾಸಭೆಯು A. I. C. C. ಆಗಿಂದಾಗ್ಗೆ ಈ ಸುಳ್ಳು ಸ್ವದೇಶಿ ಸಂಸ್ಥೆಗಳ ಒಂದೊಂದು ಪಟ್ಟಿಯನ್ನು ಹೊರಡಿಸಿ ಅವುಗಳ ಪದಾರ್ಥಗಳನ್ನು ಕೊಳ್ಳದಂತೆ ಜನರನ್ನು ಎಚ್ಚರಿಸಬಹುದು. ಎಲ್ಲಿಯವರೆಗೆ ನಮ್ಮ ರಾಜ್ಯಾಂಗದಲ್ಲಿ ಈ "ರಕ್ಷಣೆ" ಗಳಿವೆಯೋ ಅಲ್ಲಿಯವರೆಗೆ, ಈ ಪರದೇಶದ ಮಾಲುಗಳನ್ನುಉಪಯೋಗಿಸದಿರುವಂತೆ ಚಳುವಳಿ ನಡೆಸುವುದಕ್ಕೆ ನಮಗೆ ಎಲ್ಲಾ ಅವಕಾಶವೂ ಇದೆ. ಹಾಗೆ ಮಾಡದೆ ಇದ್ದರೆ ಅದು ನಮ್ಮ ಆತ್ಮಹತ್ಯವಾಗುತ್ತದೆ. ಮುಂದೆ ಕೊಡುವ ಈ ಪಟ್ಟಿಯಿಂದ ಹಿಂದೂ ದೇಶದ ಕೈಗಾರಿಕೆಗಳಿಗಿರುವ ಅಪಾಯವು ವಾಚಕರಿಗೆ ತಿಳಿಯುವುದು. ಈ ಮುಂದಲ ಸಂಸ್ಥೆಗಳು ಗಾಂಧೀಜಿಯವರು ಹೇಳಿದಂತೆ "ಹೇಗೂ ಸ್ವದೇಶಿಗಳಲ್ಲ." ಒಂದು ಸಂಸ್ಥೆಯು ಸ್ವದೇಶಿಯಾಗಿರಬೇಕಾದರೆ ಅದರಲ್ಲಿರುವ ಆಡಳಿತವೆಲ್ಲಾ ನಮ್ಮವರ ಕೈಯಲ್ಲೇ ಇರಬೇಕು. ಈ ಯಾವ ಸಂಸ್ಥೆಗಳಲ್ಲೂ ಹಾಗಿಲ್ಲ. ಆದರೆ ಇವುಗಳಲ್ಲಿ ಅನೇಕ ಸಂಸ್ಥೆಗಳು ತಾವು ಸ್ವದೇಶಿಗಳೆಂದು ಹೇಳಿಕೊಳ್ಳುತ್ತಿವೆ. ಆ ಕಾರಣದಿಂದ ಸರ್ಕಾರದಿಂದ ಸಹಾಯವನ್ನೂ ಪಡೆದಿವೆ. ಇದು ನಮ್ಮ ದುರದೃಷ್ಟ. ಆದರೆ ಈ ಅಪಾಯವನ್ನು ಸರ್ಕಾರದವರು ಸಹಾಯ ಮಾಡಲಿ ಅಥವ ಬಿಡಲಿ— ಪ್ರಜೆಗಳೇನೇ, ಹೆಚ್ಚಾಗಿ ಒಮ್ಮನಸ್ಸಿನಿಂದ ಎದುರಿಸಬೇಕಾಗಿದೆ.

ಹರಿಜನ್ 3-9-1938.

ಇಂಡಿಯ ಲಿಮಿಟೆಡ್ ಆದ ಪರದೇಶಿ ಸಂಸ್ಥೆಗಳು.

1 ಎ. ಬಿ. ಸಿ. ಕೂಪ್ಲರ್ ಮತ್ತು ಎಂಜನಿಯುರಿಂಗ್ ಕಂಪೆನಿ (ಇಂಡಿಯಾ) ಕಲ್ಕತ್ತ.
2 ಎ. ಇ. ಜಿ. (ಇಂಡಿಯ) ಎಲೆಟ್ರಿಕ್ ಕಂಪೆನಿ ಬೊಂಬಾಯಿ.
3. ಎ. ಸಿ. ಇ. ಸಿ. (ಇಂಡಿಯ), ಬೊಂಬಾಯಿ
4. ಹೈಲಂಡ್ (ಪಂಜಾಬು), ಬೊಂಬಾಯಿ
5. ಐರೋಡು (ಇಂಡಿಯ), ಕಲ್ಕತ್ತ
6. ಆಲ್ಫ್ರೆಡ್ ಹೆಬರ್ಟ್ (ಇಂಡಿಯ), ಕಲ್ಕತ್ತ
7. ಆಲೆನ್ ಬ್ರದರ್ಸ್ ಎಂಡ್ ಕಂಪೆನಿ, ಬೊಂಬಾಯಿ
8. ಆಲ್‌ಸ್ಟನ್ ಟೇಲರ್ ಎಂಡ್ ಕಂಪೆನಿ (ಇಂಡಿಯ), ಕಲ್ಕತ್ತ
9. ಎ. ಮುರ್ಕಾಟ್ ಎಂಡ್ ಕಂಪೆನಿ (ಇಂಡಿಯ), ಮದ್ರಾಸು
10. ಆಂಗ್ಲೋ ಅಮೆರಿಕನ್ ಆಯಿಲ್ ಪ್ರಾಡಕ್ಟ್ಸ ಕಂ. (ಇಂ.)ಕಲ್ಕತ್ತ
11. ಆಂಗ್ಲೋ-ಫ್ರೆಂಚ್ ಡ್ರಗ್ ಕಂ. (ಈಸ್ಟರ್ನ್), ಬೊಂಬಾಯಿ
12. ಆಂಗ್ಲೋ ಇಂಡಿಯನ್ ಎಂಡ್ ಡಾಮಿಸೈಲ್ಡ್ ಫೆಡರೇಷನ್ (ಬಂಗಾಳ), ಬೊಂಬಾಯಿ
13. ಆಂಗ್ಲೋ-ಇಂಡಿಯನ್ ಎಂಡ್ ಡಾಮಿಸೈಲ್ಡ್ ಫೆಡೆರೇಷನ್ (ಆಲ್ ಇಂಡಿಯಾ ಮತ್ತು ಬರ್ಮ)
14. ಆಂಗ್ಲೋ-ಓರಿಯಂಟಲ್ (ಇಂಡಿಯ) ಕಲ್ಕತ್ತ
15. ಆಂಗ್ಲೋ-ಪರ್ಷಿಯನ್ ಆಯಿಲ್ ಕಂ. (ಇಂಡಿಯ) ಕಲ್ಕತ್ತ
16. ಬಿ. ಸಿ. ಜಿ. ಎ. (ಪಂಜಾಬು), ಪಂಜಾಬು
17. ಬೆಕರ್ ಗ್ರೆ ಎಂಡ್ ಕಂಪೆನಿ (1930), ಕಲ್ಕತ್ತ
18. ಬೆಲ್ಸ್ ಆಸ್ಬೆಸ್ಟಸ್ ಅಂಡ್ ಇಂಜನೀಯರಿಂಗ್ ಕಂ. (ಇಂಡಿಯ), ಕಲ್ಕತ್ತ
19. ಬೆಂಗಾಲ್ ಬಾಂಡ್ ಬ್ಯಾಕ್ (ಇಂಡಿಯ) ಲಾಹೋರ್ & ಕಲ್ಕತ್ತ.
20. ಬೆಂಗಾಲ್ ಕೋಲ್ ಟ್ರೇಡಿಂಗ್ ಕಂಪೆನಿ ಮದ್ರಾಸು.
21. ಬಿಟುಮನ್ ಎಂಡ್ ಎಮಲ್ಷನ್ಸ್ (ಇಂಡಿಯ) ಕಲ್ಕತ್ತ.
22. ಬ್ಲಾಕೀ ಎಡ್‌ಸನ್ಸ್ (ಇಂಡಿಯ) ಬೊಂಬಾಯಿ.

23. ಬೋಲ್ಟನ್ ಬ್ರದರ್ಸ ಎಂಡ್ ಕಂಪನಿ (ಇಂಡಿಯ) ಕಲ್ಕತ್ತ.
24. ಬ್ರೈತ್ ವೈಟ್ ಎಂಡ್ ಕಂಪೆನಿ (ಇಂಡಿಯ)
25. ಬ್ರಿಡ್ಜ್ ಎಂಡ್ ರೂಫ್ ಕಂಪೆನಿ (ಇಂಡಿಯ).
26. ಬ್ರಿಟಿಷ್ ಆರ್ಕ್ ವೆಲ್ಡಿಂಗ್ ಕಂಪೆನಿ (ಇಂಡಿಯ).
27. ಬ್ರಿಟಿಷ್ ಇಂಡಿಯ ಸ್ಟೀಮ್ ನ್ಯಾವಿಗೇಷರ್ ಕಂಪೆನಿ (ಇಂಡಿಯ)
28. ಬಿ. ವಿ. ಬೋವೇಟರ್ ಎಂಡ್ ಸನ್ಸ್ (ಇಂಡಿಯ).
29. ಸಿ. ಎಂಡ್ ಹೆಚ್. (ಇಂಡಿಯ),
30. ಕ್ಯಾಂಡಿ ಫಿಲ್ಟರ್ಸ್ (ಇಂಡಿಯ).
31. ಕ್ಯಾರ್ರೆರಸ್ (ಇಂಡಿಯ).
32. ಕ್ಯಾರನ್ಸ್ (ಇಂಡಿಯ)
33. ಕ್ಯಾಕ್ಸ್ಟರ್ ಫ್ಲೋರ್ಸ್ (ಇಂಡಿಯ).
34. ಸಿ. ಎಂಡ್ ಇ. ಮಾರ್ಟ್ರ (ಇಂಡಿಯ).
35. ಛಾರ್ಲ್ಸ್ ದಿಗಂಬರ್ ಎಂಡ್ ಕಂಪೆನಿ. (ಇಂಡಿಯ).
36. ಚಬ್ ಎಂಡ್ ಹೋಪ್ (ಇಂಡಿಯ).
37. ಸೀಬ (ಇಂಡಿಯ).
38. ಡೆವೆಲಪ್‌ಮೆಂಟ್ ಆಫ್ ಇಂಡಸ್ಟ್ರೀಸ್ (ಇಂಡಿಯ).
39. ಡಿ. ಗೆಸ್ಟೆಟ್‌ನರ್ (ಇಂಡಿಯ).
40. ಡೈರೆಕ್ಷರ್ ಎಂಡ್ ಡೆವಲಪ್‌ಮೆಂಟ್ ಕಂಪೆನಿ. (ಇಂಡಿಯ)
41. ಡಾಡ್ಜ್ ಎಂಡ್ ಸೀಮರ್ (ಇಂಡಿಯ).
42. ಡರ್ಲಪ್ ರಬ್ಬರ್ ಕಂಪೆನಿ. (ಇಂಡಿಯ).
43. ಈಕೋ ಫಿಲ್ಮ್ಸ್. (ಇಂಡಿಯ).
44. ಈಸ್ಟ್ ಎಂಡ್ ಕೆಂಟ್ ಕಂಪೆನಿ. (ಇಂಡಿಯ).
45. ಈಸ್ಟರ್ನ್ ಬ್ಯಾಂಕ್ ಟ್ರಸ್ಟ್ರೀ ಎಂಡ್ ಎಕ್ಸಿಕ್ಯೂಟರ್ಸ್ ಕಂ (ಇಂಡಿಯ)
46. ಎಲೆಕ್ಟ್ರಿಕ್ ವೆಲ್ಡಿಂಗ್ ಎಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ. (ಇಂಡಿಯ).
47. ಎವರ್ ರೆಡಿ ಕಂಪೆನಿ. (ಇಂಡಿಯ).

48. ಫೇವರಿಟ್ ಪಿಕ್ಚರ್ಸ್ (ಇಂಡಿಯ).
49. ಎಫ್. ಎಚ್. ಷ್ಕೂಲ್ (ಇಂಡಿಯ).
50. ಫಾಕ್ಸ್ ಫಿಲ್ಮ್ ಕಾರ್ಪೊರೇಷನ್. (ಇಂಡಿಯ).
51. ಎಫ್. ಡಬ್ಲ್ಯು. ವುಡ್‌ವರ್ತ್ ಎಂಡ್ ಕಂಪೆನಿ. (ಇಂಡಿಯ).
52. ಗಂಗಾ ಕಮರ್ಷಿಯಲ್ ಏಜೆನ್ಸಿ (ಇಂಡಿಯ).
53. ಗ್ಯಾಸ್ ಅಕ್ಯೂಮಲೇಟರ್ ಕಂಪೆನಿ. (ಇಂಡಿಯ).
54. ಜಿ. ಡಿ. ಪೀಟರ್ಸ್ (ಇಂಡಿಯ).
55. ಜನರಲ್ ಅಷ್ಯೂರೆನ್ಸ್ ಟ್ರಸ್ಟ್ (ಇಂಡಿಯ).
56. ಜನರಲ್ ಎಲೆಕ್ಟ್ರಿಕ್ ಕಂಪೆನಿ. (ಇಂಡಿಯ).
57. ಜಾರ್ಜ್ ನ್ಯೂನ್ಸ್ ಬುಕ್ ಕಂಪೆನಿ. (ಇಂಡಿಯ).
58. ಜಾರ್ಜ್ ಓ ಷೆ (ಇಂಡಿಯ).
59. ಜಾರ್ಜ್ ಸ್ಪೆನ್ಸರ್ ಮೋಲ್ವೆ ಎಂಡ್ ಕಂಪೆನಿ. (ಇಂಡಿಯ).
60. ಹೆಚ್. ಸ್ಟಾನ್ಲಿ ಎಂಡ್ ಕಂಪೆನಿ (ಇಂಡಿಯ).
61. ಹಾಡ್ ಫೀಲ್ಡ್ಸ್ (ಇಂಡಿಯ).
62. ಹಾಯ್ಲ್ ರಾಬರ್ಸ್ ಬಾರ್ನೆಟ್ ಎಂಡ್ ಕಂಪೆನಿ (ಇಂಡಿಯ).
63. ಇಂಡೆಸ್ಪೊ (ಇಂಡಿಯ).
64. ಇಂಡಿಜಿನಸ್ ಡ್ರಗ್ಸ್ ಎಂಡ್ ಕೆಮಿಕಲ್ಸ್ (ಇಂಡಿಯ).
65. ಇಂಗರ್‌ಸಾಲ್ ರ್ಯಾಂಡ್ (ಇಂಡಿಯ).
66. ಇನ್ಸ್ಟಿಟ್ಯೂಷನ್ ಆಫ್ ಇಂಜನೀಯರ್ಸ್ (ಇಂಡಿಯ).
67. ಇಂಟರ್‌ನ್ಯಾಷನಲ್ ಜನರಲ್ ಎಲೆಕ್ಟ್ರಿಕ್ ಕಂಪೆನಿ. (ಇಂಡಿಯ).
68. ಇಂಟರ್‌ನ್ಯಾಷನಲ್ ಟ್ರೇಡ್ ಡೆವೆಲಪರ್ (ಇಂಡಿಯ).
69. ಜೆ. ಎಲ್. ಮಾರಿಸನ್ ಸನ್ ಎಂಡ್ ಜೋನ್ಸ್ (ಇಂಡಿಯ).
70. ಜೆ. ಸ್ಟೆಡ್ ಎಂಡ್ ಕಂಪೆನಿ (ಇಂಡಿಯ).
71. ಜೆನ್ಸನ್ ಎಂಡ್ ನಿಕಲ್ಸನ್ (ಇಂಡಿಯ).
72. ಜೆ. ಮುರ್ರೆ ಎಂಡ್ ಕಂಪೆನಿ (ಇಂಡಿಯ).

73. ಜಾರ್ಜ್ ಫೌಲರ್ ಎಂಡ್ ಕಂಪೆನಿ (ಇಂಡಿಯ).
74. ಜಾನ್ ಪ್ಯಾಟರ್‌ಸನ್ ಎಂಡ್ ಕಂಪೆನಿ (ಇಂಡಿಯ).
75. ಜೆ. ಸ್ಟೋರ್ಜ್ ಎಂಡ್ ಕಂಪೆನಿ (ಇಂಡಿಯ).
76. ಕ್ರೈಯಾನ್ ಗ್ರಾನ್ ಕಂಪೆನಿ (ಇಂಡಿಯ).
77. ಕ್ರೈನೋ ಬ್ರದರ್ಸ್ (ಇಂಡಿಯ).
78. ಕ್ರೀನ್ ಪೇಟೆಂಟ್ ಫ್ಲೋರಿಂಗ್ ಕಂಪೆನಿ (ಇಂಡಿಯ).
79. ಕೋಸ್ಮಾಸ್ ಅಂಡ್ ಪೋಲಿಸ್ (ಇಂಡಿಯ).
80. ಲಫನ್ಸ್ (ಇಂಡಿಯ).
81. ಲಜಾಕೊ ಆಯಿಲ್ಸ್ (ಇಂಡಿಯ).
82. ಲಾಮ್ಸನ್ ಪ್ಯಾರಗಾನ್ (ಇಂಡಿಯ).
83. ಎಲ್. ಎ. ಸ್ಪ್ರಾನಾಕ್ ಎಂಡ್ ಕಂಪೆನಿ (ಇಂಡಿಯ).
84. ಲೀ ಟ್ರೈರ್. ಕಂಪೆನಿ (ಇಂಡಿಯ).
85. ಲಿವರ್ ಬ್ರದರ್ಸ್ (ಇಂಡಿಯ).
86. ಮೆಷಿನ್ ಟೂಲ್ಸ್ (ಇಂಡಿಯ).
87. ಮಾರ್ಷಲ್ ಸನ್ಸ್ ಎಂಡ್ ಕಂಪೆನಿ (ಇಂಡಿಯ).
88. ಮ್ಯಾಸ್ಸೀ ಗ್ಯಾನೀ ಹ್ಯಾಕೆತಟ್ (ಇಂಡಿಯ).
89. ಮೇ ಎಂಡ್ ಬೇಕರ್ (ಇಂಡಿಯ).
90. ಮೇಹೊ ಬ್ಯಾಕ್ (ಇಂಡಿಯ)
91. ಮಿಡ್ಲಾಂಡ್ ಬ್ಯಾಂಕ್ (ಇಂಡಿಯ).
92. ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯ).
93. ನ್ಯಾಷನಲ್ ಕೆಮಿಕಲ್ ಎಂಡ್ ಸಾಲ್ಟ್ ವರ್ಕ್ಸ್ (ಇಂಡಿಯ).
94. ನ್ಯಾಷನಲ್ ಎಂಪೋರಿಯಂ (ಇಂಡಿಯ).
95. ನಿಯಾನ್ ಸೈನ್ (ಇಂಡಿಯ).
96. ಪ್ಯಾಟರ್‌ಸನ್ ಎಂಜಿನೀಯರಿಂಗ್ ಕಂಪೆನಿ. (ಇಂಡಿಯ).
97. ಪ್ಯಾರಡೈಸ್ ಪಿಕ್ಚರ್ಸ್ (ಇಂಡಿಯ).

98. ಪೆಲ್ಮನ್ ಇನ್ಸ್ಟಿಟ್ಯೂಟ್ (ಇಂಡಿಯ).
99. ಫ್ಯೆಫ್ ಸ್ಯೂಯಿಂಗ್ ಮೆಷೀನ್ ಕಂಪೆನಿ (ಇಂಡಿಯ).
100. ರೇಡಿಯಂಟ್ ಡಿಸ್ಪ್ಲೆ (ಇಂಡಿಯ).
101. ರೆಫ್ರಿಜೆರೇಟರ್ಸ್ (ಇಂಡಿಯ)
102. ಆರ್ ಫಿಷರ್ ಎಂಡ್ ಕಂಪೆನಿ. (ಇಂಡಿಯ).
103. ರಾತ್ಮನ್ಸ್ (ಇಂಡಿಯ).
104. ಸ್ಯಾಕ್ಸ್ಬಿ ಎಂಡ್ ಫಾರ್ಮರ್ (ಇಂಡಿಯ).
105. ಸ್ಕೆರಿಂಗ್ ಖಾಲ್ಬಂ (ಇಂಡಿಯ).
106. ಸ್ಕಾಲ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ (ಇಂಡಿಯ).
107. ಸೆಂಡ್ ಎಂಡ್ ಕಂಪೆನಿ (ಇಂಡಿಯ).
108. ಸೀಮೆನ್ಸ್ (ಇಂಡಿಯ).
109. ಸಿಂಪ್ಲೆಕ್ಸ್ ಕಾನ್‌ಕ್ರೀಟ್ ಪೈಲ್ಸ್ (ಇಂಡಿಯ)
110. ಟೊಬ್ಯಾಕೊ ಇಂಡಸ್ಟ್ರೀಸ್ (ಇಂಡಿಯ).
111. ಟೊಬ್ಯಾಕೊ ಮ್ಯಾನುಫಾಕ್ಚರ್ಸ್ (ಇಂಡಿಯ)
112. ಟ್ರೈಲ್ ಎಂಡ್ ಕಂಪನಿ (ಇಂಡಿಯ).
113. ಟರ್ನರ್ ಬ್ರದರ್ಸ್ (ಇಂಡಿಯ).
114. ಯುನೈಟೆಡ್ ಮೋಟರ್ಸ್ (ಇಂಡಿಯ).
115. ಯುನೈಟೆಡ್ ಸ್ಟೀಲ್ ಕಂಪೆನೀಸ್ (ಇಂಡಿಯ).
116. ಯೂನಿವರ್ಸಲ್ ಫಿಲಂ ಕಾರ್ಪೊರೇಷನ್ (ಇಂಡಿಯ)
117. ವೀನಸ್ ಬಾಂಡ್ಸ್ ಬ್ಯಾಂಕ್ (ಇಂಡಿಯ).
118. ವಿಕರ್ಸ್ (ಇಂಡಿಯ).
119. ವೈಬ್ರೊ ಪೈಲಿಂಗ್ ಕಂಪೆನಿ (ಇಂಡಿಯ).
120. ಡಬ್ಲ್ಯು. ವಿ. ಬೊವಾಟ್ಸ್ ಎಂಡ್ ಸನ್ಸ್ (ಇಂಡಿಯ).
121. ವಿಲಿಯಂ ಗಾಸೇಜ್ ಎಂಡ್ ಸನ್ಸ್ (ಇಂಡಿಯ),

'ಹರಿಜನ' 3-9-1938.

XI. ೨

[ಈ ವಿಷಯದಲ್ಲಿ ಸಂಶೋಧನೆ ನಡೆಸುತ್ತಿರುವ ಇನ್ನೊಬ್ಬರು ಸ್ನೇಹಿತರು ಕಳುಹಿಸಿರುವ 'ಇಂಡಿಯ ಲಿಮಿಟೆಡ್' ಹೆಸರಿನಿಂದಿರುವ ಪರದೇಶದ ಕಂಪೆನಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ. ಹಿಂದಿನ ಪಟ್ಟಿಯೊಂದಿಗೆ ಇದೂ ಸೇರಿ, 1935 ನೇ ಇಸ್ವಿ ಮಾರ್ಚಿ 31 ನೇ ತಾರೀಖುವರೆಗೆ ಇಂಡಿಯಾದಲ್ಲಿ ವ್ಯಾಪಾರಮಾಡುತ್ತಿರುವ ಪರದೇಶದ ಕಂಪೆನಿಗಳ ಸಂಖ್ಯೆ 179 ಆಗುತ್ತದೆ. ಈಗ ಕೂಡ ಈ ಪಟ್ಟಿ ಪೂರ್ಣವಾಗಿಲ್ಲ. ಇಂದಿನವರೆಗೆ ಲೆಕ್ಕ ಸಿಕ್ಕಬೇಕಾದರೆ ಬಹುಶಃ ಇನ್ನೂ ಎಷ್ಟೋ ಹೆಸರುಗಳನ್ನು ಸೇರಿಸಬೇಕಾಗುತ್ತದೆ- ಸಿ. ಎಸ್.]

1. ಎಕ್ರೊ ಆಯಿಲ್ ಕಂಪೆನಿ (ಇಂಡಿಯ) ಕಲ್ಕತ್ತ.
2. ಏಷಿಯಾಟಿಕ್ ಸ್ಟೀಮ್ ನ್ಯಾವಿಗೇಷನ್ ಕಂಪೆನಿ(ಇಂಡಿಯ) ಕಲ್ಕತ್ತ.
3. ಅಸೋಸಿಯೇಟೆಡ್ ಎಲೆಕ್ಟ್ರಿಕ್ ಕಂಪೆನೀಸ್(ಇಂಡಿಯ)ಬೊಂಬಾಯಿ
4. ಅಸೋಸಿಯೇಟೆಡ್ ಇನ್‌ಸ್ಟ್ರುಮೆಂಟ್ ಮ್ಯಾನ್ಯುಫಾಕ್ಚರ್(ಇಂಡಿಯ) ಕಲ್ಕತ್ತ.
5. ಆಗಸ್ಟ್ ಕ್ಯಾಪ್‌ಡೆವಿಲ್ಲಿ ಎಂಡ್ ಫಿಲ್ಸ್ (ಇಂಡಿಯ) ಬೊಂಬಾಯಿ.
6. ಬ್ರಿಟಿಷ್ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗೆ ಟೆಕ್ನಲಜಿ (ಇಂಡಿಯ), ಬೊಂಬಾಯಿ.
7. ಬಿಲ್ಡಿಂಗ್ ಕಾರ್ಪೊರೇಷನ್ (ಇಂಡಿಯ) , ಲಕ್ನೊ.
8. ಸೆಂಟಾರ್ ಎಂಜಿನಿಯರಿಂಗ್ ಕಂಪೆನಿ (ಇಂಡಿಯ), ಕಲ್ಕತ್ತ.
9. ಕಲೊನಿಯಲ್ ಇನ್ಶೂರೆನ್ಸ್ (ಇಂಡಿಯ), ಕಲ್ಕತ್ತ.
10. ಕಮರ್ಷಿಯಲ್ ಲೋನ್ ಕಂಪೆನಿ (ಇಂಡಿಯ), ಕಲ್ಕತ್ತ.
11. ಕಾರನ್ ಪ್ರಾಡಕ್ಟ್ಸ ಕಂಪೆನಿ (ಇಂಡಿಯ), ಬೊಂಬಾಯಿ.
12. ಕಾಸ್ಮಾಸ್ ಎಂಜಿನಿಯರಿಂಗ್ ಕಂಪೆನಿ (ಇಂಡಿಯ), ಬೊಂಬಾಯಿ
13. ಕೋರ್ವಾಲ್ಡ್ಸ (ಇಂಡಿಯ), ಬೊಂಬಾಯಿ.
14. ಕ್ರೇವನ್ ಬ್ರದರ್ಸ್ (ಇಂಡಿಯ), ಬೊಂಬಾಯಿ.
15. ಕ್ರಿಸ್ಟಿನ್ ಎಂಡ್ ಕಂಪೆನಿ (ಇಂಡಿಯ), ಬೊಂಬಾಯಿ.

16. ಇ. ಅಗೌರಿ ಎಟ್ ಫಿಲ್ಸ್ (ಇಂಡಿಯ), ಕಲ್ಕತ್ತ.
17. ಫಿಲ್ಟ್ರೇಟರ್ಸ್ (ಇಂಡಿಯ), ಬೊಂಬಾಯಿ.
18. ಫೈರ್ ಸ್ಟೋನ್ ಟೈರ್ ಎಂಡ್ ರಬ್ಬರ್ ಕಂಪೆನಿ ಆಫ್ ಇಂಡಿಯ, ಬೊಂಬಾಯಿ.
19. ಗುಡ್ ಲಾಸ್ ವಾಲ್ (ಇಂಡಿಯ), ಬೊಂಬಾಯಿ.
20. ಗುಡ್‌ರಿಚ್ ರಬ್ಬರ್ ಕಂಪೆನಿ ಆಫ್ ಇಂಡಿಯ, ಬೊಂಬಾಯಿ.
21. ಗುಡ್ ಇಯರ್ ಟೈರ್ ಎಂಡ್ ರಬ್ಬರ್ ಕಂಪೆನಿ (ಇಂಡಿಯ), ಬೊಂಬಾಯಿ.
22. ಗ್ರಾಹಮ್ಸ್ ಟ್ರೇಡಿಂಗ್ ಕಂಪೆನಿ (ಇಂಡಿಯ), ಬೊಂಬಾಯಿ.
23. ಹೆಚ್. ಸ್ಟಾನ್ಲಿ ಎಂಡ್ ಕಂಪೆನಿ (ಇಂಡಿಯ), ಬೊಂಬಾಯಿ.
24. ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ (ಇಂಡಿಯ), ಕಲ್ಕತ್ತ.
25. ಇಂಪೀರಿಯಲ್ ಟೊಬ್ಯಾಕೊ ಕಂಪೆನಿ ಆಫ್ ಇಂಡಿಯ, ಕಲ್ಕತ್ತ.
26. ಇಂಡಿಪೆಂಡೆನ್ಸ್ ಬ್ಯಾಂಕ್ ಆಫ್ ಇಂಡಿಯ, ಕಲ್ಕತ್ತ.
27. ಇನ್ಷೂರೆನ್ಸ್ ಹೋಮ್ (ಇಂಡಿಯ), ಕಲ್ಕತ್ತ.
28. ಇಂಟರ್‌ನ್ಯಾಷನಲ್ ಟ್ರೇಡಿಂಗ್ ಆಫೀಸ್ (ಇಂಡಿಯ), ಕಲ್ಕತ್ತ.
29. ಜಾನ್ ವಾಲ್ಷ್ ಎಂಡ್ ಕಂಪೆನಿ (ಇಂಡಿಯ), ಕಲ್ಕತ್ತ.
30. ಲೀಲ್ಯಾಂಡ್ ಎಂಡ್ ಬರ್ಮಿಂಗ್ಹಾಮ್ ರಬ್ಬರ್ ಕಂಪೆನಿ (ಇಂಡಿಯ), ಕಲ್ಕತ್ತ.
31. ಲಗ್ವಿನ್ ಎಂಡ್ ಕಂಪೆನಿ (ಇಂಡಿಯ), ಕಾನ್ಪುರ.
32. ಮಾರಿಸ್ ಇಂಡಸ್ಟ್ರೀಸ್ (ಇಂಡಿಯ) ಬೊಂಬಾಯಿ.,
33. ನ್ಯಾಷನಲ್ ಇಂಜನಿಯರಿಂಗ್ ಕಂಪೆನಿ (ಇಂಡಿಯ), ಬೊಂಬಾಯಿ.
34. ನ್ಯಾಷನಲ್‌ಮರ್ಕೆಂಟೈಲ್ ಇನ್ಷೂರೆನ್ಸ್ ಕಂಪೆನಿ(ಇಂಡಿಯ),ಕಲ್ಕತ್ತ
35. ಒ ಕಾಸ ಕಂಪೆನಿ, ಬರ್ಲಿನ್ (ಇಂಡಿಯ), ಬೊಂಬಾಯಿ.
36. ಆರ್ಮೆರಾಡ್ಸ್ (ಇಂಡಿಯ), ಬೊಂಬಾಯಿ.
37. ಆರ್ಥೋಪೋಡಿಕ್ ಸ್ಟೋರ್ಸ್ (ಇಂಡಿಯ), ಕಲ್ಕತ್ತ.

38. ಫಿಲಿಪ್ಸ್ ಎಲೆಕ್ಟ್ರಿಕಲ್ ಕಂಪೆನಿ (ಇಂಡಿಯ), ಕಲ್ಕತ್ತ.
39. ಪ್ರಿಂಟರ್ಸ್ (ಇಂಡಿಯ), ಕಲ್ಕತ್ತ.
40. ಪಬ್ಲಿಸಿಟಿ (ಇಂಡಿಯ), ಬೊಂಬಾಯಿ.
41. ರಾಲ್‌ಪ್ಲಗ್ ಪ್ರಾಡಕ್ಟ್ಸ (ಇಂಡಿಯ), ಬೊಂಬಾಯಿ.
42. ರಿವರ್ ಸ್ಟೀಮ್ ನ್ಯಾವಿಗೇಷನ್ ಕಂಪೆನಿ (ಇಂಡಿಯ), ಕಲ್ಕತ್ತ.
43. ರಾಬರ್ಟ್ ಹಡ್ಸನ್ (ಇಂಡಿಡಿಯ), ಕಲ್ಕತ್ತ.
44. ರಾಬರ್ಟ್ಸ ಪಾರ್ಕ್ ಎಂಡ್ ಕಂಪೆನಿ (ಇಂಡಿಯ), ಕಲ್ಕತ್ತ.
45. ಸ್ಯಾಮುಯಲ್ ಆಸ್‌ಬಾರ್ನ್ (ಇಂಡಿಯ), ಕಲ್ಕತ್ತ.
46. ಸಿಲ್ವರ್‌ಟೌನ್ ಲೂಬ್ರಿಕೆಂಟ್ಸ್ (ಇಂಡಿಯ), ಕಲ್ಕತ್ತ.
47. ಸಿಮ್ಸ್ ಮೋಟಾರ್ ಯೂನಿಟ್ಸ್ ಆಫ್ ಇಂಡಿಯ, ಕಲ್ಕತ್ತ.
48. ಸ್ಲಫ್ ಸಿಂಡಿಕೇಟ್ (ಇಂಡಿಯ), ಲಷ್ಕರ್, ಗ್ವಾಲಿಯರ್.
49. ಸ್ಮಿತ್ ಕ್ಯಾಂಪ್‌ಬೆಲ್ ಎಂಡ್ ಕಂಪೆನಿ (ಇಂಡಿಯ), ಬೊಂಬಾಯಿ.
50. ಸೌಂಡ್ ಸ್ಟೂಡಿಯೊಸ್ (ಇಂಡಿಯ), ಬೊಂಬಾಯಿ.
51. ಟೆಕ್ಸಾಸ್ ಕಂಪೆನಿ (ಇಂಡಿಯ), ಬೊಂಬಾಯಿ.
52. ಥಾಮಸ್ ಬೇರ್ ಅಂಡ್ ಸನ್ಸ್ (ಇಂಡಿಯ), ಕಲ್ಕತ್ತ.
53. ಥಾಮಸ್ ರಾಬಿನ್ಸನ್ ಎಂಡ್ ಸನ್ಸ್ (ಇಂಡಿಯ), ಕಲ್ಕತ್ತ.
54. ಥಾರ್ನಿಕ್ರಾಫ್ಟ್ಸ (ಇಂಡಿಯ), ಕಲ್ಕತ್ತ.
55. ಯುನೈಟೆಡ್ ಹೌಸ್ ಬಿಲ್ಡಿಂಗ್ ಎಂಡ್ ಎಂಜಿನಿಯರಿಂಗ್ ಸೊಸೈಟಿ (ಇಂಡಿಯ), ಮೈಸೂರು.
56. ಯುನೈಟೆಡ್ ಪಿಕ್ಚರ್ ಕಾರ್ಪೋರೇಷನ (ಇಂಡಿಯ), ಲಕ್ನೋ.
57. ವುಡ್‌ಮಿಲ್ನೆ (ಇಂಡಿಯ), ಬೊಂಬಾಯಿ.
58. ವೋಟಾ (ಇಂಡಿಯ), ಕಲ್ಕತ್ತ.

'ಹರಿಜನ' 24-9-1938.

ಮೈಸೂರು ಗ್ರಾಮಸೇವಾ ಸಂಘ

ಈವರೆಗಿನ ಕೆಲಸದ ವರದಿ

ಅಖಿಲಭಾರತ ಗ್ರಾಮೋದ್ಯೋಗ ಸಂಘದ ಧ್ಯೇಯವನ್ನು ಅನುಸರಿಸಿ, ಮೈಸೂರು ಸಂಸ್ಥಾನದಲ್ಲಿ ಗ್ರಾಮಾಭಿವೃದ್ಧಿಕಾರ್ಯವನ್ನು ಕೈಕೊಳ್ಳುವ ಉದ್ದೇಶದಿಂದ, ಮೈಸೂರು ಗ್ರಾಮಸೇವಾಸಂಘವು ಸುಮಾರು ಮೂರುವರ್ಷಗಳ ಹಿಂದೆ ಸ್ಥಾಪಿತವಾಯಿತು. ಇದರ ಒಂದು ಶಾಖೆಯು ಗೊರೂರಿನಲ್ಲಿಯೂ ಇನ್ನೊಂದು ಶಾಖೆಯು ಕೆಂಗೇರಿಯಲ್ಲಿಯೂ ಕೆಲಸ ಮಾಡುತ್ತಿರುವುದಲ್ಲದೆ ಸಂಘವು ಶುದ್ದಿಕುಂಟೆ ಕಡಬ ಮುಂತಾದ ಕಡೆಗಳಲ್ಲಿ ಗ್ರಾಮಕೈಗಾರಿಕೆಗಳಿಗೆ ತನ್ನ ಕೈಲಾದ ಸಹಾಯವನ್ನು ಮಾಡುತ್ತಿದೆ. ಈವರೆಗೆ ಸಂಘವು ಮಾಡಿರುವ ಕೆಲಸವನ್ನು ನೋಡಿದರೆ, ಇನ್ನೂ ಮಾಡಬೇಕಾದುದು ಎಷ್ಟಿದೆ ಎಂಬುದು ಮಾತ್ರ ಗೊತ್ತಾಗುತ್ತದೆ. "ಹೆಚ್ಚು ಕೆಲಸ ನಡೆದಿದೆ ಎಂದು ಹೇಳಲು ಸಾಧ್ಯವಿಲ್ಲ. ನಾವು ಅನೇಕ ಕಷ್ಟಗಳನ್ನು ಎದುರಿಸಿ ಕೆಲಸಮಾಡಬೇಕಾಗಿದೆ. ವಿದ್ಯಾವಂತರಾದವರು ಸಹ ಗ್ರಾಮೋದ್ಯೋಗ ಚಳುವಳಿಯಲ್ಲಿ ಉದಾಸೀನರಾಗಿದ್ದಾರೆ. ಮತ್ತು ಚಳುವಳಿಗೆ ವಿರೋಧವಾಗಿದ್ದಾರೆ. ಪೂರ್ಣವಾಗಿ ನಾಗರಿಕರಾದವರೂ ಕೂಡ ಈ ಯುಗದಲ್ಲಿ ಗ್ರಾಮೋದ್ಯೋಗ ಪುನರುಜ್ಜೀವನವು ವ್ಯರ್ಥವೆಂದು ಹೇಳುತ್ತಾರೆ.... ....ಇಂತಹ ಕೆಲಸಕ್ಕೆ ಬೇಕಾದ ಜನ ಸಿಕ್ಕುತ್ತಿಲ್ಲ. ಸಿಕ್ಕುವವರಿಗೆ ಅನುಭವವೂ ಹಣದ ಬಲವೂ ಸಾಲದು. ಹಳ್ಳಿಯ ಕೆಲಸಗಾರನಿಗೆ ಬೇಕಾದ ಮೂಲಧನವೂ ಅವನ ಮಾಲನ್ನು ಕೊಳ್ಳುವ ಗಿರಾಕಿಯೂ ಇಲ್ಲ...................."

ಆದರೆ ನಮ್ಮ ಕೆಲಸದಿಂದ ಹಳ್ಳಿಯವನಿಗೆ ಸ್ವಲ್ಪಮಟ್ಟಿಗೆ ಪ್ರಯೋಜನವಾಗುತ್ತಿರುವುದೂ, ನಮ್ಮ ಜನರೂ, ಹಳ್ಳಿಯ ಕೆಲಸಗಾರರೂ

ರೈತರೂ, ಸರ್ಕಾರದವರೂ ಈ ಬಗೆಯ ಕೆಲಸವು ಅವಶ್ಯಕವೆಂದು ನಮ್ಮನ್ನು ಪ್ರೋತ್ಸಾಹಿಸುತ್ತಿರುವುದೂ ನಮಗೆ ಒಂದು ಸಮಾಧಾನ. ಸಂಘವು ಹೋದವರುಷ ಮೈಸೂರು ಕಾಂಗ್ರೆಸ್ ಅಧಿವೇಶನದ ಪ್ರದರ್ಶನ ದಲ್ಲಿ ಭಾಗವಹಿಸಿತು. ಹಾಸನದ ಜಿಲ್ಲೆಯಲ್ಲಿ ಗಾಣ ಚಾಪೆ ಚಕ್ಕಿ (ಭತ್ತ ಒಡೆಯುವ ಕಲ್ಲು) ಇವುಗಳನ್ನು ಅನೇಕಸಲ ಪ್ರದರ್ಶಿಸಿತು. ಸಂಘವು ಕೆಂಗೇರಿಯಲ್ಲಿ ಖಾದಿ ಉದ್ಯೋಗವನ್ನು ಕೈಕೊಂಡಿದೆ. ಗ್ರಾಮಕೈಗಾರಿಕಾ ಸಂಗ್ರಹಾಲಯವೊಂದನ್ನು ಸ್ಥಾಪಿಸಲು ಏರ್ಪಾಡುಮಾಡಿದೆ. ಕಡಬ ದಲ್ಲಿ ಚಾಪೆಯ ಕೈಗಾರಿಕೆಗೆ ಪ್ರೋತ್ಸಾಹವನ್ನು ಕೊಡುತ್ತಿದೆ. ಶುದ್ಧಿ ಕುಂಟೆಯಲ್ಲಿ ರೈತರ ಉಪಯೋಗಕ್ಕೆ ರಾಗಿಯನ್ನು ಶೇಖರಿಸಿ ಇಡುವ ಸಂಸ್ಥೆಯಲ್ಲಿ ಭಾಗವಹಿಸಿದೆ. ರೈತರು ಉತ್ತಮವಾದ ಹತ್ತಿಯನ್ನು ಬೆಳೆಯಲು ಪ್ರೋತ್ಸಾಹಿಸಿ ಹತ್ತಿ ಬೀಜವನ್ನು ಅವರಿಗೆ ಒದಗಿಸಿದೆ. ಸಂಘವು ಗೊರೂರಿನಲ್ಲಿ ಮದ್ಯಪಾನ ನಿರೋದ ಚಳುವಳಿ, ಉಚಿತ ವಾಚ ನಾಲಯ, ವಯಸ್ಕರ ವಿದ್ಯಾಭ್ಯಾಸ ಹರಿಜನ ಸೇವೆ ಮುಂತಾದುವುಗಳಲ್ಲಿ ಪ್ರಚಾರಕಾರ್ಯವನ್ನು ನಡೆಸಿರುವುದಲ್ಲದೆ ಈ ಕೆಳಗಿನ ಗ್ರಾಮಕೈಗಾರಿಕೆ ಗಳನ್ನು ಪ್ರಾರಂಭಿಸಿದೆ.

1. ಕೊಟ್ಟಿದ ಅಕ್ಕಿ

ಸಂಘವು ಕೈಯಲ್ಲಿ ಕುಟ್ಟಿದ ಅಕ್ಕಿಗಾಗಿ ಪ್ರಚಾರಕಾರ್ಯ ನಡೆ ಸಿರುವುದಲ್ಲದೆ ಭತ್ತವನ್ನು ಸುಲಭವಾಗಿ ಒಡೆಯಬಹುದಾದ ಒಂದು ಕಲ್ಲನ್ನು ಪ್ರಚಾರಮಾಡುತ್ತಿದೆ. ಈ ಕಲ್ಲಿನಲ್ಲಿ ಎಂಟುಗಂಟೆ ಕೆಲಸಮಾಡು ವುದರಲ್ಲಿ ಸುಲಭವಾಗಿ ಎರಡು ಜನ 200 ಸೇರು ಭತ್ತವನ್ನು ಒಡೆದು ಅಕ್ಕಿಮಾಡಬಹುದು. ಇದರಲ್ಲಿ ಸ್ವಲ್ಪವೂ ನುಚ್ಚು ಬೀಳುವುದಿಲ್ಲ. ಮಿಲ್ ನಲ್ಲಿ ನುಚ್ಚಾಗುವ ಕಡಗಿದ ಭತ್ತ ಸಹ ಇದರಲ್ಲಿ ತುಂಡಿಲ್ಲದೆ ಅಕ್ಕಿಯಾಗಿ ಬೀಳುತ್ತದೆ. ಇಂತಹ ಕಲ್ಲು ಈಗ ನಾಲ್ಕು ಗೊರೂರಲ್ಲಿ ಇವೆ. ಸಂಘದ ಕಟ್ಟಡದಲ್ಲಿ ಯಾರು ಬೇಕಾದರೂ ಉಚಿತವಾಗಿ ಬಂದು ಅಕ್ಕಿಮಾಡಿ

ಕೊಂಡು ಹೋಗಬಹುದು. 1940ನೇ ಇಸವಿಯಲ್ಲಿ ಇಲ್ಲಿ 140 ಪಲ್ಲ ಅಕ್ಕಿ ತಯಾರಾಗಿ 520 ಸೇರು ಅಕ್ಕಿ ಮತ್ತು 140 ರೂಪಾಯಿ ಕೂಲಿಗಳಿಗೆ ದೊರೆತಿದೆ. ಸಂಘದ ಕಾರ್ಯಕ್ಷೇತ್ರವಾದ ಗೊರೂರಿನಲ್ಲಿ ಮಿಲ್ ಅಕ್ಕಿ ಉಪಯೋಗದಲ್ಲಿ ಇಲ್ಲ.

2. ಚಾಪೆ

ಮೈಸೂರು ಸೀಮೆಯಲ್ಲಿ ಜೇಣಿ ಸಿಕ್ಕುವ ಎಲ್ಲಾ ಕಡೆಯಲ್ಲಿಯೂ ಚಾಪೆಗಳನ್ನು ಮಾಡಬಹುದು. ಚಾಪೆಗಳಿಗೆ ಕತ್ತಾಳೆ ಹುರಿಗಳನ್ನು ಉಪಯೋಗಿಸಿದರೆ ಕಚ್ಚಾಮಾಲಿಗೆ ಒಂದು ಕಾಸನ್ನೂ ಕೊಡಬೇಕಾದ ಆವಶ್ಯಕತೆಯುಂಟಾಗುವುದಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಕತ್ತಾಳೆ ನಾರನ್ನೇ ಉಪಯೋಗಿಸಬೇಕು. ಬೇರೆ ನೂಲನ್ನು ಉಪಯೋಗಿಸಿದರೆ ಒಂದು ಚಾಪೆಗೆ 4 ಆಣೆ ಅಥವಾ 6 ಆಣೆ ನೂಲು ಬೀಳುತ್ತದೆ. ಇಲ್ಲಿ ನಾವು ದಪ್ಪ ತರಹ ಚಾಪೆಗಳನ್ನು ಮಾತ್ರ ಮಾಡುತ್ತಿದ್ದೇವೆ. 1939ನೇ ಇಸವಿಯಲ್ಲಿ ಚಾಪೆಗಾಗಿ 74 ರೂಪಾಯಿ ಕೂಲಿ ಕೊಟ್ಟೆವು. 1940ನೇ ಇಸವಿಯಲ್ಲಿ 137 ರೂಪಾಯಿ ಕೂಲಿ ಕೊಟ್ಟೆವು. ತಯಾರಾದ ಚಾಪೆಗಳೆಲ್ಲಾ ಖರ್ಚಾಗುತ್ತಿವೆ. ಈ ಸುತ್ತಮುತ್ತ ಸಾವಿರಾರು ಜನ ಚಾಪೆಗಳನ್ನು ಮಾಡಿದರೂ ಮುಗಿಯದಷ್ಟು ಜೇಣಿ ಇದೆ. ಒಂದು ಚಾಪೆಗೆ 3 ಆಣೆ, 4 ಆಣೆ ಮಾತ್ರ ಬೆಲೆಯಾಗುತ್ತದೆ.

3. ಕೈಯಿಂದ ಮಾಡುವ ಕಾಗದ

ಇದಕ್ಕೆ ಬೇಕಾದ ನಾರು, ಜೇಣಿ, ಹುಲ್ಲು, ಮುಂತಾದ ಕಚ್ಚಾ ಮಾಲೂ, ನೀರೂ ನಮ್ಮಲ್ಲಿ ಬೇಕಾದಂತೆ ದೊರೆಯುತ್ತದೆ. 1939ನೇ ಇಸವಿಯಲ್ಲಿ ಈ ಕೈಗಾರಿಕೆಯನ್ನು ಪ್ರಾರಂಭಿಸಿದೆವು. ಮೂರು ಸಾವಿರ ಕವರು, 20-22 ರೀಮು ಕಾಗದ ಮಾಡಿದ್ದೇವೆ. ಕೆಲಸಗಾರರಿಗೆ 110 ರೂಪಾಯಿ ಕೂಲಿ ಕೊಟ್ಟೆವು. ಕಾಗದ ಮಾಡುವವನಿಗೆ ಕೈಚುರುಕೂ

ಅಭ್ಯಾಸವೂ ಚೆನ್ನಾಗಿರಬೇಕು. ಯುದ್ಧದ ಕಾರಣದಿಂದ ಇದಕ್ಕೆ ಬೇಕಾದ ಕಾಸ್ಟಿಕ್ ಸೋಡ ಮತ್ತು ಬ್ಲೀಚಿಂಗ್ ಪೌಡರ್ ಸುಲಭವಾಗಿ ಸಿಕ್ಕುತ್ತಿಲ್ಲ. ಈಚೆಗೆ ಅಖಿಲಭಾರತ ಗ್ರಾಮೋದ್ಯೋಗಸಂಘದ ಸಲಹೆ ಯಂತೆ, 'ಸಜ್ಜಿಮಟ್ಟಿ'ಯನ್ನು ಉಪಯೋಗಿಸಲು ಪ್ರಯತ್ನಿಸಿದೆವು. ಒಟ್ಟಿ ನಲ್ಲಿ ಕಾಗದದಲ್ಲಿ ನಾವು ನಿರೀಕ್ಷಿಸಿದಷ್ಟು ಕೆಲಸ ನಡೆದಿಲ್ಲ. ಈ ವರುಷ ಈ ಬಾಬಿನಲ್ಲಿ ಹೆಚ್ಚು ಕೆಲಸಮಾಡಬಹುದೆಂದು ನಮಗೆ ಭರವಸೆಯಿದೆ.

4. ಗಾಣದ ಎಣ್ಣೆ

ಶುದ್ಧವಾದ ಗಾಣದ ಎಣ್ಣೆ ನಮ್ಮ ಆಹಾರಕ್ಕೆ ಬಹಳ ಆವ ಶ್ಯಕ. ಆದರೆ ಈಗೀಗ ಶುದ್ಧವಾದ ಎಣ್ಣೆ ಹಳ್ಳಿಗಳಲ್ಲೂ ಸಹ ಸಿಕ್ಕುವುದು ಕಷ್ಟವಾಗಿದೆ. ಎಣ್ಣೆಯ ಬೀಜಗಳನ್ನೆಲ್ಲಾ ಮಿಲ್ ಮಾಲಿಕರು ಒಟ್ಟೊ ಟ್ಟಾಗಿ ಕೊಂಡು ಸಾಗಿಸುತ್ತಾರೆ. ಹಳ್ಳಿಯ ಗಾಣಿಗ ಅವರಿಂದಲೇ ಲಾಭ ವನ್ನು ಕೊಟ್ಟು ಆ ಬೀಜಗಳನ್ನು ಮತ್ತೆ ಕೊಳ್ಳಬೇಕಾಗಿದೆ. ಅದೂ ಅವ ನಿಗೆ ಬೇಕಾದಷ್ಟು ಸಿಕ್ಕುವುದಿಲ್ಲ. ಅವನಿಗೆ ಮಿಲ್‌ನ ಎಣ್ಣೆಯ ಧಾರಣೆಗೆ ಎಣ್ಣೆಕೊಡಲು ಸಾಧ್ಯವಿಲ್ಲ. ಬೇಕಾದ ಬಂಡವಾಳವೂ ವ್ಯವಸ್ಥೆಯೂ ಅವನಲ್ಲಿ ಇರುವುದಿಲ್ಲ. ನಮ್ಮ ಮೈಸೂರು ಸೀಮೆಯಲ್ಲಿ ಹತ್ತುವರುಷಗಳ ಹಿಂದೆ ಸುಮಾರು 3500 ಗಾಣಿಗರು ಇದ್ದರು. ಈಗ 2500 ಇದ್ದಾರೆ. ಅವರಲ್ಲಿ ಅನೇಕರಿಗೆ ವರುಷದಲ್ಲಿ ಒಂದು ತಿಂಗಳಿಗಿಂತ ಹೆಚ್ಚು ಕೆಲಸವಿಲ್ಲ. ಇನ್ನು ಹತ್ತು ವರುಷಗಳಲ್ಲಿ ಇವರೂ ತಮ್ಮ ಉದ್ಯೋಗವನ್ನು ಬಿಡುವುದು ಖಂಡಿತ. ಗಾಣಿಗನಿಗೆ ಇರುವ ತೊಂದರೆಗಳು ಇವು—

(1) ಬಂಡವಾಳವಿಲ್ಲದಿರುವುದು

(2) ಮಿಲ್‌ನ ಬೆಲೆಗೆ ಕೊಡಲು ಸಾಧ್ಯವಿಲ್ಲದಿರುವುದು

(3) ಮಿಲ್‌ನ ಎಣ್ಣೆಮೇಲೆ ಜನರಿಗೆ ಇರುವ ಮೋಹ.

ಈಗ ಸಾಧಾರಣವಾಗಿ ಪ್ರಚಾರದಲ್ಲಿರುವ ಗಾಣದಲ್ಲಿ ಎಳ್ಳಿನಲ್ಲಿರುವ ಪೂರ್ತಾ ಎಣ್ಣೆಯ ಅಂಶವನ್ನು ತೆಗೆಯಲು ಸಾಧ್ಯವಿಲ್ಲ. ಆದರಿಂದ ಸ್ವಲ್ಪಭಾಗ

ಎಣ್ಣೆ ಎಳ್ಳಿನಲ್ಲಿ ನಿಂತುಬಿಡುತ್ತದೆ. ಹಳ್ಳಿಯ ಗಾಣದ ಎಣ್ಣೆಯಬೆಲೆ ಇದರಿಂದಲೂ ಸ್ವಲ್ಪ ಏರುತ್ತದೆ ಅಖಿಲಭಾರತ ಗ್ರಾಮೋದ್ಯೋಗ ಸಂಘದವರು ಈಗ ಪ್ರಚಾರದಲ್ಲಿರುವ ಎಲ್ಲಾ ಗಾಣಗಳಲ್ಲೂ ಇರುವ ಒಳ್ಳೆಯ ಅಂಶಗಳನ್ನೆಲ್ಲಾ ಸೇರಿಸಿ ಒಂದು ಬಗೆಯ ಹೊಸ ಗಾಣವನ್ನು (ಹಳೆ ಮಾದರಿಯಲ್ಲಿ) ಮಾಡಿದ್ದಾರೆ. ನಮ್ಮಕಡೆ ಪ್ರಚಾರದಲ್ಲಿರುವ ಗಾಣಕೂ ಈ ಹೊಸಗುಣಕ್ಕೂ ಈ ಕೆಳಗೆ ಕಂಡಂತೆ ವ್ಯತ್ಯಾಸವಿದೆ.

ಈಗ ನಮ್ಮಲ್ಲಿರುವ ಗಾಣ

ಇದರ ಕಣೆ ಚಿಕ್ಕದು. ಆದರಿಂದ ಎತ್ತಿಗೆ ತಿರುಗುವಾಗ ಕಷ್ಟವಾಗುತ್ತೆ. ಗಾಣದ ಗುಂಡಿಯಲ್ಲಿ ಕಣೆ ಪೂರ್ಣವಾಗಿ ಎಲ್ಲಾ ಕಡೆಯೂ ತಿರುಗಿ ಅರೆಯುವುದಿಲ್ಲ. ಎಳ್ಳಿನಲ್ಲಿ ಎಣ್ಣೆಭಾಗ ಉಳಿದುಬಿಡುತ್ತದೆ. ಗಾಣದ ಗುಂಡಿ ಚಿಕ್ಕದು. ಹೆಚ್ಚು ಬೀಜ ಹಿಡಿಯುವುದಿಲ್ಲ.

ಮುಗನ್‌ವಾಡಿಗಾಣ

ಇದರ ಕಣೆ ಉದ್ದವಾಗಿರುತ್ತದೆ. ಎತ್ತನ್ನು ಕಟ್ಟುವ ನೊಗದ ಹಲಗೆ ಗಾಣಕ್ಕೆ ಒಂದು ರೀತಿ ನೇತುಹಾಕಿದಂತೆ ಇರುತ್ತದೆ. ಎತ್ತಿಗೆ ಬಹುಸುಲಭ. ಎಳ್ಳಿನಲ್ಲಿರುವ ಎಣ್ಣೆಯ ಅಂಶ (ಶೇಕಡ 32) ವನ್ನು ಈ ಗಾಣ ಪೂರ್ಣವಾಗಿ ಅರೆದುಬಿಡುತ್ತದೆ. ಒಳ್ಳೆಯ ಎತ್ತಿನಲ್ಲಿ ಒಂದುಸಲ ಗಾಣ ಅರೆಯಲು 1 ಗಂಟೆ 15 ನಿಮಿಷ ಸಾಕು. ಒಂದುಸಲಕ್ಕೆ 12 ರಿಂದ 15 ಸೇರು ಎಳ್ಳುಹಾಕಬಹುದು. ದಿವಸಕ್ಕೆ ಧಾರಾಳವಾಗಿ 8 ಗಾಣಗಳನ್ನು ಹೂಡಬಹುದು. ಸರಿಯಾದ ಸುಗ್ಗಿಕಾಲದಲ್ಲಿ ಎಳ್ಳಿನ ಬೀಜವನ್ನು ಶೇಖರಿಸಿ ಇಟ್ಟುಕೊಂಡರೆ, ಹಳ್ಳಿಯ ಗಾಣಿಗನು ಮಿಲ್ ಎಣ್ಣೆಯೊಂದಿಗೆ ಬೆಲೆಯಲ್ಲಿಯೂ ಪೈಪೋಟಿ ನಡೆಸಬಹುದು. ಈ ಗಾಣದ ಬೆಲೆ 40 ರುಪಾಯಿಗಳಿಗಿಂತ ಹೆಚ್ಚಾಗುವುದಿಲ್ಲ.

ಆದರೆ ಈ ಗಾಣ ಮಾಡುವ ಬಡಗಿ ಬುದ್ಧಿವಂತನಾಗಿರಬೇಕು. ಅಖಿಲಭಾರತ ಗ್ರಾಮೋದ್ಯೋಗ ಸಂಘದಲ್ಲಿ ಗಾಣಮಾಡುವ ಬಡಗಿಗಳೂ

ತರಬೇತು ಕೊಡುತ್ತಾರೆ. ಮೈಸೂರು ದೇಶದಲ್ಲಿ ಗೊರೂರಿನಲ್ಲಿ ಹೊರತು ಮತ್ತೆಲ್ಲು ಈ ಗಾಣಗಳನ್ನು ತಯಾರುಮಾಡಿರುವುದು ತಿಳಿದುಬಂದಿಲ್ಲ. 1939ನೇ ಫೆಬ್ರವರಿ ತಿಂಗಳಲ್ಲಿ ವಾರ್ಧಾದಿಂದ ಒಂದು ಗಾಣವನ್ನು ಮೊದಲು ತರಿಸಿ ಗೊರೂರಿನಲ್ಲಿ ಸ್ಥಾಪಿಸಿದೆವು. 1939ನೇ ಡಿಸೆಂಬರ್ ವೇಳೆಗೆ ಅದರಲ್ಲಿ 4695 ಸೇರು ಹುಚ್ಚೆಳ್ಳು ಅರೆದು 4009½ ಸೇರು ಎಣ್ಣೆ ತೆಗೆದುದರಿಂದ ಗಾಣಗನಿಗೆ 149 ರೂ. 3 ಆಣೆ ಲಾಭ ಬಂದಿತು. ಈಚೆಗೆ ಗೊರೂರಿನಲ್ಲಿಯೇ ನಾಲ್ಕು ಗಾಣಗಳನ್ನು ಮಾಡಿಸಿದೆವು. ಈ ಎಲ್ಲಾ ಗಾಣಗಳನ್ನೂ ಗಾಣಿಗರೇ ನಡೆಸಿಕೊಂಡು ಹೋಗುತ್ತಿದ್ದಾರೆ. 1940 ನೇ ಜನವರಿಯಿಂದ 1940 ನೇ ಡಿಶೆಂಬರ್‌ವರೆಗೆ ಇವುಗಳಲ್ಲಿ ಯಾವರೀತಿ ಕೆಲಸ ನಡೆದಿದೆ ಎಂಬುದನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

ಶುದ್ಧವಾದ ಎಣ್ಣೆ ಸಿಕ್ಕುವುದು ಜನರಿಗೆ ಖಾತರಿಯಾದರೆ ಗಾಣಿಗನಿಗೆ ನಿರುದ್ಯೋಗಭಯವೇ ಇಲ್ಲ. ನಮ್ಮಲ್ಲಿ ಎಣ್ಣೆ ಯಾವಾಗಲೂ ಸ್ಟಾಕು ಉಳಿಯುವುದಿಲ್ಲ. ಅದಕ್ಕೆ ಗಿರಾಕಿ ಇದ್ದೇ ಇದೆ.

ಈ ಗಾಣಕ್ಕೆ ಬೇಕಾದ ಮರಸಿಕ್ಕುವುದು ಸ್ವಲ್ಪ ಕಷ್ಟ. ಕಣೆ ಬಹು ಬೇಗ ಸವೆದುಹೋಗುತ್ತದೆ. ಇದನ್ನು ಮಾಡುವ ಬಡಗಿ ಬಹಳ ಬುದ್ಧಿವಂತನಾಗಿರಬೇಕು. ಅಖಿಲಭಾರತಗ್ರಾಮೋದ್ಯೋಗ ಸಂಘದವರು ಈ ವಿಚಾರಗಳಲ್ಲಿ ಪರಿಶೋಧನೆ ನಡೆಸುತ್ತಿದ್ದಾರೆ.

5. ಕತ್ತಾಳೆನಾರು (Packing Thread)

ನಮ್ಮ ಪ್ರಾಂತದಲ್ಲಿ ಕತ್ತಾಳೆನಾರಿನ ಕೈಗಾರಿಕೆಗೆ ಒಳ್ಳೆ ಅವಕಾಶವಿದೆ. ಇದಕ್ಕೆ ಬೇಕಾದ ಕಚ್ಚಾಮಾಲು ಬೇಕಾದಂತೆ ದೊರೆಯುತ್ತದೆ. ಇದರಿಂದ ಮಾಡುವ ಪ್ಯಾಕಿಂಗ್ ದಾರ ಒಳ್ಳೆ ಗಟ್ಟಿಯಾಗಿ ಚೆನ್ನಾಗಿರುತ್ತದೆ. ಇದಕ್ಕೆ ಮೂಲಧನದ ಆವಶ್ಯಕತೆಯೂ ಇಲ್ಲ. ಆದರೆ ಇದು ಇನ್ನು ಪ್ರಯೋಗಾವಸ್ಥೆಯಲ್ಲಿದೆ.

ನಂ.	ಗಾಣದ ಹೆಸರು	ಅರೆದ ಬೀಜ	ಬಂದ ಎಣ್ಣೆ	ಬಂದ ಹಿಂಡಿ	ತಯಾರಿ ಖರ್ಚು			ಮಾರಿ ಬಂದದ್ದು			ಲಾಭ		
					ರೂ.	ಆ.	ಕಾ.	ರೂ.	ಆ.	ಕಾ.	ರೂ.	ಆ.	ಕಾ.
1	ರಾಮು	......	......	......	......			......			......		
	....	ಹುಚ್ಚೆಳ್ಳು 13000 ಪೌಂ.	4000 ಪೌಂ.	7200 ಪೌಂ.	640	0	0	851	10	8	211	10	0
	....	ಅಚ್ಚೆಳ್ಳು 80 ಪೌಂ.	72 ಪೌಂ.	......	10	0	0	15	13	6	5	13	6
	....	ಕೂಲಿಗಾಣಗಳು 40 ಪೌಂ.	......	......	......			......			15	0	0
	....	ಹರಳು 524 ಪೌಂ.	120 ಪೌಂ.	......	33	0	0	38	8	0	5	8	0
2	ಕೃಷ್ಣ	ಹುಚ್ಚೆಳ್ಳು 6200 ಪೌಂ.	1755 ಪೌಂ.	3240 ಪೌಂ.	288	0	0	376	14	0	88	14	0
	....	ಹರಳು 525 ಪೌಂ.	120 ಪೌಂ.	......	33	0	0	38	8	0	5	8	0
3	ಗಾಂಧಿ	ಹುಚ್ಚೆಳ್ಳು 170 ಪೌಂ.	$48\frac{3}{4}$ ಪೌಂ.	90 ಪೌಂ.	8	0	0	10	8	0	2	8	0
4	ಅಜಾದ್	ಕೊನೆಯ ಮೂರು ಗಾಣಗಳ	ಕೆಲಸ ಈಗತಾನೆ	ಪ್ರಾರಂಭವಾಗಿ	ಪ್ರಯೋಗಾವಸ್ಥೆ			ಯಲ್ಲಿದೆ					
5	ನೆಹ್ರು	......	......	......	......			......			......		
		20600 ಪೌಂ.	$6115\frac{3}{4}$ ಪೌಂ.	10530 ಪೌಂ.	1012	0	0	1331	14	0	334	14	0

ರಾಮು ಗಾಣದಲ್ಲಿ 11000 ಪೌಂಡು ಹಿಂಡಿ ಬಂದದ್ದು ಮಾರುವ ಹೊತ್ತಿಗೆ ಆರಿ 7200 ಪೌಂಡು ಆಯಿತು.

ಗೊರೂರು ಶಾಖೆಯಲ್ಲಿ 1939ನೇ ಜುಲೈ ಇಂದ 1940 ನೇ ಡಿಸೆಂಬರ್‌ವರೆಗೆ—

ಚಾಪೆಗಳಿಗಾಗಿ	ರೂ. 214— 0—0
ಕೊಟ್ಟಣದ ಅಕ್ಕಿ	ರೂ. 140— 0—0
ಕಾಗದ	ರೂ. 110— 0—0
ಎಣ್ಣೆ	ರೂ. 334—14—0
ಜುಮ್ಲಾ	ರೂ. 898—14—0

ಗಳನ್ನು ಸಂಘವು ಸಾವಿರ ಜನಸಂಖೆಯುಳ್ಳ ಈ ಗ್ರಾಮದಲ್ಲಿ ಕೂಲಿ ರೂಪದಲ್ಲಿ, ಪ್ರತ್ಯಕ್ಷವಾಗಿ ನಮ್ಮ ಸಮಕ್ಷಮದಲ್ಲಿ ನಡೆದ ಕೆಲಸಗಳಿಗೆ ಹಂಚಿದೆ. ಕೆಂಗೇರಿಯಲ್ಲಿ ಖಾದಿ ಕೆಲಸಗಾರರಿಗೆ ಸುಮಾರು 500 ರೂಪಾಯಿ ಕೂಲಿ ಕೊಟ್ಟಿದೆ. ಈ ವೊಬಲಗುಗಳ ಪ್ರತಿಕಾಸೂ ಗ್ರಾಮಕೈಗಾರಿಕೆಗಳನ್ನು ಪ್ರತ್ಯಕ್ಷವಾಗಿ ನಡೆಸುತ್ತಿರುವ ಕೂಲಿಗಳಿಗೆ ಸೇರಿದೆ. ಸಂಘದ ಕೆಲಸಗಳನ್ನೆಲ್ಲಾ ಗೌರವಕಾರ್ಯದರ್ಶಿಗಳು ಯಾವ ಪ್ರತಿಫಲವೂ ಇಲ್ಲದೆ ನಡೆಸುತ್ತಿದ್ದಾರೆ.

ಒಟ್ಟಿನಲ್ಲಿ ಮಾಡಬೇಕಾದ ಕೆಲಸ ಬಹಳವಾಗಿದೆ.
ಮಾಡಿರುವುದೂ ಏನೂ ಇಲ್ಲ.

ಗೊರೂರು ರಾಮಸ್ವಾಮಿ ಐಯಂಗಾರ್,
ಕಾರ್ಯದರ್ಶಿ, ಗೊರೂರುಶಾಖೆ.

ಎಸ್. ವೆಂಕಟಸುಬ್ಬಯ್ಯ,
ಕಾರ್ಯದರ್ಶಿ,
ಮೈಸೂರು ಗ್ರಾಮಸೇವಾಸಂಘ, ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು

೧. ಸತೀ ಕಸ್ತೂರಿ ಬಾ

೨. ಶ್ರೀ ಮಹದೇವ ದೇಸಾಯಿ ಯವರ ಕೃತಿಗಳು

[ದೇಸಾಯಿಯವರ ಮುಖ್ಯವಾದ, ರಾಜಕೀಯ ಸಾಮಾಜಿಕ ಅರ್ಥಶಾಸ್ತ್ರ ಲೇಖನಗಳು. ಸೇವಾಗ್ರಾಮದ ವಿವಿಧ ಅನುಭವಗಳು ೨೫ ಲೇಖನ — ೨೦೦ ಪುಟಗಳು.]

೩. ಬೃಂದಾವನ

[ದೀನಬಂಧು ಆಂಡ್ರೂಸ್, ಲಾಲಾ ಲಜಪತ್‌ರಾಯ್, ಜವಹರ್‌ಲಾಲ್ ನೆಹ್ರು, ಲಿನ್ ಯು ಟಾಂಗ್, ಟಾಗೂರ್ ಇವರ ಸ್ಫೂರ್ತಿದಾಯಕ ಉಜ್ವ ಲೇಖನಗಳು — ೩೦೦ ಪುಟಗಳು]

೪. ತಾಯ್ನುಡಿಯಲ್ಲಿ ಶಿಕ್ಷಣ

[ಮೂಲ ಲೇಖಕ ಶ್ರೀ ಅಗರ್‌ವಾಲಾ]

೫. ಹಸಿವಿನ ಕೂಗು

[ಬಂಗಾಳದಲ್ಲಿ ಬೇಗೆ ಎಬ್ಬಿಸಿ ಸುಮಾರು ಅರ್ಧಕೋಟಿ ಜನರನ್ನು ನುಂಗಿದ ಕ್ಷಾಮದ ಕತೆ]

ರಾಷ್ಟ್ರೀಯ ಸಾಹಿತ್ಯ ಸಮಿತಿ,
ಗೊರೂರು